ಬುಧವಾರ, ಆಗಸ್ಟ್ 31, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 242 | ಪುಟ 18

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ನೀರಿನಲ್ಲಿ ತೇಲುವ ಎಲೆಗಳಿಂದಲೂ ಈಗ ವಿದ್ಯುತ್ ತಯಾರಿಸಬಹುದಂತೆ!

ವಿಶೇಷ ಲೇಖನ 12

ಚಿನ್ನದ ಗಣಿಗಾರಿಕೆ ಪ್ರಸ್ತಾವ ತಿರಸ್ಕರಿಸಲು ಶಿಫಾರಸು 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,537 ▲	17,759 ▲	₹53,000 (ಬೆಂಗಳೂರು) ▲	₹55,900 (ಬೆಂಗಳೂರು) ▼	79.52 ▲

ಬಿಡುವು

ಪ್ರಿಯ ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರಿಗೆ ಗಣೇಶ ಚತುರ್ಥಿಯ ಶುಭಾಶಯಗಳು

ಗಣೇಶ ಚತುರ್ಥಿಯ ಪ್ರಯುಕ್ತ ಬುಧವಾರ ಕಚೇರಿಗೆ ಬಿಡುವು, ಹೀಗಾಗಿ ಗುರುವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

–ಸಂ

ದಿನದ ಬೆಳವಣಿಗೆಗಳ ಅಪ್‌ಡೇಟ್ಸ್‌ಗಾಗಿ www.prajavani.net ನೋಡಿ.

ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ

ಈದ್ಗಾ: ಚೌತಿಗಿಲ್ಲ ಅವಕಾಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಗಣೇಶೋತ್ಸವ ಆಚರಣೆಗೆ ಅವಕಾಶ ನಿರಾಕರಿಸಿ ಸುಪ್ರೀಂಕೋರ್ಟ್ ಮಂಗಳವಾರ ಆದೇಶ ಹೊರಡಿಸಿದ್ದು, ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನಿರ್ದೇಶನ ನೀಡಿದೆ.

ಕರ್ನಾಟಕ ವಕ್ಫ್ ಮಂಡಳಿ ಹಾಗೂ ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ, ಅಭಯ್ ಎಸ್. ಓಕಾ ಹಾಗೂ ಎಂ.ಎಂ. ಸುಂದರೇಶ್ ಅವರನ್ನು ಒಳಗೊಂಡ ಪೀಠವು ಈ ಆದೇಶ ಹೊರಡಿಸಿತು.

ಕಳೆದ 200 ವರ್ಷಗಳಲ್ಲಿ ಈ ಮೈದಾನದಲ್ಲಿ ಇಂತಹ ಯಾವುದೇ ಉತ್ಸವವನ್ನು ಆಯೋಜಿಸಿರುವ ಉದಾಹರಣೆ ಇಲ್ಲ ಎಂಬುದನ್ನು ಪೀಠವು ಗಮನಿಸಿ, ಬೇರೆ ಕಡೆಗಳಲ್ಲಿ ಗಣೇಶೋತ್ಸವ ಆಚರಣೆ ಮಾಡುವಂತೆ ಸೂಚಿಸಿತು.

‘ಈದ್ಗಾ ಮೈದಾನದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಅನುಮತಿ ಕೋರಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಸ್ವೀಕರಿಸಿರುವ ಮನವಿ ಪತ್ರಗಳನ್ನು ಇದೇ 31ರಿಂದ ಸೀಮಿತ ಅವಧಿಗೆ ಪರಿಗಣಿಸಿ ಕರ್ನಾಟಕ ಸರ್ಕಾರ ಸೂಕ್ತ ಆದೇಶ ಹೊರಡಿಸಬಹುದು’ ಎಂದು ಹೈಕೋರ್ಟ್‌ನ ದ್ವಿಸದಸ್ಯ ಪೀಠ ಹೇಳಿತ್ತು. ಇದನ್ನು ಪ್ರಶ್ನಿಸಿ ವಕ್ಫ್ ಮಂಡಳಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

‘200 ವರ್ಷಗಳಿಂದ ಈ ಮೈದಾನದಲ್ಲಿ ಗಣೇಶೋತ್ಸವ ಆಚರಣೆ ಮಾಡಿಲ್ಲ. ಇದನ್ನು ನೀವು ಸಹ ಒಪ್ಪಿಕೊಳ್ಳುತ್ತಿದ್ದೀರಿ. ಹಾಗಾದರೆ ಯಾಕೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬಾರದು’ ಎಂದು ಕರ್ನಾಟಕ ಸರ್ಕಾರ, ವಕ್ಫ್ ಮಂಡಳಿ ಹಾಗೂ ಇತರರಿಗೆ ಸುಪ್ರೀಂಕೋರ್ಟ್ ಪ್ರಶ್ನಿಸಿತು.

11ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 3B



ಬೆಂಗಳೂರಿನ ಚಾಮರಾಜಪೇಟೆ ಮೈದಾನದ ಭದ್ರತೆಗಾಗಿ ಮಂಗಳವಾರ ಸಶಸ್ತ್ರ ಮೀಸಲು ಪಡೆ ಮತ್ತು ಕ್ಷಿಪ್ರ ಕಾರ್ಯಾಚರಣೆ ಪಡೆ (ಆರ್‌ಎಎಫ್) ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು –ಪ್ರಜಾವಾಣಿ ಚಿತ್ರ

> ಈದ್ಗಾ ಮೈದಾನದಲ್ಲಿ ಗಣೇಶೋತ್ಸವಕ್ಕೆ ಅವಕಾಶ ನೀಡಬಾರದು ಎಂಬ ಕೋರಿಕೆಗೆ ಮಧ್ಯಂತರ ಆದೇಶ ನೀಡಲು ಹೈಕೋರ್ಟ್ ನಿರಾಕರಿಸಿದೆ. ಪಾಲಿಕೆಯ ತೀರ್ಮಾನದಂತೆ, ರಾಣಿ ಚನ್ನಮ್ಮ ಮೈದಾನ ಗಜಾನನ ಉತ್ಸವ ಮಹಾಮಂಡಳಿಯು ಗಣೇಶ ಮೂರ್ತಿ ಪ್ರತಿಷ್ಠಾಪಿಸಲಿದೆ. ಪಾಲಿಕೆ ಆಯುಕ್ತರು ಅವರಿಗೆ ಷರತ್ತುಬದ್ಧ ಅನುಮತಿ ನೀಡಿದ್ದಾರೆ
>
> **ಈರೇಶ ಅಂಚಟಗೇರಿ,** ಮೇಯರ್, ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ

‘ಸುಪ್ರೀಂ’ ಆದೇಶ ಪಾಲನೆ: ಅಶೋಕ

ಬೆಂಗಳೂರು: ಚಾಮರಾಜಪೇಟೆ ಮೈದಾನದಲ್ಲಿ ಗಣೇಶೋತ್ಸವ ಆಚರಣೆ ವಿಚಾರದಲ್ಲಿ ಯಥಾಸ್ಥಿತಿ ಕಾಪಾಡುವಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಪಾಲಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

‘ಮೈದಾನದ ಮಾಲೀಕತ್ವದ ಬಗ್ಗೆ ಸುಪ್ರೀಂಕೋರ್ಟ್ ಯಾವುದೇ ತೀರ್ಪು ಕೊಟ್ಟಿಲ್ಲ. ಮಾಲೀಕತ್ವದ ಬಗ್ಗೆ ಹೈಕೋರ್ಟ್‌ಗೆ ಮೇಲ್ಮನವಿ ಮಾಡುತ್ತೇವೆ. ಬಿಬಿಎಂಪಿ ಬಳಿ ಈ ಜಾಗಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳೂ ಇಲ್ಲ. ಹೈಕೋರ್ಟ್‌ನಲ್ಲಿ ಸರ್ಕಾರಕ್ಕೆ ಜಯ ಸಿಗುವ ವಿಶ್ವಾಸವಿದೆ’ ಎಂದು ಅವರು ‘ಪ್ರಜಾವಾಣಿ’ಗೆ ಹೇಳಿದರು.

‘ಸರ್ಕಾರದ ಜಮೀನು ಉಳಿಸಿಕೊಳ್ಳಲು ಹೋರಾಟ ಮುಂದುವರೆಯುತ್ತದೆ. ಮೈದಾನವನ್ನು ಸಾರ್ವಜನಿಕ ಆಸ್ತಿಯಾಗಿಯೇ ಉಳಿಸಿಕೊಳ್ಳುತ್ತೇವೆ. ಯಾವುದೇ ಧರ್ಮದ ಆಸ್ತಿ ಆಗಲು ಬಿಡುವುದಿಲ್ಲ. ಕನ್ನಡಿಗರ ಆಸ್ತಿಯಾಗಿ ಉಳಿಯಬೇಕು ಎಂಬುದು ಸರ್ಕಾರದ ನಿಲುವು’ ಎಂದು ತಿಳಿಸಿದರು.

ಬಾಬ್ರಿ ಮಸೀದಿ ಧ್ವಂಸ: ನ್ಯಾಯಾಂಗ ನಿಂದನೆ ಅರ್ಜಿ ರದ್ದು

ಪ್ರಜಾವಾಣಿ ವಾರ್ತೆ

ನವದೆಹಲಿ: ಅಯೋಧ್ಯೆಯಲ್ಲಿ 1992ರಲ್ಲಿ ನಡೆದಿದ್ದ ಬಾಬ್ರಿ ಮಸೀದಿ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಸರ್ಕಾರ ಹಾಗೂ ಇತರರ ಮೇಲೆ ದಾಖಲಾಗಿದ್ದ ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ರದ್ದುಗೊಳಿಸಿದೆ.

‘ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ಪೀಠವು ಪ್ರಕರಣಕ್ಕೆ ಸಂಬಂಧಿಸಿದಂತೆ 2019ರಲ್ಲೇ ಅಂತಿಮ ತೀರ್ಪು ಪ್ರಕಟಿಸಿದೆ. ಹೀಗಾಗಿ ಈ ಅರ್ಜಿಯ ವಿಚಾರಣೆ ಈಗ ಅಪ್ರಸ್ತುತ’ ಎಂದು ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ನೇತೃತ್ವದ ತ್ರಿಸದಸ್ಯ ಪೀಠ ಹೇಳಿದೆ. ಅರ್ಜಿಯು ಸುಮಾರು 30 ವರ್ಷಗಳಿಂದ ಬಾಕಿ ಇದೆ. ಅರ್ಜಿದಾರರಾದ ಭುರೆ ಅವರು 2010ರಲ್ಲೇ ಮೃತಪಟ್ಟಿದ್ದಾರೆ ಎಂದು ವಕೀಲ ಎಂ.ಎಂ.ಕಶ್ಯಪ್ ಹೇಳಿದರು.

ಇಡಬ್ಲ್ಯುಎಸ್ ಮೀಸಲು ಸಿಂಧುತ್ವ ಪರಿಶೀಲನೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್) ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ನೀಡುವುದು ಸಂವಿಧಾನ ಬದ್ಧವೇ ಎಂಬುದನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ.

ಕೇಂದ್ರ ಸರ್ಕಾರವು ಸಂವಿಧಾನಕ್ಕೆ 2019ರಲ್ಲಿ 103ನೇ ತಿದ್ದುಪಡಿ ತಂದಿತ್ತು. ಆ ಮೂಲಕ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿಯನ್ನು ಜಾರಿಗೆ ತಂದಿತ್ತು. ಇದು ಸಂವಿಧಾನಬಾಹಿರ ಮತ್ತು ಸಾಮಾಜಿಕ ನ್ಯಾಯಕ್ಕೆ ವಿರುದ್ಧ ಎಂದು ಸುಪ್ರೀಂ ಕೋರ್ಟ್‌ಗೆ ಹಲವರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗಳ ವಿಚಾರಣೆಯನ್ನು ಸೆಪ್ಟೆಂಬರ್ 1 ಕ್ಕೆ ಆರಂಭಿಸಲಾಗುವುದು.

ಜತೆಗೆ, ಮುಸ್ಲಿಮರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರು ಎಂದು ಪರಿಗಣಿಸಿ, ಅವರಿಗೆ ಮೀಸಲಾತಿ ನೀಡುವುದು ಸಂವಿಧಾನಬದ್ಧವೇ ಎಂಬುದನ್ನು ಪರಿಶೀಲಿಸುವುದಾಗಿ ಪೀಠವು ಹೇಳಿದೆ. ಆಂಧ್ರಪ್ರದೇಶ ಸರ್ಕಾರವು ಮುಸ್ಲಿಮರಿಗೆ ಮೀಸಲಾತಿ ಘೋಷಿಸಿದೆ. ಅದನ್ನು ಅಲ್ಲಿನ ಹೈಕೋರ್ಟ್ ರದ್ದು ಮಾಡಿದೆ. ಈ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಇಡಬ್ಲ್ಯುಎಸ್ ಮೀಸಲಾತಿಗೆ ಸಂಬಂಧಿಸಿದ ಅರ್ಜಿಗಳನ್ನು ಇತ್ಯರ್ಥಪಡಿಸಿದ ನಂತರ ಈ ಅರ್ಜಿಗಳನ್ನು ವಿಚಾರಣೆಗೆ ಎತ್ತಿಕೊಳ್ಳುತ್ತೇವೆ ಎಂದು ಪೀಠವು ಹೇಳಿದೆ.

ಆಳ-ಅಗಲ
ಕಾಂಗ್ರೆಸ್‌ನಲ್ಲಿ ತಲ್ಲಣ: ಪಕ್ಷ ತೊರೆಯಲು ಪೈಪೋಟಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮುರುಘಾ ಶರಣರ ಬೆನ್ನಿಗೆ ನಿಂತ ವಿವಿಧ ಮಠಾಧೀಶರು

ನ್ಯಾಯಾಧೀಶರ ಮುಂದೆ ಸಂತ್ರಸ್ತರ ಹೇಳಿಕೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುರುಘಾ ಮಠದ ಪೀಠಾಧ್ಯಕ್ಷ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಲೈಂಗಿಕ ಕಿರುಕುಳದ ದೂರು ನೀಡಿರುವ ಸಂತ್ರಸ್ತ ಬಾಲಕಿಯರು ಅಪರಾಧ ಪ್ರಕ್ರಿಯೆ ಸಂಹಿತೆಯ (ಸಿಆರ್‌ಪಿಸಿ) ಕಲಂ 164ರ ಅಡಿ ಮಂಗಳವಾರ ಮಧ್ಯಾಹ್ನ ನ್ಯಾಯಾಧೀಶರ ಎದುರು ಹೇಳಿಕೆ ನೀಡಿದರು.

ತನಿಖಾ ತಂಡ ಮಧ್ಯಾಹ್ನ 2.10ಕ್ಕೆ ಬಾಲಕಿಯರ ಸರ್ಕಾರಿ ಬಾಲಭವನದಿಂದ ನ್ಯಾಯಾಲಯಕ್ಕೆ ಮಕ್ಕಳನ್ನು ಕರೆತಂದಿತು. 1ನೇ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ನ್ಯಾಯಾಧೀಶೆ ಅನಿತಾ ಕುಮಾರಿ ಸಮ್ಮುಖದಲ್ಲಿ ಇಬ್ಬರು ಬಾಲಕಿಯರು ಪ್ರತ್ಯೇಕವಾಗಿ ಹೇಳಿಕೆ ನೀಡಿದರು.

ಇದನ್ನು ಸಂಪೂರ್ಣ ವಿಡಿಯೊ ಚಿತ್ರೀಕರಣ ಮಾಡಿಕೊಳ್ಳಲಾಗಿದ್ದು, ಹೇಳಿಕೆಯನ್ನು ನ್ಯಾಯಾಧೀಶರು ಮುಚ್ಚಿದ ಲಕೋಟೆಯಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಲಿದ್ದಾರೆ. ಇಬ್ಬರು ಬಾಲಕಿಯರ ಹೇಳಿಕೆ ದಾಖಲು ಪ್ರಕ್ರಿಯೆ ಸುಮಾರು ಐದು ಗಂಟೆ ನಡೆಯಿತು.

7ನೇ ಪುಟ ನೋಡಿ

ಮೌನಕ್ಕೆ ಶರಣಾದ ಮಠಾಧೀಶರು

‘ಸಂತ್ರಸ್ತ ಮಕ್ಕಳ ವಿಚಾರದಲ್ಲಿ ಮಠಾಧೀಶರ ನಿಲುವೇನು’ ಎಂಬ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕನಕಪುರ ಮರಳೆಗವಿ ಮಠದ ಮುಮ್ಮಡಿ ಶಿವರುದ್ರ ಸ್ವಾಮೀಜಿ, ‘ಮಕ್ಕಳು ದೇವರ ಸಮಾನ. ಅವರ ಬಗ್ಗೆ ನಮಗೆ ಕಾಳಜಿ ಇದೆ. ತನಿಖೆ ಪೂರ್ಣಗೊಂಡ ಬಳಿಕ ಸತ್ಯಾಂಶ ಹೊರಬರಲಿದೆ’ ಎಂದು ಪತ್ರಿಕಾಗೋಷ್ಠಿ ಮುಕ್ತಾಯಗೊಳಿಸಲು ಮುಂದಾದರು.

‘ಅತ್ಯಾಚಾರದ ಆರೋಪ ಮಾಡಿದವರಲ್ಲಿ ದಲಿತ ಸಮುದಾಯದ ಮಕ್ಕಳಿದ್ದಾರೆ’ ಎಂಬ ಮತ್ತೊಂದು ಪ್ರಶ್ನೆಗೆ ಮಠಾಧೀಶರು ಮೌನಕ್ಕೆ ಶರಣರಾದರು.

ಸ್ಥಳದಲ್ಲಿದ್ದ ಸಾರ್ವಜನಿಕರು ಮಠಾಧೀಶರ ವಿರುದ್ಧ ಕಿಡಿಕಾರಿದರಲ್ಲದೆ, ಸ್ಪಷ್ಟ ಉತ್ತರ ನೀಡುವಂತೆ ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸಾರ್ವಜನಿಕರ ಮಧ್ಯಪ್ರವೇಶಕ್ಕೆ ಪೊಲೀಸರು, ಪತ್ರಕರ್ತರು ಅವಕಾಶ ಮಾಡಿಕೊಡಲಿಲ್ಲ.

ಲಾಠಿ ಬೀಸಿದ ಪೊಲೀಸರು

ಸಂತ್ರಸ್ತ ಬಾಲಕಿಯರನ್ನು ಜಿಲ್ಲಾ ನ್ಯಾಯಾಲಯದ ಆವರಣಕ್ಕೆ ಕರೆತರುತ್ತಿದ್ದಂತೆಯೇ ಸಾರ್ವಜನಿಕರು ಜಮಾಯಿಸಿದರು. ಆರೋಪಿ ಸ್ಥಾನದಲ್ಲಿರುವ ಮಠಾಧೀಶರನ್ನು ಬಂಧಿಸುವಂತೆ ಒತ್ತಾಯಿಸಿ ಘೋಷಣೆ ಕೂಗಿದರು. ಪರಿಸ್ಥಿತಿ ಕೈಮೀರುತ್ತಿರುವುದನ್ನು ಗಮನಿಸಿದ ಪೊಲೀಸರು ಲಾಠಿ ಬೀಸಿ ಜನರನ್ನು ಚದುರಿಸುವ ಪ್ರಯತ್ನ ಮಾಡಿದರು. ಮಠದ ಆವರಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದೆ.

ಅದಾನಿ ಈಗ ವಿಶ್ವದ 3ನೇ ಶ್ರೀಮಂತ

ಮುಂಬೈ (ಎಎಫ್‌ಪಿ): ಉದ್ಯಮಿ ಗೌತಮ್ ಅದಾನಿ ಅವರು ಬ್ಲೂಮ್‌ಬರ್ಗ್ ಬಿಲಿಯನೇರ್ಸ್ ಸೂಚ್ಯಂಕದ ಪ್ರಕಾರ ಈಗ ವಿಶ್ವದ ಮೂರನೆಯ ಅತ್ಯಂತ ಶ್ರೀಮಂತ ವ್ಯಕ್ತಿ. ವಿಶ್ವದ ಅತ್ಯಂತ ಶ್ರೀಮಂತರ ಪಟ್ಟಿಯಲ್ಲಿ ಏಷ್ಯಾದ ವ್ಯಕ್ತಿಯೊಬ್ಬರು ಟಾಪ್–3 ಸ್ಥಾನಗಳಲ್ಲಿ ಒಂದನ್ನು ಪಡೆದಿರುವುದು ಇದೇ ಮೊದಲು.



ಅದಾನಿ ಅವರ ಆಸ್ತಿಯ ಮೌಲ್ಯವು ಕಳೆದ ವರ್ಷದಲ್ಲಿ ಎರಡು ಪಟ್ಟಿಗಿಂತ ಹೆಚ್ಚಾಗಿದೆ, ಅವರು ಶ್ರೀಮಂತರ ಪಟ್ಟಿಯಲ್ಲಿ 20 ಸ್ಥಾನಗಳಷ್ಟು ಮೇಲಕ್ಕೆ ಬಂದಿದ್ದಾರೆ. ಈಗ ಮೊದಲ ಹಾಗೂ ಎರಡನೆಯ ಸ್ಥಾನಗಳಲ್ಲಿ ಕ್ರಮವಾಗಿ ಇಲಾನ್ ಮಸ್ಕ್ ಮತ್ತು ಜೆಫ್ ಬೆಜಾಸ್ ಇದ್ದಾರೆ ಎಂದು ಬ್ಲೂಮ್‌ಬರ್ಗ್ ನ್ಯೂಸ್ ವರದಿ ಮಾಡಿದೆ.

ಅದಾನಿ ಸಮೂಹಕ್ಕೆ ಸೇರಿರುವ ಅದಾನಿ ಎಂಟರ್‌ಪ್ರೈಸಸ್ ಕಂಪನಿಯ ಷೇರು ಮೌಲ್ಯವು 2020ರ ಮಾರ್ಚ್ ನಂತರ ಶೇಕಡ 2,400ಕ್ಕೂ ಹೆಚ್ಚು ಏರಿಕೆ ಕಂಡಿದೆ. ಕಳೆದ ಆರು ತಿಂಗಳಲ್ಲಿ ಷೇರು ಮೌಲ್ಯವು ದುಪ್ಪಟ್ಟಾಗಿದೆ. ಈ ಕಂಪನಿಯಲ್ಲಿ ಅದಾನಿ ಅವರು ಶೇಕಡ 75ರಷ್ಟು ಪಾಲು ಹೊಂದಿದ್ದಾರೆ.

ಬ್ಲೂಮ್‌ಬರ್ಗ್ ಬಿಲಿಯನೇರ್ಸ್ ಸೂಚ್ಯಂಕ

ಸ್ಥಾನ	ಹೆಸರು	ದೇಶ	ಸಂಪತ್ತು (ಲಕ್ಷ ಕೋಟಿಯಲ್ಲಿ)
1	ಇಲಾನ್ ಮಸ್ಕ್	ಅಮೆರಿಕ	₹19.96
2	ಜೆಫ್ ಬೆಜಾಸ್	ಅಮೆರಿಕ	₹12.16
3	ಗೌತಮ್ ಅದಾನಿ	ಭಾರತ	₹10.89
4	ಬರ್ನಾರ್ಡ್ ಅರ್ನಾಲ್ಟ್	ಫ್ರಾನ್ಸ್	₹10.81
5	ಬಿಲ್ ಗೇಟ್ಸ್	ಅಮೆರಿಕ	₹9.30

ಪ್ರತಿ ವಹಿವಾಟಿಗೂ ಹೊಸ ಸರ್ವೆ ನಂಬರ್ • ಹಿಸ್ಸಾ ನಂಬರ್ ಇರೊಲ್ಲ

ಹಿಸ್ಸಾ ಆಸ್ತಿಗೆ ಹೊಸ ಸರ್ವೆ ನಂಬರ್

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೃಷಿ ಭೂಮಿಯಲ್ಲಿ ಒಂದು ಸರ್ವೆ ನಂಬರ್‌ನಲ್ಲಿ ಭಾಗಶಃ ಮಾರಾಟ, ದಾನ, ವಿಭಾಗ ಸೇರಿದಂತೆ ಯಾವುದಾದರೂ ಹೊಸ ವಹಿವಾಟು ನಡೆದರೆ ಅದಕ್ಕೆ ಹೊಸ ಸರ್ವೆ ನಂಬರ್ ನೀಡುವ ವ್ಯವಸ್ಥೆ ಮುಂದಿನ ತಿಂಗಳಿನಿಂದ ಜಾರಿಯಾಗಲಿದೆ. ಅಲ್ಲದೆ, ಭೂ ಪರಿವರ್ತನೆಯಾಗಿದ್ದರೂ ಅದಕ್ಕೆ ಬೇರೆ ಸರ್ವೆ ನಂಬರ್ ದೊರೆಯಲಿದೆ.

‘ಸ್ವಯಂಚಾಲಿತ ಮೋಜಿಣಿ ವ್ಯವಸ್ಥೆ’ಯಿಂದ ಕೃಷಿ ಭೂಮಿಯ ಯಾವುದಾದರೂ ಸರ್ವೆ ನಂಬರ್‌ನ ಹಿಸ್ಸಾದಲ್ಲಿ ಮಾರಾಟ, ವಿಭಾಗವಾದರೆ ಹಿಂದಿನಂತೆ ಆ ಸರ್ವೆ ನಂಬರ್‌ನಲ್ಲಿರುವ ಹಿಸ್ಸಾದ ಕೊನೆಯ ಸಂಖ್ಯೆಯ ನಂತರದ ಹಿಸ್ಸಾ ದಾಖಲಾಗುವುದಿಲ್ಲ. ಬದಲಿಗೆ ಆ ಗ್ರಾಮದಲ್ಲಿರುವ ಕೊನೆ ಸರ್ವೆ ನಂಬರ್ ನಂತರದ ಹೊಸ ಸರ್ವೆ ನಂಬರ್ ನೀಡಲಾಗುತ್ತಿದೆ.

ಉದಾಹರಣೆಗೆ ಹಾಸನದ ಅರಕಲಗೂಡು ತಾಲ್ಲೂಕಿನ ಗ್ರಾಮದಲ್ಲಿ ಸರ್ವೆ ನಂಬರ್ 87ರ ಹಿಸ್ಸಾ 6ರಲ್ಲಿ ಅವರ ಕುಟುಂಬದಲ್ಲೇ ಐದು ಭಾಗವನ್ನಾಗಿ ಮಾಡಿಕೊಂಡಿದ್ದರೆ ಒಬ್ಬರಿಗೆ 87/6 ಹಾಗೇ ಉಳಿದುಕೊಳ್ಳಲಿದೆ. ಆ ಗ್ರಾಮದ ಕೊನೆಯ ಸರ್ವೆ ನಂಬರ್ 231 ಎಂದಿದ್ದರೆ, ನಾಲ್ವರಿಗೆ 232ರಿಂದ 235 ಎಂದು ಉಳಿದ ನಾಲ್ವರಿಗೆ ಹೊಸ ನಂಬರ್ ನೀಡಲಾಗುತ್ತದೆ. ಆರ್‌ಟಿಸಿ ಸ್ವಯಂಚಾಲಿತವಾಗಿ ರಚನೆಯಾಗಿ, ಅದರ 10ನೇ ಕಾಲಂನಲ್ಲಿ ಮೂಲ ಸರ್ವೆ ನಂಬರ್ (ಮದರ್ ಸರ್ವೆ ನಂಬರ್) ಕೂಡ ದಾಖಲಾಗುತ್ತದೆ.

‘ಸರ್ವೆ ಇಲಾಖೆ ಆಗಸ್ಟ್ 16ರಿಂದ ‘ಸ್ವಯಂಚಾಲಿತ ಮೋಜಿಣಿ ವ್ಯವಸ್ಥೆ’ಯನ್ನು ಪ್ರಾಯೋಗಿಕವಾಗಿ ಜಾರಿಗೆ ತಂದಿದೆ. ಕೆಲವು ತಾಂತ್ರಿಕ ಸಮಸ್ಯೆಗಳು ಎದುರಾಗಿರುವುದರಿಂದ ಅದೆಲ್ಲವನ್ನೂ ನಿವಾರಣೆ ಮಾಡಿ ಸೆ.10ರಿಂದ ಈ ಹೊಸ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತದೆ’ ಎಂದು ಸರ್ವೆ ಇಲಾಖೆ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

11ನೇ ಪುಟ ನೋಡಿ

ನಿಯಮಗಳಿಗೆ ತಿದ್ದುಪಡಿ ಆಗಿಲ್ಲ: ಆರೋಪ

‘ರೈತರ ಜಮೀನು ಪೋಡಿಯಲ್ಲಿ ನೀಡುತ್ತಿದ್ದ ಹಿಸ್ಸಾ ನಂಬರನ್ನು ಗ್ರಾಮದ ಕೊನೆ ನಂಬರ್ ಆಗಿ ಬದಲಾಯಿಸಲು ಸೂಚಿಸಿರುವುದು ಅವೈಜ್ಞಾನಿಕ. ಕಂದಾಯ ಕಾಯ್ದೆ ಜಾರಿಗೆ ಬಂದ ನಂತರ ಯಾವುದೇ ಹೊಸ ಸರ್ವೆ ನಂಬರ್‌ಗೆ ಕನಿಷ್ಠ ವಿಸ್ತೀರ್ಣಕ್ಕಿಂತ ಕಡಿಮೆ ಬರುವ ಹಿಡುವಳಿಯನ್ನು ಪ್ರತ್ಯೇಕವಾಗಿ ಅಳತೆ ಮಾಡಿದ ನಂತರ ಕಂದಾಯ ನಿಗದಿಪಡಿಸಬೇಕು. ಈ ನಿಯಮಗಳನ್ನು ಪಾಲಿಸದೆ ಸುತ್ತೋಲೆ ಹೊರಡಿಸಲಾಗಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ಹೇಳಿದರು.

‘ಸರ್ಕಾರದ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಗ್ರಾಮ ನಕಾಶೆ ಹಾಗೂ ದಿಶಾಂಕ್‌ಗಳಲ್ಲಿ ಹೊಸ ಸರ್ವೆ ನಂಬರುಗಳನ್ನು ಕಾಲ ಕಾಲಕ್ಕೆ ಗುರುತಿಸುವ ಸೌಲಭ್ಯವಿಲ್ಲ. ಕಂದಾಯ ಮತ್ತು ಕೃಷಿ ಅಧಿಕಾರಿಗಳು ಗ್ರಾಮ ನಕಾಶೆಗೆ ಅವಲಂಬಿತರಾಗಿ, ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಹೀಗಾಗಿ ಸೃಷ್ಟಿಯಾಗುವ ಹೊಸ ಸರ್ವೆ ನಂಬರ್‌ಗಳಿಂದ ಗೊಂದಲ ಉಂಟಾಗುತ್ತದೆ’ ಎಂದರು.

‘ಗ್ರಾಮ ನಕ್ಷೆಯಲ್ಲಿ ಗೊಂದಲ ಸೃಷ್ಟಿ’

‘ಒಂದು ಗ್ರಾಮದಲ್ಲಿ ಒಂದು ಕಡೆಯಿಂದ ಸರ್ವೆ ನಂಬರ್ ಆರಂಭವಾಗುತ್ತದೆ. ಈಗ ಮಧ್ಯದಲ್ಲಿ ಸರ್ವೆ ನಂಬರ್ 4 ಮತ್ತು 5ರ ನಡುವೆ ನಂಬರ್ 251 ಬರುತ್ತದೆ. ನಮಗೆ ಹಳೆಯ ನಕಾಶೆಯಲ್ಲಿ ಇದು ಇರುವುದಿಲ್ಲ. ನಾವು ಮತ್ತೆ ಆಗಾಗ್ಗೆ ಗ್ರಾಮ ನಕ್ಷೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಪ್ರತಿ ಬಾರಿ ಹೊಸ ಸರ್ವೆ ನಂಬರ್ ಸೃಷ್ಟಿಯಾದಾಗ ಗ್ರಾಮ ನಕ್ಷೆ ಬದಲಾಗುತ್ತದೆ. ಇದು ಸಾಕಷ್ಟು ರೀತಿಯ ಗೊಂದಲ ಉಂಟು ಮಾಡುತ್ತದೆ. ಹೀಗಾಗಿ ಇಂತಹ ಹೊಸ ವ್ಯವಸ್ಥೆ ಬೇಡ. ಇದನ್ನು ಪರಿಶೀಲಿಸಬೇಕು ಎಂದು ಆಯುಕ್ತರಿಗೆ ನಾವು ಮನವಿ ಮಾಡುತ್ತೇವೆ’ ಎಂದು ರಾಜ್ಯ ರೈತ ಸಂಘದ (ನಂಜುಂಡ ಸ್ವಾಮಿ ಬಣ) ಮುಖಂಡ ನಾರಾಯಣ ರೆಡ್ಡಿ ತಿಳಿಸಿದರು.



ಭಾರಿ ಮಳೆಗೆ ಮಂಡ್ಯ ಜಿಲ್ಲೆಯ ನಾಗಮಂಗಲ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಜಲಾವೃತಗೊಂಡಿದ್ದು, ಸಿಬ್ಬಂದಿ ಮಂಗಳವಾರ ಕಚೇರಿಗೆ ತೆಪ್ಪದಲ್ಲಿ ತೆರಳಿದರು

ಮೂವರು ಸಾವು; ಅಪಾರ ಆಸ್ತಿ, ಬೆಳೆ ಹಾನಿ

ಹಲವೆಡೆ ತಗ್ಗದ ಮಳೆ ಅಬ್ಬರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಸೇರಿ ದಕ್ಷಿಣ ಕರ್ನಾಟಕದ ಹಲವೆಡೆ ಮತ್ತು ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಸೋಮವಾರ ತಡರಾತ್ರಿಯಿಂದಿಡಿದು ಮಂಗಳವಾರ ಕೂಡ ಧಾರಾಕಾರ ಮಳೆಯಾಗಿದೆ. ಇಬ್ಬರು ಯುವಕರು ಮತ್ತು ಒಬ್ಬ ಮಹಿಳೆ ಸಾವನ್ನಪ್ಪಿದ್ದು, ಅಪಾರ ಪ್ರಮಾಣದಲ್ಲಿ ಆಸ್ತಿ, ಬೆಳೆ ಹಾನಿಯಾಗಿದೆ.

ಮೂರು ದಶಕಗಳಲ್ಲೇ ಅತ್ಯಧಿಕ ಮಳೆಗೆ ಸಾಕ್ಷಿಯಾದ ರಾಮನಗರ ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಕೂಡ ಭಾರಿ ಮಳೆಯಾಗಿದೆ. ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಭಾಗದಲ್ಲಿ ಅತಿ ಹೆಚ್ಚು ಮಳೆ ಬಿದ್ದಿದ್ದು, ಹಾರೋಹಳ್ಳಿ ಕೆರೆ ಕೋಡಿ ಒಡೆದು ಮನೆಗಳಿಗೆ ನೀರು ನುಗ್ಗಿದೆ. ಕಾರ್ಖಾನೆ, ಸಮುದಾಯ ಆರೋಗ್ಯ ಕೇಂದ್ರ ಜಲಾವೃತಗೊಂಡಿವೆ. ಚನ್ನಪಟ್ಟಣ ತಾಲ್ಲೂಕಿನ ಹುಣಸನಹಳ್ಳಿಯ ಬಿಸಿಲೇಶ್ವರ ದೇವಾಲಯವೂ ಜಲಾವೃತಗೊಂಡಿದೆ.

ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯಲ್ಲೂ ಮಳೆ ಅಬ್ಬರ ಮುಂದುವರಿದಿದ್ದು ನೂರಾರು ಮನೆಗಳಿಗೆ ಹಾನಿಯಾಗಿದೆ. ಅಪಾರ ಬೆಳೆ ನಷ್ಟವಾಗಿದೆ. ಮೈಸೂರು ತಾಲ್ಲೂಕಿನ ಜಯಪುರ ಹೋಬಳಿಯಲ್ಲಿ ಕೆರೆಗಳು ತುಂಬಿ ಹರಿದು, ಹಲವು ಗ್ರಾಮಗಳು ಜಲದಿಗ್ಬಂಧನದಲ್ಲಿವೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಸತತ ಮಳೆಯಿಂದ 3 ಶತಮಾನಗಳ ಹಿಂದಿನ ಐತಿಹಾಸಿಕ ಆನೆಕೋಟೆ ದ್ವಾರ ಸಮೀಪದ ಒಂದು ಭಾಗ ಮಂಗಳವಾರ ಬೆಳಿಗ್ಗೆ ಕುಸಿದಿದೆ. ಜಿಲ್ಲಾಡಳಿತ ನಡೆಸುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮದ ಪ್ರದೇಶದಲ್ಲೇ ಸುಮಾರು 25 ಅಡಿ ಉದ್ದ ಕೋಟೆ ಕುಸಿದಿದ್ದು, ಕಲ್ಲು ಮತ್ತು ಇಟ್ಟಿಗೆಗಳು ಕಂದಕಕ್ಕೆ ಬಿದ್ದಿವೆ.

ಚಾಮರಾಜನಗರ ಜಿಲ್ಲೆಯ ಯಳಂದೂರಿನ ಅರಣ್ಯ ಇಲಾಖೆ ಕಚೇರಿ, ಅಗರ ಮಾಂಬಳ್ಳಿ ಪೊಲೀಸ್ ಠಾಣೆ ಸೇರಿ ಹಲವು ಸರ್ಕಾರಿ ಕಚೇರಿಗಳೂ ಜಲಾವೃತವಾಗಿದ್ದು, ಕೆಲಸಕ್ಕೆ ಅಡ್ಡಿಯಾಯಿತು. ಅಗರ ಮಾಂಬಳ್ಳಿಯಲ್ಲಿ ಪೊಲೀಸ್ ಸಿಬ್ಬಂದಿ ಸೇರಿ ನಾಗರಿಕರನ್ನು ಅಗ್ನಿಶಾಮಕ ಸಿಬ್ಬಂದಿ ಬೋಟ್ ಮೂಲಕ ರಕ್ಷಿಸಿದರು.

ಮಂಡ್ಯ ಜಿಲ್ಲೆಯ ನಾಗಮಂಗಲ ಸಾರಿಗೆ ಸಂಸ್ಥೆ ಬಸ್ ನಿಲ್ದಾಣ ಜಲಾವೃತವಾಗಿದ್ದು, 40ಕ್ಕೂ ಹೆಚ್ಚು ಬಸ್‌ಗಳು ನೀರಿನಲ್ಲಿ ಸಿಲುಕಿದ್ದವು.

ಚಾಮರಾಜನಗರ ಜಿಲ್ಲೆಯ ಹಲವು ಕಡೆ ಸುವರ್ಣಾವತಿ ನದಿ, ಕಬಿನಿ ಕಾಲುವೆ ಉಕ್ಕಿ ಯಳಂದೂರು ಹಾಗೂ ಕೊಳ್ಳೇಗಾಲ ನಡುವಿನ ಅಗರ ಮಾಂಬಳ್ಳಿ ಗ್ರಾಮಗಳಿಗೆ ನೀರು ನುಗ್ಗಿದೆ. 300ಕ್ಕೂ ಹೆಚ್ಚು ಮನೆಗಳು ಜಲಾವೃತವಾಗಿವೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಯಲಕರಾಳ್ಳಹಳ್ಳಿ ಬಳಿ ಕುಶಾವತಿ ನದಿಗೆ ನಿರ್ಮಿಸುತ್ತಿದ್ದ ಚೆಕ್‌ಡ್ಯಾಂ ಮಳೆಯ ಅಬ್ಬರಕ್ಕೆ ಕೊಚ್ಚಿ ಹೋಗಿದೆ. ನದಿ ಪಾತ್ರದ ಜಮೀನುಗಳಲ್ಲಿ ಬೆಳೆ ನಾಶವಾಗಿವೆ.

ಮೂವರ ಸಾವು: ಚನ್ನಪಟ್ಟಣ ತಾಲ್ಲೂಕಿನ ಹರಿಸಂದ್ರ ಗ್ರಾಮದ ಕೆರೆ ಕೋಡಿ ತುಂಬಿ ಹರಿಯುತ್ತಿದ್ದ ನೀರು ನೋಡಲು ಹೋಗಿದ್ದ ತಿಮ್ಮಸಂದ್ರ ಗ್ರಾಮದ ಸುಜೇಂದ್ರ (21), ಹಾವೇರಿಯಲ್ಲಿ ಮೈದುಂಬಿ ಹರಿಯುತ್ತಿರುವ ವರದಾ ನದಿಯಲ್ಲಿ ಎತ್ತುಗಳ ಮೈತೊಳೆಯಲು ಇಳಿದಿದ್ದ ಸುನೀಲ ಪರಮೇಶಪ್ಪ ನೆಗಳೂರು (21) ನೀರು ಪಾಲಾಗಿದ್ದಾರೆ.

10ನೇ ಪುಟ ನೋಡಿ

20 ಜಿಲ್ಲೆಗಳಲ್ಲಿ ಮಳೆ ಹಾನಿ: ಅಶೋಕ

ಬೆಂಗಳೂರು: ಎರಡು ದಿನ ಸುರಿದ ಭಾರಿ ಮಳೆಯಿಂದ ರಾಜ್ಯದ 20 ಜಿಲ್ಲೆಗಳಲ್ಲಿ ಹಾನಿಯಾಗಿದೆ. ಒಟ್ಟಾರೆ ಜುಲೈ, ಆಗಸ್ಟ್ ತಿಂಗಳಲ್ಲಿ ಮಳೆಯಿಂದ ₹ 7,647.13 ಕೋಟಿಯಷ್ಟು ಹಾನಿಯಾಗಿದೆ. ಹೆಚ್ಚಿನ ನೆರವು ಕೋರಿ ಕೇಂದ್ರ ಸರ್ಕಾರ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಅತಿವೃಷ್ಟಿ ಮತ್ತು ಪ್ರವಾಹದ ನಷ್ಟಕ್ಕೆ ರಾಷ್ಟ್ರೀಯ ಪ್ರಾಕೃತಿಕ ವಿಕೋಪ ಪರಿಹಾರ ನಿಧಿಯಿಂದ (ಎನ್‌ಡಿಆರ್‌ಎಫ್) ₹ 1,012.50 ಕೋಟಿ ಪರಿಹಾರ ದೊರಕಲಿದೆ. ಭಾರಿ ನಷ್ಟ ಆಗಿರುವುದರಿಂದ ಹೆಚ್ಚಿನ ಪರಿಹಾರ ಕೋರಲಾಗುವುದು’ ಎಂದರು.

ಸೋಮವಾರ ಒಂದೇ ದಿನ ಮಳೆಯಿಂದ 184 ಮನೆಗಳಿಗೆ ಹಾನಿಯಾಗಿದ್ದು, 258 ಜಾನುವಾರುಗಳು ಮೃತಪಟ್ಟಿವೆ. 875 ಸಂತ್ರಸ್ತರು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರ ಹೊಂದಿದ್ದಾರೆ. ರಾಮನಗರದಲ್ಲಿ ಇಬ್ಬರು ಮತ್ತು ಬಳ್ಳಾರಿಯಲ್ಲಿ ಒಬ್ಬರು ಸತ್ತಿದ್ದು, ಮೂವರು ನಾಪತ್ತೆಯಾಗಿದ್ದಾರೆ ಎಂದು ವಿವರ ನೀಡಿದರು.

10ನೇ ಪುಟ ನೋಡಿ



1.ಮಳೆಯಿಂದಾಗಿ ಸರ್ಜಾಪುರ ರಸ್ತೆಯ ರೇನ್ ಬೊ ಬಡಾವಣೆಯಲ್ಲಿ ನೀರು ತುಂಬಿರುವುದು



2.ಸರ್ಜಾಪುರ ರಸ್ತೆಯ ರೇನ್ ಬೊ ಬಡಾವಣೆಯಲ್ಲಿ ನಾಗರಿಕರನ್ನು ಬೋಟ್ ಮೂಲಕ ಅಗ್ನಿಶಾಮಕ ದಳದವರು ರಕ್ಷಿಸಿದರು



3. ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ನೀರಿನಲ್ಲಿ ಸಾಗಿದ ವಾಹನಗಳು

–ಪ್ರಜಾವಾಣಿ ಚಿತ್ರಗಳು ಬಿ.ಕೆ. ಜನಾರ್ದನ

ನದಿಯಂತಾದ ಬೆಳ್ಳಂದೂರು ವರ್ತುಲ ರಸ್ತೆ • ಬಡಾವಣೆಗಳಲ್ಲಿ ಹರಿದ ಮಳೆ ನೀರು

ಕೆರೆ ಕೋಡಿ ಹರಿದು ರಸ್ತೆಗಳು ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಮವಾರದಿಂದ ಮಂಗಳವಾರ ಮುಂಜಾನೆಯವರೆಗೆ ಸುರಿದ ಮಳೆಯಿಂದ ನಗರದ ಹೊರ ವಲಯದ ಬೆಳ್ಳಂದೂರು ವರ್ತುಲ ರಸ್ತೆ ನದಿಯಾಗಿದೆ. ರಾಜಕಾಲುವೆಯಲ್ಲಿ ಹರಿಯಬೇಕಾದ ನೀರು ರಸ್ತೆ ಹಾಗೂ ಬಡಾವಣೆಗಳಲ್ಲಿ ಹರಿಯುತ್ತಿದೆ. ಮಂಗಳವಾರ ಮಳೆಯಾಗದಿದ್ದರೂ ಕೆರೆ ಕೋಡಿ ನೀರು ಹರಿಯುತ್ತಲೇ ಇರುವುದಿಂದ ಸಮಸ್ಯೆ ಮುಂದುವರಿದಿದೆ.

ಹಾಲನಾಯಕನಹಳ್ಳಿ ಕೆರೆ ಕೋಡಿ ಹರಿದಿರುವುದರಿಂದ ಮಹದೇವಪುರ ವಲಯದ ಹಲವಾರು ರಸ್ತೆ, ಬಡಾವಣೆಗಳಲ್ಲಿ ಭಾರಿ ನೀರು ಹರಿಯುತ್ತಿದ್ದು, ಬಡಾವಣೆಗಳ ಮನೆಗೂ ನೀರು ನುಗ್ಗಿದೆ. ಸುಮಾರು 70 ಹೆಕ್ಟೇರ್ ವಿಸ್ತೀರ್ಣವಿರುವ ಹಾಲನಾಯಕನಹಳ್ಳಿ ಕೆರೆ 40 ವರ್ಷಗಳಲ್ಲಿ ಮೊದಲ ಬಾರಿಗೆ ತುಂಬಿದೆ. ಅಲ್ಲಿಂದ ನೀರು ಅತಿ ಹೆಚ್ಚಾಗಿ, ರಭಸವಾಗಿ ಹರಿಯುತ್ತಿರುವುದರಿಂದ ಮಹದೇವಪುರ, ಬೆಳ್ಳಂದೂರು, ಮಾರತ್‌ಹಳ್ಳಿ ಭಾಗದಲ್ಲಿ ನೀರು ಹರಿಯುತ್ತಿದೆ.

ಹಾಲನಾಯಕಹಳ್ಳಿಯಿಂದ ಸವಳು ಕೆರೆ ಮಾರ್ಗವಾಗಿ ಬೆಳ್ಳಂದೂರಿಗೆ ನೀರು ಹರಿಯುತ್ತದೆ. ಆದರೆ ರಾಜಕಾಲುವೆಗಳು ಮುಚ್ಚಿ ಹೋಗಿರುವುದರಿಂದ ನೀರೆಲ್ಲ ರಸ್ತೆ ಹಾಗೂ ಬಡಾವಣೆಗಳಲ್ಲಿ ಹರಿಯುತ್ತಿದೆ. ಮಹದೇವಪುರ ವಲಯದ ದೊಡ್ಡನೆಕ್ಕುಂದಿಯಲ್ಲಿ ಸೋಮವಾರ 109 ಮಿ.ಮೀ.. ಮಳೆಯಾಗಿದೆ. ನಗರದಲ್ಲಿ 15.6 ಮಿ.ಮೀ.. ನಿಂದ 109 ಮಿ.ಮೀ. ನಷ್ಟು ಮಳೆಯಾಗಿದೆ.

‘ಆರ್‌ಬಿಡಿ ಬಡಾವಣೆ, ಮುನೇನ ಕೊಳಲು, ತೂಬರಹಳ್ಳಿ, ನೆಲ್ಲೂರು ಹಳ್ಳಿ, ಸಕ್ರಾ ಆಸ್ಪತ್ರೆ ಸುತ್ತಮುತ್ತ, ಬೆಳ್ಳಂದೂರು ಹೊರವರ್ತುಲ ರಸ್ತೆ, ಡಿಎನ್‌ಎ ಅಪಾರ್ಟ್‌ಮೆಂಟ್, ಟಿ–ಝುಡ್ ಅಪಾರ್ಟ್‌ಮೆಂಟ್, ಕಾಡು ಗೋಡಿ, ರಾಮಯ್ಯ ಲೇಔಟ್ ಸುತ್ತಮುತ್ತ ನೀರು ಹರಿದಿದೆ. ನೀರನ್ನು ಪಂಪ್ ಮಾಡಿ ಹೊರ ಹಾಕಲಾಗುತ್ತಿದೆ. ವಿಪತ್ತು ನಿರ್ವಹಣೆ ದಳ ಹಾಗೂ ಅಗ್ನಿಶಾಮಕ ದಳದ ವತಿಯಿಂದ ರಕ್ಷಣಾ ಕಾರ್ಯ ಕೈಗೊಳ್ಳಲಾಗಿದೆ. ಬೋಟ್ ಮೂಲಕ ಜನರನ್ನು ರಕ್ಷಿಸಲಾಗಿದೆ’ ಎಂದು ಬೊಮ್ಮನಹಳ್ಳಿ ವಲಯದ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ತಿಳಿಸಿದರು.

‘ಹಾಲನಾಯಕನಹಳ್ಳಿ ಕೆರೆ ಕೋಡಿ ಹರಿದಿದ್ದು, ರಸ್ತೆಯನ್ನೆಲ್ಲ ನೀರು ಆವರಿಸಿದೆ. ಹೀಗಾಗಿ ಕೆಳಭಾಗದ ವಸತಿ ಪ್ರದೇಶಗಳಿಗೆ ನೀರು ನುಗ್ಗಿದೆ. ಮಂಗಳವಾರ ಮಳೆ ಬಾರದಿದ್ದರೂ ಕೋಡಿ ನೀರಿನಿಂದ ಸಮಸ್ಯೆ ಉಂಟಾಗಿದೆ. ನೀರು ಕೋಡಿ ಹರಿದಿರು-ವುದರಿಂದ ಎಷ್ಟೇ ಪಂಪ್ ಮಾಡಿದರೂ ಸಮಸ್ಯೆ ಇದ್ದೇ ಇರುತ್ತದೆ. ನೀರು ಹರಿದು ಹೋಗಲು ಕಾಲುವೆಗಳಿಗೆ ತಡೆ ಇದೆ’ ಎಂದು ಅವರು ಮಾಹಿತಿ ನೀಡಿದರು.

‘ಹೊರವರ್ತುಲ ರಸ್ತೆಯಲ್ಲಿ ಏಳು ಕಿ.ಮೀ. ಸಾಗಲು ಮೂರು ಗಂಟೆ ತೆಗೆದುಕೊಂಡಿದ್ದೇನೆ. ರಸ್ತೆ ಪೂರ್ಣವಾಗಿ ನೀರಿನಿಂದ ತುಂಬಿಹೋಗಿತ್ತು. ಮಂಗಳವಾರ ಮಳೆ ಬಾರದಿದ್ದರೂ, ಕೆರೆಗಳಿಂದ ನೀರು ಹರಿಯುತ್ತಲೇ ಇತ್ತು’ ಎಂದು ಮಧ್ಯಾಹ್ನ ಕಚೇರಿ ತಲುಪಿದ ಸಾಫ್ಟ್‌ವೇರ್ ಎಂಜಿನಿಯರ್ ಎಸ್. ರಾಕೇಶ್ ಹೇಳಿದರು. ಅವರು ಬೆಳಿಗ್ಗೆಯೇ ಕೆಲಸದ ಸ್ಥಳ ತಲುಪಬೇಕಿತ್ತು.

ಪರ್ಯಾಯ ಮಾರ್ಗವಾಗಿ ಸಂಚರಿಸುವಂತೆ ಪೊಲೀಸರು ಮಾರ್ಗದರ್ಶನ ನೀಡಿದರೂ, ಸುತ್ತಮುತ್ತಲಿನ ಎಲ್ಲ ರಸ್ತೆಗಳಲ್ಲೂ ನೀರು ಇದ್ದಿದ್ದರಿಂದ ನಾಗರಿಕರ ಸಂಚಾರ ಕಷ್ಟಸಾಧ್ಯವಾಗಿತ್ತು.

‘ದ್ವಿಚಕ್ರ ವಾಹನ ಸವಾರರು ಸಾಕಷ್ಟು ಸಮಸ್ಯೆ ಎದುರಿಸಿದರು. ಬೆಳ್ಳಂ ದೂರಿನಿಂದ ಸಿಲ್ಕ್‌ಬೋರ್ಡ್ ಜಂಕ್ಷನ್‌ಗೆ ಸಂಚರಿಸಿದ ಹಲವು ವಾಹನಗಳ ಎಂಜಿನ್‌ಗಳಿಗೆ ನೀರು ಹೋಗಿ, ನಿಂತು ಹೋಗಿದ್ದವು’ ಎಂದು ಕೆ. ಸ್ಮಿತಾ ಹೇಳಿದರು.

‘ಈ ಭಾಗದಲ್ಲಿ ಕೆಲವು ಕಡೆ ರಾಜಕಾಲುವೆ ಕೇವಲ ಒಂದು ಮೀಟರ್‌ನಷ್ಟು ಇದೆ. ಇಕೊಸ್ಪೇಸ್ ಸುತ್ತಮುತ್ತ ರಾಜಕಾಲುವೆ ಸಾಕಷ್ಟು ಒತ್ತುವರಿಯಾಗಿದೆ. ಈ ಪ್ರದೇಶದಲ್ಲಿ ಸರ್ವೆ ನಡೆಸಿ ಒತ್ತುವರಿಯನ್ನು ತೆರವು ಮಾಡಿ, ರಾಜಕಾಲುವೆಗಳನ್ನು ಹಿಂದಿನ ವಿಸ್ತೀರ್ಣಕ್ಕೆ ತಂದರೆ ಸಮಸ್ಯೆ ನಿವಾರಣೆಯಾಗುತ್ತದೆ’ ಎಂದು ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ಹೇಳಿದರು.



ಮೈಸೂರು ರಸ್ತೆಯ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಇರುವ ರಾಜಕಾಲವೆಯನ್ನು ಬಿಬಿಎಂಪಿ ವತಿಯಿಂದ ಮಂಗಳವಾರ ಸ್ವಚ್ಛಗೊಳಿಸಲಾಯಿತು

ಪ್ರಜಾವಾಣಿ ಚಿತ್ರ

ಜಲಾಶಯಕ್ಕೆ 5 ಅಡಿ ನೀರು

ಅರ್ಕಾವತಿ ನದಿ ಜಲಾನಯನ ಪ್ರದೇಶದಲ್ಲಿ ಹೆಚ್ಚು ಮಳೆಯಾಗಿರುವುದರಿಂದ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಎರಡು ದಿನಗಳಲ್ಲಿ ಐದು ಅಡಿ ನೀರು ಬಂದಿದೆ. ಮಂಗಳವಾರ ಜಲಾಶಯದ ಮಟ್ಟ 57.5 ಅಡಿ ನೀರು ಸಂಗ್ರಹ-ವಾಗಿತ್ತು. ಬೆಂಗಳೂರು ಕಡೆಯಿಂದ ಅರ್ಕಾವತಿ ನದಿಯ ಮೂಲಕ ನೀರು ಹೆಚ್ಚಾಗಿ ಜಲಾಶಯಕ್ಕೆ ಹರಿಯುತ್ತಿದೆ. ಅಲ್ಲದೆ, ತುಮಕೂರು ಭಾಗದಲ್ಲೂ ಹೆಚ್ಚು ಮಳೆಯಾಗುತ್ತಿರುವುದರಿಂದ ಶಿವಗಂಗೆ ಮೂಲಕ ಕುಮುದ್ವತಿ ನದಿ ಹರಿವೂ ಹೆಚ್ಚಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಹಾಯಕ್ಕೆ ಇಲ್ಲಿಗೆ ಕರೆ ಮಾಡಿ

ಬಿಬಿಎಂಪಿ	1533
ಸಹಾಯವಾಣಿ	22660000
ವಾಟ್ಸ್‌ಆ್ಯಪ್	94806 85700
ಬಿಡಬ್ಲ್ಯುಎಸ್‌ಎಸ್‌ಬಿ	1916
ಬೆಸ್ಕಾಂ	1912

‘ಮೇಘ ಸಂದೇಶ’

ರಾಜ್ಯ ಸರ್ಕಾರದ ‘ಬೆಂಗಳೂರು ಮೇಘ ಸಂದೇಶ’ ಆ್ಯಪ್ ಮೂಲಕ ಹವಾಮಾನದ ಮಾಹಿತಿ ಪಡೆಯಬಹುದು. ಈ ಆ್ಯಪ್‌ನಲ್ಲಿ ಮಳೆ, ಪ್ರವಾಹದ ಮಾಹಿತಿ ಲಭ್ಯವಾಗಲಿದೆ. ಇದರಲ್ಲಿ ಬಿಬಿಎಂಪಿ ಕಚೇರಿ, ವಾರ್ಡ್‌ವಾರು ದೂರವಾಣಿ ಸಂಖ್ಯೆಗಳೂ ಸಿಗಲಿವೆ. ನಾಗರಿಕರು ಇದನ್ನು ಬಳಸಬಹುದು ಎಂದು ಅಧಿಕಾರಿಗಳು ತಿಳಿಸಿದರು.

‘ಮಳೆ ನೀರು ಮಾರ್ಗದ ಸಂಪರ್ಕ ಒಳಚರಂಡಿಗೆ ಕಲ್ಪಿಸಿದರೆ ಕ್ರಮ’

ಬೆಂಗಳೂರು: ಕಟ್ಟಡದ ಮಳೆ ನೀರು ಸಂಗ್ರಹದ ಮಾರ್ಗವನ್ನು ಒಳಚರಂಡಿಗೆ ಸಂಪರ್ಕ ಕಲ್ಪಿಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವು-ದು ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಎಚ್ಚರಿಕೆ ನೀಡಿದೆ.

ಜಲಮಂಡಳಿ ವತಿಯಿಂದ ಕಟ್ಟಡದ ಮಳೆ ನೀರು ಮಾರ್ಗವನ್ನು ಒಳಚರಂಡಿಗೆ ಸಂಪರ್ಕ ಕಲ್ಪಿಸಿರುವ ಕಟ್ಟಡಗಳ ಬಗ್ಗೆ ತಪಾಸಣೆ ನಡೆಸಲಾಗುತ್ತಿದೆ. ಅಂತಹ ಸಂಪರ್ಕಗಳನ್ನು ಕಡಿ-ತಗೊಳಿಸಲಾಗುವುದು. ಈ ಕಟ್ಟಡಗಳ ಮಾಲೀಕರ ವಿರುದ್ಧ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಯ್ದೆ–1964ರ ಸೆಕ್ಷನ್ 109ರ ಪ್ರಕಾರ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಒಳಚರಂಡಿ ವ್ಯವಸ್ಥೆಯನ್ನು ಗೃಹ ಬಳಕೆಯ ತ್ಯಾಜ್ಯ ನೀರನ್ನು ಹರಿಸಲು ಮಾತ್ರ ವಿನ್ಯಾಸಗೊಳಿಸಲಾಗಿದೆ. ಬೆಂಗಳೂರು ನಗರದ ಕೆಲವು ಪ್ರದೇಶಗಳ-ಲ್ಲಿ ಮಳೆಗಾಲದ ಸಂದರ್ಭದಲ್ಲಿ ರಸ್ತೆ ಮೇಲಿನ ನೀರು ಜಲಮಂಡಳಿಯ ಇಳಿಗುಂಡಿಗಳ ಮೂಲಕ ಒಳಚರಂಡಿಯಲ್ಲಿ ಹರಿಸಲಾಗುತ್ತದೆ. ಇದಲ್ಲದೆಯೇ ಕೆಲವು ಪ್ರದೇಶದ ರಸ್ತೆಗಳಲ್ಲಿ ಹಾಗೂ ಕೊಳಚೆ ಪ್ರದೇಶಗಳಲ್ಲಿ ಮಳೆ ನೀರು ಕಾಲುವೆಗಳು ಇಲ್ಲದೆ ಇರುವುದರಿಂದ ಮಳೆ ನೀರನ್ನು ಜಲಮಂಡಳಿಯ ಒಳಚರಂಡಿ ವ್ಯವಸ್ಥೆಗೆ ಹರಿಬಿಡಲಾಗುತ್ತಿದೆ. ಇದರಿಂದ, ಒಳಚರಂಡಿ ವ್ಯವಸ್ಥೆಯು ವಿನ್ಯಾಸಗೊ-ಳಿಸಿದ ಪ್ರಮಾಣಕ್ಕಿಂತ ಹೆಚ್ಚಿನ ನೀರು ಹರಿಯುವುದರಿಂದ ಕೆಲವು ಕಡೆ ರಸ್ತೆ ಮೇಲೆ ಉಕ್ಕಿ ಹರಿದು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ ಎಂದು ತಿಳಿಸಿದ್ದಾರೆ.

ಹೆಚ್ಚು ಮಳೆ ಎಲ್ಲೆಲ್ಲಿ? (ಮಿ.ಮೀ.ನಲ್ಲಿ)

ದೊಡ್ಡನೆಕ್ಕುಂದಿ	109	ವಿದ್ಯಾರಣ್ಯಪುರ	65.5
ಸಿಂಗಸಂದ್ರ	93	ಕೋಣನಕುಂಟೆ	63
ಹೊರಮಾವು	90	ಅರಕೆರೆ	59
ಎಚ್‌ಎಎಲ್ ವಿಮಾನ ನಿಲ್ದಾಣ	85.5	ಕಾಡುಗೋಡಿ	57.5
ಬೊಮ್ಮನಹಳ್ಳಿ	85.5	ಬಿ.ಟಿ.ಎಂ. ಬಡಾವಣೆ	56.5
ವರ್ತೂರು	82.5	ಕೋನೇನ ಅಗ್ರಹಾರ	55.5
ರಾಜಮಹಲ್‌ಗುಟ್ಟಹಳ್ಳಿ	81.5	ರಾಜರಾಜೇಶ್ವರಿನಗರ	53.5
ಜಕ್ಕೂರು	80	ಗರುಡಾಚಾರ್‌ಪಾಳ್ಯ	52
ಹೆಮ್ಮಿಗೆಪುರ	71.5	ಬೇಗೂರು	52
ಬಾಗಲಕುಂಟೆ	71	ಕೊಡಿಗೆಹಳ್ಳಿ	49
ಬೊಮ್ಮನಹಳ್ಳಿ	69.5	ಬಸವೇಶ್ವರನಗರ	48
ಪೀಣ್ಯ ಕೈಗಾರಿಕೆ ಪ್ರದೇಶ	69	ಕಾಟನ್‌ಪೇಟೆ	46.5
ಅಟ್ಟೂರು	68	ಹೂಡಿ	44
ನಾಯಂಡಹಳ್ಳಿ	65.5	ಬಾಣಸವಾಡಿ	42.5



ನಗರದಲ್ಲಿ ಭಾರಿ ಮಳೆಯಿಂದಾಗಿ ಬ್ರೂಕ್‌ಫೀಲ್ಡ್‌ನಲ್ಲಿ ಕಾರ್ಮಿಕರ ಗುಡಿಸಲುಗಳು ಜಲಾವೃತಗೊಂಡಿರುವುದು



ಅಪಾರ್ಟ್‌ಮೆಂಟ್‌ವೊಂದಕ್ಕೆ ಮಳೆನೀರು ನುಗ್ಗಿದ್ದು, ಅಲ್ಲಿನ ನಿವಾಸಿಗಳು ಪುಟ್ಟ ಮಗುವಿನೊಂದಿಗೆ ಆಚೆ ಬಂದರು.



ಶಾಸಕ ಅರವಿಂದ ಲಿಂಬಾವಳಿ ಅವರು ಅಪಾರ್ಟ್‌ಮೆಂಟ್‌ವೊಂದರ ನಿವಾಸಿಗಳ ಸಮಸ್ಯೆ ಆಲಿಸಿದರು

ಅಪಾರ್ಟ್‌ಮೆಂಟ್‌ಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಭಾರಿ ಮಳೆಯಿಂದ ಮಹದೇವಪುರ ಕ್ಷೇತ್ರದ ನಲ್ಲೂರಹಳ್ಳಿಯ ಡಿಎನ್‌ಎ ಈಡನ್ ವ್ಯೂ ಅಪಾರ್ಟ್‌ಮೆಂಟ್ ಬಳಿ ರಾಜ ಕಾಲುವೆಯ ತಡೆಗೋಡೆ ಒಡೆದು ಹತ್ತಕ್ಕೂ ಹೆಚ್ಚು ಅಪಾರ್ಟ್‌ಮೆಂಟ್‌ಗಳಿಗೆ ನೀರು ನುಗ್ಗಿದೆ.

ವೈಟ್‌ಫೀಲ್ಡ್‌ನ ಶೀಲವಂತನ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆಯ ತಡೆಗೋಡೆ ಒಡೆದ ಪರಿಣಾಮ ಸಮಸ್ಯೆ ಎದುರಿಸುವಂತಾಗಿದೆ.

ಕೆರೆಗೆ ಹರಿಯುವ ನೀರು ಗಾಲುವೆಯು ಮುಚ್ಚಿ ಹೋಗಿರುವುದರಿಂದ ಮಳೆ ನೀರು ರಭಸವಾಗಿ ಹರಿದು, ತಡೆಗೋಡೆ ಬಿದ್ದಿದೆ.

ನಲ್ಲೂರಹಳ್ಳಿಯ ವಿಕ್ಟೋರಿಯನ್ ವ್ಯೂ ಬಡಾವಣೆ, ಡಿಎನ್‌ಎ ಅಪಾರ್ಟ್‌ಮೆಂಟ್, ಜೈ ಅಪಾರ್ಟ್‌ಮೆಂಟ್, ಸಂಜೀವಿನಿ ಅಪಾರ್ಟ್‌ಮೆಂಟ್, ಬೋರ್‌ವೆಲ್ ರಸ್ತೆಯ ಎಸ್‌ಎಸ್ ಫೆಸಿಲಿಟಿ ಹೋಮ್ಸ್ ಮತ್ತು ಶ್ರೀನಿವಾಸ್ ಅಪಾರ್ಟ್‌ಮೆಂಟ್‌ಗಳಲ್ಲಿ 4ರಿಂದ 5 ಅಡಿಗಳಷ್ಟು ಮಳೆನೀರು ನಿಂತು ಸಂಪೂರ್ಣವಾಗಿ ಜಲಾವೃತವಾಗಿದ್ದವು.

ಅಪಾರ್ಟ್ ಮೆಂಟ್ ನಿವಾಸಿ ಗಳು ನೀರಿನಿಂದ ಮುಳುಗಿರುವ ವಾಹನಗಳನ್ನು ಹೊರತೆಗೆಯಲು ಹರ ಸಾಹಸ ಪಟ್ಟರು.

ಈ ಸಮಸ್ಯೆ ಆಗುತ್ತಿರುವುದು ಮೊದಲೇನಲ್ಲ. ಪ್ರತಿಸಾರಿ ಮಳೆ ಬಂದಾಗಲೂ ಈ ರೀತಿ ಸಮಸ್ಯೆ ಉಂಟಾಗುತ್ತದೆ. ಅಧಿಕಾರಿಗಳು ಸಮಸ್ಯೆ ಉಂಟಾದಾಗ ಮಾತ್ರ ಪರಿಹಾರ ನೀಡುತ್ತಾರೆ. ಶಾಶ್ವತ ಪರಿಹಾರ ನೀಡದೆ ಹಾಗೆ ಬಿಡುತ್ತಾರೆ ಎಂದು ನಿವಾಸಿ ಪ್ರದೀಪ್ ದೂರಿದರು.

ಶಾಸಕರ ಭೇಟಿ, ಪರಿಶೀಲನೆ: ಮಳೆಯಿಂದಾಗಿ ಜಲಾವೃತವಾಗಿರುವ ಸ್ಥಳಕ್ಕೆ ಶಾಸಕ ಅರವಿಂದ ಲಿಂಬಾವಳಿ ಭೇಟಿ ನೀಡಿ, ಪರಿಶೀಲಿಸಿದರು.

ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ, ಬಿಬಿಎಂಪಿ ಜಂಟಿ ಆಯುಕ್ತ ವೆಂಕಚಲಪತಿ, ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ, ಕಾರ್ಯನಿರ್ವಾಹಕ ಎಂಜಿನಿಯರ್ ಮಾಲತಿ, ಸಂತೋಷ್, ಜಯಶಂಕರ್ ರೆಡ್ಡಿ, ರಾಜೇಶ್ ಇದ್ದರು.

ಬ್ರೂಕ್‌ಫೀಲ್ಡ್: ಕಾರ್ಮಿಕರ ಗುಡಿಸಲುಗಳು ಜಲಾವೃತ

ಬೆಂಗಳೂರು: ಧಾರಾಕಾರ ಮಳೆಯಿಂದ ದೊಡ್ಡನೆಕ್ಕುಂದಿ ಬಳಿ ಬ್ರೂಕ್‌ಫೀಲ್ಡ್‌ನಲ್ಲಿ ಕಾರ್ಮಿಕರ ಗುಡಿಸಲುಗಳು ಸಂಪೂರ್ಣ ಜಲಾವೃತಗೊಂಡಿವೆ.

ಬಿಬಿಎಂಪಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವ ಕಾರ್ಮಿಕರು ಮತ್ತು ವಿವಿಧೆಡೆ ಕೆಲಸ ಮಾಡುತ್ತಿರುವ ವಲಸೆ ಕಾರ್ಮಿಕರವೂ ಸೇರಿ 80ಕ್ಕೂ ಹೆಚ್ಚು ಗುಡಿಸಲುಗಳು ಇವೆ.

‘ರಾಜಕಾಲುವೆ ಮತ್ತು ಅಕ್ಕಪಕ್ಕದ ಅಪಾರ್ಟ್‌ಮೆಂಟ್ ಸಮುಚ್ಚಯಗಳಿಂದ ಹೊರಹಾಕಿದ ನೀರು ಕಾರ್ಮಿಕರ ಟೆಂಟ್‌ಗಳಿಗೆ ಸೋಮವಾರ ಮಧ್ಯರಾತ್ರಿ ನುಗ್ಗಿತು. ಸುರಿವ ಮಳೆಯಲ್ಲೇ ಗುಡಿಸಲುಗಳನ್ನು ಬಿಟ್ಟು ಹೊರ ಬಂದೆವು. ಮಕ್ಕಳನ್ನು ದೇವಸ್ಥಾನದಲ್ಲಿ ಮಲಗಿಸಿದ್ದೇವೆ. ದಿನಸಿ ಸೇರಿ ಎಲ್ಲಾ ಪದಾರ್ಥಗಳು ನೀರು ಪಾಲಾಗಿವೆ’ ಎಂದು ನಿವಾಸಿ ಭೀಮೇಶ್ ತಿಳಿಸಿದರು.

‘ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ತುಂಬಿಕೊಂಡಿದ್ದ ನೀರನ್ನು ಮೋಟಾರ್ ಬಳಸಿ ನಮ್ಮ ಗುಡಿಸಲುಗಳ ಕಡೆಗೆ ಪಂಪ್ ಮಾಡಲಾಯಿತು. ಆದ್ದರಿಂದ ಸಮಸ್ಯೆ ಆಗಿದೆ. ಮಕ್ಕಳು ಜ್ವರದಿಂದ ಬಳಲುತ್ತಿವೆ. ದಿನಸಿ ನೀರು ಪಾಲಾಗಿರುವುದರಿಂದ ಊಟಕ್ಕೂ ಸಮಸ್ಯೆ ಎದುರಾಗಿದೆ’ ಎಂದರು.

‘ಬಿಬಿಎಂಪಿಯಲ್ಲೇ ಪೌರಕಾರ್ಮಿಕರಾಗಿ ಕೆಲಸ ಮಾಡುವ ನಾವು ತೊಂದರೆಗೆ ಸಿಲುಕಿದ್ದರೂ ಪಾಲಿಕೆಯಿಂದ ಯಾವುದೇ ನೆರವು ಸಿಕ್ಕಿಲ್ಲ. ಅಧಿಕಾರಿಗಳು ಬಂದು ನೋಡಿಕೊಂಡು ಹೋದರೂ ಊಟದ ವ್ಯವಸ್ಥೆಯನ್ನು ಮಾಡಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ವಚನ ಭ್ರಷ್ಟತೆ: ಶ್ರೀರಾಮುಲು ಟೀಕೆ

ಬೆಂಗಳೂರು: ‘ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮೂಲಕ ₹160 ಕೋಟಿ ಖರ್ಚು ಮಾಡಿ ನಡೆಸಿದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಬಹಿರಂಗ ಮಾಡದೇ ಕಸದ ಬುಟ್ಟಿಗೆ ಹಾಕಿದ್ದು ವಚನ ಭ್ರಷ್ಟತೆ ಅಲ್ಲವೇ’ ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಅವರು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ರಾಮುಲು ಅವರು, ‘ವರದಿ ಬಿಡುಗಡೆ ಮಾಡದಂತೆ ನಿಮ್ಮ ಸಂಪುಟದ ಸಹೋದ್ಯೋಗಿಗಳೇ ಒತ್ತಡ ಹಾಕಿ, ಕಾಂತರಾಜು ಅವರ ವರದಿಯನ್ನು ಶೈತ್ಯಾಗಾರಕ್ಕೆ ಹಾಕಿದ್ದು ವಚನ ಭ್ರಷ್ಟತೆ ಅಲ್ಲದೆ ಮತ್ತೇನು? ಇದನ್ನು ಮಾಧ್ಯಮಗಳಲ್ಲಿ ವ್ಯವಸ್ಥಿತವಾಗಿ ಸೋರಿಕೆ ಮಾಡಿ, ಕೊನೆಗೆ ತಮಗೇ ತಿರುಗುಬಾಣವಾದೀತು ಎಂದು ಮುಚ್ಚಿ ಹಾಕಿದ ಪ್ರಖರ ಪಂಡಿತರು ನೀವಲ್ಲವೇ’ ಎಂದಿದ್ದಾರೆ.

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಹೆಣ್ಣೂರು ಬಾಣಸವಾಡಿ ಕಾಸ್ಮೋಪಾಲಿಟನ್ ಕ್ಲಬ್‌ಗೆ ಅಧ್ಯಕ್ಷರಾಗಿ ಕೆ.ಸಿ. ಜಗನ್ನಾಥ ರೆಡ್ಡಿ ಆಯ್ಕೆಯಾಗಿದ್ದಾರೆ.

ಕ್ಲಬ್‌ಗೆ ಇದೇ 21ರಂದು ಚುನಾವಣೆ ನಡೆದಿತ್ತು. ಉಪಾಧ್ಯಕ್ಷರಾಗಿ ಬಾಬು ರೆಡ್ಡಿ ಡಿ.ಎಂ.ಆರ್., ಗೌರವ ಕಾರ್ಯದರ್ಶಿಯಾಗಿ ಎನ್. ಹರೀಂದ್ರ ಶೆಟ್ಟಿ, ಜಂಟಿ ಕಾರ್ಯದರ್ಶಿಯಾಗಿ ಎಂ. ನಾರಾಯಣ ಗೌಡ, ಖಜಾಂಚಿಯಾಗಿ ಎಂ. ಮುನೇಗೌಡ, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಂಥೋನಿ ಎಸ್.ಎಲ್, ದಿನೇಶ್ ವಿ.ಡಿ., ಎನ್. ಮೋಹನ್, ಕೆ.ಆರ್. ಪ್ರಭಾಕರ್, ಶರ್ಮಿಳಾ ರವೀಂದ್ರ ಹಾಗೂ ಯತೀಶ್ ರೆಡ್ಡಿ ಬಿ. ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಲಂಚ ರಾಕ್ಷಸ: ದಾರಿ ತಪ್ಪಿಸಲು ಬಿಜೆಪಿ ಯತ್ನ– ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರ ಹಿಂದೆ ವಿರೋಧ ಪಕ್ಷದವರಿದ್ದಾರೆ ಎಂದು ಹೇಳಿ ಜನರನ್ನು ದಾರಿ ತಪ್ಪಿಸಲು ಬಿಜೆಪಿಯವರು ಯತ್ನಿಸುತ್ತಿದ್ದಾರೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು, ‘ಸರ್ಕಾರ ನಡೆಸುವವರಿಗೆ ಸಣ್ಣ ಲಜ್ಜೆ ಮತ್ತು ಕಾನೂನಿನ ತಿಳಿವಳಿಕೆ ಇರುತ್ತಿದ್ದರೆ ಹೀಗೆಲ್ಲ ಮಾತನಾಡುತ್ತಿರಲಿಲ್ಲ’ ಎಂದಿದ್ದಾರೆ.

‘ಕಂದಾಯ, ಗೃಹ, ಜಲಸಂಪನ್ಮೂಲ, ಲೋಕೋಪಯೋಗಿ, ಸಾರಿಗೆ, ಉಪ ನೋಂದಣಿ, ಅರಣ್ಯ ಹೀಗೆ ಎಲ್ಲ ಇಲಾಖೆಗಳಲ್ಲಿ ಲಂಚ ರಾಕ್ಷಸ ಕುಣಿಯುತ್ತಿದ್ದಾನೆ. ಹೀಗಿದ್ದಾಗ ಸಾಮಾನ್ಯ ಜನರು ಯಾರ ಬಳಿಗೆ ಹೋಗಬೇಕು? ವಿರೋಧ ಪಕ್ಷದ ನಾಯಕರ ಬಳಿಯೂ ಬರಲು ಸಾಧ್ಯವಾಗದಿದ್ದರೆ ಜನ ಹತಾಶರಾಗಿ ಕೈಗೆ ಕಲ್ಲು, ದೊಣ್ಣೆಗಳನ್ನು ತೆಗೆದುಕೊಂಡು ಸರ್ಕಾರದ ವಿರುದ್ಧ ತಿರುಗಿ ಬೀಳುತ್ತಾರೆ ಎಂಬುದು ನೆನಪಿರಲಿ’ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

‘ಗುತ್ತಿಗೆದಾರರ ಸಂಘದವರು ಒಂದು ವರ್ಷದಿಂದ ಹೋರಾಟ ಮಾಡುತ್ತಿದ್ದಾರೆ. ಮೋದಿಯವರಾಗಲಿ, ರಾಜ್ಯ ಬಿಜೆಪಿ ಸರ್ಕಾರವಾಗಲಿ ಅವರ ಮನವಿಗಳನ್ನು ಗಂಭೀರವಾಗಿ ಪರಿಗಣಿಸಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಬೆಳಗಾವಿಯ ಗುತ್ತಿಗೆದಾರ ಸಂತೋಷ ಪಾಟೀಲ ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ’ ಎಂದೂ ಸಿದ್ದರಾಮಯ್ಯ ಅವರು ಹೇಳಿದ್ದಾರೆ.

ರೈಲಿನಲ್ಲಿ ಚಿನ್ನಾಭರಣ ದರೋಡೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಪುತ್ತೂರು (ದಕ್ಷಿಣ ಕನ್ನಡ): ಬೆಂಗಳೂರಿನಿಂದ ಕಾರವಾರಕ್ಕೆ ತೆರಳುತ್ತಿದ್ದ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರ ಚಿನ್ನಾಭರಣ ಮತ್ತು ನಗದು ಇದ್ದ ಬ್ಯಾಗ್ ಅನ್ನು ರೈಲು ಚಲಿಸುತ್ತಿದ್ದ ವೇಳೆಯೇ ದರೋಡೆ ಮಾಡಿ ಕಳ್ಳ ಪರಾರಿಯಾದ ಘಟನೆ ನಗರದ ಕಬಕ- ಪುತ್ತೂರು ರೈಲು ನಿಲ್ದಾಣದ ಸಮೀಪದ ಹಾರಾಡಿ ಸಿಟಿಗುಡ್ಡೆ ಬಳಿ ಮಂಗಳವಾರ ನಸುಕಿನ ವೇಳೆ ಸಂಭವಿಸಿದೆ.

ಬೆಂಗಳೂರಿನಲ್ಲಿ ವಾಸವಿರುವ ಉತ್ತರ ಕನ್ನಡ ಜಿಲ್ಲೆ ಕಾರವಾರದ ಶಿಕ್ಷಕ ರಮೇಶ್ ಮತ್ತು ನಿರ್ಮಲಾ ದಂಪತಿ ಬ್ಯಾಗ್ ಕಳೆದುಕೊಂಡವರು. ದಂಪತಿ ಸೋಮವಾರ ರಾತ್ರಿ ಬೆಂಗಳೂರಿನಿಂದ ರೈಲಿನಲ್ಲಿ ಊರಿಗೆ ಹೊರಟಿದ್ದರು. ಈ ವೇಳೆ ದರೋಡೆ ನಡೆದಿದೆ.

ಈ ಸಂಬಂಧ ದಂಪತಿ ರೈಲ್ವೆ ಪೊಲೀಸರಿಗೆ ದೂರು ನೀಡಿದ್ದು, ಬ್ಯಾಗ್‌ನಲ್ಲಿರುವ ₹ 40 ಸಾವಿರ ನಗದು, ಚಿನ್ನಾಭರಣ ಸೇರಿ ಒಟ್ಟು 8 ಲಕ್ಷ ಮೌಲ್ಯದ ಸ್ವತ್ತು ಕಳೆದುಕೊಂಡಿರುವುದಾಗಿ ತಿಳಿಸಿದ್ದಾರೆ.

ಹೆಸರಘಟ್ಟ ಹುಲ್ಲುಗಾವಲು ಉಳಿಸಲು ಆನ್‌ಲೈನ್ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟದ ಹುಲ್ಲುಗಾವಲು ಪ್ರದೇಶವನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸುವ ಮೂಲಕ ರಕ್ಷಿಸಬೇಕು ಎಂದು ಪರಿಸರ ಪ್ರೇಮಿಗಳು ಆನ್‌ಲೈನ್ ವೇದಿಕೆಯಲ್ಲಿ ಸಹಿ ಸಂಗ್ರಹ ಅಭಿಯಾನ ಆರಂಭಿಸಿದ್ದಾರೆ.

Jhatkaa.org ವೆಬ್‌ಸೈಟ್ ಮೂಲಕ SaveHesaraghatta ಎಂಬ ಅಭಿಯಾನ ನಡೆಯುತ್ತಿದೆ. ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಿತ ಪ್ರದೇಶ ಘೋಷಿಸಬೇಕೆಂಬ ಬೇಡಿಕೆ ಪರವಾಗಿ ಒಂದು ಲಕ್ಷ ಸಹಿ ಸಂಗ್ರಹಿಸುವ ಗುರಿ ಇದೆ. ಈವರೆಗೆ 41,625 ಮಂದಿ ಸಹಿ ಮಾಡುವ ಮೂಲಕ ಆನ್‌ಲೈನ್ ಅಭಿಯಾನವನ್ನು ಬೆಂಬಲಿಸಿದ್ದಾರೆ.

ಹೆಸರಘಟ್ಟ ಸುತ್ತಮುತ್ತಲಿನ 5,010 ಎಕರೆ ಪ್ರದೇಶವನ್ನು 'ಹೆಸರಘಟ್ಟ ಸಂರಕ್ಷಿತ ಹುಲ್ಲುಗಾವಲು ಪ್ರದೇಶ' ಎಂದು ಘೋಷಿಸುವ ಪ್ರಸ್ತಾವ ರಾಜ್ಯ ವನ್ಯಜೀವಿ ಮಂಡಳಿಗೆ ಸಲ್ಲಿಕೆಯಾಗಿತ್ತು. ಈ ಪ್ರಸ್ತಾವವನ್ನು ಮಂಡಳಿಯು 2021ರ ಜನವರಿ 19ರಂದು ನಡೆದ ಸಭೆಯಲ್ಲಿ ತಿರಸ್ಕರಿಸಿತ್ತು. ಅದನ್ನು ಪ್ರಶ್ನಿಸಿ ಪರಿಸರಾಸಕ್ತರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಪ್ರಸ್ತಾವದ ಕುರಿತು ಪುನಃ ಚರ್ಚಿಸಿ ನಿರ್ಧಾರ ಕೈಗೊಳ್ಳುವಂತೆ ಹೈಕೋರ್ಟ್ ಮಂಡಳಿಗೆ ನಿರ್ದೇಶನ ನೀಡಿತ್ತು.

ಸೆಪ್ಟೆಂಬರ್ 5ರಂದು ನಡೆಯುವ ವನ್ಯಜೀವಿ ಮಂಡಳಿ ಸಭೆಯ ಕಾರ್ಯಸೂಚಿಯಲ್ಲಿ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಿತ ಪ್ರದೇಶ ಘೋಷಣೆಯ ಪ್ರಸ್ತಾವ ಇದೆ. ಪುನಃ ಪ್ರಸ್ತಾವವನ್ನು ತಿರಸ್ಕರಿಸಿ, ಯೋಜನೆಯೊಂದಕ್ಕೆ ಈ ಪ್ರದೇಶದ ಜಮೀನನ್ನು ಬಳಕೆ ಮಾಡಲು ಒಪ್ಪಿಗೆ ಪಡೆಯುವ ಪ್ರಯತ್ನ ನಡೆಯುತ್ತಿದೆ ಎಂಬ ಅನುಮಾನದಿಂದ ಪರಿಸರಾಸಕ್ತರು ಅಭಿಯಾನ ಆರಂಭಿಸಿದ್ದಾರೆ.

'1,912 ಎಕರೆಯಷ್ಟು ವಿಸ್ತಾರವಾದ ಹೆಸರಘಟ್ಟ ಕೆರೆಯಂಗಳವಿದೆ. ಕೆರೆಯಂಗಳದ ಸುತ್ತ ಇರುವ 356 ಎಕರೆ ಪ್ರದೇಶ ಬೆಂಗಳೂರಿನಲ್ಲಿ ಉಳಿದಿರುವ ಕೊನೆಯ ಹುಲ್ಲುಗಾವಲು ಆವಾಸಸ್ಥಾನ. ಅದನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಈ ಪ್ರದೇಶದಲ್ಲಿ 235 ಪ್ರಭೇದದ ಪಕ್ಷಿಗಳು, 400 ಪ್ರಭೇದದ ಕೀಟಗಳು, 100 ವಿಧದ ಚಿಟ್ಟೆಗಳು ಕಾಣಸಿಗುತ್ತವೆ ಎಂಬುದು ಅಧ್ಯಯನದಿಂದ ದೃಢಪಟ್ಟಿದೆ. ಅದನ್ನು ಹಾಗೆಯೇ ಉಳಿಸಿಕೊಳ್ಳಬೇಕು' ಎಂದು ಅಭಿಯಾನದ ಮನವಿಪತ್ರದಲ್ಲಿ ಉಲ್ಲೇಖಿಸಲಾಗಿದೆ.

'ಗುಣಮಟ್ಟ ಪರಿಶೀಲಿಸಿದ ಬಳಿಕ ಬಿಲ್ ಪಾವತಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಂಡ ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಿದ ನಂತರವೇ ಬಿಲ್‌ಗಳನ್ನು ಗುತ್ತಿಗೆದಾರರಿಗೆ ಪಾವತಿಸಬೇಕು' ಎಂದು ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದಿರುವ ಅವರು, 'ಸುಮಾರು ₹3,000 ಕೋಟಿಗಿಂತಲೂ ಅಧಿಕ ಮೊತ್ತದ ಸಿವಿಲ್ ಹಾಗೂ ರಸ್ತೆ ಕಾಮಗಾರಿಗಳ ಹಣವನ್ನು ಗುತ್ತಿಗೆದಾರರಿಗೆ ಪಾವತಿಸುವುದು ಬಾಕಿ ಇದೆ. ಈ ಮೊತ್ತವನ್ನು ಪಾವತಿಸುವ ಮುನ್ನ ಎಲ್ಲ ಎಂಟು ವಲಯಗಳಿಗೂ ಖುದ್ದಾಗಿ ಭೇಟಿ ನೀಡಿ ಗುಣಮಟ್ಟ ಪರಿಶೀಲಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಸಿವಿಲ್ ಹಾಗೂ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳುವಾಗ ಗುಣಮಟ್ಟ ಕಾಪಾಡಿಲ್ಲ ಹಾಗೂ ಅನಗತ್ಯ ಕಾಮಗಾರಿಗಳನ್ನು ಕೈಗೊಂಡು ಹಣವನ್ನು ಪೋಲು ಮಾಡಲಾಗಿದೆ ಎನ್ನುವುದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿರುವ ಸಾಮಾನ್ಯ ದೂರು. ಹಲವು ರಸ್ತೆಗಳ ಕಾಮಗಾರಿಗಳು ಕೇವಲ 5-6 ತಿಂಗಳು ಅಥವಾ ಒಂದು ವರ್ಷದ ಒಳಗೆ ಸಂಪೂರ್ಣ ಹಾಳಾಗಿರುವ ಉದಾಹರಣೆಗಳನ್ನು ಸಹ ನಾವು ನೋಡಿದ್ದೇವೆ. ಇಂತಹ ಕಳಪೆ ಕಾಮಗಾರಿಗಳನ್ನು ಕೈಗೊಂಡಿರುವ ಗುತ್ತಿಗೆದಾರರು ಹಾಗೂ ಸಹಕರಿಸಿದ ಪಾಲಿಕೆಯ ಅಧಿಕಾರಿಗಳ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎನ್ನುವ ಮಾಹಿತಿಯನ್ನು ಸಹ ಒದಗಿಸಬೇಕು' ಎಂದು ಕೋರಿದ್ದಾರೆ.

ಪೊಲೀಸ್ ಸಾಹಿತ್ಯ ಸಂಭ್ರಮಕ್ಕೆ ಕೃತಿಗಳ ಆಹ್ವಾನ

ಬೆಂಗಳೂರು: ಬುಕ್ ಬ್ರಹ್ಮ ಮತ್ತು ಆರಕ್ಷಕ ಲಹರಿ ಮಾಸಪತ್ರಿಕೆ ಜಂಟಿಯಾಗಿ ಸೆ. 18ರಂದು 'ಪೊಲೀಸ್ ಸಾಹಿತ್ಯ ಸಂಭ್ರಮ' ಹಮ್ಮಿಕೊಂಡಿದ್ದು, ಸೃಜನಶೀಲ, ಸೃಜನೇತರ ಮತ್ತು ಅನುಭವ ಕಥನ ಪ್ರಕಾರಗಳಲ್ಲಿ ಪ್ರಶಸ್ತಿ ನೀಡಲು ಕೃತಿಗಳನ್ನು ಆಹ್ವಾನಿಸಿದೆ.

ಪೊಲೀಸ್ ಇಲಾಖೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಮತ್ತು ಅಧಿಕಾರಿಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಕರ್ನಾಟಕ ರಾಜ್ಯ ಪೊಲೀಸ್‌ನ ಇತರ ವಿಭಾಗಗಳಾದ ಸಿಐಡಿ, ಕೆ.ಎಸ್.ಆರ್.ಪಿ, ರಾಜ್ಯ ಗುಪ್ತಚರ ಇಲಾಖೆ, ಕರ್ನಾಟಕ ಲೋಕಾಯುಕ್ತ ಪೊಲೀಸ್, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ, ಹೈಕೋರ್ಟ್ ವಿಜಿಲೆನ್ಸ್, ಸಿ.ಎ.ಆರ್/ಡಿ.ಆರ್ ಹಾಗೂ ಎ.ಸಿ.ಬಿಯಲ್ಲಿ ಸೇವೆ ಸಲ್ಲಿಸುತ್ತಿರುವವರೂ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು.

ಸೃಜನಶೀಲ, ಸೃಜನೇತರ ಮತ್ತು ಅನುಭವ ಕಥನ ಪ್ರಕಾರಗಳಲ್ಲಿ ತಲಾ ಮೂರು ಪ್ರಶಸ್ತಿ ನೀಡಲಾಗುತ್ತದೆ. ಕೃತಿಗಳನ್ನು ಸೆ.5ರ ಒಳಗೆ 'ಪೊಲೀಸ್ ಸಾಹಿತ್ಯ ಸಂಭ್ರಮ 2022', ಸಂಪಾದಕರು, ಬುಕ್ ಬ್ರಹ್ಮ, ವಿ-4, ಕೆಎಸ್‌ಎಸ್‌ಐಡಿಸಿ ಆವರಣ, ಎಲೆಕ್ಟ್ರಾನಿಕ್ಸ್ ಸಿಟಿ ಮೊದಲನೆ ಹಂತ, ಬೆಂಗಳೂರು-100 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. **ಸಂಪರ್ಕ ಸಂಖ್ಯೆ:** 7892608118

ನಿಧನ ವಾರ್ತೆ

ಜೆ.ಪಾರ್ವತಿ



ಬೆಂಗಳೂರು: ಬಿಬಿಎಂಪಿ ಸಿಬ್ಬಂದಿ ಜೆ.ಪಾರ್ವತಿ (47) ಅವರು ಈಚೆಗೆ ಮೃತಪಟ್ಟಿದ್ದು, ಅವರ ಮೃತದೇಹವನ್ನು ಕುಟುಂಬಸ್ಥರು ಇಲ್ಲಿನ ಮೆಡಿಕಲ್ ಕಾಲೇಜಿಗೆ ಹಸ್ತಾಂತರಿಸಿದರು. ಪಾರ್ವತಿಗೆ ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ.

ರೋಗಿಯ ಸುರಕ್ಷತೆಗೆ ಒತ್ತುಕೊಡುವ

ಡೂಝಿ ಆರೋಗ್ಯ ಸುರಕ್ಷಾ ತಂತ್ರಜ್ಞಾನ



ಎಚ್ಚರಿಕೆ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ ಸಂವಾದದಲ್ಲಿ ಯಶವಂತಪುರದ ಮಣಿಪಾಲ್ ಆಸ್ಪತ್ರೆಯ ಸಮಾಲೋಚಕರು ಮತ್ತು ಉಸ್ತುವಾರಿ ಕ್ರಿಟಿಕಲ್ ಕೇರ್ ಮೆಡಿಸಿನ್; ಡಾ ಪ್ರದೀಪ್ ರಂಗಪ್ಪ ಸಂವಾದವನ್ನು ನಿರ್ವಹಿಸಿದರು. ಡಾ ಮುರಳಿ ಚಕ್ರವರ್ತಿ, ನಿರ್ದೇಶಕರು ಅರಿವಳಿಕೆ, ಫೋರ್ಟಿಸ್ ಆಸ್ಪತ್ರೆ; ಡಾ ಜಗದೀಶ ಚಂದ್ರ, ವಿಪಿ ವೈದ್ಯಕೀಯ ಸೇವೆಗಳು, ಸಾಗರ್ ಆಸ್ಪತ್ರೆ, ಮತ್ತು ಡಾ ಉಲ್ಲಾಸ್ ಗೋಪಾಲಕೃಷ್ಣ, ಸ್ಪರ್ಶ್ ಆಸ್ಪತ್ರೆಯ ಕ್ರಿಟಿಕಲ್ ಕೇರ್ ಮತ್ತು ಎಮರ್ಜೆನ್ಸಿ ಮೆಡಿಸಿನ್ ಮುಖ್ಯಸ್ಥರು ಪಾಲ್ಗೊಂಡಿದ್ದರು.



ಎಐ ಮತ್ತು ಹೆಲ್ತ್‌ಕೇರ್ ಒಟ್ಟಿಗೆ ಕೆಲಸ ಮಾಡುವ ಅವಶ್ಯಕತೆಯನ್ನು ಪ್ರತಿಪಾದಿಸಿದ ಸಂವಾದದಲ್ಲಿ (ಎಡದಿಂದ ಬಲಕ್ಕೆ) ಡಾ ಅಲೆಕ್ಸಾಂಡರ್ ಥಾಮಸ್; ಅಧ್ಯಕ್ಷರು, ಆರೋಗ್ಯ ಪೂರೈಕೆದಾರರ ಸಂಘ; ಮನಿಶಾ ಕುಮಾರ್; ಸಿಒಒ ಬೆಂಗಳೂರು ಕ್ಲಸ್ಟರ್; ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ, ಅಕ್ಷಯ್ ಓಲೇಟಿ, ವಿಪಿ ಮತ್ತು ಬಿಸಿನೆಸ್ ಹೆಡ್; ಫೋರ್ಟಿಸ್ ಆಸ್ಪತ್ರೆ, ಡಾ ಕೆ ಸಿ ಗುರುದೇವ್; ಅಧ್ಯಕ್ಷರು, ಎಂ ಎಸ್ ರಾಮಯ್ಯ ಸ್ಮಾರಕ ಆಸ್ಪತ್ರೆ.

• ದಿವ್ಯಾಶ್ರೀ

ನಿರಂತರ ಆರೋಗ್ಯ ಮೇಲ್ವಿಚಾರಣೆಯ ಮಹತ್ವವನ್ನು ಸಾರುವ ದೃಷ್ಟಿಯಿಂದ ಆರೋಗ್ಯ ತಜ್ಞರು ಮತ್ತು ನಿರ್ವಾಹಕರು ಡೂಝಿ ಕೇರ್‌ಟೆಕ್ ೨೦೨೨ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಈ ಕಾರ್ಯಾಗಾರವನ್ನು ಡಿಎಚ್ ಬ್ರಾಂಡ್‌ಸ್ಪಾಟ್ ಆಯೋಜಿಸಿತ್ತು. ಇದು ಪ್ಯಾನಲ್ ಚರ್ಚೆ ಮತ್ತು ಡೂಝೀದ ನವೀನ ಆರೋಗ್ಯ ಮೇಲ್ವಿಚಾರಣಾ ತಂತ್ರಜ್ಞಾನದ ನೇರ ಪ್ರಾತ್ಯಕ್ಷಿಕೆಯನ್ನು ಒಳಗೊಂಡಿತ್ತು

ಡೂಝಿ ಭಾರತದ ಮೊದಲ ಎಐ (ಕೃತಕ ಬುದ್ಧಿಮತ್ತೆ) ಚಾಲಿತ ಸಂಪರ್ಕರಹಿತ ರಿಮೋಟ್ ಪೇಷಂಟ್ ಮಾನಿಟರಿಂಗ್ (ಆರ್‌ಪಿಎಂ) ಮತ್ತು ಆರಂಭಿಕ ಎಚ್ಚರಿಕೆ ವ್ಯವಸ್ಥೆ (ಇಡಬ್ಲ್ಯೂಎಸ್) ಆಗಿದೆ. ಇದು ಸ್ಟೆಪ್-ಡೌನ್ ಐಸಿಯು, ಎಚ್‌ಡಿಯು, ವಿಐಪಿ ಕೊಠಡಿಗಳು, ಕೋವಿಡ್ ಮತ್ತು ಸಾಮಾನ್ಯ ವಾರ್ಡ್‌ಗಳಲ್ಲಿರುವ ರೋಗಿಗಳ ನಿರಂತರ ಮೇಲ್ವಿಚಾರಣೆಗೆ ನೆರವಾಗುತ್ತದೆ.

ಪ್ರತಿ ಆಸ್ಪತ್ರೆಯ ಹಾಸಿಗೆಯಲ್ಲಿ ಸಂಪರ್ಕಿತ ಆರೋಗ್ಯವನ್ನು ಒದಗಿಸುವ ದೃಷ್ಟಿಯೊಂದಿಗೆ ಈ ತಂತ್ರಜ್ಞಾನವನ್ನು ಬಿಐಆರ್‌ಎಸಿ ಮೂಲಕ ಭಾರತ ಸರ್ಕಾರವು ಬೆಂಬಲಿಸುತ್ತದೆ. ಇದು ರೋಗಿಯ ಪ್ರಮುಖ ಲಕ್ಷಣಗಳನ್ನು ಸಂಗ್ರಹಿಸಿ ಅದರಿಂದ ಆರಂಭಿಕ ಎಚ್ಚರಿಕೆ ಸ್ಕೋರ್‌ಗಳನ್ನು (ಇಡಬ್ಲ್ಯೂಎಸ್) ಲೆಕ್ಕ ಹಾಕುತ್ತದೆ. ನಿರಂತರ ಮಾಹಿತಿ ಸಂಗ್ರಹದಲ್ಲಿನ ತೊಡಕುಗಳನ್ನು ಇದರಿಂದ ನಿವಾರಿಸಬಹುದಾಗಿದ್ದು, ವೈದ್ಯರು ಮತ್ತು ಆರೈಕೆದಾರರಿಗೆ ಇನ್ನಷ್ಟು ಹೆಚ್ಚಿನ ಕಾಳಜಿಯೊಂದಿಗೆ ರೋಗಿಗೆ ಚಿಕಿತ್ಸೆ ನೀಡಲು ಇದು ಸಹಾಯ ಮಾಡುತ್ತದೆ.

ಭಾರತದಲ್ಲಿ ಶುಶ್ರೂಷಾ ಸಿಬ್ಬಂದಿಯ ಕೊರv ಜೊತೆಗೆ ಆಸ್ಪತ್ರೆಯ ಐಸಿಯುಗಳ ಮೇಲಿನ ಒತ್ತಡದ ನಡುವೆಯೇ ಆರೋಗ್ಯ ಸುರಕ್ಷೆ ನೀಡಬೇಕಿದೆ. ಇಂತಹ ಸಂದರ್ಭದಲ್ಲಿ ನಿರಂತರ ರಿಮೋಟ್ ಪೇಷಂಟ್ ಮಾನಿಟರಿಂಗ್ (ಆರ್‌ಪಿಎಂ) ತಂತ್ರಜ್ಞಾನವು ಸೂಕ್ತ ಮತ್ತು ಸಕಾಲಿಕ ಚಿಕಿತ್ಸೆ ನೀಡಲು ಅನುವಾಗುವುದಷ್ಟೇ ಅಲ್ಲದೇ ಇದರಿಂದಾಗಿ ಆರೋಗ್ಯ ಸುರಕ್ಷೆಯ ವೆಚ್ಚವೂ ಗಣನೀಯವಾಗಿ ಕಡಿಮೆ ಆಗುತ್ತದೆ.

ಡೂಝೀ ಸಂವೇದಕವನ್ನು ರೋಗಿಯ ಹಾಸಿಗೆಯ ಕೆಳಗೆ ಇರಿಸಲಾಗುತ್ತದೆ. ಬಳಿಕ ಈ ಸಂಪರ್ಕಿತ ಹಾಸಿಗೆಯು ರೋಗಿಯ ಹೃದಯ ಬಡಿತ, ಉಸಿರಾಟದ ಏರಿಳಿತ, ರಕ್ತದೊತ್ತಡ, ಆಮ್ಲಜನಕದ ಶುದ್ಧತ್ವ, ಇಸಿಜಿ ಮತ್ತು ದೇಹತಾಪದಂತಹ ಪ್ರಮುಖ ನಿಯತಾಂಕಗಳ ಮೇಲ್ವಿಚಾರಣೆ ಮಾಡುತ್ತದೆ. ಜೊತೆಗೆ ಇದರ ಕೃತಕ ಬುದ್ಧಿಮತ್ತೆಯ ಕ್ರಮಾವಳಿಗಳು ರೋಗಿಯಲ್ಲಿ ಯಾವುದೇ ರೀತಿಯ ಕ್ಷೀಣತೆಯನ್ನು ಪತ್ತೆ ಮಾಡಿ ಸಂಬಂಧಪಟ್ಟ ವೈದ್ಯ ಸಿಬ್ಬಂದಿಗೆ ಎಚ್ಚರಿಕೆ ನೀಡುತ್ತದೆ.


ಇಂತಹ ಅತಿ ಸೂಕ್ಷ್ಮ ಮಾಹಿತಿಯಿಂದಾಗಿ ವೈದ್ಯರು ಸಕಾಲಕ್ಕೆ ಸರಿಯಾದ ನಿರ್ಧಾರಗಳಿಗೆ ಬರಲು ಸಹಾಯವಾಗುತ್ತದೆ. ಹೀಗಾಗಿ ಜೀವಗಳನ್ನು ಉಳಿಸುತ್ತದೆ. ಇದಲ್ಲದೆ, ಈ ಸಂಪರ್ಕಿತ ಹಾಸಿಗೆಗಳನ್ನು ಆಸ್ಪತ್ರೆಯ ಕೇಂದ್ರ ಕಮಾಂಡ್ ಸಿಸ್ಟಮ್ ಮತ್ತು ಎಚ್‌ಎಂಎಸ್‌ಗೆ ಸಂಯೋಜಿಸಲಾಗಿರುತ್ತದೆ.

ಬೆಂಗಳೂರಿನಲ್ಲಿ ಕಳೆದ ವಾರಾಂತ್ಯದಲ್ಲಿ ನಡೆದ ಡೂಝೀ ಕೇರ್‌ಟೆಕ್ ೨೦೨೨ರಲ್ಲಿ ಮಾತನಾಡಿದ ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಡಾ.ಅಜಯ್ ಕುಮಾರ್ ಅವರು, "ಡಿಜಿಟಲ್ ತಂತ್ರಜ್ಞಾನದ ಆಗಮನವು ಆರೋಗ್ಯ ಸಂರಕ್ಷಣೆ ಕಡೆಗೆ ನಮ್ಮ ಆಲೋಚನಾ ವಿಧಾನವನ್ನೇ ಬದಲಾಯಿಸುತ್ತದೆ ಎಂದು ನಾನು ನಂಬುತ್ತೇನೆ" ಎಂದು ಹೇಳಿದರು. ಅಲ್ಲದೇ ಡಿಜಿಟಲ್ ತಂತ್ರಜ್ಞಾನವು ಭಾರತಕ್ಕೆ ಬದಲಾವಣೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದೂ ಹೇಳಿದರು. ಕೃತಕ ಬುದ್ಧಿಮತ್ತೆಯು (ಎಐ) ರೋಗದ ತಡೆಗಟ್ಟುವಿಕೆ ಮತ್ತು ಆರಂಭಿಕ ಪತ್ತೆಯಲ್ಲಿ ದೊಡ್ಡ ವ್ಯತ್ಯಾಸವನ್ನೇ ಮಾಡುತ್ತದೆ ಎಂದು ಅವರು ತಿಳಿಸಿದರು.

ಡೂಝಿ ಭಾರತದ ಮೊದಲ ಎಐ (ಕೃತಕ ಬುದ್ಧಿಮತ್ತೆ) ಚಾಲಿತ ಸಂಪರ್ಕರಹಿತ ರಿಮೋಟ್ ಪೇಷಂಟ್ ಮಾನಿಟರಿಂಗ್ (ಆರ್‌ಪಿಎಂ) ಮತ್ತು ಆರಂಭಿಕ ಎಚ್ಚರಿಕೆ ವ್ಯವಸ್ಥೆ (ಇಡಬ್ಲ್ಯೂಎಸ್) ಆಗಿದೆ. ಇದು ಐಸಿಯು ಇಲ್ಲದ ಆಸ್ಪತ್ರೆಗಳಲ್ಲಿ ರೋಗಿಗಳ ನಿರಂತರ ಮೇಲ್ವಿಚಾರಣೆಗೆ ನೆರವಾಗುತ್ತದೆ. ಮುಂದಿನ ದಿನಗಳಲ್ಲಿ ಈ ವ್ಯವಸ್ಥೆಯನ್ನು ರೋಗಿಗಳ ಮೇಲ್ವಿಚಾರಣೆಗೆ ಮನೆಗಳಲ್ಲಿಯೂ ಬಳಸಬಹುದಾಗಿದೆ.



ಮುದಿತ್ ದಂಡಾವತೆ
ಸಿಇಒ ಮತ್ತು ಸಹ-ಸಂಸ್ಥಾಪಕ, ಡೂಝಿ



ಡಾ ಅಜಯ್ ಕುಮಾರ್,
ಕಾರ್ಯಾಧ್ಯಕ್ಷರು, ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಲಿ



ಡಾ ರಾಘವೇಂದ್ರ ಪೈ,
ಪ್ರಮುಖ ಸಮಾಲೋಚಕರು ನ್ಯೂರೋಅನೆಸ್ತೇಷಿಯಾ, ಆಸ್ಟರ್ ಸಿಎಂಐ ಆಸ್ಪತ್ರೆ



ಡಿ ರಣ್‌ದೀಪ್, ಆಯುಕ್ತರು, ಆರೋಗ್ಯಮತ್ತು ಕುಟುಂಬ ಕಲ್ಯಾಣ, ಕರ್ನಾಟಕ ಸರ್ಕಾರ

ಎಐ ಬಲದಿಂದ ಶಸ್ತ್ರಚಿಕಿತ್ಸಕರ ಸೂಚನೆಗಳೊಂದಿಗೆ ನಾವೀಗ ವಾಸ್ತವಿಕವಾಗಿ (ವರ್ಚುವಲ್) ಶಸ್ತ್ರಚಿಕಿತ್ಸೆಯನ್ನು ಮಾಡಬಹುದು ಮತ್ತು ಮಾಡುತ್ತಿದ್ದೇವೆ ಎಂದು ಡಾ ಕುಮಾರ್ ಹೇಳಿದರು. ಈ ವಿಚಾರದಲ್ಲಿ ವಿವಿಧ ವಿಭಾಗಗಳ ತಜ್ಞರು ಒಟ್ಟಾಗಿ ಕೆಲಸ ಮಾಡುವ ಅಗತ್ಯವನ್ನು ಅವರು ಒತ್ತಿ ಹೇಳಿದರು. "ವೈದ್ಯರು, ಅರೆವೈದ್ಯರು ಮತ್ತು ತಂತ್ರಜ್ಞರ ಜೊತೆಗೆ ಆರೋಗ್ಯ ವ್ಯವಸ್ಥೆಯ ಭಾಗವಾಗಿರುವ ಎಲ್ಲರೂ ಒಗ್ಗೂಡಿ ಕೆಲಸ ಮಾಡಬೇಕಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಬೆಂಗಳೂರಿನ ಆಸ್ಟರ್ ಸಿಎಂಐ ಆಸ್ಪತ್ರೆಯ ನ್ಯೂರೋಅನೆಸ್ತೇಷಿಯಾ ಪ್ರಮುಖ ಸಮಾಲೋಚಕರಾದ ಡಾ ರಾಘವೇಂದ್ರ ಪೈ ಮಾತನಾಡಿ, ಮೇಲ್ವಿಚಾರಣೆಯು ರೋಗಿಗಳನ್ನು ವಿಪತ್ತಿನಿಂದ ರಕ್ಷಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕೋವಿಡ್-19 ನಮಗೆ ದೂರಸ್ಥ ರೋಗ ನಿರ್ಣಯ ವಿಧಾನವನ್ನು ಪರಿಚಯಿಸಿತು. ರಿಮೋಟ್ ಪೇಷಂಟ್ ಮಾನಿಟರಿಂಗ್ ಸೂಕ್ಷ್ಮ ಆರೋಗ್ಯ ರಕ್ಷಣೆಯ ಮುಂದುವರಿದ ವಿಧಾನವಾಗಿದೆ. ಡೂಝಿ ತಂತ್ರಜ್ಞಾನವು ದೂರದಿಂದಲೇ ರೋಗಿಯ ಮೇಲ್ವಿಚಾರಣೆ ಮಾಡಲು ನಮಗೆ ಅನುವು ಮಾಡಿಕೊಡುತ್ತದೆ ಮತ್ತು ರೋಗ ನಿರ್ಣಯ ಪ್ರಕ್ರಿಯೆಯನ್ನು ಗಣನೀಯವಾಗಿ ಸುಲಭಗೊಳಿದೆ ಎಂದು ಅವರು ಹೇಳಿದರು.

ಡೂಝೀಯ ಸಿಇಒ ಮತ್ತು ಸಹ-ಸಂಸ್ಥಾಪಕ ಮುದಿತ್ ದಂಡಾವತೆ ಅವರು ಈ ನಿರಂತರ ಮೇಲ್ವಿಚಾರಣೆ ತಂತ್ರಜ್ಞಾನದ ಪರಿಕಲ್ಪನೆಯು ಹೇಗೆ ಬಂದಿತು ಎಂಬುದನ್ನು ವಿವರಿಸಿದರು. "ನಾನು ಇಂಜಿನಿಯರ್ ಆಗಿ ಕಾರುಗಳ ಆರೋಗ್ಯವನ್ನು ಮೇಲ್ವಿಚಾರಣೆ ಮಾಡುತ್ತಿದ್ದೆ. ಹಾಗೆ ಮಾಡುವಾಗಲೇ ಮನುಷ್ಯರ ಆರೋಗ್ಯ ಮೇಲ್ವಿಚಾರಣೆ ಮಾಡುವ ಕಲ್ಪನೆಯು ಮೊಳಕೆಯೊಡೆಯಿತು" ಎಂದು ಹೇಳಿದರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

"ಡೂಝಿ ತಂತ್ರಜ್ಞಾನವು ಈಗಾಗಲೇ 350ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ಚಾಲ್ತಿಯಲ್ಲಿದ್ದು, 7,45,000 ಕ್ಕೂ ಹೆಚ್ಚು ರೋಗಿಗಳನ್ನು ಪತ್ತೆಹಚ್ಚಿದೆ. ಆರೋಗ್ಯ ಸಂರಕ್ಷಕರಿಗೆ ರೋಗಿಯ ಗುಣಲಕ್ಷಣಗಳು ಮತ್ತು ಅಪಾಯದ ಮುನ್ಸೂಚನೆ ನೀಡುವ ಮೂಲಕ ಹಲವಾರು ಮಂದಿಯ ಪ್ರಾಣ ಉಳಿಸಿದೆ ಎಂದು ದಂಡಾವತೆ ಹೇಳಿದರು. ಚೆನ್ನಾಗಿ ಓಡಾಡಿಕೊಂಡಿರುವ ವ್ಯಕ್ತಿಯನ್ನು ನೀವು ಹಾಸಿಗೆಯಲ್ಲಿ ಬಂಧಿಯನ್ನಾಗಿಸಲು ಬಯಸುವಿರಾ ಎಂದು ಪ್ರಶ್ನಿಸಿದ ದಂಡಾವತೆ, ಡೂಝೀಯು ರೋಗಿ ಹಾಗೂ ಆರೋಗ್ಯದಾತರು, ಇಬ್ಬರಿಗೂ ಅನುಕೂಲಕರ ವಾತಾವರಣ ಸೃಷ್ಟಿ ಮಾಡುತ್ತದೆ ಎಂದರು.

ಕೋವಿಡ್ ಸಾಂಕ್ರಾಮಿಕವು ಉತ್ತುಂಗ ಸ್ಥಿತಿಯಲ್ಲಿದ್ದಾಗ ಇಂದಿರಾ ಗಾಂಧಿ ಸರಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯ 150 ಹಾಗೂ ಆರ್ಮಿ ಆಸ್ಪತ್ರೆಯ ೩೦೦ ಹಾಸಿಗೆಗಳಿಗೆ ಡೂಝಿ ತಂತ್ರಜ್ಞಾನವನ್ನು ಅಳವಡಿಸಲಾಗಿತ್ತು ಎಂದು ದಂಡಾವತೆ ಮಾಹಿತಿ ನೀಡಿದರು.



ಕಾರ್ಯಕ್ರಮದಲ್ಲಿ ಡೂಝಿ ಪ್ರಾತ್ಯಕ್ಷಿಕೆ

ಅಮೂಲ್ಯ ಜೀವ ಉಳಿಸುವ ಪ್ರಮುಖ ತಂತ್ರಜ್ಞಾನ

ಡೂಝಿ ಕೇರ್‌ಟೆಕ್ 2000ರ ಭಾಗವಾಗಿ ತಜ್ಞರ ಜೊತೆ ಎರಡು ಸಂವಾದ ಕಾರ್ಯಕ್ರಮ ನಡೆಯಿತು. ಈ ತಂತ್ರಜ್ಞಾನದ ಪ್ರಸ್ತುತತೆ ಮತ್ತು ಮಹತ್ವವನ್ನು ಈ ಸಂವಾದಗಳು ಸಾರಿದವು.

ಫೋರ್ಟಿಸ್ ಹಾಸ್ಪಿಟಲ್ಸ್‌ನ ಉಪಾಧ್ಯಕ್ಷ ಮತ್ತು ಬಿಸಿನೆಸ್ ಹೆಡ್ ಅಕ್ಷಯ್ ಓಲೇಟಿ ಅವರು ನಡೆಸಿಕೊಟ್ಟ ಸಂವಾದದಲ್ಲಿ ಎಂ ಎಸ್ ರಾಮಯ್ಯ ಸ್ಮಾರಕ ಆಸ್ಪತ್ರೆಯ ಅಧ್ಯಕ್ಷ ಡಾ ಕೆ ಸಿ ಗುರುದೇವ್, ಮನಿಶಾ ಕುಮಾರ್, ಸಿಒಒ - ಬೆಂಗಳೂರು ಕ್ಲಸ್ಟರ್, ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ, ಡಾ ಅಲೆಕ್ಸಾಂಡರ್ ಥಾಮಸ್, ಅಸೋಸಿಯೇಶನ್ ಆಫ್ ಹೆಲ್ತ್‌ಕೇರ್ ಪ್ರೊವೈಡರ್ಸ್ (ಎಎಚ್‌ಪಿಐ) ಅವರುಗಳು ಎಐ ಮತ್ತು ಆರೋಗ್ಯ ಸೇವೆ ಒದಗಿಸುವವರು ಒಟ್ಟಿಗೆ ಕೆಲಸ ಮಾಡುವ ಅಗತತೆ ಬಗ್ಗೆ ಒತ್ತಿ ಹೇಳಿದರು.

ಕೋವಿಡ್ ಸಾಂಕ್ರಾಮಿಕವು ಸಾಕಷ್ಟು ಅಡ್ಡಿ ಆತಂಕಗಳನ್ನು ಸೃಷ್ಟಿಸಿತು. ಆ ಸಂದರ್ಭದಲ್ಲಿ ನಮ್ಮ ಸಾಮರ್ಥ್ಯ ಹಾಗೂ ಸಿಬ್ಬಂದಿ ಕೊರತೆ ಮೀರಿ ಕರ್ತವ್ಯ ನಿರ್ವಹಿಸಬೇಕಾಯಿತು. ಆಗ ನಾವು ಲಭ್ಯ ತಂತ್ರಜ್ಞಾನವನ್ನು ಗರಿಷ್ಠ ಮಟ್ಟಕ್ಕೆ ಬಳಸಿಕೊಳ್ಳಬೇಕಾಯಿತು ಎಂದು ಎಂದು ಮನೀಶಾ ಕುಮಾರ್ ಹೇಳಿದರು.

"ವೈದ್ಯರು ಮತ್ತು ಅರೆ ವೈದ್ಯರಿಗೆ ಕಾಲಕಾಲಕ್ಕೆ ಲಭ್ಯವಿರುವ ತಂತ್ರಜ್ಞಾನಗಳ ಬಗ್ಗೆ ಅರಿವು ಮುಡಿಸಬೇಕು ಎಂದು ಡಾ ಥಾಮಸ್ ಹೇಳಿದರು. ಡಾ ಗುರುದೇವ್ ಅವರು ಮಾತನಾಡಿ ಕೃತಕ ಬುದ್ಧಿಮತ್ತೆಯನ್ನು ಬಳಸುವಾಗ ತಜ್ಞರ ಅಗತ್ಯವನ್ನು ಒತ್ತಿ ಹೇಳಿದರು. "ತಂತ್ರಜ್ಞಾನವು ಸಹಾಯಕ ವ್ಯವಸ್ಥೆಯಷ್ಟೇ ಹೊರತು ಅದು ನಮ್ಮನ್ನು ನಿಯಂತಿಸುವಂತಾಗಬಾರದು" ಎಂದು ಎಚ್ಚರಿಸಿದರು.

ಎರಡನೇ ತಜ್ಞ ಸಂವಾದವು ಐಸಿಯು ಇಲ್ಲದೆಡೆ ರೋಗಿಗಳ ಸುರಕ್ಷತೆಗಾಗಿ ಆರಂಭಿಕ ಎಚ್ಚರಿಕೆ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಿತು. ಯಶವಂತಪುರದ ಮಣಿಪಾಲ್ ಆಸ್ಪತ್ರೆಯ ಸಮಾಲೋಚಕರು ಮತ್ತು ಉಸ್ತುವಾರಿ -ಕ್ರಿಟಿಕಲ್ ಕೇರ್ ಮೆಡಿಸಿನ್, ಡಾ ಪ್ರದೀಪ್ ರಂಗಪ್ಪ ಸಂವಾದವನ್ನು ನಿರ್ವಹಿಸಿದರು. ಡಾ ಮುರಳಿ ಚಕ್ರವರ್ತಿ, ನಿರ್ದೇಶಕರು - ಅರಿವಳಿಕೆ, ಫೋರ್ಟಿಸ್ ಆಸ್ಪತ್ರೆ; ಡಾ ಜಗದೀಶ ಚಂದ್ರ, ವಿಪಿ - ವೈದ್ಯಕೀಯ ಸೇವೆಗಳು, ಸಾಗರ್ ಆಸ್ಪತ್ರೆ, ಮತ್ತು ಡಾ ಉಲ್ಲಾಸ್ ಗೋಪಾಲಕೃಷ್ಣ, ಸ್ಪರ್ಶ್ ಆಸ್ಪತ್ರೆಯ ಕ್ರಿಟಿಕಲ್ ಕೇರ್ ಮತ್ತು ಎಮರ್ಜೆನ್ಸಿ ಮೆಡಿಸಿನ್ ಮುಖ್ಯಸ್ಥರು ಸಂವಾದದಲ್ಲಿ ಪಾಲ್ಗೊಂಡರು.

ಡಾ. ರಂಗಪ್ಪ ಅವರು ಮಾತನಾಡಿ ತಂತ್ರಜ್ಞಾನದ ಅದ್ಭುತಗಳನ್ನು ಶ್ಲಾಘಿಸುತ್ತಾ ಎಲ್ಲಾ ೨೮ ಜಿಲ್ಲೆಗಳಲ್ಲಿ ಟೆಲಿ-ಐಸಿಯು ಅಳವಡಿಸಿದ ಮೊದಲ ರಾಜ್ಯ ಕರ್ನಾಟಕ ಎಂದು ಹೇಳಿದರು. "ನನ್ನ ಎಲ್ಲಾ ರೋಗಿಗಳು ಸತತ ಮೇಲ್ವಿಚಾರಣೆಯಲ್ಲಿ ಇರಬೇಕು ಎಂದು ನಾನು ಬಯಸುತ್ತೇನೆ ಮತ್ತು ಅದಕ್ಕೆ ಎಐ ನೆರವಾಗುತ್ತದೆ ಎಂದು ಡಾ ಚಕ್ರವರ್ತಿ ಹೇಳಿದರು. ಕೃತಕ ಬುದ್ಧಿಮತ್ತೆಯು ಹೊಸ ಸವಾಲುಗಳನ್ನು ಎದುರಿಸಲು ವೈದ್ಯರಿಗೆ ಸಹಾಯ ಮಾಡುತ್ತದೆ ಎಂದು ಡಾ ಚಂದ್ರ ಅಭಿಪ್ರಾಯಪಟ್ಟರು.

"ರೋಗಿಗಳ ಮೇಲ್ವಿಚಾರಣೆಯು ಐಸಿಯುನಲ್ಲಿ ಕೊನೆಗೊಳ್ಳುವುದಿಲ್ಲ. ಈ ನಿಟ್ಟಿನಲ್ಲಿ ಡೂಝಿ ನಮ್ಮ ಜೀವನವನ್ನು ಸುಲಭಗೊಳಿಸಿದೆ ಎಂದ ಡಾ.ಗೋಪಾಲಕೃಷ್ಣನ್ ಅವರು, "ವೈದ್ಯರು ತಂತ್ರಜ್ಞಾನದ ವಿರೋಧಿಗಳಲ್ಲ. ರೋಗಿಗಳಿಗೆ ಸಹಾಯ ಮಾಡಿದರೆ ಎಐ ಅನ್ನು ಅಳವಡಿಸಿಕೊಳ್ಳಲು ನಾವು ಸಂತೋಷಪಡುತ್ತೇವೆ ಎಂದರು.

ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರಾದ ಡಿ ರಣ್‌ದೀಪ್ ಮಾತನಾಡಿ ಆರೋಗ್ಯ ಸೇವೆಯು ಸುಲಭವಾಗಿ ಕೈಗೆಟುಕುವಂತೆ ಆಗಿರುವ ಈ ಸುಸಂದರ್ಭದಲ್ಲಿ ಡೂಝೀಯ ಆರೋಗ್ಯ ಮೇಲ್ವಿಚಾರಣಾ ತಂತ್ರಜ್ಞಾನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅಷ್ಟಲ್ಲದೇ ಜಯನಗರದಲ್ಲಿರುವ ಜನರಲ್ ಆಸ್ಪತ್ರೆಯಲ್ಲಿ ಡೂಝಿ ಅತ್ಯುತ್ತಮ ಫಲಿತಾಂಶವನ್ನು ನೀಡುತ್ತಿದೆ ಎಂದೂ ತಿಳಿಸಿದರು. ಇದರೊಂದಿಗೆ ಡೂಝಿ ಕೇರ್‌ಟೆಕ್ 2022 ಕಾರ್ಯಕ್ರಮವು ಸಂಪನ್ನವಾಯಿತು.

ಇದೇ ವೇಳೆ ಡೂಝಿ ಮೇಲ್ವಿಚಾರಣಾ ವ್ಯವಸ್ತೆಯು ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದರ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು. ಒಟ್ಟಾರೆಯಾಗಿ ಈ ಕಾರ್ಯಕ್ರಮವು ಆರೋಗ್ಯ ಕ್ಷೇತ್ರದಲ್ಲಿ ತಾಮತ್ರಜ್ಞಾನದ ಅಗತ್ಯತೆಯನ್ನು ಎತ್ತಿ ತೋರಿಸಿತು.

‘ಇನ್ನೆಲ್ಲೂ ಗಣೇಶ ಪ್ರತಿಷ್ಠಾಪನೆ ಮಾಡಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಾಮರಾಜಪೇಟೆ ಆಟದ ಮೈದಾನದಲ್ಲೇ ವೇದಿಕೆ ವತಿಯಿಂದ ಗಣೇಶ ಪ್ರತಿಷ್ಠಾಪನೆ ಮಾಡಲಾಗುತ್ತದೆ. ಬೇರೆಲ್ಲೂ ಮಾಡುವುದಿಲ್ಲ’ ಎಂದು ಚಾಮರಾಜಪೇಟೆ ನಾಗರಿಕರ ಒಕ್ಕೂಟ ವೇದಿಕೆ ಅಧ್ಯಕ್ಷ ರಾಮೇಗೌಡ ಪ್ರತಿಕ್ರಿಯಿಸಿದರು.

‘ಸುಪ್ರೀಂ ಕೋರ್ಟ್ ಆದೇಶವನ್ನು ನಾವು ಪಾಲಿಸುತ್ತೇವೆ. ಬುಧವಾರ ಗಣೇಶ ಪ್ರತಿಷ್ಠಾಪನೆಗೆ ನಾವು ಪ್ರಯತ್ನಿಸುವುದಿಲ್ಲ. ನ್ಯಾಯಕ್ಕಾಗಿ ನಾವು ಹೋರಾಡುತ್ತೇವೆ. ನಮಗೆ ನ್ಯಾಯ ಸಿಗುತ್ತದೆ ಎಂಬ ಭರವಸೆ ಇದೆ. ನಾವು ಚಾಮರಾಜಪೇಟೆ ಆಟದ ಮೈದಾನದಲ್ಲಿ ಅಲ್ಲದೆ ಬೇರೆಲ್ಲೂ ಗಣೇಶ ಪ್ರತಿಷ್ಠಾಪನೆ ಮಾಡೊಲ್ಲ. ನ್ಯಾಯ ಸಿಕ್ಕಿದ ಕೂಡಲೇ ಅಲ್ಲೇ ಗಣೇಶೋತ್ಸವ ಆಚರಿಸುತ್ತೇವೆ’ ಎಂದರು.

‘ವಕ್ಫ್ ತನ್ನ ಆಸ್ತಿ ಎಂದು ಹೇಳುತ್ತಿದೆ. ಆದರೆ, ಆಸ್ತಿ ಅವರಿಗೆ ಸೇರಿಲ್ಲ. ಈ ಬಗ್ಗೆ ನಮ್ಮಲ್ಲಿ ಸಾಕಷ್ಟು ದಾಖಲೆಗಳಿವೆ. ಅವುಗಳನ್ನು ನಾವು ನ್ಯಾಯಾಲಯದಲ್ಲಿ ಪ್ರಸ್ತುತಪಡಿಸಿ ನ್ಯಾಯ ಪಡೆಯುತ್ತೇವೆ. ಸರ್ಕಾರ ನಮಗೆ ಗಣೇಶೋತ್ಸವಕ್ಕೆ ಅವಕಾಶ ನೀಡಿತ್ತು. ಆದರೆ ಸುಪ್ರೀಂ ಕೋರ್ಟ್ ಯಥಾಸ್ಥಿತಿ ಕಾಯ್ದುಕೊಳ್ಳಲು ಸೂಚಿಸಿದೆ. ಅದನ್ನು ಪಾಲಿಸುತ್ತೇವೆ. ಕಾನೂನು ಹೋರಾಟ ಮುಂದುವರಿಸುತ್ತೇವೆ’ ಎಂದರು.

ಈದ್ಗಾ ಮೈದಾನದ ಸುತ್ತ ಪೊಲೀಸ್ ಪಹರೆ

ಬೆಂಗಳೂರು: ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಗಣೇಶೋತ್ಸವ ಆಚರಣೆಗೆ ಸುಪ್ರೀಂ ಕೋರ್ಟ್ ಅವಕಾಶ ನಿರಾಕರಿಸಿದ್ದು, ಮೈದಾನದ ಸುತ್ತ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ. ಹಿರಿಯ ಪೊಲೀಸ್ ಅಧಿಕಾರಿಗಳೂ ಮೈದಾನದಲ್ಲಿ ಮೊಕ್ಕಾಂ ಹೂಡಿದ್ದಾರೆ.

> **ಗಣೇಶೋತ್ಸವವನ್ನು ಶಾಂತಿಯುತವಾಗಿ ನಡೆಸುವುದಕ್ಕೆ ಎಲ್ಲ ಭದ್ರತಾ ಕ್ರಮ ಕೈಗೊಳ್ಳಲಾಗಿದೆ. ಸಾರ್ವಜನಿಕರೂ ಸಹಕಾರ ನೀಡಬೇಕು. ಹೆಚ್ಚಿನ ನಿಗಾಕ್ಕಾಗಿ ಡ್ರೋನ್ ಬಳಸಲಾಗುತ್ತಿದೆ.**
> **ಸಂದೀಪ್ ಪಾಟೀಲ್**
> ಹೆಚ್ಚುವರಿ ಪೊಲೀಸ್ ಆಯುಕ್ತ

ಸಂಘಟನೆಗಳ ಮುಖಂಡರು ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಮಂಗಳವಾರ ಬೆಳಿಗ್ಗೆ ಸಿದ್ಧತೆಯಲ್ಲಿ ತೊಡಗಿದ್ದರು. ಪೆಂಡಾಲ್ ಸಹ ನಿರ್ಮಾಣ ಕಾರ್ಯಕ್ಕೆ ಮುಂದಾಗಿದ್ದರು. ಸಂಜೆ ಕೋರ್ಟ್ ಆದೇಶ ಹೊರಬೀಳುತ್ತಿದ್ದಂತೆ ಪೆಂಡಾಲ್ ನಿರ್ಮಾಣ ಕಾರ್ಯ ಸ್ಥಗಿತಗೊಳಿಸಿದರು.

ಸೂಕ್ಷ್ಮ ಪ್ರದೇಶದಲ್ಲಿ ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಮಂಗಳವಾರ ಪಥಸಂಚಲನ ನಡೆಸಿ ಸ್ಥಳೀಯರಲ್ಲಿ ಧೈರ್ಯ ತುಂಬಿದರು. ಸೋಮವಾರ ಜೆಜೆ ನಗರ ವ್ಯಾಪ್ತಿಯ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸರು ಪಥಸಂಚಲನ ನಡೆಸಿದ್ದರು. ಸುತ್ತಲೂ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಮಂಗಳವಾರ ಬೆಳಿಗ್ಗೆಯಿಂದಲೂ ಮೈದಾನದ ಸುತ್ತ ಪೊಲೀಸರು ಕಂಡುಬಂದರು.

3 ಡಿಸಿಪಿ, 21 ಎಸಿಪಿ, 47 ಮಂದಿ ಇನ್‌ಸ್ಪೆಕ್ಟರ್, 130 ಮಂದಿ ಪಿಎಸ್‌ಐ, 126 ಎಎಸ್‌ಐ, 900 ಕಾನ್‌ಸ್ಟೆಬಲ್, ಕ್ಷಿಪ್ರ ಕಾರ್ಯಪಡೆಯ 120 ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ಮೂರು ದಿನಗಳ ಕಾಲ ಪೊಲೀಸ್ ಭದ್ರತೆ ಇರಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಭದ್ರತೆಗೆ ನಿಯೋಜನೆಗೊಂಡಿರುವ ಪೊಲೀಸ್ ಸಿಬ್ಬಂದಿ

ಗಣೇಶೋತ್ಸವದ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಂದೋಬಸ್ತ್ ಕೈಗೊಳ್ಳಲಾಗಿದೆ. ಪಶ್ಚಿಮ ವಿಭಾಗದ ರೌಡಿ ಪಟ್ಟಿಯಲ್ಲಿರುವ ವ್ಯಕ್ತಿಗಳ ಮನೆಗಳ ಮೇಲೆ ದಾಳಿ ನಡೆಸಿ ಮಾರಕಾಸ್ತ್ರ ವಶಕ್ಕೆ ಪಡೆಯಲಾಗಿದೆ. ಅವರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್ ಹೇಳಿದರು.

ಗಣೇಶೋತ್ಸವಕ್ಕೆ ವಿರೋಧ ಇಲ್ಲ: ಸುಪ್ರೀಂ ಕೋರ್ಟ್ ನೀಡಿರುವ ಆದೇಶದಿಂದ ಹಿಂದೂ–ಮುಸ್ಲಿಂ ಭಾವೈಕ್ಯ ಮತ್ತು ಶಾಂತಿಯುತ ವಾತಾವರಣಕ್ಕೆ ಅವಕಾಶ ಸಿಕ್ಕಂತಾಗಿದೆ ಎಂದು ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನಾ ಎನ್‌.ಕೆ. ಷಾಫಿ ಸಾ- ಆದಿ ಹೇಳಿದರು.

‘ಗಣೇಶೋತ್ಸವಕ್ಕೆ ನಮ್ಮ ವಿರೋಧ ಎಂದಿಗೂ ಇಲ್ಲ. 200 ವರ್ಷಗಳಿಂದ ನಮಾಜ್ ಮಾಡುತ್ತಿರುವ ಜಾಗ ಮತ್ತು ಸಾವಿರಾರು ಘೋರಿಗಳಿರುವ ಜಾಗವನ್ನು ಈದ್ಗಾ ಮೈದಾನವಾಗಿ ಉಳಿಸಬೇಕು ಎಂಬುದು ನಮ್ಮ ಹೋರಾಟ. ಬಿಬಿಎಂಪಿ ಜಂಟಿ ಆಯುಕ್ತರು ತಪ್ಪು ಮಾಹಿತಿ ನೀಡಿದ್ದರಿಂದ ಈ ಸಮಸ್ಯೆಗಳು ಎದುರಾಗಿವೆ. ಅವರಿಗೆ ಸುಪ್ರೀಂ ಕೋರ್ಟ್ ಕೂಡ ಛೀಮಾರಿ ಹಾಕಿದೆ’ ಎಂದರು.

ಮಧ್ಯಂತರ ಆದೇಶ ನೀಡಲು ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ



ಧಾರವಾಡ: ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಹಾಗೂ ಅನ್ಯ ಉದ್ದೇಶಕ್ಕೆ ನೀಡಬಾರದು ಎಂಬ ಅಂಜುಮನ್ ಸಂಸ್ಥೆಯ ಕೋರಿಕೆಗೆ ಮಧ್ಯಂತರ ಆದೇಶ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಗಣೇಶೋತ್ಸವ ನಡೆಸುವ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ತೀರ್ಮಾನದ ವಿರುದ್ಧ ಅಂಜುಮನ್ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿತ್ತು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಶೋಕ ಎಸ್‌. ಕಿಣಗಿ ಅವರು ಬೆಂಗಳೂರಿನ ಈದ್ಗಾ ಮೈದಾನ ವಿವಾದ ಕುರಿತ ಸುಪ್ರೀಂ ಕೋರ್ಟ್ ತೀರ್ಪು ಬಂದ ನಂತರ ಇಲ್ಲಿನ ಅರ್ಜಿಯ ವಿಚಾರಣೆ ನಡೆಸುವುದಾಗಿ ತಿಳಿಸಿದ್ದರು.

ಸುಪ್ರೀಂ ಕೋರ್ಟ್ ತೀರ್ಪಿನ ಪ್ರತಿ ಕೈಸೇರಿದ ನಂತರ, ಮಂಗಳವಾರ ರಾತ್ರಿ 10ಕ್ಕೆ ವಿಚಾರಣೆ ಆರಂಭಗೊಂಡಿತು. ವಾದ ಪ್ರತಿವಾದ ಆಲಿಸಿದ ನ್ಯಾಯಮೂರ್ತಿಗಳು, ಈ ಕುರಿತಂತೆ ಯಾವುದೇ ಮಧ್ಯಂತರ ಆದೇಶ ನೀಡಲು ನಿರಾಕರಿಸಿದರು. ಪ್ರಕರಣದ ವಿಚಾರಣೆಯನ್ನು ನಾಲ್ಕು ವಾರ ಮುಂದೂಡಿದರು.

ಅರ್ಜಿದಾರರ ಪರ ಸಾದಿಕ್ ಗೂಡೂವಾಲೆ ವಾದ ಮಂಡಿಸಿದರು.

‘ಅಸಮರ್ಪಕ ತ್ಯಾಜ್ಯ ವಿಲೇವಾರಿ: ಕಾಯಿಲೆ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಜ್ಯಗಳನ್ನು ಸಮರ್ಪಕವಾಗಿ ವಿಲೇವಾರಿ ಮಾಡದಿದ್ದರಿಂದ ನಗರದ ಜನರನ್ನು ಡೆಂಗಿ, ಚಿಕೂನ್‌ಗುನ್ಯದಂತಹ ಕಾಯಿಲೆಗಳು ಹೆಚ್ಚಾಗಿ ಕಾಡುತ್ತಿವೆ ಎಂದು ಸುಸ್ಥಿರ ಅಭಿವೃದ್ಧಿ ಕೇಂದ್ರದ ‘ಪರಿಸರ ವರದಿ’ಯಲ್ಲಿ ತಿಳಿಸಲಾಗಿದೆ.

ನಗರವನ್ನು ಕೇಂದ್ರವಾಗಿರಿಸಿ ಕೊಂಡು ಕೇಂದ್ರವು 2005, 2012ರಲ್ಲಿ ಸಮೀಕ್ಷೆ ನಡೆಸಿತ್ತು. 2021ರಲ್ಲಿ 3ನೇ ಸಮೀಕ್ಷೆ ನಡೆಸಿದೆ. ಈ ಸಮೀಕ್ಷೆಗೆ ನಗರದ 2,244 ಮನೆಗಳು ಒಳಪಟ್ಟಿದ್ದವು. ಸಮೀಕ್ಷೆಯ ವರದಿಯನ್ನು ಕೇಂದ್ರವು ಸರ್ಕಾರಕ್ಕೆ ಸಲ್ಲಿಸಿದೆ.

‘ನಗರದ ವೈದ್ಯಕೀಯ ವ್ಯವಸ್ಥೆಯಲ್ಲಿ ಸುಧಾರಣೆಗಳಾಗುತ್ತಿವೆ. ಆದರೆ, ಇದೇ ಅವಧಿಯಲ್ಲಿ ಜೀವನಶೈಲಿ ಸಂಬಂಧಿ ರೋಗಗಳು ಹೆಚ್ಚುತ್ತಿವೆ. ಗಾಳಿ ಮತ್ತು ನೀರಿನಿಂದ ಹರಡುವ ರೋಗಗಳ ತಡೆಗೂ ಕ್ರಮವಹಿಸಬೇಕಿದೆ. ಆರ್‌.ಆರ್. ನಗರ ವಲಯದಲ್ಲಿ ಹೆಚ್ಚಿನ ಜನರಿಗೆ ಅಶುದ್ಧ ನೀರು ಮತ್ತು ಗಾಳಿಯಿಂದ ಅನಾರೋಗ್ಯ ಸಮಸ್ಯೆಗಳು ಕಾಡಿವೆ. ಬೊಮ್ಮನಹಳ್ಳಿಯ ಕೊಳೆಗೇರಿ ನಿವಾಸಿಗಳಲ್ಲಿಯೂ ಹೆಚ್ಚಿನವರಲ್ಲಿ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಿವೆ. ಅಶುದ್ಧ ನೀರು ಸೇವನೆಯಿಂದಲೇ ವಿವಿಧ ಸಾಂಕ್ರಾಮಿಕ ರೋಗಗಳು ಅಲ್ಲಿನ ನಿವಾಸಿಗಳನ್ನು ಕಾಡುತ್ತಿವೆ’ ಎಂದು ಹೇಳಲಾಗಿದೆ.

‘ತ್ಯಾಜ್ಯ ನಿರ್ವಹಣೆ ಬಗ್ಗೆ ಎಲ್ಲ ವಲಯದ ನಿವಾಸಿಗಳೂ ಋಣಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಮಳೆಯಿಂದಾಗಿ ಸೊಳ್ಳೆಗಳ ಕಡಿತದಿಂದ ಹರಡುವ ಸಾಂಕ್ರಾಮಿಕ ರೋಗಗಳು ಸಮುದಾಯದಲ್ಲಿ ಹರಡುವ ಆತಂಕವಿದೆ. ಮಲೇರಿಯಾ, ಡೆಂಗಿ, ಚಿಕೂನ್‌ಗುನ್ಯಾ, ಆನೆಕಾಲು ಮೊದಲಾದ ರೋಗಗಳು ಅಪಾಯ ತಂದೊಡ್ಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕಾಗುತ್ತದೆ’ ಎಂದು ತಿಳಿಸಲಾಗಿದೆ.

ನೀರಿನ ಸಮಸ್ಯೆ: ‘ಹಸಿ ತ್ಯಾಜ್ಯಗಳ ಅವೈಜ್ಞಾನಿಕ ನಿರ್ವಹಣೆ, ಒಳಚರಂಡಿ ವ್ಯವಸ್ಥೆಯಲ್ಲಿನ ಲೋಪಗಳೂ ಸಾಂಕ್ರಾಮಿಕ ರೋಗಗಳ ಹೆಚ್ಚಳಕ್ಕೆ ಕಾರಣವಾಗುತ್ತವೆ. ಶೇ 80ರಷ್ಟು ಜನರು ನೀರಿನ ಪೂರೈಕೆ ಹಾಗೂ ಅದರ ಗುಣಮಟ್ಟದ ಬಗ್ಗೆ ತೃಪ್ತಿ ಹೊಂದಿದ್ದಾರೆ. ಆದರೆ, ಬಹುತೇಕ ಕಡೆ ಬೋರ್‌ವೆಲ್ (ಕೊಳವೆ ಬಾವಿ) ನೀರು ಕುಡಿಯಲು ಯೋಗ್ಯವಾಗಿಲ್ಲ ಎನ್ನುವುದು ಪರೀಕ್ಷೆಗೆ ಒಳಪಡಿಸಿದಾಗ ದೃಢಪಟ್ಟಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಬೊಮ್ಮನಹಳ್ಳಿ ವಲಯದ ಕೊಳೆಗೇರಿ ನಿವಾಸಿಗಳು ಪರಿಸರ ನೈರ್ಮಲ್ಯದ ಬಗ್ಗೆ ಅತೃಪ್ತಿ ಹೊಂದಿದ್ದಾರೆ. ಮಹಾದೇವಪುರ ವಲಯದ ಕೊಳೆಗೇರಿ ನಿವಾಸಿಗಳಲ್ಲಿ ಶೇ 7ರಷ್ಟು ಜನರು ಮಾತ್ರ ಪರಿಸರ ನೈರ್ಮಲ್ಯದ ಬಗ್ಗೆ ತೃಪ್ತಿ ಹೊಂದಿದ್ದಾರೆ. ಆದ್ದರಿಂದ ಬಿಬಿಎಂಪಿ ಪರಿಸರ ನೈರ್ಮಲ್ಯಕ್ಕೆ ಆದ್ಯತೆ ನೀಡಬೇಕು. ಸಾಂಕ್ರಾಮಿಕ ರೋಗಗಳ ಹರಡುವಿಕೆ ತಡೆಗೆ ಕ್ರಮವಹಿಸಬೇಕು’ ಎಂದು ಶಿಫಾರಸು ಮಾಡಲಾಗಿದೆ.

‘ಆರ್‌.ಆರ್. ನಗರದಲ್ಲಿ ಪ್ರತಿಕ್ರಿಯಿಸಿದವರಲ್ಲಿ ಶೇ 60ರಷ್ಟು ಮಂದಿ ಶೌಚಾಲಯ ವ್ಯವಸ್ಥೆಯಿಲ್ಲ ಎಂದಿದ್ದಾರೆ. ಆರೋಗ್ಯಯುತ ವಾತಾವರಣ ನಿರ್ಮಾಣಕ್ಕೆ ಅಗತ್ಯ ಕ್ರಮಗಳನ್ನು ಬಿಬಿಎಂಪಿ ಕೈಗೊಳ್ಳಬೇಕು’ ಎಂದು ತಿಳಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಚಿಕೂನ್‌ಗುನ್ಯಾ ಪ್ರಕರಣ ವರದಿ

ಶಂಕಿತ ಪ್ರಕರಣ	ರಕ್ತದ ಮಾದರಿ ಸಂಗ್ರಹ	ದೃಢಪಟ್ಟ ಪ್ರಕರಣ	ಮರಣ ಪ್ರಕರಣ
903	22	10	00

*2022ರಲ್ಲಿ ಈವರೆಗೆ ವರದಿಯಾದ ಪ್ರಕರಣಗಳು

ಅಂಕಿ–ಅಂಶಗಳು

39,696
ಬಿಬಿಎಂಪಿ ವ್ಯಾಪ್ತಿಯಲ್ಲಿನ ಶಂಕಿತ ಡೆಂಗಿ ಪ್ರಕರಣಗಳು

4,999
ಪರೀಕ್ಷಿಸಲಾದ ರಕ್ತದ ಮಾದರಿಗಳು

1,058
ದೃಢಪಟ್ಟ ಡೆಂಗಿ ಪ್ರಕರಣಗಳು

‘ವಚನ ಶ್ರಾವಣ ವರ್ಷಪೂರ್ತಿ ನಡೆಯಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿತ್ಯ ನೂತನವಾದ ವಚನಗಳ ಶ್ರಾವಣ ವರುಷವಿಡಿ ನಡೆಯಲಿ’ ಎಂದು ಕನ್ನಡ ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ ಹೇಳಿದರು.

ಹಂಪಿನಗರ ಗ್ರಂಥಾಂಗಣದಲ್ಲಿ ವಚನ ಶ್ರಾವಣ ಸಮಾರೋಪದಲ್ಲಿ ಅವರು ಮಾತನಾಡಿದರು.

‘ಮಲಿನವಾಗುತ್ತಿರುವ ಇಂದಿನ ಸಮಾಜಕ್ಕೆ ಆರೋಗ್ಯಕರ ವಚನಗಳನ್ನು ಉಣಬಡಿಸಿ ನೈತಿಕ ಮೌಲ್ಯಗಳನ್ನು, ಬದುಕಿನ ಸೂತ್ರಗಳನ್ನು ನೀಡುತ್ತಿರುವ ವಚನಜ್ಯೋತಿ ಬಳಗದ ಕಾರ್ಯ ಸ್ತುತಾರ್ಹ. ಶಾಲೆಗಳಲ್ಲಿ, ಆಸಕ್ತರ ಮನೆಯಂಗಳದಲ್ಲಿ ನಡೆದ ವಚನ ಶ್ರಾವಣದ ಅವಶ್ಯಕತೆ ಇಂದು ಬಹು ಅಗತ್ಯವಿದ್ದು, ಸಂಸ್ಕೃತಿಯ ಸಿಂಚನವಾಗಬೇಕು’ ಎಂದು ಹೇಳಿದರು.



ವಚನಜ್ಯೋತಿ ಬಳಗ ಆಯೋಜಿಸಿದ್ದ ವಚನ ಶ್ರಾವಣ ಸಮಾರೋಪದಲ್ಲಿ ಮಹೇಶ್ ಬೆಲ್ಲದ ಶಾಲಾ ಶಿಕ್ಷಕರಿಗೆ ವಚನಾಮೃತ ಸವಿ ಪುಸ್ತಕಗಳ ಕಟ್ಟು ನೀಡಿದರು. ಬಳಗದ ಅಧ್ಯಕ್ಷ ಪಿನಾಕಪಾಣಿ, ಸಾಮಾಜಿಕ ಕಾರ್ಯಕರ್ತ ಮರಿಲಿಂಗನಗೌಡ ಇದ್ದಾರೆ

ಕಂದಾಯ ಇಲಾಖೆಯ ಉಪ ಕಾರ್ಯದರ್ಶಿ ಜಯಲಕ್ಷ್ಮಿ ಆನಂದ್ ಮಾತನಾಡಿ, ‘ವಚನಗಳು ಬದುಕಿಗೆ ಮಾರ್ಗದರ್ಶಕವಾದವು, ಮನಸ್ಸಿಗೆ ಸಾಂತ್ವಾನವನ್ನು ನೀಡುವಂಥವು. ಹಸಿಗೋಡೆಯಂತ ಮಕ್ಕಳ ಮನಸ್ಸಿಗೆ ವಚನಗಳನ್ನು ತಲುಪಿಸುತ್ತಿರುವ ವಚನಜ್ಯೋತಿ ಬಳಗದ ಕಾರ್ಯ ಎಲ್ಲರಿಗೂ ಮಾದರಿ’ ಎಂದು ಬಣ್ಣಿಸಿದರು.

ಮಕ್ಕಳ ವಚನ ಮೇಳ: ಬಳಗದ ಅಧ್ಯಕ್ಷ ಎಸ್‌. ಪಿನಾಕಪಾಣಿ ಮಾತನಾಡಿ, ‘ಡಿಸೆಂಬರ್‌ನಲ್ಲಿ ರವೀಂದ್ರ ಕಲಾ ಕ್ಷೇತ್ರದಲ್ಲಿ ಮೂರು ದಿನಗಳ ಮಕ್ಕಳ ವಚನ ಮೇಳ ನಡೆಸಲಾಗುವುದು’ ಎಂದರು.

ಪಂಡಿತ ದೇವೇಂದ್ರಕುಮಾರ ಪತ್ತಾರ್, ಪಂಡಿತ ರವೀಂದ್ರ ಸೊರಗಾವಿ, ಸಿದ್ದರಾಮ ಕೇಸಾಪುರ, ಹಿಂದೂಸ್ತಾನಿ ಗಾಯಕರಾದ ಸರಸ್ವತಿ ಹೆಗಡೆ, ಮೀನಾಕ್ಷಿ ಮೇಟಿ, ಈರಯ್ಯ ಚಿಕ್ಕಮಠ್, ದೇವಿಕ ಚೇತನ್, ಕರ್ನಾಟಕ ಸಂಗೀತದ ವೀಣಾಮೂರ್ತಿ, ಸುಷ್ಮಾ ಸಂತೋಷ್, ಜನಪದ ಗಾಯಕಿ ಟಿ.ಎಂ. ಜಾನಕಿ, ಬಾಲ ಪ್ರತಿಭೆಗಳಾದ ಪೂರ್ಣಿಕ ಆರಾಧ್ಯ, ಶ್ರಾವಣಿ ಹಣ್ಣಿ, ಸುರಭಿ ಹಣ್ಣಿ ವಚನ ಸಂಗೀತ ಹರಿಸಿದರು. ಆರ್‌.ಇ.ಎಸ್. ಹೈಸ್ಕೂಲಿನ ಮಕ್ಕಳು ವಚನ ಸಂವಾದ ನಡೆಸಿಕೊಟ್ಟರು. ಕಲ್ಯಾಣ್ ಲೇಔಟಿನ ವಚನ ಕಲಿಕಾ ತರಗತಿಯ ವಿದ್ಯಾರ್ಥಿಗಳು ಸಮೂಹ ವಚನ ಗಾಯನ ಮಾಡಿದರು.

60 ವಸಂತಗಳನ್ನು ಪೂರೈಸಿದ ಕನ್ನಡ ಸಂಸ್ಕೃತಿ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಬಿ.ಎಸ್. ಶಿವಪ್ರಕಾಶ್ - ಜಿ.ಎಸ್. ಕಾತ್ಯಾಯಿನಿ ದಂಪತಿಗಳಿಗೆ ವಚನ ಷಷ್ಟಿ ಹಾರೈಕೆಯನ್ನು ಸಲ್ಲಿಸಲಾಯಿತು. ವಚನಜ್ಯೋತಿ ಬಳಗದ ಗೌರವಾಧ್ಯಕ್ಷ ಮಹೇಶ್ ಬೆಲ್ಲದ್ ಸಮಾರೋಪದ ಅಧ್ಯಕ್ಷತೆ ವಹಿಸಿದ್ದರು.




ವಿದ್ಯುಲ್ಲತೆಯಲ್ಲ ವಿದ್ಯುದಾವರೆ!

ಕೊಳ್ಳೇಗಾಲ ಶರ್ಮ

ಮೈಸೂರಿನ ಕುಕ್ಕರಹಳ್ಳಿ ಕೆರೆಗೋ, ಲಿಂಗಾಂಬುಧಿ ಕೆರೆ ಬದಿಗೋ ವಾಕಿಂಗ್ ಹೋದಿರೆನ್ನಿ. ಕೊಳೆತ ವಾಸನೆಯನ್ನು ಕುಡಿಯಬಹುದು. ಇದಕ್ಕೆ ಕಾರಣ ಕೆರೆಯ ನೀರು ಮಲಿನವಾಗಿರುವುದಷ್ಟೆ ಅಲ್ಲ, ಅಲ್ಲಿ ಬೆಳೆದಿರುವ ಕಳೆಯಂತಹ ಜಲಸಸ್ಯದ ಪ್ರಭಾವ ಅದು; ಮಲಿನಗೊಂಡ ನೀರಿನಲ್ಲಿರುವ ಗೊಬ್ಬರದಿಂದಾಗಿ ಸೊಂಪಾಗಿ ಬೆಳೆದಿರುತ್ತದೆ ಕಳೆ. ಇದನ್ನು ಕಿತ್ತೊಗೆಯುವುದೂ ಕಷ್ಟ. ನೀರಿಗೆ ಕಂಟಕವಾದ ಇದನ್ನು 'ಪಿಶಾಚಿತಾವರೆ' ಎನ್ನುತ್ತಾರಂತೆ. ಇದೇ ಬಗೆಯಲ್ಲಿ ನೀರನ್ನು ಕವಿದುಕೊಳ್ಳುವ ಆದರೆ ಅದರೊಟ್ಟಿಗೆ ವಿದ್ಯುತ್ತನ್ನೂ ನೀಡುವ ಎಲೆಯನ್ನು ಏನೆನ್ನೋಣ? ವಿದ್ಯುದಾವರೆ ಎನ್ನಬೇಕಷ್ಟೆ.

ಇಂತಹ ಉಪಕಾರಿ ಎಲೆಯೊಂದನ್ನು ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾಲಯದ ರಸಾಯನವಿಜ್ಞಾನಿ ಎರ್ವಿನ್ ರೈಸ್ನರ್ ಮತ್ತು ಸಂಗಡಿಗರು 'ತಯಾರಿಸಿದ್ದಾರೆ'. ಇವು ಪಿಶಾಚಿತಾವರೆಯ ಎಲೆಗಳಂತೆಯೇ ಗಾಳಿಯಲ್ಲಿರುವ ಕಾರ್ಬನ್ ಡಯಾಕ್ಸೈಡನ್ನು ಹೀರಿಕೊಂಡು, ಬಿಸಿಲಿನ ನೆರವಿನಿಂದ ನೀರನ್ನು ಒಡೆದು, ಅದರಿಂದ ಬರುವ ಹೈಡ್ರೋಜನ್ನನ್ನು ತಯಾರಿಸುತ್ತವಂತೆ.

ಹಸಿರು ಎಲೆಗಳು ವಿಶಿಷ್ಟ. ಇವು ಗಾಳಿಯಲ್ಲಿರುವ ಕಾರ್ಬನ್ ಡಯಾಕ್ಸೈಡ್ ಹಾಗೂ ನೀರನ್ನು ಒಡೆದು, ಆಹಾರವನ್ನಾಗಿ ಪರಿವರ್ತಿಸುತ್ತವೆ. ಇದನ್ನೇ ನಾವು ದ್ಯುತಿಸಂಶ್ಲೇಷಣೆ ಎನ್ನುತ್ತೇವೆ. ಈ ಕ್ರಿಯೆಗೆ ಎಲೆಗಳು ಬೆಳಕಿನಲ್ಲಿರುವ ಶಕ್ತಿಯನ್ನು ಬಳಸುತ್ತವೆ. ಇದೇ ರೀತಿಯಲ್ಲಿ ಕೃತಕವಾಗಿ ಬೆಳಕಿಗೆ ತೆರೆದುಕೊಂಡರೆ ಸಾಕು ನೀರನ್ನು ಹಾಗೂ ಕಾರ್ಬನ್ ಡಯಾಕ್ಸೈಡನ್ನು ಉತ್ಪಾದಿಸುವ ಸಾಧನಗಳನ್ನು ತಯಾರಿಸಬಹುದೇ? ಇದಕ್ಕಾಗಿ ಬೆಳಕಿನಿಂದ ವಿದ್ಯುತ್ ಉತ್ಪಾದಿಸುವ ಹಾಗೂ ರಸಾಯನಿಕವಾಗಿ ಕಾರ್ಬನ್ ಡಯಾಕ್ಸೈಡ್ ಮತ್ತು ನೀರನ್ನು ಒಡೆಯುವ ಎರಡು ತಂತ್ರಗಳನ್ನು ಜೋಡಿಸಬೇಕು. ಇದನ್ನು 'ಫೋಟೋ-ಇಲೆಕ್ಟ್ರೋಕೆಟಾಲಿಸಿಸ್' ಎಂದು ಹೆಸರಿಸಿದ್ದಾರೆ. ಇಂತಹ ಸಾಧನಗಳು ಮೊದಲಿಗೆ ವಿದ್ಯುತ್ತನ್ನು ತಯಾರಿಸಬೇಕು. ಆ ವಿದ್ಯುತ್ತನ್ನೇ ಬಳಸಿ ನೀರನ್ನು ಒಡೆಯಬೇಕು. ಅದರಿಂದ ಹುಟ್ಟಿದ ಜಲಜನಕವನ್ನು ಬಳಸಿಕೊಂಡು ಕಾರ್ಬನ್ ಡಯಾಕ್ಸೈಡನ್ನು ಒಡೆಯಬೇಕು.



ಕೇಂಬ್ರಿಜ್ ನದಿಯಲ್ಲಿ ಹರಿಯುತ್ತಿರುವ ವಿದ್ಯುತ್ ಎಲೆ!

ಬಿಸಿಲಿನಿಂದ ವಿದ್ಯುತ್ ತಯಾರಿಸುವ ಸೌರಫಲಕಗಳು ಹೊಸತೇನಲ್ಲ. ಆದರೆ ಅವು ಇಟ್ಟಿಗೆಗಳಂತೆ ಗಟ್ಟಿ. ಬಾಗಲಾರವು. ಜತೆಗೆ ಅವು ಕೇವಲ ಬೆಳಕಿಗೆ ಸ್ಪಂದಿಸಿ ವಿದ್ಯುತ್ತನ್ನು ತಯಾರಿಸಬಲ್ಲುವೇ ವಿನಾ ಗಾಳಿಯಲ್ಲಿರುವ ಕಾರ್ಬನ್ ಡಯಾಕ್ಸೈಡನ್ನು ಹೀರಲಾರವು. ಅದಿಲ್ಲದಿದ್ದರೂ, ನೀರಿನಲ್ಲಿರುವ ಹೈಡ್ರೋಜನನ್ನು ಪ್ರತ್ಯೇಕಿಸಿ, ಅದನ್ನು ವಿದ್ಯುತ್ ತಯಾರಿಸಲು ಬಳಸುವ ಯೋಜನೆಗಳಿವೆ. ಇಂತಹ ಹಲವಾರು ಕೃತಕ ಎಲೆಗಳನ್ನು ತಯಾರಿಸಲಾಗಿತ್ತು. ಆದರೆ ಅವುಗಳೂ ಸೌರಫಲಕಗಳಂತೆಯೇ ಗಟ್ಟಿಯಾಗಿದ್ದುವು.

ಇದೀಗ ರೈಸ್ನರ್ ತಂಡ ರೂಪಿಸಿರುವ ತೆಳು ಕೃತಕ ಎಲೆ ಇದನ್ನು ಸಾಧಿಸಲಿದೆಯಂತೆ. 'ಪೆರೋವ್ಸ್ಕೈಟ್ ವಿದ್ಯುತ್ಕೋಶ' ಎನ್ನುವ ಈ ಕೃತಕ ಸಾಧನದಲ್ಲಿ ವಿದ್ಯುತ್ತನ್ನು ತಯಾರಿಸಲು ಒಂದು ಪದರ, ನೀರು ಹಾಗೂ ಕಾರ್ಬನ್ ಡಯಾಕ್ಸೈಡನ್ನು ಒಡೆಯುವ ಕ್ರಿಯೆ ನಡೆಯುವ ಒಂದು ಪದರ ಹಾಗೂ ಇವೆರಡನ್ನೂ ಕೂಡಿಸುವ ಒಂದು ಪದರವನ್ನು ಜೋಡಿಸಲಾಗಿದೆ. ಇವುಗಳನ್ನು ರೂಪಿಸಲು ಅತ್ಯಂತ ಸರಳವಾದ ತಂತ್ರಗಳನ್ನು ಬಳಸಲಾಗಿದೆ. ಉದಾಹರಣೆಗೆ, ಹೈಡ್ರೋಜನ್ನನ್ನು ಒಡೆಯಲು ಬಳಸುವ ರಾಸಾಯನಿಕ ಕ್ರಿಯೆಗೆ ಗ್ರಾಫೈಟಿನ ನ್ಯಾನೊಕೊಳವೆಗಳನ್ನು ಬಳಸಲಾಗಿದೆ. ಇವು ವಿದ್ಯುತ್ತಿನ ನೆರವಿನಿಂದ ನೀರನ್ನು ಒಡೆಯಬಲ್ಲವು. ಇವನ್ನು ಒಂದು ತೆಳುವಾದ ಹಾಳೆಯ ಮೇಲೆ ಹಚ್ಚಲು ಅರಾಲ್ಡೈಟಿನಂತಹ ಗೋಂದಿನ ಜೊತೆ ಬೆರೆಸಿ ಹಚ್ಚಿದ್ದಾರೆ. ಹಾಗೆಯೇ ವಿದ್ಯುತ್ತನ್ನು ತಯಾರಿಸುವ ಸೌರಕೋಶಗಳನ್ನು ತಯಾರಿಸಲು ಬಿಸಿ ಹಬೆಯಷ್ಟು ಉಷ್ಣತೆ ಇದ್ದರೆ ಸಾಕು. ಕುಲುಮೆಯಲ್ಲಿನ ಸಾವಿರಾರು ಡಿಗ್ರಿ ಉಷ್ಣತೆಯ ಅವಶ್ಯಕತೆ ಇಲ್ಲದೆಯೇ ಪ್ಲಾಟಿನಂ, ವೆನೆಡಿಯಂ, ಬಿಸ್ಮತ್ ಮೊದಲಾದ ಲೋಹಗಳನ್ನು ಬಳಸಿ ಇಂತಹ ಸೌರಕೋಶಗಳನ್ನು ರೈಸ್ನರ್ ತಂಡ ತಯಾರಿಸಿದೆ. ಇವೆಲ್ಲವನ್ನೂ ಸಾಮಾನ್ಯ ಪೆಟ್ ಬಾಟಲಿಗಳಲ್ಲಿ ಬಳಸುವ ಪ್ಲಾಸ್ಟಿಕ್ಕಿನ ತೆಳು ಪೊರೆಯ ಮೇಲೆ 200 ಡಿಗ್ರಿ ಸೆಲ್ಸಿಯಸಿಗಿಂತ ಕಡಿಮೆ ಉಷ್ಣತೆಯನ್ನು ಬಳಸಿ ಲೇಪಿಸಿದ್ದಾರೆ.

> ತೇಲುವ ಕೃತಕ ಎಲೆಗಳು ವಿದ್ಯುತ್ತು ಅಥವಾ ಹೈಡ್ರೋಜನ್ನಿನ ಆಕರವಾಗಬಲ್ಲವು...

ಹೀಗೆ ಬೆರಳ ತುದಿಯಲ್ಲಿ ಕೂರುವ ಪುಟ್ಟ ಎಲೆಯನ್ನು ತಯಾರಿಸಿ ಅದರ ಕ್ಷಮತೆಯನ್ನು ಪರೀಕ್ಷಿಸಿ, ಇಂತಹ ಇತರೆ ಸಾಧನಗಳ ಜೊತೆಗೆ ಹೋಲಿಸಿದ್ದಾರೆ. ಹಸಿರೆಲೆ ಒಂದು ದಿನದಲ್ಲಿ ತಯಾರಿಸುವಷ್ಟೆ ಹೈಡ್ರೋಜನ್ ಅಣುಗಳನ್ನು ತಯಾರಿಸಿದ್ದನ್ನೂ, ಇಂದು ಬಳಕೆಯಲ್ಲಿರುವ ಸೌರಕೋಶಗಳಷ್ಟೆ ವಿದ್ಯುತ್ತನ್ನೂ ತಯಾರಿಸಿದ್ದನ್ನು ಇವರು ಕಂಡಿದ್ದಾರೆ. ಪ್ರತಿ ಚದರ ಸೆಂಟಿಮೀಟರು ಎಲೆಯೂ ಸುಮಾರು 230 ಮೈಕ್ರೊಮೋಲ್‌ನಷ್ಟು ಹೈಡ್ರೋಜನನ್ನು ಉತ್ಪಾದಿಸಿತ್ತು. ಮೈಕ್ರೊಮೋಲ್ ಪರಮಾಣುಗಳನ್ನು ಲೆಕ್ಕಿಸುವ ಅಳತೆ. ಇದು ವಿದ್ಯುತ್ ಬಳಸಿ ನಡೆಸುವ ರಾಸಾಯನಿಕ ಕ್ರಿಯೆಗಳಲ್ಲಿ ಹುಟ್ಟುವ ಹೈಡ್ರೋಜನ್ನಿನಷ್ಟೆ ಎನ್ನುತ್ತಾರೆ ರೈಸ್ನರ್.



ಅಷ್ಟೇ ಅಲ್ಲ. ಇನ್ನೂ ದೊಡ್ಡದಾದ, ಸುಮಾರು ಹತ್ತು ಸೆಂಟಿಮೀಟರ್ ಅಗಲ ಹಾಗೂ ಉದ್ದದ ಎಲೆಯನ್ನು ತಯಾರಿಸಿ, ತಮ್ಮ ವಿ.ವಿಯ ಬಳಿ ಹರಿಯುವ ಕೇಂಬ್ರಿಜ್ ನದಿಯಲ್ಲಿ ತೇಲಬಿಟ್ಟು ಪರೀಕ್ಷಿಸಿದ್ದಾರೆ. ಅಲ್ಲಿಯೂ, ಮೋಡ ಕವಿದ ವಾತಾವರಣದಲ್ಲಿಯೂ ಈ ಎಲೆ ಪರೀಕ್ಷೆಗಳ ವೇಳೆ ಪುಟ್ಟ ಎಲೆ ತಯಾರಿಸಿದಷ್ಟೆ ಹೈಡ್ರೋಜನನ್ನು ಉತ್ಪಾದಿಸಿತು. ಅರ್ಥಾತ್, ಈ ತಂತ್ರವನ್ನು ಬಳಸಿ ಇನ್ನು ದೊಡ್ಡದಾದ ಎಲೆಗಳನ್ನು ತಯಾರಿಸಬಹುದು. ಜೊತೆಗೆ ಈ ಎಲೆ ತಾನೇ ಹುಟ್ಟಿಸಿದ ಗಾಳಿಯ ಗುಳ್ಳೆಗಳ ಮೇಲೆ ತೇಲುವಷ್ಟು ಹಗುರವಾಗಿತ್ತು. ಎಲೆ ಹುಟ್ಟಿಸಿದ ಹೈಡ್ರೋಜನ್ನು ಹಾಗೂ ಕಾರ್ಬನ್ ಮಾನಾಕ್ಸೈಡನ್ನು ಸಂಗ್ರಹಿಸುವ ಉಪಾಯವನ್ನೂ ರೈಸ್ನರ್ ರೂಪಿಸಿದ್ದರು. ಕೊಳಗಳಲ್ಲಿ ತೇಲುತ್ತ, ಅಲ್ಲಿನ ನೀರನ್ನೇ ಬಳಸಿಕೊಂಡು ರಾಸಾಯನಿಕ ಗೊಬ್ಬರಗಳ ತಯಾರಿಕೆಗೆ ಬೇಕಾದ ಹೈಡ್ರೋಜನ್ನು ಮತ್ತು ಕಾರ್ಬನ್ ಮಾನಾಕ್ಸೈಡ್ ಮಿಶ್ರಣವನ್ನೋ ಅಥವಾ ಇದೀಗ ಸುದ್ದಿಯಲ್ಲಿರುವ ಹೈಡ್ರೋಜನ್ ವಿದ್ಯುತ್ ಕೋಶಗಳಿಗೆ ಬೇಕಾದ ಹೈಡ್ರೋಜನನ್ನು ಈ ಎಲೆಗಳು ಒದಗಿಸಬಲ್ಲವು. ಹೀಗೆ ಸರಳವಾಗಿ ಸೂರ್ಯನ ಶಕ್ತಿಯನ್ನು ಕೊಯ್ಲು ಮಾಡಲು ನೆರವಾಗಬಲ್ಲವು ಎನ್ನುವ ಆಸೆಯನ್ನು ಈ ಕೃತಕ ಎಲೆಗಳು ಹುಟ್ಟಿಸಿವೆ.

ರೈಸ್ನರ್‌ರ ಈ ಸಂಶೋಧನೆಯ ವಿವರಗಳನ್ನು ನೇಚರ್ ಪತ್ರಿಕೆ ಪ್ರಕಟಿಸಿದೆ. ❖

ಒನ್‌ಪ್ಲಸ್ 10ಟಿ ಚಾರ್ಜಿಂಗ್‌ನಲ್ಲೂ ವೇಗ!

ವಿಶ್ವನಾಥ ಎಸ್.

ಒನ್‌ಪ್ಲಸ್ ಕಂಪನಿಯ ಈಚೆಗೆ ಬಿಡುಗಡೆ ಮಾಡಿರುವ ಒನ್‌ಪ್ಲಸ್ 10ಟಿ ಸ್ಮಾರ್ಟ್‌ಫೋನ್ ಕಾರ್ಯಾಚರಣೆ, ಚಾರ್ಜಿಂಗ್, ಗೇಮಿಂಗ್ - ಹೀಗೆ ಹಲವು ದೃಷ್ಟಿಕೋನಗಳಿಂದ ಉತ್ತಮವಾಗಿದೆ. ಆದರೆ, ಕೆಲವು ಪ್ರೀಮಿಯಂ ವೈಶಿಷ್ಟ್ಯಗಳ ಕೊರತೆ ಕಾಡುತ್ತದೆ.

ಕಂಪನಿಯು ತನ್ನ ಫ್ಲ್ಯಾಗ್‌ಶಿಪ್ ಫೋನ್‌ಗಳಿಗೆ ಹೆಚ್ಚು ಆದ್ಯತೆ ನೀಡುತ್ತಿದೆ ಎನ್ನುವುದಕ್ಕೆ ಒನ್‌ಪ್ಲಸ್ 10ಟಿ ಉತ್ತಮ ನಿದರ್ಶನ. ಕಂಪನಿಯ ಫ್ಲ್ಯಾಗ್‌ಶಿಪ್ ಫೋನ್‌ಗಳಿಗೆ ಮತ್ತು ಒನ್‌ಪ್ಲಸ್ 10 ಮತ್ತು 10ಪ್ರೊಗೆ ಹೋಲಿಸಿದರೆ ಇದರಲ್ಲಿ ಕೆಲವೊಂದು ಅಂಶಗಳ ಕೊರತೆ ಕಾಣಿಸುತ್ತದೆ. ವೃತ್ತಿಪರವಾದ ಹ್ಯಾಸಲ್‌ಬ್ಲಾಡ್ ಕ್ಯಾಮೆರಾ ಇದರಲ್ಲಿ ಇಲ್ಲ. ಆದಾಗ್ಯೂ ಚಿತ್ರದ ಗುಣಮಟ್ಟ ಚೆನ್ನಾಗಿಯೇ ಇದೆ. ಇನ್ನು, ಅತ್ಯಂತ ಉಪಯುಕ್ತ ಆಗಿರುವ ಅಲರ್ಟ್ ಸ್ಲೈಡರ್ ಬಟನ್ ಸಹ ಇದರಲ್ಲಿ ಇಲ್ಲ. ಈ ಬಟನ್ ಸಹ ಜನರು ಒನ್‌ಪ್ಲಸ್ ಇಷ್ಟಪಡಲು ಒಂದು ಕಾರಣ. ಹೀಗಿರುವಾಗ ಇದನ್ನು ಬಿಟ್ಟಿರುವುದು ಅಚ್ಚರಿ ಎನಿಸಿದೆ. 3, 5, 7 ಜಿಬಿವರೆಗೆ ರ್‍ಯಾಮ್ ವಿಸ್ತರಣೆ ಸೌಲಭ್ಯ ಇದೆಯಾದರೂ ಫೋನ್ ಪ್ರತಿ ಬಾರಿಯೂ ರಿಸ್ಟಾರ್ಟ್ ಆಗಬೇಕು. ಈ ಸೌಲಭ್ಯ ಉಪಯುಕ್ತವಾಗಿದ್ದರೂ ಪದೇ ಪದೇ ರಿಸ್ಟಾರ್ಟ್ ಆಗುವುದು ಕಿರಿಕಿರಿ ಎನ್ನಿಸುತ್ತದೆ.

ಪ್ರೊಸೆಸರ್ ಮತ್ತು ಚಾರ್ಜಿಂಗ್ ವೇಗದ ದೃಷ್ಟಿಯಿಂದ ಒನ್‌ಪ್ಲಸ್ 10 ಪ್ರೊ ಸ್ಮಾರ್ಟ್‌ಫೋನ್‌ಗಿಂತಲೂ ಇದು ಉತ್ತಮವಾಗಿದೆ. 10ಟಿನಲ್ಲಿ ಸ್ನ್ಯಾಪ್‌ಡ್ರ್ಯಾಗನ್ 8 ಜೆನ್ 1 ಪ್ರೊಸೆಸರ್ ಇದೆ. ಹೀಗಾಗಿ ಯಾವುದೇ ಹಂತದಲ್ಲಿಯೂ ಫೋನ್ ಹ್ಯಾಂಗ್ ಆಗುವುದಿಲ್ಲ. ಗರಿಷ್ಠ ರೆಸಲ್ಯೂಷನ್ ಇರುವ ವಿಡಿಯೊ ನೋಡುವಾಗ, ಗೇಮ್ ಆಡುವಾಗ ಯಾವುದೇ ಸಮಸ್ಯೆ ಆಗಿಲ್ಲ.

ಕ್ಯಾಮೆರಾ ವಿಷಯದಲ್ಲಿ ಒನ್‌ಪ್ಲಸ್ 10 ಪ್ರೊಗೆ ಹೋಲಿಸಿದರೆ ಹಲವು ಅಂಶಗಳ ಕೊರತೆ ಇದರಲ್ಲಿದೆ. ಪ್ರಮುಖ ಕ್ಯಾಮೆರಾ 50 ಎಂಪಿ ಸೋನಿ ಐಮ್ಯಾಕ್ಸ್766 ಸೆನ್ಸರ್ ಹೊಂದಿದೆ. ಜೂಮ್ ಆಯ್ಕೆ ಇಲ್ಲ. ಚಿತ್ರದ ಗುಣಮಟ್ಟವನ್ನು 10 ಪ್ರೊಗೆ ಹೋಲಿಸಲು ಆಗದೇ ಇದ್ದರೂ ಕಳಪೆ ಏನಲ್ಲ, ಉತ್ತಮವಾಗಿಯೇ ಇದೆ. ಲ್ಯಾಂಡ್‌ಸ್ಕೇಪ್ ಚಿತ್ರಗಳ ಚೆನ್ನಾಗಿ ಸೆರೆಯಾಗುತ್ತವೆ. ಮಂದಬೆಳಕಿನಲ್ಲಿಯೂ ಉತ್ತಮ ಚಿತ್ರ ತೆಗೆಯಬಹುದು. ಆದರೆ, ಚಿತ್ರ ತೆಗೆದ ಬಳಿಕ ಜೂಮ್ ಮಾಡಿದರೆ ಪಿಕ್ಸಲ್ ಔಟ್ ಆಗಿರುವುದು ಗಮನಕ್ಕೆ ಬರುತ್ತದೆ. 8ಎಂಪಿ ಅಲ್ಟ್ರಾವೈಡ್ ಆಯ್ಕೆಯಲ್ಲಿ ನೆರಳು ಮತ್ತು ಬೆಳಕಿನ ಸಂಯೋಜನೆ ಚೆನ್ನಾಗಿ ಸೆರೆಯಾಗುತ್ತದೆ. ಆದರೆ, ಕೆಲವೊಂದು ಸೂಕ್ಷ್ಮ ಅಂಶಗಳ ಕೊರತೆ ಕಾಣಿಸುತ್ತದೆ. 2ಎಂಪಿ ಮ್ಯಾಕ್ರೊ ಸೆನ್ಸರ್ ಅಷ್ಟೇನೂ ಚೆನ್ನಾಗಿಲ್ಲ. ಮಧ್ಯಮ ಬೆಲೆಯ ಫೋನ್‌ನ ಮ್ಯಾಕ್ರೊ ಸೆನ್ಸರ್ ಗುಣಮಟ್ಟವೇ ಇದಕ್ಕಿಂತ ಉತ್ತಮವಾಗಿದೆ. ಮುಂಬದಿ 16 ಎಂಪಿ ವೈಡ್ ಕ್ಯಾಮೆರಾ ಇದ್ದು, ಸೆಲ್ಫಿ ಚೆನ್ನಾಗಿ ಮೂಡಿಬರುತ್ತದೆ. ಕೆಲವೊಮ್ಮೆ ಹೆಚ್ಚು ಶಾರ್ಪ್ ಎಂದು ಅನ್ನಿಸುತ್ತದೆ. ಸಹಜ ಮೈಬಣ್ಣದಲ್ಲಿ ಚಿತ್ರ ಸೆರೆಯಾಗುತ್ತದೆ.

ಬ್ಯಾಟರಿ: 4,800 ಎಂಎಎಚ್ ಬ್ಯಾಟರಿ ಇದ್ದು, 20 ನಿಮಿಷದಲ್ಲಿಯೇ ಶೇ. 100ರಷ್ಟು ಪೂರ್ತಿ ಚಾರ್ಜ್ ಆಗುತ್ತದೆ. 160ಡಬ್ಲ್ಯು ಅತಿ ವೇಗದ ಚಾರ್ಜಿಂಗ್ ಸೌಲಭ್ಯ ಹೊಂದಿದೆ. ಆದರೆ, ಬ್ಯಾಟರಿ ಬಾಳಿಕ ಅವಧಿ ಕಡಿಮೆ ಇದೆ. ಸಾಮಾನ್ಯ ಬಳಕೆಯಲ್ಲಿ ಒಂದು ದಿನವೂ ಚಾರ್ಜ್ ನಿಲ್ಲುವುದಿಲ್ಲ. ಇನ್ನು ಲೈವ್ ವಿಡಿಯೊ ನೋಡುವುದು, ಗೇಮ್ ಆಡಿದರೆ ಬ್ಯಾಟರಿ ಇನ್ನಷ್ಟು ಬೇಗ ಖಾಲಿಯಾಗುತ್ತದೆ. ಎಲ್ಲಾ ಕಡೆಗೂ ನಾವು ಚಾರ್ಜರ್ ಇಟ್ಟುಕೊಂಡು ಹೋಗಿರುವುದಿಲ್ಲ. ಹೀಗಾಗಿ, ಅತಿ ವೇಗವಾಗಿ ಚಾರ್ಜ್ ಆಗುವುದಕ್ಕೆ ಗಮನ ನೀಡುವಷ್ಟೇ ಆದ್ಯತೆಯನ್ನು ಚಾರ್ಜ್ ಹಿಡಿದಿಟ್ಟುಕೊಳ್ಳುವ ಕಡೆಗೂ ನೀಡಿದರೆ ಅದರಿಂದ, ಪದೇ ಪದೇ ಬ್ಯಾಟರಿ ಚಾರ್ಜ್ ಮಾಡಿ, ಅದರ ಬಾಳಿಕೆ ಅವಧಿ ಬೇಗನೆ ಕಡಿಮೆ ಆಗುವುದನ್ನು ತಪ್ಪಿಸಬಹುದು.

ವಯರ್‌ಲೆಸ್ ಚಾರ್ಜರ್ ನೀಡಿಲ್ಲ. ಬೆಲೆಯ ದೃಷ್ಟಿಯಿಂದ ನೋಡುವುದಾದರೆ ಇದು ಸಹ ಒಂದು ಕೊರತೆಯೇ ಸರಿ. ❖




ವೈಶಿಷ್ಟ್ಯ

ಡಿಸ್‌ಪ್ಲೇ: 6.7 ಇಂಚ್. 120 ಹರ್ಟ್ಸ್ ಫ್ಲ್ಯುಯಿಡ್ ಅಮೊಎಲ್‌ಇಡಿ.
ಒಎಸ್: ಆಂಡ್ರಾಯ್ಡ್ 12 ಆಧಾರಿತ ಆಕ್ಸಿಜನ್ ಒಎಸ್
ಸಿಪಿಯು: ಸ್ನ್ಯಾಪ್‌ಡ್ರ್ಯಾಗನ್ 8 + ಜೆನ್ 1
ರ್‍ಯಾಮ್: 8ಜಿಬಿ/12/ಜಿಬಿ/16ಜಿಬಿ ಎಲ್‌ಪಿಡಿಡಿಆರ್5
ಸಂಗ್ರಹಣಾ ಸಾಮರ್ಥ್ಯ: 128ಜಿಬಿ/256ಜಿಬಿ
ಬ್ಯಾಟರಿ: 4,800 ಎಂಎಎಚ್, 160ಡಬ್ಲ್ಯು ಸೂಫರ್‌ವಿಒಒಸಿ.
ಕ್ಯಾಮೆರಾ: 50 + 8 + 2 ಎಂಪಿ
ಸೆಲ್ಫಿ ಕ್ಯಾಮೆರಾ: 16 ಎಂಪಿ
ಬೆಲೆ: 12 + 256ಜಿಬಿಗೆ ₹ 54,999



ಸಾವಿನ ಬಳಿಕವೂ ಅಂಗದಾನ



ನೇಸರ ಕಾಡನಕುಪ್ಪೆ

ಅಮೆರಿಕದ ಯೇಲ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ವ್ಯಕ್ತಿಯ ಸಾವಿನ ಬಳಿಕವೂ ಅಂಗಗಳನ್ನು ಜೀವಂತವಾಗಿಡುವ ವಿಧಾನವನ್ನು ಕಂಡುಹಿಡಿದಿದ್ದಾರೆ. ಈ ವಿಧಾನ ಬಳಕೆಗೆ ಬಂದರೆ, ಕನಿಷ್ಠ ನಾಲ್ಕು ಗಂಟೆಗಳ ಕಾಲ ತೊಡಕಿಲ್ಲದೇ ಅಂಗ ಕಸಿ ಮಾಡುವ ಅವಕಾಶ ಸಿಗುತ್ತದೆ.

ಅಂಗಾಂಗ ಕಸಿಗೆ ವೈದ್ಯಕೀಯ ಲೋಕದಲ್ಲಿ ನೂರಾರು ವರ್ಷಗಳ ಇತಿಹಾಸವಿದೆ. ಆದರೆ, ವೈಜ್ಞಾನಿಕವಾಗಿ ಅದಕ್ಕೆ ಮನ್ನಣೆ ದೊರೆತಿರುವುದು ಈ ಕೆಲವು ದಶಕಗಳಲ್ಲಿ ಮಾತ್ರ. ವ್ಯಕ್ತಿಯೊಬ್ಬ ಅಪಘಾತಕ್ಕೆ ಈಡಾಗಿ ಮಿದುಳು ನಿಷ್ಕ್ರಿಯಗೊಂಡಲ್ಲಿ, ಅಂಗಗಳನ್ನು ಬದುಕಿರುವಾಗಲೇ ದೇಹದಿಂದ ತೆಗೆದು, ಅಗತ್ಯವಿರುವ ರೋಗಿಗಳಿಗೆ ಕಸಿ ಮಾಡಲು ಈಗ ಭಾರತದಲ್ಲಿ ಕಾನೂನಿನಲ್ಲಿ ಅವಕಾಶವಿದೆ. ಆದರೆ, ವ್ಯಕ್ತಿ ಸತ್ತ ಬಳಿಕ ಅಂಗಗಳನ್ನು ತೆಗೆದು ಕಸಿ ಮಾಡುವುದು ಸಾಧ್ಯವಿಲ್ಲ. ಕಣ್ಣನ್ನು ಮಾತ್ರ ಈ ರೀತಿ ಕಸಿ ಮಾಡಲಾಗುತ್ತಿದೆ.

ಆದರೆ, ಅಮೆರಿಕದ ಯೇಲ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಹೊಸ ಕ್ರಾಂತಿಕಾರಿ ಸಂಶೋಧನೆಯೊಂದನ್ನು ಮಾಡಿದ್ದಾರೆ. ಸಾವಿನ ಬಳಿಕ ಕಣ್ಣನ್ನು ಕಸಿ ಮಾಡುವ ಹಿಂದಿನ ಜೀವವಿಜ್ಞಾನವನ್ನು ಅಧ್ಯಯನ ಮಾಡಿ, ದೇಹದ ಇತರ ಭಾಗಗಳನ್ನೂ ಕಸಿ ಮಾಡುವ ವಿಧಾನವನ್ನು ಕಂಡುಹಿಡಿದಿದ್ದಾರೆ. ಈ ವಿಧಾನವನ್ನು ಅನುಸರಿಸಿದರೆ, ವ್ಯಕ್ತಿ ನಿಧನವಾದ ನಾಲ್ಕು ಗಂಟೆಗಳವರೆಗೂ ಅಂಗಗಳನ್ನು ತೊಡಕಿಲ್ಲದೇ ಅಗತ್ಯವುಳ್ಳ ವ್ಯಕ್ತಿಗಳಿಗೆ ಕಸಿ ಮಾಡುವ ಅವಕಾಶ ಸಿಗುತ್ತದೆ.

ವ್ಯಕ್ತಿಯ ನಿಧನದ ಬಳಿಕ ಹೃದಯ ಬಡಿತ ನಿಲ್ಲುವ ಕಾರಣ, ದೇಹದ ಜೀವಕೋಶಗಳಿಗೆ ರಕ್ತದೊಂದಿಗೆ ಆಮ್ಲಜನಕ ಪೂರೈಕೆಯಾಗುವುದು ಸ್ಥಗಿತಗೊಂಡು ಅಂಗಗಳು ಸಾಯುತ್ತವೆ. ಆದರೆ, ಕೌತುಕದ ಸಂಗತಿಯೆಂದರೆ ಹೃದಯಬಡಿತ ನಿಂತ ಕ್ಷಣವೇ ದೇಹದ ಎಲ್ಲ ಅಂಗಾಂಗಳು ಸಾಯುವುದಿಲ್ಲ. ಅದಕ್ಕೆ ಹಲವು ನಿಮಿಷಗಳು ಬೇಕಾಗಬಹುದು. ಆ ಕೆಲವು ಅಂತಿಮ ನಿಮಿಷಗಳ ಕಾಲ ಜೀವಕೋಶಗಳು ಇನ್ನೂ ಬದುಕಿರುತ್ತವೆ. ಬಳಿಕ ದೇಹ ನಿಧಾನವಾಗಿ ಕೊಳೆಯಲು ಶುರುವಾಗುತ್ತದೆ. ಈ ವಿಚಾರ ಹೊಸತೇನಲ್ಲ. ಎಲ್ಲ ಜೀವವಿಜ್ಞಾನಿಗಳಿಗೂ ತಿಳಿದಿರುವ ಸಂಗತಿಯೇ. ಆದರೆ, ಯೇಲ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಈ ಕೊಳೆಯುವ ವೇಗವನ್ನು ಕಡಿಮೆ ಮಾಡುವ ವಿಧಾನವನ್ನು ಕಂಡುಹಿಡಿದಿದ್ದಾರೆ. ಈ ವಿಧಾನದಿಂದ ವ್ಯಕ್ತಿಯ ಸಾವಿನ ಬಳಿಕ ದೇಹದಲ್ಲಿ ರಕ್ತ ಹೆಪ್ಪುಗಟ್ಟುವ ವೇಗ ಕಡಿಮೆಯಾಗುತ್ತದೆ. ಜೊತೆಗೆ, ಆಮ್ಲಜನಕದ ಪ್ರಮಾಣವೂ ಅಗತ್ಯ ಪ್ರಮಾಣದಲ್ಲೇ ಇರುತ್ತದೆ. ಹಾಗಾಗಿ, ಅಂಗಗಳು ಕೂಡಲೇ ಸಾಯದೇ ಜೀವಂತವಾಗಿರುತ್ತವೆ.

ಏನಿದು ಸಂಶೋಧನೆ?

ಯೇಲ್ ವಿಶ್ವವಿದ್ಯಾಲಯದ ವಿಜ್ಞಾನಿಗಳಾದ ಡೇವಿಡ್ ಆಂಡ್ರಿಜೆವಿಕ್, ನೆನಾಡ್ ಸೆಸ್ಟನ್, ಹಾರ್ವಿ, ಕೇಟ್ ಕುಷಿಂಗ್, ಸಾನಿಮಿರ್ ವರ್ಸಿಜಾ, ಟಾರಸ್ ಲಿಸ್ವಿ ಮತ್ತು ಶೂಪ್ಯೆ ಜಾಂಗ್ ಅವರನ್ನೊಳಗೊಂಡ ತಂಡವು 'ಬ್ರೈನ್‌ಎಕ್ಸ್' ಹಾಗೂ 'ಆರ್ಗನ್‌ಎಕ್ಸ್' ಎಂಬ ದ್ರಾವಣಗಳನ್ನು ಸಂಶೋಧಿಸಿದ್ದಾರೆ. ವ್ಯಕ್ತಿ ಸಾಯುವ ಮುನ್ನ 'ಬ್ರೈನ್‌ಎಕ್ಸ್' ದ್ರಾವಣವನ್ನು ಮಿದುಳಿಗೂ 'ಆರ್ಗನ್‌ಎಕ್ಸ್' ದ್ರಾವಣವನ್ನೂ ಹೃದಯಕ್ಕೂ ಇಂಜೆಕ್ಷನ್ ಮೂಲಕ ಸೇರಿಸುತ್ತಾರೆ. ಈ ದ್ರಾವಣಗಳು ದೇಹದ ಒಳಗೆ ಒಮ್ಮೆ ಹೋದ ಬಳಿಕ, ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ದೇಹದಿಂದ ಅಂಗಗಳನ್ನು ಬದುಕಿರುವಂತೆಯೇ ತೆಗೆಯುವ ಅಗತ್ಯವಿಲ್ಲ. ವ್ಯಕ್ತಿಯ ಸಾವಿನ ಬಳಿಕ ಸುಮಾರು ನಾಲ್ಕು ಗಂಟೆಗಳ ಕಾಲ ಅಂಗಗಳು ಜೀವಂತವಾಗಿರುತ್ತವೆ.



ಅನುಕೂಲಗಳೇನು?

ಅಂಗಾಂಗ ಕಸಿಯ ಪ್ರಮುಖ ಸಮಸ್ಯೆಯೇ ಸಮಯ ಹಾಗೂ ಅಂಗಗಳ ಸಾಗಣೆ. ನೀವು ಗಮನಿಸಿರಬಹುದು, 'ಹೃದಯ, ಇತರ ಅಂಗಗಳನ್ನು ವಿಮಾನದಲ್ಲಿ ತಂದು ಕಸಿ ಮಾಡಲಾಯಿತು', 'ಜೀರೋ ಟ್ರಾಫಿಕ್ ಮೂಲಕ ಅಂಗಗಳನ್ನು ಸಾಗಿಸಲಾಯಿತು' – ಎಂಬಿತ್ಯಾದಿ ಸುದ್ದಿಗಳು ಆಗಾಗ ಬರುತ್ತಿರುತ್ತವೆ. ಈ ರೀತಿಯ ಕ್ರಮಕ್ಕೆ ಮುಖ್ಯ ಕಾರಣ, ಅಂಗಗಳು ಸಂಪೂರ್ಣ ಸಾಯುವುದರೊಳಗೆ ಕಸಿ ಮಾಡಬೇಕು ಎನ್ನುವುದು. ಈ ಹೊಸ ಶೋಧದಿಂದ ಈ ಸಮಸ್ಯೆ ಬಹುತೇಕ ನಿವಾರಣೆಯಾಗುತ್ತದೆ. ಅಂಗಗಳನ್ನು ದೇಹದಿಂದ ಹೊರತೆಗೆಯದೇ, ಸಂಪೂರ್ಣ ದೇಹವನ್ನೇ ಸಾಗಿಸಬಹುದು ಅಥವಾ ಅಂಗಗಳನ್ನು ಸಾವಧಾನವಾಗಿ ಸಾಗಿಸಿ, ನಾಲ್ಕು ಗಂಟೆಗಳ ಸಮಯದಲ್ಲಿ ಕಸಿ ಮಾಡಬಹುದು.

'ನಾಲ್ಕು ಗಂಟೆಗಳ ಸಮಯ ಸಿಗುವ ಕಾರಣ, ಇತರ ಸಿದ್ಧತೆಗಳನ್ನು ಆಸ್ಪತ್ರೆಗಳಲ್ಲಿ ಗಡಿಬಿಡಿಯಲ್ಲದೇ ಸಿದ್ಧಪಡಿಸಿಕೊಳ್ಳಬಹುದು. ಜೊತೆಗೆ, ಸಮಯ ಉಳಿಯುವ ಕಾರಣ, ಅಂಗ ಕಸಿ ಸಮಯದಲ್ಲಿ ಮಾಡಲಾಗುವ ಅತಿ ಕ್ಲಿಷ್ಟಕರ 'ಇಮ್ಯುನಿಟಿ ಕಾಂಪ್ರಮೈಸ್' (ಹೊಸ ಅಂಗವನ್ನು ತಿರಸ್ಕರಿಸದಂತೆ ಕೃತಕವಾಗಿ ರೋಗ ನಿರೋಧಕ ಶಕ್ತಿಯನ್ನು ತಾತ್ಕಾಲಿಕವಾಗಿ ನಿಷ್ಕ್ರಿಯಗೊಳಿಸುವುದು), ರಕ್ತಸಂಗ್ರಹ ಇತ್ಯಾದಿ ಕಾರ್ಯಗಳನ್ನು ಸುಲಭವಾಗಿ ಮಾಡಿಕೊಳ್ಳಬಹುದು' ಎಂದು ಡೇವಿಡ್ ಆಂಡ್ರಿಜೆವಿಕ್ ವಿಶ್ಲೇಷಿಸಿದ್ದಾರೆ.

'ಈಗಾಗಲೇ ಹಂದಿಗಳ ಮೇಲೆ ಈ ವಿಧಾನದ ಪ್ರಯೋಗ ಯಶಸ್ವಿಯಾಗಿ ಆಗಿದೆ. ಅಂಗ ಕಸಿಯನ್ನೂ ಮಾಡಲಾಗಿದೆ. ಅತಿ ಶೀಘ್ರವೇ ಈ ವಿಧಾನ ಮಾನವ ಬಳಕೆಗೆ ಲಭ್ಯವಾಗಲಿದೆ' ಎಂದು ಡೇವಿಡ್ ಹೇಳಿದ್ದಾರೆ.

ನೇತ್ರದಾನದ ಸಮಯವೂ ವಿಸ್ತರಣೆ: ವ್ಯಕ್ತಿಯ ಸಾವಿನ ಬಳಿಕ ಆರು ಗಂಟೆಗಳ ಒಳಗೆ ನೇತ್ರದಾನ ಮಾಡಬೇಕು ಎಂದು ವೈದ್ಯಕೀಯ ವಿಜ್ಞಾನ ಹೇಳುತ್ತದೆ. ಆದರೆ, ಈಗ ಸಂಶೋಧನೆಯಿಂದ ಗರಿಷ್ಠ 10 ಗಂಟೆಗಳವರೆಗೆ ನೇತ್ರದಾನ ಮಾಡಲು ಅವಕಾಶ ಸಿಗುತ್ತದೆ. ಇದರಿಂದ ಲಕ್ಷಾಂತರ ಮಂದಿಗೆ ದೃಷ್ಟಿ ದೊರೆಯುವ ಅವಕಾಶ ಸಿಕ್ಕಂತಾಗುತ್ತದೆ. ❖

ನಗರದಲ್ಲಿ ನಾಳೆ

ವಿಶ್ವ ಪತ್ರಿಕಾ ವಿತರಕರ ದಿನಾಚರಣೆ: **ಸಾನ್ನಿಧ್ಯ:** ಸ್ವಾಮಿ ಜಪಾನಂದಜೀ ಮಹಾರಾಜ್, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಗೌರವ ಉಪಸ್ಥಿತಿ: ಎಚ್.ಡಿ. ಕುಮಾರಸ್ವಾಮಿ, ಅಧ್ಯಕ್ಷತೆ: ಶಿವಾನಂದ ತಗಡೂರು, ಶಂಭುಲಿಂಗ ಕೆ., ಆಯೋಜನೆ: ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10.30

ಕ್ಷೇಮವನ ಉದ್ಘಾಟನೆ: ಯೋಗಿ ಆದಿತ್ಯನಾಥ, ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಮುಖ್ಯ ಅತಿಥಿ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಡಿ. ವೀರೇಂದ್ರ ಹೆಗ್ಗಡೆ, ಆಯೋಜನೆ: ಶ್ರೀಕ್ಷೇತ್ರ ಧರ್ಮಸ್ಥಳ ಶಿಕ್ಷಣ ಸಂಸ್ಥೆ, ಸ್ಥಳ: ಕ್ಷೇಮವನ, ನೆಲಮಂಗಲ, ಬೆಳಿಗ್ಗೆ 11.45

ಹಾಸ್ಯ ಕಾರ್ಯಕ್ರಮ: 'ಮಜಾಭಾರತ' ಖ್ಯಾತಿಯ ರಾಘವೇಂದ್ರ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ಸ್ಪಿರಿಟ್ ಯುವಕರ ಸಂಘ, 5ನೇ ಮುಖ್ಯರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ 2ನೇ ಹಂತ, ಸಂಜೆ 7.30

41ನೇ ವಿನಾಯಕೋತ್ಸವ: ಆರ್ಕೆಸ್ಟ್ರಾ: ಚನ್ನಪ್ಪ ಹುದ್ದಾರ್, ಶ್ವೇತಿ ಭಿಡೆ, ದಿವ್ಯಾ ರಾಮಚಂದ್ರ, ಅನಿರುದ್ಧ ಶಾಸ್ತ್ರಿ, ಆಯೋಜನೆ, ಸ್ಥಳ: ವಿನಾಯಕ ಮಿತ್ರ ಮಂಡಳಿ, ನಂ.633, 1ನೇ ಮುಖ್ಯರಸ್ತೆ, ಜಯನಗರ 8ನೇ ಬ್ಲಾಕ್, ಸಂಜೆ 6.30



ಭರತನಾಟ್ಯ ಪ್ರದರ್ಶನ: ಕೈಲಾಸಕಲಾಧರ ಕಲ್ಚರಲ್ ಅಂಡ್ ಚಾರಿಟಬಲ್ ಟ್ರಸ್ಟ್ ವಿದ್ಯಾರ್ಥಿಗಳಿಂದ, ಗುರುಗಳು: ಜಯಲಕ್ಷ್ಮಿ ಜಿತೇಂದ್ರ ಭಾಗವತ್, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ ಐದನೇ ಬಡಾವಣೆ, ಸಂಜೆ 7.30

ಕಳೆಕಟ್ಟಿದ ಹಬ್ಬ: ಹೂವು, ಹಣ್ಣು ದುಬಾರಿ– ಬೆಲೆ ಏರಿಕೆ ನಡುವೆಯೂ ಖರೀದಿಯ ಭರಾಟೆ

ಗೌರಿ ಹಬ್ಬದ ಸಂಭ್ರಮ, ಗಣೇಶ ಪ್ರತಿಷ್ಠಾಪನೆಗೆ ಸಜ್ಜು





ಕೆ.ಆರ್.ಮಾರುಕಟ್ಟೆಯಲ್ಲಿ ಮಂಗಳವಾರ ಹೂವಿನ ವ್ಯಾಪಾರ ಭರ್ಜರಿಯಾಗಿ ನಡೆಯಿತು (ಎಡ ಚಿತ್ರ). ಮಾರುಕಟ್ಟೆ ಸುತ್ತಮುತ್ತಲೂ ವ್ಯಾಪಾರ ವಹಿವಾಟು ವಿಸ್ತರಿಸಿದ್ದರಿಂದ ಉಂಟಾದ ಜನದಟ್ಟಣೆ –ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ನಡುವೆ ಮಂಗಳ ಗೌರಿ ಹಬ್ಬವನ್ನು ಮಂಗಳವಾರ ಜನ ಸಂಭ್ರಮದಿಂದ ಆಚರಿಸಿದರು. ಎರಡು ವರ್ಷ ಕೋವಿಡ್‌ನಿಂದ ಕಳೆ ಗುಂದಿದ್ದ ಹಬ್ಬ ಈ ಬಾರಿ ರಂಗು ಪಡೆದುಕೊಂಡಿದ್ದು, ಗೌರಿಯನ್ನು ಮಹಿಳೆಯರು ಬರ ಮಾಡಿಕೊಂಡರು.

ಬೆಳಿಗ್ಗೆಯಿಂದಲೇ ಮನೆ ಸ್ವಚ್ಛಗೊಳಿಸಿ, ಬಾಗಿಲು ತೋರಣ ಕಟ್ಟಿ ಗೌರಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದರು. ಪರಸ್ಪರ ಅರಿಸಿನ, ಕುಂಕುಮ ನೀಡುವ ಮೂಲಕ ಗೌರಿ ಪೂಜೆ ಮಾಡಿದರು. ದೇವಾಲಯಗಳಲ್ಲೂ ವಿಶೇಷ ಪೂಜಾ ಕಾರ್ಯಗಳು ನಡೆದವು.

ಬುಧವಾರ ಗಣೇಶ ಹಬ್ಬ ಇರುವುದರಿಂದ ಗಣಪತಿ ಮೂರ್ತಿ ಪ್ರತಿಷ್ಠಾಪನೆಗೆ ಸಿದ್ಧತೆಗಳು ಭರದಿಂದ ಸಾಗಿದವು. ಬೀದಿ ಬೀದಿಗಳಲ್ಲಿ ತೆರೆದಿರುವ ಅಂಗಡಿಗಳಲ್ಲಿ ಗಣಪತಿ ಮೂರ್ತಿಗಳ ಖರೀದಿ ಜೋರಾಗಿತ್ತು.

ಕೆ.ಆರ್. ಮಾರುಕಟ್ಟೆಯಲ್ಲಿ ಬೆಳಗಿನ ಜಾವದ ವೇಳೆಗೆ ಜನ ಜಮಾಯಿಸಿದ್ದರು. ಚಿಕ್ಕಪೇಟೆಯ ಅವೆನ್ಯೂ ರಸ್ತೆ ಮತ್ತು ಸುತ್ತಮುತ್ತಲ ರಸ್ತೆಗಳಲ್ಲಿ ಕಾಲಿಡಲು ಜಾಗವಿಲ್ಲದಷ್ಟು ಜನದಟ್ಟಣೆ ಉಂಟಾಗಿತ್ತು. ವಾಹನ ಸಂಚಾರವಂತೂ ದುಸ್ತರವಾಗಿತ್ತು.

ಗಾಂಧಿ ಬಜಾರ್, ಜಯನಗರ, ಬಸವನಗುಡಿ, ಬನಶಂಕರಿ, ರಾಜಾಜಿನಗರ, ಮಲ್ಲೇಶ್ವರ ಸೇರಿ ನಗರದ ವಿವಿಧ ಭಾಗಗಳಲ್ಲಿ ಹೂವು, ಹಣ್ಣಿನ ತಾತ್ಕಾಲಿಕ ಮಳಿಗೆಗಳು, ಗಣಪತಿ ಮೂರ್ತಿಯ ಅಂಗಡಿಗಳು ತಲೆಎತ್ತಿವೆ.

ಎರಡು ವರ್ಷಗಳ ಬಳಿಕ ಗಣೇಶೋತ್ಸವದ ಅದ್ದೂರಿ ಆಚರಣೆಗೆ ಅವಕಾಶ ದೊರೆತಿರುವುದರಿಂದ ಬೀದಿ ಬೀದಿಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಯುವಕರ ಪಡೆ ಸಜ್ಜಾಗಿದೆ.

ಹೂವು ಹಣ್ಣು ದುಬಾರಿ: ಹಬ್ಬದ ತಯಾರಿಯಲ್ಲಿದ್ದ ಜನರಿಗೆ ಹೂವು ಹಣ್ಣುಗಳ ಬೆಲೆ ಏರಿಕೆ ಬಿಸಿ ತಟ್ಟಿತು. ಕೆ.ಆರ್.ಮಾರುಕಟ್ಟೆ ಮತ್ತು ರಸೆಲ್ ಮಾರುಕಟ್ಟೆಯಲ್ಲಿ ಆರಿಲ್ಸ್, ಟಮೋಟೊ, ಬೀನ್ಸ್, ಕ್ಯಾರೆಟ್, ಬೆಳ್ಳುಳ್ಳಿ ಸೇರಿ ತರಕಾರಿ ಬೆಲೆ ಕೆ.ಜಿಗೆ ₹50 ರಿಂದ ₹100 ತನಕ ಇತ್ತು. ಹೂವಿನ ಬೆಲೆ ಕೂಡ ಏರಿಕೆ ಕಂಡಿದ್ದು, ಮಲ್ಲಿಗೆ ಹೂವಿನ ಬೆಲೆ ಕೆ.ಜಿಗೆ ₹500 ರಿಂದ ₹1 ಸಾವಿರ ಇತ್ತು. ನಿರಂತರ ಮಳೆಯಿಂದ ಇಳುವರಿ ಕಡಿಮೆಯಾಗಿ ಬೆಲೆ ಏರಿಕೆಯಾಗಿದೆ ಎಂದು ವ್ಯಾಪಾರಿಗಳು ಅಭಿಪ್ರಾಯಪಟ್ಟರು.

ಗಣೇಶೋತ್ಸವ: ಬೆಸ್ಕಾಂ ನಿಯಮಾವಳಿ ಪಾಲಿಸಲು ಸೂಚನೆ

ಬೆಂಗಳೂರು: ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡುವ ಕುರಿತಂತೆ ಬೆಸ್ಕಾಂ ಕಟ್ಟುನಿಟ್ಟಿನ ನಿಯಮಾವಳಿಗಳನ್ನು ರೂಪಿಸಿದೆ.

ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯುವ ಮುನ್ನ ಬೆಸ್ಕಾಂ ಕ್ಷೇತ್ರಾಧಿಕಾರಿಗಳು ಸಮಾರಂಭದ ಸ್ಥಳ ಪರಿಶೀಲಿಸಲಿದ್ದಾರೆ. ನೆಲದಡಿಯಲ್ಲಿನ ಕೇಬಲ್ ಉಪಯೋಗಿಸಿಕೊಂಡು ವಿದ್ಯುತ್ ಸಂಪರ್ಕ ಪಡೆಯಬೇಕು ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ಸಂಪರ್ಕವನ್ನು ಪಡೆಯುವ ಸಂದರ್ಭದಲ್ಲಿ ನೋಂದಾಯಿತ ವಿದ್ಯುತ್ ಗುತ್ತಿಗೆದಾರರಿಂದ ವೈರಿಂಗ್ ಮತ್ತು ಎಲ್‌ಸಿಬಿ, ಇಎಲ್‌ಸಿಬಿ ಸಾಧನವನ್ನು ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ. ಗಣಪತಿ ಪ್ರತಿಷ್ಠಾಪನೆ ಮಾಡುವ ಸ್ಥಳದ ಸುತ್ತ-ಮುತ್ತ ಯಾವುದೇ ರೀತಿಯ ಇಎಚ್‌ಟಿ, ಎಚ್‌ಟಿ, ಎಲ್‌ಟಿ ವಿದ್ಯುತ್ ಮಾರ್ಗ-ಗಳಿಲ್ಲದಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

100ಕ್ಕಿಂತ ಹೆಚ್ಚು ಜನ ಸೇರುವ ಸಾಧ್ಯತೆ ಇದ್ದಲ್ಲಿ ಕಡ್ಡಾಯವಾಗಿ ಸಂಬಂಧಪಟ್ಟ ವಿದ್ಯುತ್ ಪರಿವೀಕ್ಷಕರಿಂದ ಅನುಮತಿ ಪತ್ರವನ್ನು ಪಡೆದುಕೊಳ್ಳಬೇಕು ಮತ್ತು ಅಗ್ನಿಶಾಮಕ ಸಾಧನವನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ವಿದ್ಯುತ್ ಸಂಬಂಧಿಸಿದ ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಕಾರ್ಯಕ್ರಮ ಆಯೋಜಕರೇ ಜವಾಬ್ದಾರರೆಂದು ನಿಯಮಾವಳಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಬೀದಿಗಳಲ್ಲಿ ಗಣೇಶ ವಿಗ್ರಹವನ್ನು ಮರವಣಿಗೆ ಮಾಡುವ ರಸ್ತೆಯ ಸಕ್ತ ಮತ್ತು ದಿನಾಂಕವನ್ನು ಸಂಘಟಕರು ಸಂಬಂಧಪಟ್ಟ ಬೆಸ್ಕಾಂ ಉಪ-ವಿಭಾಗದ ಅಧಿಕಾರಿಗಳಿಗೆ ಮುಂಚಿತವಾಗಿಯೇ ನೀಡಬೇಕು ಎಂದು ಸೂಚಿಸಲಾಗಿದೆ. ಯಾವುದಾದರೂ ವಿದ್ಯುತ್ ಮಾರ್ಗವು ತುಂಡಾಗಿದ್ದರೆ ಅಥವಾ ಹಾನಿಗೀಡಾಗಿದ್ದರೆ ತಕ್ಷಣ ಬೆಸ್ಕಾಂ ಸಹಾಯವಾಣಿ 1912ಗೆ ಕರೆಮಾಡಿ ತಿಳಿಸಲು ಸಂಘಟಕರಿಗೆ ತಿಳಿಸಲಾಗಿದೆ.

ನಾಳೆ 'ಕ್ಷೇಮವನ' ಉದ್ಘಾಟಿಸಲಿರುವ ಯೋಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ನೆಲ-ಮಂಗಲದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಶಿಕ್ಷಣ ಸಂಸ್ಥೆ ವತಿಯಿಂದ 'ಕ್ಷೇಮವನ' ನಿರ್ಮಿಸಲಾಗಿದೆ. ಈ ವನವನ್ನು ಸೆ.1ರಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಉದ್ಘಾಟಿಸಲಿದ್ದಾರೆ' ಎಂದು ಸಂಸ್ಥೆಯ ಉಪಾಧ್ಯಕ್ಷ ಡಿ. ಸುರೇಂದ್ರ ಕುಮಾರ್ ತಿಳಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಉದ್ಘಾಟನೆ ಸಮಾರಂಭದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮ-ಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸಲಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವಿರೇಂದ್ರ ಹೆಗ್ಗಡೆ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸ್ಥೆಯ ವತಿಯಿಂದ ಈ ಹಿಂದೆ 'ಶಾಂತಿವನ' ಮತ್ತು 'ಸೌಖ್ಯವನ' ನಿರ್ಮಿಸಲಾಗಿತ್ತು. ಇದು ಮೂರನೇ ವನವಾಗಿದೆ' ಎಂದು ಹೇಳಿದರು.

'20 ಎಕರೆ ಪ್ರದೇಶದಲ್ಲಿ ನಿರ್ಮಾ-ಣವಾಗಿರುವ ಕ್ಷೇಮವನವು, ದೇಹ ಮತ್ತು ಮನಸ್ಸಿನ ಸಮತೋಲನ ಕಾಯ್ದುಕೊಳ್ಳಲು ಸಹಕಾರಿಯಾಗಲಿ-ದೆ. ಜೀವನಕ್ರಮವನ್ನು ಸೈಸರ್ಗಿಕವಾಗಿ ಮರುರೂಪಿಸಿಕೊಳ್ಳಲು ನೆರವಾಗಲಿದೆ. ಪ್ರಾಚೀನ ವಾಸ್ತು ವಿನ್ಯಾಸಗಳಿಗೆ ಅನುಗುಣವಾಗಿ ಬಣ್ಣ, ವಿನ್ಯಾಸ ಮತ್ತು ಸಂರಚನೆ ಮಾಡಲಾಗಿದೆ. ಮಹೇಶ್ ಡಿಯೋಪೋಡೆ ಅವರು ಈ ಕೇಂದ್ರವನ್ನು ವಿನ್ಯಾಸ ಮಾಡಿದ್ದಾರೆ' ಎಂದು ತಿಳಿಸಿದರು.

'ಕ್ಷೇಮವನದಲ್ಲಿ ಏಕಕಾಲದಲ್ಲಿ 400 ಅತಿಥಿಗಳಿಗೆ ಶುಶ್ರೂಷೆ ನೀಡಬಹುದು. 86 ವಿಶೇಷ ಕೊಠಡಿಗಳಿವೆ. ಶಯನಾರೋಗ್ಯ, ಪೌಷ್ಟಿಕ ಆಹಾರ ಸೇರಿ 5 ಬಗೆಯ ಶುಶ್ರೂಷ ವಿಧಾನಗಳಿವೆ. ನಿಸರ್ಗ ಸಹಜ ವಿಧಾನಗಳ ಮೂಲಕ ಆರೋಗ್ಯವನ್ನು ಕಾಯ್ದುಕೊಳ್ಳಲು ಈ ಕೇಂದ್ರದ ಸೇವಾ ಸೌಲಭ್ಯ ಪಡೆಯಬಹುದು' ಎಂದು ಹೇಳಿದರು.

60 ನಕ್ಷತ್ರ ಆಮೆ ರಕ್ಷಣೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬ್ಯಾಂಕಾಕ್‌ನಿಂದ ಅಕ್ರಮವಾಗಿ ತರಲಾಗಿದ್ದ 60 ಜೀವಂತ ನಕ್ಷತ್ರ ಆಮೆಗಳನ್ನು ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಚೆಕ್ ಇನ್ ವಿಭಾಗದಲ್ಲಿ ಬ್ಯಾಗ್‌ಗಳನ್ನು ಪರಿಶೀಲನೆ ಮಾಡುತ್ತಿದ್ದ ವೇಳೆ ಆಮೆಗಳಿದ್ದ ಬ್ಯಾಗ್ ಪತ್ತೆಯಾಗಿದೆ. ಅವನ್ನು ರಕ್ಷಿಸಿದ ಕಸ್ಟಮ್ಸ್ ತಂಡವು ರಾಜ್ಯ ಅರಣ್ಯ ಇಲಾಖೆಗೆ ಹಸ್ತಾಂತರಿಸಿದೆ. ವನ್ಯಜೀವಿ ಅಪರಾಧ ನಿಯಂತ್ರಣಾ ಘಟಕದ ಸಹಯೋಗದಡಿ ಆಮೆಗಳನ್ನು ಆರೈಕೆ ಮಾಡಲಾಗುತ್ತಿದೆ ಎನ್ನಲಾಗಿದೆ.

ಕಿರುಕುಳ ಆರೋಪ: ಬಿಎಂಟಿಸಿ ಚಾಲಕ ಹೊಳೆಬಸಪ್ಪ ಸೇರಿ ಮೂವರು ಆತ್ಮಹತ್ಯೆ

ಡಿಪೋ ವ್ಯವಸ್ಥಾಪಕರ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರದ ಬಿಎಂಟಿಸಿ ಬಸ್ ಡಿಪೋದ ಚಾಲಕ ಹೊಳೆಬಸಪ್ಪ (48) ಅವರು ಅಧಿಕಾರಿಗಳ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿದ್ದು, ಡಿಪೋ ವ್ಯವಸ್ಥಾಪಕರನ್ನು ಬಂಧಿಸಬೇಕು ಎಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ಡಿಪೋ ಎದುರು ಜಮಾಯಿಸಿದ ಕಾರ್ಯಕರ್ತರು ಸಾರಿಗೆ ನೌಕರನ ಆತ್ಮಹತ್ಯೆಗೆ ನ್ಯಾಯ ಸಿಗಬೇಕು. ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಸಾರಿಗೆ ಸಚಿವ ಬಿ.ಶ್ರೀರಾಮುಲು ಹಾಗೂ ಬಿಎಂಟಿಸಿಯ ಉನ್ನತಾಧಿಕಾರಿಗಳು ಸ್ಥಳಕ್ಕೆ ಬರಬೇಕು ಎಂದು ಕಾರ್ಯಕರ್ತರು ಅಹೋರಾತ್ರಿ ಪ್ರತಿಭಟನೆ ನಡೆಸಿದರು.

'ಕೇವಲ 24 ಗಂಟೆಯ ಅವಧಿಯಲ್ಲಿ ಜಿಗಣಿ, ಬನಶಂಕರಿ ಹಾಗೂ ಚನ್ನಸಂದ್ರ ಡಿಪೋಗಳ ಮೂವರು ನೌಕರರು ಆತ್ಮಹತ್ಯೆಗೆ ಶರಣಾಗಿರುವುದು ದುರಂತ. ಇಷ್ಟು ಅನಾಹುತಗಳು ಘಟಿಸಿದರೂ ಸರ್ಕಾರ ಕಣ್ಣು ಕಾಣದಂತೆ, ಕಿವಿಯೂ ಕೇಳಿಸದಂತೆ ಇದೆ' ಎಂದು ಪಕ್ಷದ ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಆಕ್ರೋಶ ಹೊರಹಾಕಿದರು.

ಆತ್ಮಹತ್ಯೆಗೆ ಕಾರಣರಾದ ಡಿಪೋ ವ್ಯವಸ್ಥಾಪಕರನ್ನು ಬಂಧಿಸಬೇಕು. ಸೇವೆಯಿಂದ ಅಮಾನತು ಮಾಡಬೇಕು. ಆತ್ಮಹತ್ಯೆ ಮಾಡಿಕೊಂಡ ನೌಕರರ ಕುಟುಂಬಕ್ಕೆ ₹ 50 ಲಕ್ಷ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಮುಖಂಡರಾದ ಚನ್ನಪ್ಪಗೌಡ ನಲ್ಲೂರು, ಸುರೇಶ್ ರಾಥೋಡ್, ನಂಜಪ್ಪ ಕಾಳೇಗೌಡ, ಶ್ಯಾಮಸುಂದರ್ ಮನಂ, ಶಶಿಧರ ಆರಾಧ್ಯ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಡಿಪೋದ ಎದುರು ಎಎಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ವ್ಯವಸ್ಥಾಪಕರ ವಿರುದ್ಧ ಎಫ್‌ಐಆರ್

ಹೊಳೆಬಸಪ್ಪ ಅವರ ಪತ್ನಿ ದೂರು ನೀಡಿದ್ದು, ಡಿಪೋ ವ್ಯವಸ್ಥಾಪಕ ಮಲ್ಲಿಕಾರ್ಜುನಯ್ಯ ವಿರುದ್ಧ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಲ್ಲಿಕಾರ್ಜುನಯ್ಯ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ನನ್ನ ಬಳಿ ಪತಿ ಹೇಳಿಕೊಂಡಿದ್ದರು' ಎಂದು ಹೊಳೆಬಸಪ್ಪ ಅವರ ಪತ್ನಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ನನ್ನ ಸಾವಿಗೆ ವ್ಯವಸ್ಥಾಪಕ ಕಾರಣವೆಂದು ಬರೆದಿಟ್ಟಿರುವ ಡೆತ್‌ನೋಟ್ ಸಹ ಸಿಕ್ಕಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಾಲಗಾರರ ಕಿರುಕುಳ: ಜಿಮ್ ಮಾಲೀಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಮ್ಮಗೊಂಡನಹಳ್ಳಿಯಲ್ಲಿ ಜಿಮ್ ನಡೆಸುತ್ತಿದ್ದ ಮನೋಹರ್ (31) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದು, ಸಾಲಗಾರರ ಕಿರುಕುಳ ಕಾರಣವೆಂದು ಆಪಾದಿಸಿ ಅವರ ಸಹೋದರ ದೂರು ನೀಡಿದ್ದಾರೆ. ಗಂಗಮ್ಮನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿರುಕುಳದ ಆರೋಪದ ಮೇರೆಗೆ ಹರೀಶ್, ಮಂಜುನಾಥ್ ಪ್ರಸಾದ್, ರಾಜು, ಅಭಿ ಹಾಗೂ ನಾಗೇಶ್ವರ ರಾವ್ ವಿರುದ್ಧ ಪ್ರಕರಣ ದಾಖಲಾಗಿದೆ.

'ಸಾಲಗಾರರ ಕಿರುಕುಳದ ಬಗ್ಗೆ ಡೆತ್‌ನೋಟ್ ಬರೆದಿಟ್ಟಿರುವುದು ಸಿಕ್ಕಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೋವಿಡ್ ವೇಳೆ ಲಾಕ್‌ಡೌನ್‌ನಿಂದ ಮನೋಹರ್ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದರು. ಬಡ್ಡಿ ಪಾವತಿಸಲು ಅವರಿಗೆ ಸಾಧ್ಯವಾಗಿರಲಿಲ್ಲ. ಸಾಲಗಾರರು ಜಿಮ್ ಕಟ್ಟಡ ಹಾಗೂ ಮನೆಯ ಬಳಿಗೆ ಬಂದು ಗಲಾಟೆ ನಡೆಸುತ್ತಿದ್ದರು. ಇದರಿಂದ ನೊಂದಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಆರೋಪ

'ನ್ಯಾಯೋಚಿತ ಮತ್ತು ನಿಷ್ಪಕ್ಷಪಾತ ತನಿಖೆ ಆಗಬೇಕು. ಮಕ್ಕಳಿಗೆ, ಅವರ ಪೋಷಕರಿಗೆ ಮತ್ತು ಎಲ್ಲಾ ಸಾಕ್ಷಿದಾರರಿಗೆ ಅಗತ್ಯ ರಕ್ಷಣೆ ನೀಡಬೇಕು' ಎಂದೂ ಆಗ್ರಹಿಸಿವೆ.

ಮುರುಘಾ ಶ್ರೀ ಬಂಧನಕ್ಕೆ ಮಹಿಳಾ ಸಂಘಟನೆಗಳ ಒತ್ತಾಯ

ಬೆಂಗಳೂರು: ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಶಿವಮೂರ್ತಿ ಮುರುಘಾ ಶರಣರನ್ನು ಕೂಡಲೇ ಬಂಧಿಸಬೇಕು ಎಂದು ವಿವಿಧ ಮಹಿಳಾ ಸಂಘಟನೆಗಳು ಒತ್ತಾಯಿಸಿವೆ.

ಸ್ತ್ರೀ ಜಾಗೃತಿ ಸಮಿತಿ, ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ, ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಲೈಂಗಿಕ ಕಾರ್ಯಕರ್ತೆಯರ ಸಂಘ, ಕರ್ನಾಟಕ ಜನ ಶಕ್ತಿ ಸೇರಿ ಹಲವು ಮಹಿಳಾ ಸಂಘಟನೆಗಳ ಜಂಟಿ ನಿಯೋಗವು ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ಪೊಲೀಸ್ ಮಹಾನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕರಿಗೂ ಮನವಿ ನೀಡಿತು.

'ಮಕ್ಕಳ ಮೇಲೆ ದೌರ್ಜನ್ಯ ಎಸಗಿದ ಗಂಭೀರ ಆರೋಪ ಇದ್ದು, ಮುರುಘಾ ಶರಣರು ಇರುವ ಸ್ಥಳ ಗೊತ್ತಿದ್ದರೂ ಪೊಲೀಸರು ಬಂಧಿಸದಿರುವುದು ಅನ್ಯಾಯ. ಮಕ್ಕಳು ಬಹಳ ಕಾಲ ಆರೋಪಿಗಳ ಅಧೀನದಲ್ಲಿದ್ದು, ಬೆದರಿಕೆಗೆ ಒಳಗಾಗುವ ಸ್ಥಿತಿ ಇದೆ. ಆರೋಪಿ ಪ್ರಭಾವ ಬಳಸಿ ಸಾಕ್ಷ್ಯಗಳನ್ನು ನಾಶ ಮಾಡುವ ಸಾಧ್ಯತೆಯೂ ಇದೆ. ಈ ಎಲ್ಲಾ ಕಾರಣಗಳಿಂದ ಶರಣರನ್ನು ಕೂಡಲೇ ಬಂಧಿಸಬೇಕು' ಎಂದು ಸಂಘಟನೆಗಳು ಒತ್ತಾಯಿಸಿವೆ.

'ಸಂತ್ರಸ್ತರಲ್ಲಿ ಒಬ್ಬಳು ಪರಿಶಿಷ್ಟ ಸಮುದಾಯಕ್ಕೆ ಸೇರಿದವಳು ಎಂದು ವರದಿಯಾಗಿದೆ. ಆರೋಪಿಗಳ ವಿರುದ್ಧ ಕೂಡಲೇ ಎಸ್‌ಸಿ, ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆ ಅಡಿಯಲ್ಲೂ ಕ್ರಮ ಜರುಗಿಸಬೇಕು. ಮಕ್ಕಳಿಗೆ ರಕ್ಷಣೆ ಮತ್ತು ಪುನರ್ವಸತಿ ಕಲ್ಪಿಸಬೇಕು' ಎಂದು ಮನವಿ ಮಾಡಿವೆ.

ಸಚಿವ ಆನಂದ್ ಸಿಂಗ್ ಸೇರಿ ನಾಲ್ವರ ವಿರುದ್ಧ ಪ್ರಕರಣ



ಆನಂದ್ ಸಿಂಗ್

ಹೊಸಪೇಟೆ (ವಿಜಯನಗರ): ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಹಾಗೂ ಇತರ ಮೂವರ ವಿರುದ್ಧ ಇಲ್ಲಿನ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಮಂಗಳವಾರ ರಾತ್ರಿ ಪ್ರಕರಣ ದಾಖಲಾಗಿದೆ.

'ಡಿ.ಪೋಲಪ್ಪ ಎಂಬುವರು ಕೊಟ್ಟ ದೂರಿನ ಮೇರೆಗೆ ಐ.ಪಿ.ಸಿ. ಸೆಕ್ಷನ್ 504, 506ರ ಅಡಿ ಎಸ್ಸಿ/ಎಸ್ಟಿ ಕಾಯ್ದೆ ಅನ್ವಯ ಆನಂದ್ ಸಿಂಗ್, ಮರಿಯಪ್ಪ, ಹನುಮಂತಪ್ಪ ಹಾಗೂ ಹುಲುಗಪ್ಪ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ. ತಿಳಿಸಿದ್ದಾರೆ.

'ಪೆಟ್ರೋಲ್ ಹಾಕಿ ಸುಟ್ಟು ಹಾಕುತ್ತೇನೆ' ಎಂದು ಸಚಿವ ಆನಂದ್ ಸಿಂಗ್ ಅವರು ಜೀವ ಬೆದರಿಕೆ ಒಡ್ಡಿದ್ದಾರೆ ಎಂದು ಆರೋಪಿಸಿ ಪೋಲಪ್ಪ ಅವರು ತಮ್ಮ ಕುಟುಂಬದ ಒಂಬತ್ತು ಜನ ಸದಸ್ಯರೊಂದಿಗೆ ಮಂಗಳವಾರ ಸಂಜೆ ನಗರದ ಎಸ್ಪಿ ಕಚೇರಿ ಎದುರು ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ಬಳಿಕ ಪೊಲೀಸರು ಮಧ್ಯ ಪ್ರವೇಶಿಸಿ ಅವರನ್ನು ತಡೆದು, ಆಸ್ಪತ್ರೆಗೆ ಕಳಿಸಿದ್ದರು.

₹ 10 ಲಕ್ಷ ಮೌಲ್ಯದ ಮಾದಕ ವಸ್ತು ವಶ, ಮೂವರ ಬಂಧನ

ಹ್ಯಾಶಿಶ್ ಆಯಿಲ್ ಮಾರಾಟ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಮಾದಕ ವಸ್ತು 'ಹ್ಯಾಶಿಶ್ ಆಯಿಲ್' ಮಾರಾಟ ಜಾಲದ ಮೂವರನ್ನು ಬಂಧಿಸಿರುವ ಕೊಡಗು ಜಿಲ್ಲಾ ಪೊಲೀಸರು ₹ 10 ಲಕ್ಷ ಮೌಲ್ಯದ 1.6 ಕೆ.ಜಿ. ಆಯಿಲ್ ಅನ್ನು ವಶಪಡಿಸಿಕೊಂಡಿದ್ದಾರೆ.

'ಕೇರಳದ ಕಾಸರಗೋಡು ಜಿಲ್ಲೆಯ ಕೊಟ್ಟಪಲ್ಲಿಯ ಅಹಮ್ಮದ್ ಕಬೀರ್ (37), ಕೇರಳದ ಕಜ್ಜಗಾಡು ತಾಲ್ಲೂಕಿನ ಕೊಳಬೈಲು ಗ್ರಾಮದ ಅಬ್ದುಲ್ ಖಾದರ್ (27) ಹಾಗೂ ತಾನಿಯಾಂದ್ರಮ್ ವೈನಿಂಗಾಲ್ ಗ್ರಾಮದ ಮೊಹಮ್ಮದ್ ಮುಜಮಿಲ್ (22) ಬಂಧಿತರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಭಾಗಮಂಡಲ ಠಾಣಾ ವ್ಯಾಪ್ತಿಯ ಕರಿಕೆ ಮಾರ್ಗದ ತಾವೂರು ಕಡೆಗೆ ಕೇರಳದಿಂದ ಬಂದ ಮಾರುತಿ ಕಾರನ್ನು ಸುತ್ತುವರೆದ ಪೊಲೀಸರು, ಪರಿಶೀಲಿಸಿದಾಗ 2 ಪ್ರತ್ಯೇಕ ನಂಬರ್ ಪ್ಲೇಟ್‌ಗಳು ಪತ್ತೆಯಾದವು.

'ಕೂಲಂಕಷವಾಗಿ ತಪಾಸಣೆ ಮಾಡಿದಾಗ ಪ್ಲಾಸ್ಟಿಕ್ ಡಬ್ಬದಲ್ಲಿ ಅಂಟು ಮಾದರಿಯ ಪದಾರ್ಥ ಕಂಡು ಬಂದಿತು. ಅದರ ವಾಸನೆಯು ಮಾದಕ ದ್ರವ್ಯದಂತಿತ್ತು. ಈ ಬಗ್ಗೆ ವಿಚಾರಿಸಿದಾಗ ಮಾರಾಟದ ಉದ್ದೇಶದಿಂದ ಹ್ಯಾಶಿಶ್‌ನ್ನು ಜಿಲ್ಲೆಗೆ ತರಲಾಗಿದೆ ಎಂದು ಆರೋಪಿಗಳು ತಿಳಿಸಿದರು' ಎಂದರು.

'ಕಾರಿನ ನಂಬರ್ ಪ್ಲೇಟ್ ಅನ್ನು ಬದಲಾಯಿಸಿಕೊಂಡು ಮಾದಕ-ದ್ರವ್ಯವನ್ನು ಮಾರಾಟ ಮಾಡುತ್ತಿದ್ದ ಅಂಶ ಬೆಳಕಿಗೆ ಬಂದಿದೆ. ಬಂಧಿತರ ಪೈಕಿ ಅಹಮ್ಮದ್ ಕಬೀರ್ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯ ವಾಹನ ಕಳ್ಳತನ ಪ್ರಕರಣದ ಆರೋಪಿಯಾಗಿದ್ದು, ಕೇರಳ ರಾಜ್ಯದಲ್ಲಿಯೂ ವಿವಿಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ' ಎಂದರು.

ಮಡಿಕೇರಿ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆದಿದೆ. ಸಿಪಿಐ ಅನೂಪ್ ಮಾದಪ್ಪ, ಭಾಗಮಂಡಲ ಪೊಲೀಸ್ ಠಾಣೆಯ ಪಿಎಸ್‌ಐ ಪ್ರಿಯಾಂಕಾ, ಸಿಬ್ಬಂದಿ ಬೆಳ್ಳಿಯಪ್ಪ, ಎಚ್.ಸಿ.ಇಬ್ರಾಹಿಂ, ಬಿ.ಸಿ. ಮಹೇಶ್, ಯಲ್ಲಾಲಿಂಗ ಶೇಗುಣಸಿ, ಮಹದೇವಸ್ವಾಮಿ, ಪುನೀತ್ ಕುಮಾರ್, ಸುರೇಶ್ ಕುಮಾರ್ ಕಾರ್ಯಾಚರಣೆ ತಂಡದಲ್ಲಿದ್ದರು.

ಎಲ್ಲಿಂದ ಎಲ್ಲಿಗೆ? ಏನಿದು ಆಶಿಶ್?

ಹ್ಯಾಶಿಶ್ ಆಯಿಲ್ ಎಂಬುದು ಗಾಂಜಾ ಸೊಪ್ಪಿನಿಂದ ತಯಾರಿಸಿದ ಮಾದಕ ವಸ್ತು. ಈ ಮಾದಕ ವಸ್ತುವಿನ ಮೂಲ ಆಂಧ್ರಪ್ರದೇಶ ಎಂಬುದು ಪತ್ತೆಯಾಗಿದೆ. ಅಲ್ಲಿಂದ ಅದನ್ನು ಕೇರಳಕ್ಕೆ ತಂದು, ಅಲ್ಲಿಂದ ಮಾರಾಟದ ಉದ್ದೇಶಕ್ಕೆ ಜಿಲ್ಲೆಯ ಗಡಿಭಾಗದ ಮೂಲಕ ತಾವೂರಿಗೆ ತರಲಾಗುತ್ತಿತ್ತು ಎಂಬ ಅಂಶ ತನಿಖೆಯಲ್ಲಿ ಗೊತ್ತಾಗಿದೆ.

ಮಾಹಿತಿ ನೀಡಲು ಮನವಿ

ಯುವಕರು ಮಾದಕವಸ್ತುಗಳ ಜಾಲಕ್ಕೆ ಬೀಳಬಾರದು ಎಂದು ಮನವಿ ಮಾಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, 'ಒಂದು ವೇಳೆ ಮಾದಕ ವಸ್ತುಗಳ ಮಾರಾಟ ಮತ್ತು ಸಾಗಾಟದ ಪ್ರಕರಣಗಳು ಕಂಡು ಬಂದರೆ ಅನುಮಾನಾಸ್ಪದ ವ್ಯಕ್ತಿಗಳು ಪತ್ತೆಯಾದರೆ ಕೂಡಲೇ 1098 ಅಥವಾ 112 ಕ್ಕೆ ಕರೆ ಮಾಡಿ ಮಾಹಿತಿ ನೀಡಬೇಕು' ಎಂದು ಕೋರಿದ್ದಾರೆ.

ಅಪರಾಧ ಸುದ್ದಿಗಳು

ಕ್ರಿಕೆಟ್ ಬೆಟ್ಟಿಂಗ್: ಆರೋಪಿ ಬಂಧನ

ಬೆಂಗಳೂರು: ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಭಾರತ–ಪಾಕಿಸ್ತಾನ ಪಂದ್ಯ ನಡೆದಾಗ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ ವಿನಾಯಕ ಲೇಔಟ್‌ನ ಯೋಗೇಶ್ ಎಂಬಾತನನ್ನು ಬಂಧಿಸಿ, ₹ 1.5 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ. ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಂಡಗಳ ಸೋಲು ಹಾಗೂ ಗೆಲುವಿನ ಬಗ್ಗೆ ಪಂಟರ್‌ಗಳಿಂದ ಹಣವನ್ನು ಪಣವಾಗಿ ಕಟ್ಟಿಸಿಕೊಂಡು, ಜೂಜಾಟ ಆಡಿ ಗೆದ್ದವರಿಗೆ ಹಣ ನೀಡುತ್ತಿದ್ದ. ಸೋತವರಿಂದ ಹಣ ಸಂಗ್ರಹಿಸಿ ಗೆದ್ದವರಿಗೆ ಹಣ ವಿತರಿಸುವಾಗ ಕೇಂದ್ರ ಅಪರಾಧ ವಿಭಾಗದ ವಿಶೇಷ ವಿಚಾರಣಾ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಮದ್ಯ ಸೇವಿಸಿ ನೈಜೀರಿಯಾ ಮಹಿಳೆಯರ ರಂಪಾಟ

ಬೆಂಗಳೂರು: ನೈಜೀರಿಯಾ ದೇಶದ ಮಹಿಳೆಯರು ಮದ್ಯ ಸೇವಿಸಿ ಬ್ರಿಗೇಡ್ ರಸ್ತೆಯಲ್ಲಿ ಭಾನುವಾರ ಮಧ್ಯರಾತ್ರಿ ರಂಪಾಟ ನಡೆಸಿದ್ದು, ಕಬ್ಬನ್ ಪಾರ್ಕ್ ಪೊಲೀಸರ ಮೇಲೆ ಹಲ್ಲೆಗೆ ಯತ್ನಿಸಿದ ಪ್ರಕರಣ ನಡೆದಿದೆ.

ರಾತ್ರಿ 1.30ರ ಸುಮಾರಿಗೆ ನಾಲ್ವರು ಮಹಿಳೆಯರು ರಸ್ತೆಯಲ್ಲಿ ಮದ್ಯ ಸೇವಿಸುತ್ತಿದ್ದರು. ರಾತ್ರಿ ಗಸ್ತಿನಲ್ಲಿದ್ದ ಹೊಯ್ಸಳ ಪೊಲೀಸರು ಅದನ್ನು ಪ್ರಶ್ನಿಸಿ, ಮನೆಗೆ ತೆರಳುವಂತೆ ಸೂಚಿಸಿದರು. ಅದಕ್ಕೆ ಸಿಟ್ಟಾದ ಮಹಿಳೆಯರು, ಮದ್ಯದ ಅಮಲಿನಲ್ಲಿ ಪೊಲೀಸರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಮುಂದಾಗಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೆಲವು ರಸ್ತೆಗಳಲ್ಲಿ ವಿದೇಶಿ ಪ್ರಜೆಗಳು ಈ ರೀತಿ ವರ್ತನೆ ಮಾಡುತ್ತಿರುವುದು ಸಾಮಾನ್ಯವಾಗಿದೆ. ಮದ್ಯ ಸೇವಿಸಿ ಸ್ಥಳೀಯರಿಗೂ ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ವೀಸಾ ಅವಧಿ ಮುಕ್ತಾಯ ಆಗಿದ್ದರೂ ನಗರದಲ್ಲಿಯೇ ವಾಸ್ತವ್ಯ ಮಾಡಿದ್ದಾರೆ. ಅಂತಹವರನ್ನು ಪತ್ತೆಹಚ್ಚಿ ವಾಪಸ್ ಕಳುಹಿಸಬೇಕು' ಎಂದು ಇದೇ ವೇಳೆ ಸ್ಥಳೀಯರು ಪೊಲೀಸರಿಗೆ ಮನವಿ ಮಾಡಿದ್ದಾರೆ.

ಕುದುರೆ ರೇಸ್ ಬೆಟ್ಟಿಂಗ್: ಆರೋಪಿ ಬಂಧನ

ಬೆಂಗಳೂರು: ಕುದುರೆ ರೇಸ್‌ನ ಬೆಟ್ಟಿಂಗ್‌ನಲ್ಲಿ ತೊಡಗಿದ್ದ ಕಾಮಾಕ್ಷಿಪಾಳ್ಯದ ನಿವಾಸಿ ವೆಂಕಟೇಶ್ (50) ಎಂಬಾತನನ್ನು ಕೇಂದ್ರ ಅಪರಾಧ ವಿಭಾಗದ ವಿಶೇಷ ವಿಚಾರಣಾ ದಳದ ಸಿಬ್ಬಂದಿ ಬಂಧಿಸಿದ್ದಾರೆ.

ಬಂಧಿತನಿಂದ ₹ 22 ಸಾವಿರ ನಗದು ವಶಕ್ಕೆ ಪಡೆಯಲಾಗಿದೆ.

'ಆರೋಪಿಯು ಪಶ್ಚಿಮ ಕಾರ್ಡ್ ರಸ್ತೆಯ ಜಂಕ್ಷನ್‌ನ ಸಂತೋಷ್ ಬಾರ್ ಎದುರು ಹೈದರಾಬಾದ್ ಕುದುರೆ ರೇಸ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಹಣ ಸಂಗ್ರಹಿಸಿ, ಕುದುರೆ ರೇಸ್‌ನ ಬೆಟ್ಟಿಂಗ್‌ನಲ್ಲಿ ತೊಡಗಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮಾಗಡಿ ರಸ್ತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡುಯೆಟ್ ಪಬ್

ಮಾಲೀಕರ ವಿರುದ್ಧ ಎಫ್‌ಐಆರ್

ಬೆಂಗಳೂರು: ಹೊರರಾಜ್ಯದ ಮಹಿಳೆಯರನ್ನು ಪಬ್ ಕೆಲಸಕ್ಕೆ ನೇಮಿಸಿಕೊಂಡು ಅಸಭ್ಯ ಉಡುಪು ತೊಡಿಸಿ ನೃತ್ಯ ಮಾಡಿಸುತ್ತಿದ್ದ ಆರ್.ಎಚ್.ಪಿ ರಸ್ತೆಯ ಡುಯೆಟ್ ಪಬ್ ಮಾಲೀಕರು, ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವಿರುದ್ಧ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬಾರ್ ಗರ್ಲ್ ಆಗಿ ಹೊರರಾಜ್ಯದ ಮಹಿಳೆಯರನ್ನು ನೇಮಿಸಿಕೊಂಡು ಗ್ರಾಹಕರನ್ನು ಸೆಳೆಯಲು ನೃತ್ಯ ಮಾಡಿಸುತ್ತಿದ್ದರು. ಈ ಸಂಬಂಧ ಭೀಮಸೇನ ಘಾಟಗೆ ಅವರು ದೂರು ನೀಡಿದ್ದರು. ರಾತ್ರಿ ವೇಳೆ ಪರಿಶೀಲನೆ ನಡೆಸಿದಾಗ ಪ್ರಕರಣ ಬೆಳಕಿಗೆ ಬಂದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇದೇ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಿಸಿಬಿ ಪೊಲೀಸರು ಹುಕ್ಕಾ ಬಾರ್‌ಗಳ ಮೇಲೂ ದಾಳಿ ನಡೆಸಿದ್ದಾರೆ.

'ಹುಕ್ಕಾ ಪರಿಕರ, ಹುಕ್ಕಾ ಫ್ಲೇವರ್ ಹಾಗೂ ನಗದು ವಶಕ್ಕೆ ಪಡೆಯಲಾಗಿದೆ. ಅಪ್ರಾಪ್ತ ವಯಸ್ಸಿನವರು ಈ ಬಾರ್‌ನಲ್ಲಿ ಮಾದಕ ವಸ್ತು ಸೇವನೆ ಮಾಡುತ್ತಿದ್ದರು. ಅವರನ್ನು ವಶಕ್ಕೆ ಪಡೆದು ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಮುನಿಸು ಮರೆತ ಪಾಟೀಲ: ಸಿದ್ದರಾಮಯ್ಯ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಟಿಕೆಟ್ ಕೈತಪ್ಪಿದ ಕಾರಣಕ್ಕೆ ಪಕ್ಷದ ನಾಯಕರ ವಿರುದ್ಧ ಮುನಿಸಿಕೊಂಡಿರುವ ಎಸ್. ಆರ್. ಪಾಟೀಲ ಅವರು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿ ಮಾತುಕತೆ ನಡೆಸಿದರು.

ಕೆಲವು ತಿಂಗಳುಗಳಿಂದ ಸಿದ್ದರಾಮಯ್ಯ ಮತ್ತು ಪಕ್ಷದ ಕಾರ್ಯ ಕ್ರಮಗಳಿಂದ ಎಸ್. ಆರ್. ಪಾಟೀಲ ಅಂತರ ಕಾಪಾಡಿಕೊಂಡಿದ್ದರು. ಪರಿಷತ್ ಟಿಕೆಟ್ ನೀಡಿಲ್ಲ ಎಂಬ ಕಾರಣಕ್ಕೆ ಅವರು ತೀವ್ರ ಬೇಸರಗೊಂಡಿದ್ದರು ಎಂದು ಹೇಳಲಾಗಿತ್ತು.

ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಬಳಿಕ ಮಾತನಾಡಿದ ಪಾಟೀಲ, 'ಎರಡು ಬಾರಿ ನನಗೆ ಟಿಕೆಟ್ ತಪ್ಪಿತ್ತು. ನಾನು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅಥವಾ ಹೈಕಮಾಂಡ್ ಸೇರಿದಂತೆ ಯಾರ ಮೇಲೂ ದೋಷಾರೋಪಣೆ ಮಾಡಿಲ್ಲ. ಪಕ್ಷದಲ್ಲಿ ಯಾರು ಎಲ್ಲಿಯೇ ಸ್ಪರ್ಧಿಸಲಿ, ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ಕೊಡುವುದು ನನ್ನ ಜವಾಬ್ದಾರಿ. ಸಿದ್ದರಾಮಯ್ಯ ಸಹೋದರನ ನಿಧನಕ್ಕೆ ಸಾಂತ್ವನ ಹೇಳಲು ಬಂದಿದ್ದೆ ಅಷ್ಟೆ' ಎಂದರು.

ತನಿಖೆಯ ನಂತರ ಗೊತ್ತಾಗಲಿದೆ: 'ಮುರುಘಾ ಶರಣರ ಪ್ರಕರಣ ಕೇಳಿ ನನಗೆ ಬಹಳ ನೋವಾಗಿದೆ. ಬಸವ ತತ್ವಗಳನ್ನು ಅಕ್ಷರಶಃ ಜಾರಿಗೆ ತಂದವರು ಅವರು. ಷಡ್ಯಂತ್ರ ಇದ್ದರೂ ಇರಬಹುದು, ನನಗೆ ಗೊತ್ತಿಲ್ಲ. ಸತ್ಯ ಹೊರಬರಬೇಕು ಎಂಬುದು ನನ್ನ ಅಪೇಕ್ಷೆ' ಎಂದರು.

'ಮುಖ್ಯಮಂತ್ರಿ ಸ್ಥಾನಕ್ಕೆ ಎಸ್.ಆರ್. ಪಾಟೀಲ ಸೂಕ್ತ' ಎಂಬ ವೀರಪ್ಪ ಮೊಯಿಲಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಮೊಯಿಲಿ ಜೊತೆ ಸಾಕಷ್ಟು ವರ್ಷಗಳಿಂದ ಒಡನಾಟ ಇದೆ. ನಾನು ಎಲ್ಲ ರೀತಿಯಲ್ಲೂ ಅರ್ಹನಾಗಿದ್ದೇನೆ. ರಾಜಕಾರಣದಲ್ಲಿ ಯಾರೂ ಸನ್ಯಾಸಿಗಳಲ್ಲ. ಎಲ್ಲರಿಗೂ ಅವರದ್ದೇ ಅಪೇಕ್ಷೆಗಳು ಇರುತ್ತವೆ' ಎಂದರು.

ಎಚ್. ಆಂಜನೇಯ ಭೇಟಿ: ಮುರುಘಾ ಶ್ರೀಗಳ ವಿರುದ್ಧದ ಲೈಂಗಿಕ ಕಿರುಕುಳ ಪ್ರಕರಣ ವಿಚಾರವಾಗಿ ಶ್ರೀಗಳ ವಿರುದ್ಧ ದಲಿತಪರ ಸಂಘಟನೆಗಳು ಚಿತ್ರದುರ್ಗದಲ್ಲಿ ಪ್ರತಿಭಟನೆ ನಡೆಸಿವೆ. ಈ ಹಿನ್ನೆಲೆಯಲ್ಲೆ, ಮಾಜಿ ಸಚಿವ ಎಚ್. ಆಂಜನೇಯ ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ವಿವರಣೆ ನೀಡಿದರು.

₹1.6 ಕೋಟಿ ಮೌಲ್ಯದ ಗಾಂಜಾ ವಶ

ಕಕ್ಕೇರಾ (ಯಾದಗಿರಿ ಜಿಲ್ಲೆ): ಪಟ್ಟಣದ ಗೊಲಪಲ್ಲೇರದೊಡ್ಡಿಯ ಮನೆಯ ಮೇಲೆ ಮಂಗಳವಾರ ದಾಳಿ ನಡೆಸಿದ ಪೊಲೀಸರು ₹ 1.6 ಕೋಟಿ ಮೌಲ್ಯದ 122 ಕೆಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ. ಆರೋಪಿಯನ್ನು ಬಂಧಿಸಿದ್ದಾರೆ.

ಗೊಲಪಲ್ಲೇರದೊಡ್ಡಿಯ ನಿವಾಸಿ ಹನಮಂತ ದೇವೀಂದ್ರಪ್ಪ ಗೋನಾಟ್ಲ ಬಂಧಿತ ಆರೋಪಿ. 76 ಕೆಜಿ ಒಣ ಗಾಂಜಾ ಮತ್ತು ಜಮೀನಿನಲ್ಲಿ ಬೆಳೆದ 46 ಕೆಜಿ ಹಸಿ ಗಾಂಜಾ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹುಣಸಗಿ ತಾಲ್ಲೂಕಿನ ಕೋಡೆಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹ 40 ಲಕ್ಷದ ಚಿನ್ನಾಭರಣ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಬಾಗಿಲು ಒಡೆದು ಚಿನ್ನಾಭರಣ ಹಾಗೂ ಬೆಳ್ಳಿಯ ಸಾಮಗ್ರಿ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಮಹಾಲಕ್ಷ್ಮಿಪುರಂ ಪೊಲೀಸರು ಬಂಧಿಸಿದ್ದಾರೆ.

ಜೆ.ಪಿ ನಗರದ ಮಹಾವೀರ ಕ್ಲಾಸಿಕ್ ಅಪಾರ್ಟ್‌ಮೆಂಟ್‌ನ ನಿವಾಸಿ ಶಂಕರ (44) ಹಾಗೂ ದೊರೆಸ್ವಾಮಿ ಪಾಳ್ಯದ ರವಿ (36) ಬಂಧಿತರು.

ಬಂಧಿತರಿಂದ ₹ 40 ಲಕ್ಷ ಮೌಲ್ಯದ 800 ಗ್ರಾಂ ಚಿನ್ನಾಭರಣ ಹಾಗೂ 3 ಕೆ.ಜಿ ಬೆಳ್ಳಿ ಸಾಮಗ್ರಿ ವಶಕ್ಕೆ ಪಡೆಯಲಾಗಿದೆ.



ಶಂಕರ್



ರವಿ

'ಇವರ ವಿರುದ್ಧ ಈ ಹಿಂದೆ ಎಚ್‌ಎಎಲ್ ಲೇಔಟ್, ಕೋರಮಂಗಲ, ಕೆ.ಆರ್.ಪುರಂ ಪೊಲೀಸ್ ಠಾಣೆಯಲ್ಲೂ ಪ್ರಕರಣ ದಾಖಲಾಗಿ ಬಂಧಿಸಲಾಗಿತ್ತು. ಸ್ವಲ್ಪ ದಿನಗಳು ಸುಮ್ಮನಿದ್ದ ಆರೋಪಿಗಳು ಮತ್ತೆ ಕಳ್ಳತನಕ್ಕೆ ಮುಂದಾಗಿದ್ದರು. ವರಮಹಾಲಕ್ಷ್ಮಿ ಹಬ್ಬದಂದು ಮಹಾಲಕ್ಷ್ಮಿಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಿನ್ನಾಭರಣ ಕಳವು ಮಾಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹೃದಯ ವೈಫಲ್ಯ: 'ಇಂಪೆಲ್ಲಾ ಹಾರ್ಟ್‌ಪಂಪ್' ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀರ್ಘಕಾಲದ ಹೃದಯ ವೈಫಲ್ಯ ಸಮಸ್ಯೆಯಿಂದ ಬಳಲುತ್ತಿದ್ದ ಮೂವರು ವೃದ್ಧರಿಗೆ ಫೋರ್ಟಿಸ್ ಆಸ್ಪತ್ರೆ ವೈದ್ಯರು 'ಇಂಪೆಲ್ಲಾ ಹಾರ್ಟ್ ಪಂಪ್' ಸಾಧನದ ಸಹಾಯದಿಂದ ಆಂಜಿಯೋಪ್ಲಾಸ್ಟಿ ನಡೆಸಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹೃದಯ ತಜ್ಞ ಡಾ. ವಿವೇಕ್ ಜವಳಿ, 'ಹೃದಯಾಘಾತಕ್ಕೆ ಒಳಗಾದವರು ಹಾಗೂ ಹೃದಯದ ನಾಳ ಬ್ಲಾಕ್ ಆದವರನ್ನು ಕೂಡಲೇ ಬದುಕಿಸಲು 'ಇಂಪೆಲ್ಲಾ ಹಾರ್ಟ್‌ಪಂಪ್' ಸಾಧನ ಸಹಾಯಕ. ಈ ಹಾರ್ಟ್‌ಪಂಪ್ ಅನ್ನು ನೇರವಾಗಿ ಹೃದಯನಾಳದೊಳಗೆ ಸೇರಿಸಿ, ಪಂಪ್ ಮಾಡುವುದರಿಂದ ಹೃದಯದ ನಾಳಗಳು ಬ್ಲಾಕ್ ಆಗಿದ್ದರೂ 5 ಲೀಟರ್ ರಕ್ತವನ್ನು ಪಂಪ್ ಮಾಡುವ ಸಾಮರ್ಥ್ಯ ಹೊಂದಿರುತ್ತದೆ. ಇದರಿಂದ ಹೃದಯದ ನಾಲ್ಕು ರಕ್ತನಾಳಗಳು ಸರಾಗವಾಗಿ ರಕ್ತಸಂಚಾರಕ್ಕೆ ಅವಕಾಶ ಮಾಡಿಕೊಡುತ್ತವೆ. ಈ ಸಾಧನವನ್ನು 81 ಮತ್ತು 85 ವರ್ಷದ ವೃದ್ಧರು ಹಾಗೂ 71 ವರ್ಷದ ವೃದ್ಧೆಗೆ ಅಳವಡಿಸಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ' ಎಂದರು.

'ಮೂರು ವೃದ್ಧರು ಅನ್ಯ ಕಾಯಿಲೆಗಳಿಂದಲೂ ಬಳಲುತ್ತಿದ್ದರು. ಕೆಲವು ವರ್ಷಗಳ ಹಿಂದೆಯೇ ಹೃದಯ ಸಮಸ್ಯೆಗೆ ಒಳಗಾಗಿ, ಆಂಜಿಯೋಪ್ಲ್ಯಾಸ್ಟಿ ಮಾಡಿಸಿಕೊಂಡಿದ್ದರು. ಇದಾದ ಬಳಿಕವೂ ಅವರಿಗೆ ಹೃದಯಾಘಾತ ಸಂಭವಿಸಿತ್ತು. ಅವರನ್ನು ಉಳಿಸಲು ಮತ್ತೊಮ್ಮೆ ಆಂಜಿಯೋಪ್ಲಾಸ್ಟಿ ಮಾಡುವುದು ಅಸಾಧ್ಯದ ಕೆಲಸ. ಆದ್ದರಿಂದ 'ಇಂಪೆಲ್ಲಾ ಹಾರ್ಟ್‌ಪಂಪ್' ಸಾಧನವನ್ನು ಬಳಸಲಾಯಿತು' ಎಂದು ವಿವರಿಸಿದರು. ಆಸ್ಪತ್ರೆಯ ಹೃದ್ರೋಗ ತಜ್ಞ ಡಾ.ಆರ್. ಕೇಶವ್, 'ವ್ಯಕ್ತಿ ಬದುಕುಳಿಯುವ ಸಾಧ್ಯತೆಯಿಲ್ಲ ಎಂಬ ಸಂದರ್ಭದಲ್ಲಿ ಇಂಪೆಲ್ಲಾ ಹೃದಯ ಪಂಪ್ ಬಳಸಲಾಗುತ್ತದೆ. ಈ ಸಾಧನ ಬಳಕೆಯಿಂದ ವ್ಯಕ್ತಿಯ ಪ್ರಾಣ ಉಳಿಸಲು ಸಾಧ್ಯ. ಈ ಪಂಪ್ ಮೂಲಕ ಹೃದಯದ ರಕ್ತ ಸಂಚಾರವನ್ನು ಸರಾಗಗೊಳಿಸಬಹುದು. ಈ ಸಾಧನವನ್ನು ದೇಹದೊಳಗೆ ಹಾಕಲು ಕೇವಲ 15 ನಿಮಿಷ ಸಾಕು' ಎಂದು ವಿವರಿಸಿದರು.

ಮಳವಳ್ಳಿ: ಕಂದಕದಲ್ಲಿ ಮಾರಕಾಸ್ತ್ರ ಸಂಗ್ರಹ?

ಪ್ರಜಾವಾಣಿ ವಾರ್ತೆ

ಮಳವಳ್ಳಿ: ಪಟ್ಟಣದ ಕೋಟೆ ಬೀದಿಯ ಮನೆಯೊಂದರಲ್ಲಿ ಬಾಡಿಗೆಗೆ ವಾಸವಿದ್ದ ಮುಸ್ಲಿಂ ಕುಟುಂಬವೊಂದು ಮನೆ ಹಿಂದಿನ ಪಾಳುಕಟ್ಟಡದಲ್ಲಿ ಕಂದಕ ತೋಡಿ ಮಾರಕಾಸ್ತ್ರ ಸಂಗ್ರಹಿಸಿದ್ದಾರೆ ಎಂಬ ವದಂತಿ ಮಂಗಳವಾರ ಸ್ಥಳೀಯರನ್ನು ಆತಂಕಕ್ಕೆ ದೂಡಿತ್ತು.

ಮಾಲೀಕ ಪವಿತ್ರರಾಜು ಮನೆಯಲ್ಲಿದ್ದ ತಸ್ಲೀಂ ಹಾಗೂ ಅವರ ಐವರು ಮಕ್ಕಳು, ಹಿಂಭಾಗದ ಪಾಳು ಕಟ್ಟಡದಲ್ಲೂ ಇರುತ್ತಿದ್ದರು. 'ಮನೆ ನೋಡಲು ಬಂದಾಗ ಮದ್ಯದ ಬಾಟಲಿ, ಮಾದಕ ವಸ್ತುಗಳ ಪಾಕೆಟ್‌ಗಳು ಸಿಕ್ಕಿದವು. ಅಲ್ಲೇ ಇದ್ದ ಕಂದಕದಲ್ಲಿ ಮಚ್ಚು, ಲಾಂಗು ಪತ್ತೆಯಾದವು' ಎಂದು ಮಾಲೀಕ ದೂರಿದ್ದಾರೆ.

ಅದಾದ ಕೆಲವೇ ಹೊತ್ತಿನಲ್ಲಿ, 'ಗುಹೆಯೊಳಗೆ ಶಸ್ತ್ರಾಸ್ತ್ರ ಸಂಗ್ರಹಿಸಿದ್ದಾರೆ. ಮಾದಕ ವಸ್ತು ಸೇವಿಸಿದ್ದಾರೆ' ಎಂಬ ಕುರಿತ ವಿಡಿಯೊ, ಸುದ್ದಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದವು. ನಂತರ ಡಿವೈಎಸ್ಪಿ ನವೀನ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

'ಮಾಲೀಕರ ದೂರಿನಲ್ಲಿ ಗೊಂದಲವಿದೆ. ಮಾರಕಾಸ್ತ್ರ ಸಂಗ್ರಹ ಕುರಿತ ಮಾಹಿತಿ ಇಲ್ಲ. ಮನೆ ಖಾಲಿ ಮಾಡಿಸಿ ಎಂದಷ್ಟೇ ದೂರು ನೀಡಿದ್ದಾರೆ. ಸ್ಥಳದಲ್ಲಿ ಮಾರಕಾಸ್ತ್ರಗಳು ಪತ್ತೆಯಾಗಿಲ್ಲ. ಆರೇಳು ಅಡಿಯ ಹಳ್ಳವೊಂದು ಕಂಡುಬಂದಿದೆ. ತಸ್ಲೀಂ ಮಾನಸಿಕ ಅಸ್ವಸ್ಥೆಯಾಗಿದ್ದು, ಅವರ ಮಕ್ಕಳನ್ನು ಕರೆದು ವಿಚಾರಣೆ ನಡೆಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ತಿಳಿಸಿದರು.

ಪೂರ್ಣಗೊಂಡಿದೆ 108 ಅಡಿ ಕೆಂಪೇಗೌಡರ ಪ್ರತಿಮೆ; 45 ದಿನದ ಅಭಿಯಾನಕ್ಕೆ ಚಾಲನೆ ನಾಳೆ

ನಾಡಿನಾದ್ಯಂತ ನಾಡಪ್ರಭು ಅಭಿಯಾನ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ದೇವನಹಳ್ಳಿ ಬಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ 108 ಅಡಿ ಎತ್ತರದ ಕೆಂಪೇಗೌಡರ ಕಂಚಿನ ಪ್ರತಿಮೆ ಅನಾವರಣಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಪೂರ್ವಭಾವಿಯಾಗಿ 'ಉದ್ಘಾಟನಾ ಅಭಿಯಾನ' ನಡೆಸಲು ಮುಂದಾಗಿದೆ.

ಸೆ.1ರಂದು ವಿಮಾನ ನಿಲ್ದಾಣದ ಬಳಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 45 ದಿನಗಳ ಅಭಿಯಾನಕ್ಕೆ ಹಸಿರು ನಿಶಾನೆ ತೋರುವರು. ಇದೇ ದಿನ ಪುತ್ಥಳಿ ಸುತ್ತ ನಿರ್ಮಿಸಲು ಯೋಜಿಸಿರುವ ಥೀಮ್ ಪಾರ್ಕ್‌ಗೂ ಭೂಮಿಪೂಜೆ ನೆರವೇರಿಸುವರು.

ಅಭಿಯಾನದ ವಿಶೇಷ: ರಾಜ್ಯದ 31 ಜಿಲ್ಲೆಗಳಲ್ಲಿ 45 ದಿನಗಳ ಕಾಲ ಅಭಿಯಾನ ನಡೆಯಲಿದೆ. ಬೆಂಗಳೂರಿನ ನಿರ್ಮಾತೃ, ನಾಡಪ್ರಭು ಕೆಂಪೇಗೌಡರ ನೆನಪನ್ನು ಅಜರಾಮರಗೊಳಿಸಲು ಮತ್ತು ಇದಕ್ಕಾಗಿ ಇಡೀ ನಾಡಿನ ಜನರನ್ನು ಏಕಭಾವದಲ್ಲಿ ಒಗ್ಗೂಡಿಸಲು ಸರ್ಕಾರ ನಿರ್ಧರಿಸಿದೆ.

ಬೆಂಗಳೂರು ಜಾಗತಿಕ ಮಟ್ಟದಲ್ಲಿ ಹೆಸರುಗಳಿಸಲು ಕೆಂಪೇಗೌಡರೇ ಮೂಲ ಕಾರಣ. ಹೀಗಾಗಿ, ಅವರ ಪ್ರತಿಮೆ ಉದ್ಘಾಟನೆಯಲ್ಲಿ ಇಡೀ ರಾಜ್ಯದ ಜನರು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪಾಲ್ಗೊಳ್ಳಬೇಕು ಎನ್ನುವುದು ಸರ್ಕಾರದ ಆಶಯ. ಈ ಕನಸಿನೊಂದಿಗೆ ಅಭಿಯಾನವು ರೂಪು ಪಡೆದಿದೆ. ಎಲ್ಲ ಜಿಲ್ಲೆಗಳ ಪ್ರತಿ ಹಳ್ಳಿಯ ಪವಿತ್ರ ಮೃತ್ತಿಕೆ (ಮಣ್ಣು)ಯನ್ನು ಆಯಾ ಊರುಗಳಲ್ಲಿರುವ ಕೆರೆ, ಕಟ್ಟೆ, ಕಲ್ಯಾಣಿ, ನದಿ, ಪುಷ್ಕರಿಣಿ, ಕೊಳ, ಚಿಲುಮೆ ಮತ್ತು ಝರಿಗಳಿಂದ ಸಂಗ್ರಹಿಸಲು ಯೋಜನೆ ರೂಪಿಸಲಾಗಿದೆ.

ನಾಡಿನ ಅನುಕರಣೀಯ ಸಾಧಕರ ಮನೆಗಳಿಂದಲೂ ಪವಿತ್ರ ಮಣ್ಣನ್ನು ಈ ಅಭಿಯಾನದಲ್ಲಿ ಸಂಗ್ರಹಿಸಲಾಗುತ್ತದೆ. ಅಭಿಯಾನ ನಡೆಯಲಿರುವ ಒಂದೂವರೆ ತಿಂಗಳುದ್ದಕ್ಕೂ ರಾಜ್ಯದ 10 ಸಾವಿರ ದೇಗುಲಗಳಲ್ಲಿ ನಂದಾದೀಪಗಳು ಪ್ರಜ್ವಲಿಸಲಿವೆ. ರಾಜ್ಯದ ಎಲ್ಲ ಹಳ್ಳಿಗಳಲ್ಲಿ ನಡೆಯಲಿರುವ 'ಪವಿತ್ರ ಮೃತ್ತಿಕಾ ಸಂಗ್ರಹಣಾ ಅಭಿಯಾನ' ದಾಖಲೆಯಾಗಲಿದೆ.

ಅಭಿಯಾನಕ್ಕಾಗಿ ಬೃಹತ್ ಎಲ್‌ಇಡಿ ಪರದೆ ಅಳವಡಿಸಿರುವ ತಲಾ ಒಂದು ವಾಹನವನ್ನು ಪ್ರತಿ ಜಿಲ್ಲೆಗೂ ನಿಯೋಜಿಸಲಾಗುವುದು. ಇದರಲ್ಲಿ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಮತ್ತು ಈ ಪರಿಕಲ್ಪನೆಯ ರೂವಾರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ನಾಡಿನ ಪ್ರಮುಖ ಸ್ವಾಮೀಜಿಗಳ ಸಂದೇಶಗಳು ಬಿತ್ತರವಾಗಲಿವೆ.

ಕೆಂಪೇಗೌಡರಿಗೆ ಸಂಬಂಧಿಸಿದ ಸಾಕ್ಷ್ಯಚಿತ್ರವೂ ಪ್ರಸಾರವಾಗಲಿದೆ. ಆಯಾ ಜಿಲ್ಲೆಗಳ ಮಠಗಳು, ದೇವಸ್ಥಾನಗಳು, ಸ್ವಾತಂತ್ರ ಹೋರಾಟಗಾರರು, ತಾರಾ ವರ್ಚಸ್ಸಿನ ಸಾಧಕರನ್ನು ಒಳಗೊಳ್ಳಲು ರಾಜ್ಯ ಬಿಜೆಪಿ ಸರ್ಕಾರ ತೀರ್ಮಾನಿಸಿದೆ.

ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಿ ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸುವ ಉದ್ದೇಶ ಸರ್ಕಾರಕ್ಕಿದೆ.



ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಿರ್ಮಿಸಿರುವ ಕೆಂಪೇಗೌಡರ ಕಂಚಿನ ಪುತ್ಥಳಿ. ಹಾಗೂ ಥೀಮ್ ಪಾರ್ಕ್‌ನ ನೀಲನಕ್ಷೆ

ಥೀಮ್ ಪಾರ್ಕ್ ಅಭಿವೃದ್ಧಿಗೆ ಅನುಮೋದನೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎ) ₹20 ಕೋಟಿ ಮೊತ್ತದಲ್ಲಿ ನಾಡಪ್ರಭು ಕೆಂಪೇಗೌಡ ಥೀಮ್ ಪಾರ್ಕ್ ಅಭಿವೃದ್ಧಿಗೆ ಸರ್ಕಾರ ಅನುಮೋದನೆ ನೀಡಿದೆ.

ಈ ಥೀಮ್ ಪಾರ್ಕ್‌ನ ಕಾಮಗಾರಿ ಕೈಗೊಳ್ಳಲು ಕೆಎನ್‌ಕೆ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್‌ಗೆ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ(ಕೆಟಿಪಿಪಿ) ಸೆಕ್ಷನ್4 (ಜಿ) ಅಡಿಯಲ್ಲಿ ವಿನಾಯಿತಿಯನ್ನು ನಗರಾಭಿವೃದ್ಧಿ ಇಲಾಖೆ ನೀಡಿದೆ.

23 ಎಕರೆ ಪ್ರದೇಶದಲ್ಲಿ ಥೀಮ್ ಪಾರ್ಕ್ ಅಭಿವೃದ್ಧಿಪಡಿಸಲಾಗುತ್ತಿದೆ.

ಕೆಂಪೇಗೌಡರು ಪ್ರಗತಿಯ ಸಂಕೇತ

ನಾಡಪ್ರಭು ಕೆಂಪೇಗೌಡರು ಪ್ರಗತಿ ಮತ್ತು ಅಭ್ಯುದಯದ ನಾಗಾಲೋಟಕ್ಕೆ ಸಂಕೇತ. ಅವರು ಬೆಂಗಳೂರಿನ ಸ್ಥಾಪನೆಗೆ ಶ್ರೀಕಾರ ಹಾಕಿದರು. ಇದರ ಫಲವಾಗಿ ಬೆಂಗಳೂರು ಇಂದು ವಿಶ್ವ ಮಟ್ಟದಲ್ಲಿ ರಾರಾಜಿಸುತ್ತಿದೆ. ಹೀಗಾಗಿಯೇ, ಈ ಪ್ರತಿಮೆಗೆ 'ಪ್ರಗತಿ ಪ್ರತಿಮೆ' (Statue of Prosperity) ಎಂದು ಹೆಸರಿಡಲಾಗುತ್ತಿದೆ.

ಡಾ.ಸಿ.ಎನ್. ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಸಚಿವರು ಹಾಗೂ ಉಪಾಧ್ಯಕ್ಷರು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ.

ಕೆಂಪೇಗೌಡರದ್ದು ಪ್ರಗತಿ ಪ್ರತಿಮೆ?

ಅಮೆರಿಕದ ಸ್ವಾತಂತ್ರ ಪ್ರತಿಮೆ, ಗುಜರಾತಿನ ಏಕತಾ ಪ್ರತಿಮೆಗಳ ಸಾಲಿಗೆ 108 ಅಡಿಯ ಕೆಂಪೇಗೌಡರ ಪ್ರತಿಮೆ ಕೂಡ ಸೇರಲಿದೆ. ಅದಕ್ಕೆ 'ಪ್ರಗತಿ ಪ್ರತಿಮೆ' (statue of prosperity) ಎಂದು ನಾಮಕರಣ ಮಾಡುವ ಬಗ್ಗೆ ಸರ್ಕಾರ ಚಿಂತಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಶೀಘ್ರದಲ್ಲಿಯೇ ಅಧಿಕೃತವಾಗಿ ಘೋಷಣೆ ಹೊರಬೀಳಲಿದೆ.

ಕಪ್ಪತಗುಡ್ಡ ಅಭಯಾರಣ್ಯ ಪ್ರದೇಶ: ಗಣಿಗಾರಿಕೆಗೆ ಅರಣ್ಯ ಇಲಾಖೆಯಿಂದ ಶಾಶ್ವತ ತಡೆ

ಚಿನ್ನದ ಗಣಿಗಾರಿಕೆ ಪ್ರಸ್ತಾವ ತಿರಸ್ಕರಿಸಲು ಶಿಫಾರಸು

● ಯತೀಶ್ ಕುಮಾರ್ ಜಿ.ಡಿ

ಬೆಂಗಳೂರು: ಕಪ್ಪತಗುಡ್ಡ ಅಭಯಾರಣ್ಯದಲ್ಲಿ ಚಿನ್ನದ ಗಣಿಗಾರಿಕೆ ನಡೆಸಲು ಅರಣ್ಯ ಭೂಮಿ ಪರಿವರ್ತನೆಗೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ತಿರಸ್ಕರಿಸುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ಮೇಲಾಧಿಕಾರಿಗೆ ಶಿಫಾರಸು ಮಾಡಿದ್ದಾರೆ.

ಈ ಕುರಿತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿ (ಅರಣ್ಯ ಸಂರಕ್ಷಣಾ ಕಾಯ್ದೆ) ಅವರು ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಬರೆದಿರುವ ಪತ್ರದ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಇದರಿಂದಾಗಿ ಕಪ್ಪತಗುಡ್ಡ ಅಭಯಾರಣ್ಯದಲ್ಲಿ ಗಣಿಗಾರಿಕೆಗೆ ಶಾಶ್ವತ ತಡೆ ಬಿದ್ದಂತಾಗಿದೆ.

ಬಳ್ಳಾರಿ ಜಿಲ್ಲೆಯ ರಾಮಗಢ ಮೈನ್ಸ್ ಮತ್ತು ಮಿನೆರಲ್ಸ್ ಕಂಪನಿಯವರು ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಜೆಲ್ಲಿಗೇರಿ ಗ್ರಾಮದ ಸರ್ವೆ ಸಂಖ್ಯೆ 45, 49 ಹಾಗೂ 50ರಲ್ಲಿ ಚಿನ್ನದ ಗಣಿಗಾರಿಕೆ ನಡೆಸಲು ಅಂದಾಜು 39 ಹೆಕ್ಟೇರ್ ಅರಣ್ಯ ಭೂಮಿ



ಕಪ್ಪತಗುಡ್ಡ

ಪರಿವರ್ತನೆಗೆ ಪ್ರಸ್ತಾವನೆ ಸಲ್ಲಿಸಿದ್ದರು. ಗಣಿಗಾರಿಕೆ ನಡೆಸಲು ಕೋರಿದ ಪ್ರದೇಶವು ಕಪ್ಪತಗುಡ್ಡ ಅಭಯಾರಣ್ಯದ ವ್ಯಾಪ್ತಿಯ ಒಳಗೆ ಬರುವ ಕಾರಣದಿಂದ ಗಣಿಗಾರಿಕೆಯಿಂದ ಪರಿಸರದ ಮೇಲೆ ಆಗಬಹುದಾದ ಕೆಟ್ಟ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಗಣಿಗಾರಿಕೆ ಪ್ರಸ್ತಾವನೆಯನ್ನು ತಿರಸ್ಕರಿಸುವಂತೆ ಗದಗ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಧಾರವಾಡ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿ (ಅರಣ್ಯ ಸಂರಕ್ಷಣಾ ಕಾಯ್ದೆ) ಅವರಿಗೆ ಶಿಫಾರಸು ಮಾಡಿದ್ದರು. ಈ ಶಿಫಾರಸನ್ನು ಅನುಮೋದಿಸಿದ ನೋಡಲ್ ಅಧಿಕಾರಿ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಅವರು, ಪ್ರಸ್ತಾವನೆಯನ್ನು ತಿರಸ್ಕರಿಸುವಂತೆ 2021ರ ಮೇ ತಿಂಗಳಲ್ಲೇ ಸರ್ಕಾರಕ್ಕೆ ಶಿಫಾರಸು ಮಾಡಿದ್ದರು.

ಆದರೆ ಅರಣ್ಯ ಇಲಾಖೆಯ ಶಿಫಾರಸನ್ನು ಪ್ರಶ್ನಿಸಿ ರಾಮಗಢ ಮೈನ್ಸ್ ಕಂಪನಿಯವರು, ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ 2021ರ ಜುಲೈ 15ರಂದು ಮನವಿ ಸಲ್ಲಿಸಿ ಅರಣ್ಯ ಇಲಾಖೆಯ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಕೋರಿದ್ದರು. ಗಣಿಗಾರಿಕೆಗೆ ಕೋರಿರುವ ಅರಣ್ಯ ಪ್ರದೇಶವು ಕಪ್ಪತಗುಡ್ಡ ಅಭಯಾರಣ್ಯದ ಒಟ್ಟು ಪ್ರದೇಶದ ಶೇ 0.5 ಭಾಗವು ಇರುವುದಿಲ್ಲ. ಗಣಿಗಾರಿಕೆಗಾಗಿ ಮಾಡುವ ಆಳದ ಗುಂಡಿಗಳಿಂದ ಅಂತರ್ಜಲ ವೃದ್ಧಿಯಾಗುತ್ತದೆ ಎನ್ನುವ ಕಾರಣವನ್ನು ಕಂಪನಿ ನೀಡಿತ್ತು.

ಇದರ ಜೊತೆಯಲ್ಲಿ ಅರಣ್ಯ ಅಧಿಕಾರಿಗಳು ಕಪ್ಪತಗುಡ್ಡದಲ್ಲಿ ಇರುವುದಾಗಿ ಉಲ್ಲೇಖಿಸಿರುವ ವನ್ಯಜೀವಿಗಳು ಸಾಮಾನ್ಯ ಜಾತಿಗೆ ಸೇರಿದವಾಗಿದ್ದು, ಇವು ರಾಜ್ಯದಲ್ಲಿ ವಿಪುಲವಾಗಿವೆ. ಗಣಿಗಾರಿಕೆಗೆ ಕೋರಿರುವ ಪ್ರದೇಶದಲ್ಲಿ ಈ ಹಿಂದೆ ಬ್ರಿಟಿಷರು ಸಹ ಗಣಿಗಾರಿಕೆ ಮಾಡಿದ್ದಾರೆ ಎನ್ನುವ ಮನವಿಯನ್ನು ಕಂಪನಿ ಮಾಡಿತ್ತು.

ಮುಖ್ಯಾಂಶಗಳು

- ಗಣಿಗಾರಿಕೆಗೆ ಪ್ರಸ್ತಾವನೆ ಸಲ್ಲಿಸಿದ್ದ ರಾಮಗಢ ಮೈನ್ಸ್ ಮತ್ತು ಮಿನರಲ್ಸ್ ಕಂಪನಿ
- ಶಿರಹಟ್ಟಿ ತಾಲ್ಲೂಕಿನ ಜೆಲ್ಲಿಗೇರಿ ಗ್ರಾಮದಲ್ಲಿ ಗಣಿಗಾರಿಕೆ ಪ್ರಸ್ತಾವ
- ಗದಗ ವಿಭಾಗದ ಡಿಸಿಎಫ್ ನೀಡಿದ ವಾಸ್ತವ ಸ್ಥಿತಿಗತಿ ವರದಿ ಮಾನ್ಯತೆ

> ಅರಣ್ಯ ಇಲಾಖೆಯ ಶಿಫಾರಸು ಸುಪ್ರೀಂ ಕೋರ್ಟ್ ತೀರ್ಪಿಗೆ ಹಾಗೂ ವನ್ಯಜೀವಿ ಸಂರಕ್ಷಣೆಗೆ ಪೂರಕವಾಗಿದೆ. ಇದು ಗಣಿಗಾರಿಕೆ ವಿರುದ್ಧ ಹೋರಾಡುತ್ತಿದ್ದ ತೋಂಟದ ದಾರ್ಯ ಶ್ರೀಗಳಿಗೆ ಸಂದ ಜಯ.
> **ಗಿರಿಧರ ಕುಲಕರ್ಣಿ,** ವನ್ಯಜೀವಿ ಸಂರಕ್ಷಕವಾದಿ

ರಾಮಗಢ ಮೈನ್ಸ್ ಮಾಡಿರುವ ಮನವಿಯನ್ನು ಪುನರ್ ಪರಿಶೀಲಿಸಿ ಎಂದು ಅರಣ್ಯ ಇಲಾಖೆಗೆ ಸೂಚನೆ ಲಭಿಸಿತ್ತು. ಸಂಸ್ಥೆಯ ಮನವಿಯನ್ನು ಪುನರ್ ಪರಿಶೀಲಿಸಿದ್ದ ಗದಗ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರತಿಯೊಂದು ಆಕ್ಷೇಪಣೆಗೂ ವಿವರವಾದ ಉತ್ತರವನ್ನು ನೀಡಿದ್ದಾರೆ.

'ಗಣಿಗಾರಿಕೆಗೆ ಕೇಳಿರುವ ಪ್ರದೇಶವು ಅಭಯಾರಣ್ಯದ ಹೃದಯ ಭಾಗದಲ್ಲಿದ್ದು, ಅನುಮತಿ ನೀಡಿದರೆ ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆಗೆ ಸರಿಪಡಿಸಲಾಗದಂತಹ ಹಾನಿಯಾಗಲಿದೆ. ಅಲ್ಲದೆ 2022ರ ಜೂನ್‌ನಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಪ್ರಕಾರ ರಾಷ್ಟ್ರೀಯ ಉದ್ಯಾನ ಮತ್ತು ಅಭಯಾರಣ್ಯದ ವ್ಯಾಪ್ತಿಯಲ್ಲಿ ಗಣಿಗಾರಿಕೆಗೆ ಅವಕಾಶ ನೀಡುವಂತಿಲ್ಲ. ಅಂತರ್ಜಲ ವೃದ್ಧಿಸಲು ಗಣಿಗಾರಿಕೆಯ ಅವಶ್ಯಕತೆಯಿಲ್ಲ. ಬದಲಿಗೆ ಅರಣ್ಯ ಇಲಾಖೆಯು ಸೂಕ್ತ ಕ್ರಮ ಕೈಗೊಳ್ಳುತ್ತಿದೆ. ಅಲ್ಲದೆ ಅಭಯಾರಣ್ಯದಲ್ಲಿ ತೋಳ, ಕೃಷ್ಣಮೃಗ, ಕತ್ತೆಕಿರುಬ, ಕೊಂಡುಕುರಿಯಂತಹ ವನ್ಯಜೀವಿಗಳಿವೆ ಎನ್ನುವುದು ಕ್ಯಾಮರಾ ಟ್ರ್ಯಾಪ್ ಮೂಲಕ ದೃಢವಾಗಿದೆ' ಎಂದು ಗದಗ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹೇಳಿದ್ದಾರೆ.

ಈ ಶಿಫಾರಸನ್ನು ಧಾರವಾಡ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಅವರು ಸಹ ಅನುಮೋದಿಸಿ ಯಾವುದೇ ಕಾರಣಕ್ಕೂ ಗಣಿಗಾರಿಕೆಗೆ ಅವಕಾಶ ನೀಡಬಾರದೆಂದು ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ತಿಳಿಸಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಗೆ ಶಿಫಾರಸು ಮಾಡಿದ್ದಾರೆ. ಇದರಿಂದಾಗಿ ಅಭಯಾರಣ್ಯದ ವ್ಯಾಪ್ತಿಯಲ್ಲಿ ಚಿನ್ನದ ಗಣಿಗಾರಿಕೆಗೆ ಬಹುತೇಕ ತಡೆ ಬಿದ್ದಂತಾಗಿದೆ.

ಗಡಿ ವಿವಾದ: ವಕೀಲರ ತಂಡ ರಚಿಸಲು ಕೋರಿ ಸಿ.ಎಂ.ಗೆ ಪತ್ರ

ಬೆಳಗಾವಿ: 'ಕರ್ನಾಟಕ- ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಲ್ಲಿ ಪ್ರಬಲ ವಾದ ಮಂಡಿಸಲು ಅನುಕೂಲವಾಗುವಂತೆ ಪರಿಣತ ವಕೀಲರ ತಂಡ ರಚಿಸಬೇಕು. ತಕ್ಷಣ ಸರ್ವ ಪಕ್ಷೀಯ ಸಭೆ ಕರೆದು ಚರ್ಚಿಸಬೇಕು' ಎಂದು ಆಗ್ರಹಿಸಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

18 ವರ್ಷಗಳಿಂದ ಸುಪ್ರೀಂ-ಕೋರ್ಟ್‌ನಲ್ಲಿರುವ ಈ ವಿವಾದವು ಮಂಗಳವಾರ ವಿಚಾರಣೆಗೆ ಬಂದಿತ್ತು. ತ್ರಿಸದಸ್ಯ ಪೀಠವು ವಿಚಾರಣೆಯನ್ನು ಇದೇ ನವೆಂಬರ್ 23ಕ್ಕೆ ಮುಂದೂಡಿತು. ಈ ವಿಚಾರವಾಗಿ ಮುಖ್ಯಮಂತ್ರಿಗೆ ಪತ್ರ ಬರೆದ ಚಂದರಗಿ, 'ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಗಡಿ ಉಸ್ತುವಾರಿ ಸಮಿತಿ ಇದೆ. ರಾಜ್ಯದ ನಗರ- ಪಟ್ಟಣ- ಹಳ್ಳಿ ಸೇರಿ 865 ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂಬ ವಾದ ಅವರದು. ಆದರೆ, ನಮ್ಮ ಸರ್ಕಾರ ಜಾರಿಗೆ ತಂದ ಗಡಿ ಸಂರಕ್ಷಣಾ ಆಯೋಗವು ಸಂಪೂರ್ಣ ನಿಷ್ಕ್ರಿಯವಾಗಿದೆ. 2018ರಿಂದ ಈವರೆಗೆ ಗಡಿ ಉಸ್ತುವಾರಿ ಸಚಿವರೇ ಇಲ್ಲ' ಎಂದಿದ್ದಾರೆ.

ಕಿಂಗ್‌ಪಿನ್ ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯ ಅಕ್ರಮದ ಪ್ರಮುಖ ಆರೋಪಿ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಇಲ್ಲಿನ 12ನೇ ಹೆಚ್ಚುವರಿ ನ್ಯಾಯಾಲಯ ವಜಾ ಮಾಡಿದೆ.

'ಬೆಳಗಾವಿ ಮೂಲದ ಸಂಜೀವ ಭಂಡಾರಿ ಎಂಬ ಆರೋಪಿ ಈ ಪ್ರಕರಣದಲ್ಲಿ 'ಕಿಂಗ್‌ಪಿನ್' ಆಗಿದ್ದು, ತಲೆಮರೆಸಿಕೊಂಡಿದ್ದಾನೆ. ಹೊರರಾಜ್ಯದಲ್ಲಿ ಇದ್ದುಕೊಂಡೇ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದ. ಮಂಗಳವಾರ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಾಧೀಶರು ಅರ್ಜಿ ವಜಾ ಮಾಡಿದರು' ಎಂದು ಪೊಲೀಸರು ತಿಳಿಸಿದ್ದಾರೆ.

ಈ ಪರೀಕ್ಷೆಯಲ್ಲಿ ಸ್ಮಾರ್ಟ್‌ವಾಚ್, ಬ್ಲೂಟೂತ್ ಉಪಕರಣಗಳನ್ನು ಬಳಸಿ ಅಕ್ರಮ ಎಸಗಿದ ಆರೋಪದಡಿ ಈಗಾಗಲೇ 12 ಮಂದಿಯನ್ನು ಬಂಧಿಸಲಾಗಿದೆ. ಈ ಎಲ್ಲರ ಪ್ರಕರಣಗಳಲ್ಲೂ ಬೇಕಾಗಿರುವ ಸಂಜೀವ ಭಂಡಾರಿ ಇನ್ನೂ ಪೊಲೀಸರ ಕೈಗೆ ಸಿಕ್ಕಿಲ್ಲ. ಆರೋಪಿ ಪತ್ತೆಗಾಗಿ ಮೂರು ತಂಡ ರಚಿಸಲಾಗಿದೆ.

ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ಉರುಳಿ ಬಿದ್ದ ಕಾರು

ತಂದೆ, ತಾಯಿ ಶವ ಪತ್ತೆ, ಪುತ್ರನಿಗಾಗಿ ಶೋಧ

ಮಸ್ಕಿ(ರಾಯಚೂರು ಜಿಲ್ಲೆ): ತಾಲ್ಲೂಕಿನ ಗುಡದೂರು ಬಳಿ ಮಂಗಳವಾರ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ಕಾರು ಬಿದ್ದು, ಒಂದೇ ಕುಟುಂಬದ ಮೂವರು ನೀರು ಪಾಲಾಗಿದ್ದಾರೆ.

ಗಂಗಾವತಿ ತಾಲ್ಲೂಕಿನ ಹೊಸಕೇರಿ ಕ್ಯಾಂಪ್‌ನ ನಿವಾಸಿಗಳಾದ ಎಂ.ಸೂರ್ಯರಾವ್ (62), ಅವರ ಪತ್ನಿ ಎಂ.ಸುಬ್ಬಲಕ್ಷ್ಮಿ (58) ಶವ ಪತ್ತೆಯಾಗಿದೆ. ಅವರ ಮಗ ಎಂ. ಶ್ರೀನಿವಾಸ್ (40) ಪತ್ತೆಗಾಗಿ ಶೋಧ ಮುಂದುವರೆದಿದೆ.

'ಮೂವರು ಲಿಂಗಸುಗೂರು ತಾಲ್ಲೂಕಿನ ಗೋನವಾಟ್ಲ ಗ್ರಾಮಕ್ಕೆ ಕಾರಿನಲ್ಲಿ ಹೊರಟಿದ್ದರು. ಮುಖ ತೊಳೆದುಕೊಳ್ಳಲು ಗುಡದೂರು ಕಾಲುವೆ ಬಳಿ ಕಾರು ನಿಲ್ಲಿಸಿದ್ದಾರೆ. ನಂತರ ಅವರು ಹೊರಡುವಾಗ, ಕಾರು ಹಿಮ್ಮುಖವಾಗಿ ಚಲಿಸಿ ಕಾಲುವೆಗೆ ಬಿದ್ದಿದೆ. ಬಹುಶಃ ಪುತ್ರನೇ ಕಾರು ಚಾಲನೆ ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಕಾರು ನೀರಿನಲ್ಲಿ ಕೊಚ್ಚಿ ಹೋಗುತ್ತಿರುವುದು ಕಂಡು ಅವರ ರಕ್ಷಣೆಗೆ ಗ್ರಾಮಸ್ಥರು ಮುಂದಾಗಿದ್ದಾರೆ. ಆದರೆ, ಸಫಲರಾಗಲಿಲ್ಲ. ಕಾಲುವೆಯಲ್ಲಿದ್ದ ಕಾರನ್ನು ಹೊರ ತೆಗೆಯಲಾಗಿದೆ' ಎಂದು ಬಳಗಾನೂರು ಠಾಣೆ ಪೊಲೀಸರು ತಿಳಿಸಿದ್ದಾರೆ.



ರಾಯಚೂರು ಜಿಲ್ಲೆ ಮಸ್ಕಿ ಸಮೀಪದ ಗುಡದೂರು ಬಳಿ ಮಂಗಳವಾರ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯಲ್ಲಿ ಉರುಳಿ ಬಿದ್ದ ಕಾರನ್ನು ಹೊರ ತೆಗೆಯಲಾಯಿತು

'40 ವರ್ಷದ ಹಿಂದಿನ ಕೃತಿಗೆ ಅಪಾರ್ಥ ಕಲ್ಪಿಸುವುದು ಅಪ್ರಸ್ತುತ'



ಬರಗೂರು ರಾಮಚಂದ್ರಪ್ಪ

ಬೆಂಗಳೂರು: 'ನನ್ನ ಕಾದಂಬರಿಯ ಪಾತ್ರವೊಂದು ಕಟ್ಟಿದ 'ನಗರಿಗೀತೆ'ಗೆ ನಲ್ವತ್ತು ವರ್ಷಗಳ ನಂತರ ಆಕ್ಷೇಪ ಎತ್ತಿರುವುದು ಆಶ್ಚರ್ಯ ತಂದಿದೆ. ಇದು ತೀರ ಆಕಸ್ಮಿಕವೊ, ಹುನ್ನಾರವೋ ತಿಳಿಯದು. ಅಷ್ಟು ಹಿಂದಿನ ಕಾದಂಬರಿ ಇಟ್ಟುಕೊಂಡು ಅಪಾರ್ಥ ಕಲ್ಪಿಸಿ, ವಿವಾದ ಮಾಡುವುದೇ ಅಪ್ರಸ್ತುತ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಪ್ರತಿಕ್ರಿಯಿಸಿದ್ದಾರೆ.

'ಬರಗೂರು ಅವರು ತಮ್ಮ ಕಾದಂಬರಿ 'ಭರತ ನಗರಿ'ಯಲ್ಲಿ ರಾಷ್ಟ್ರಗೀತೆಯನ್ನು ಅವಹೇಳನ ಮಾಡಿದ್ದು, ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕ್ರಮ ತೆಗೆದುಕೊಳ್ಳಬೇಕು' ಎಂದು ಬೆಂಗಳೂರು ಪೊಲೀಸ್ ಆಯುಕ್ತರಿಗೆ ಬಿಜೆಪಿಯ ಕಾನೂನು ಪ್ರಕೋಷ್ಠ ದೂರು ನೀಡಿದೆ.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಬರಗೂರು, 'ಕೆಲ ತಿಂಗಳ ಹಿಂದೆ ನನ್ನ ಸಮಗ್ರ ಸಾಹಿತ್ಯ ಸಂಪುಟಗಳು ಬಂದಿದ್ದು, ಅದರಲ್ಲಿ ಪರಿಷ್ಕರಣೆ ಮಾಡಿದ್ದೇನೆ. ಅದರಲ್ಲಿ ಭರತ ನಗರಿಯೂ ಒಂದು. ರಾಷ್ಟ್ರಗೀತೆಯ ಲಯದಲ್ಲಿದ್ದ ಗೀತೆ ಬಿಟ್ಟಿದ್ದೇನೆ. ಸಮತೆ ಮತ್ತು ಮಮತೆಯ ದೇಶ ಕಟ್ಟಬೇಕು ಎಂಬ ಗೀತೆ ಹಾಕಿದ್ದೇನೆ ಎಂದು ಹೇಳಿದ್ದಾರೆ.

'ಜಾತಿ, ವರ್ಗ, ಭ್ರಷ್ಟತೆಗಳನ್ನು ಮೀರಿದ ಭಾರತ ನನ್ನ ಆದರ್ಶ ಎನ್ನುವುದು ಕೃತಿಯಲ್ಲಿರುವ ಆಶಯ. ಸೃಜನಶೀಲ ಕೃತಿಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳದೆ ನಾನು ರಾಷ್ಟ್ರಗೀತೆಗೆ ಅವಮಾನ ಮಾಡಿದ್ದೇನೆಂದು ಸುಳ್ಳು ಆರೋಪ ಮಾಡಲಾಗುತ್ತಿದೆ. ಇನ್ನು ಗಂಗೆಯನ್ನು ನಾನು ಅವಮಾನಿಸಿಲ್ಲ. ಇಷ್ಟಾಗಿಯೂ ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸಿದ್ದರೆ, ಜನರಲ್ಲಿ ವಿಷಾದ ವ್ಯಕ್ತಪಡಿಸುತ್ತೇನೆ' ಎಂದಿದ್ದಾರೆ.

ಕಡಿಮೆ ಅಂಕ: ಶಿಕ್ಷಕ ಮತ್ತು ಗುಮಾಸ್ತರನ್ನು ಮರಕ್ಕೆ ಕಟ್ಟಿ ಥಳಿತ

ದುಮ್ಕಾ (ಜಾರ್ಖಂಡ್) (ಪಿಟಿಐ): ಕಡಿಮೆ ಅಂಕ ನೀಡಿದ್ದಾರೆಂಬ ಕಾರಣಕ್ಕೆ ಶಿಕ್ಷಕರು ಮತ್ತು ಗುಮಾಸ್ತರನ್ನು ಮರಕ್ಕೆ ಕಟ್ಟಿ ಹಾಕಿ ವಿದ್ಯಾರ್ಥಿಗಳು ಹಲ್ಲೆ ನಡೆಸಿರುವ ಘಟನೆ ಜಾರ್ಖಂಡ್‌ನ ದುಮ್ಕಾ ಪಟ್ಟಣದಲ್ಲಿ ನಡೆದಿದೆ.

ಪ್ರಾಕ್ಟಿಕಲ್‌ನಲ್ಲಿ ಕಡಿಮೆ ಅಂಕ ನೀಡಿದ್ದಾರೆ ಎಂದು ಆರೋಪಿಸಿ 9ನೇ ತರಗತಿಯ ವಿದ್ಯಾರ್ಥಿಗಳು ಈ ಕೃತ್ಯ ಎಸಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದುಮ್ಕಾ ಜಿಲ್ಲೆಯ ಗೋಪಿಕಂದರ್ ಪೊಲೀಸ್ ಠಾಣೆ ವ್ಯಾಪ್ತಿಯ ಸರ್ಕಾರ ನಡೆಸುತ್ತಿರುವ ಪರಿಶಿಷ್ಟ ಪಂಗಡದ ವಸತಿ ಶಾಲೆಯಲ್ಲಿ ಸೋಮವಾರ ಈ ಘಟನೆ ನಡೆದಿದೆ.

'ಘಟನೆ ಕುರಿತಂತೆ ಯಾವುದೇ ಎಫ್‌ಐಆರ್ ದಾಖಲಾಗಿಲ್ಲ. ಈ ಬಗ್ಗೆ ಶಾಲೆಯ ಆಡಳಿತ ಮಂಡಳಿ ಲಿಖಿತ ದೂರು ನೀಡಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಮುರುಘಾ ಶರಣರನ್ನು ಕೂಡಲೇ ಬಂಧಿಸಿ’

ಪ್ರಧಾನಿಗೆ ಶೀಘ್ರ ಪತ್ರ; ಸಿದ್ದರಾಮಯ್ಯ ಏಕೆ ಸುಮ್ಮನಿದ್ದಾರೆ?: ಎಚ್.ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಮೈಸೂರು: ‘ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾದ ಕೂಡಲೇ ಆರೋಪಿ ಅಪರಾಧಿಯಾಗುತ್ತಾನೆ. ಶಿವಮೂರ್ತಿ ಮುರುಘಾ ಶರಣರ ವಿರುದ್ಧವೂ ಅದೇ ಕಾಯ್ದೆಯಡಿ ಪ್ರಕರಣ ದಾಖಲಾಗಿರುವುದರಿಂದ ಅವರನ್ನು ಶೀಘ್ರ ಬಂಧಿಸಬೇಕು. ಅಮಾಯಕ ಬಾಲಕಿಯರಿಗೆ ನ್ಯಾಯ ಸಿಗಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಆಗ್ರಹಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪ್ರಕರಣ ದಾಖಲಾದ 24 ಗಂಟೆಯೊಳಗೇ ಶರಣರನ್ನು ಬಂಧಿಸಬೇಕಿತ್ತು. ನಾಲ್ಕು ದಿನವಾದರೂ ಬಂಧಿಸದೇ ಕೈ ಚೆಲ್ಲಿ ಕುಳಿತಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಕೂಡಲೇ ಅಮಾನತು ಮಾಡಬೇಕು’ ಎಂದು ಒತ್ತಾಯಿಸಿದರು.

‘ಬಾಲಕಿಯರಿಗೆ ನ್ಯಾಯ ಸಿಗದಿದ್ದರೆ ಪ್ರಕರಣವು 2023ರ ವಿಧಾನಸಭೆ ಚುನಾವಣೆ ಮೇಲೂ ಪರಿಣಾಮ ಬೀರಲಿದೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಯಾಕೆ ಮಾತನಾಡುತ್ತಿಲ್ಲ? ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಯಾರೂ ಮಾತನಾಡುತ್ತಿಲ್ಲ. ಚಿಂತಕರು, ಸಾಹಿತಿಗಳು ಎಲ್ಲಿ ಹೋದರು? ಪ್ರಗತಿಪರರು ಎಲ್ಲಿದ್ದಾರೆ?’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಮುಲಾಜಿಗೆ ಒಳಗಾಗಬಾರದು. ನಾಡಿನ ಮಕ್ಕಳ ಪ್ರಶ್ನೆ ಇದು. ಪ್ರಧಾನಿಗೆ ನಾನು ಈ ಬಗ್ಗೆ ವಿಸ್ತೃತವಾಗಿ ಪತ್ರ ಬರೆಯುತ್ತಿದ್ದೇನೆ’ ಎಂದರು.

‘ನೆಲದ ಕಾನೂನು ಎಲ್ಲರಿಗೂ ಒಂದೇ. ಜನಪ್ರತಿನಿಧಿಗಳು ಪ್ರಕರಣದಲ್ಲಿ ಮೂಗು ತೂರಿಸಿ ಹೇಳಿಕೆಗಳನ್ನು ನೀಡುತ್ತಿರುವುದು ಸರಿಯಲ್ಲ. ಸಂಧಾನ–ಅನುಸಂಧಾನ ಪ್ರಶ್ನೆ ಇಲ್ಲಿ ಬರುವುದಿಲ್ಲ. ಜಾತಿ– ಧರ್ಮವೂ ಮಧ್ಯ ಪ್ರವೇಶಿಸಬಾರದು. ಗೃಹ ಸಚಿವರು ಕಾನೂನು ಪ್ರಕಾರ ಕ್ರಮ ಕೈಗೊಳ್ಳುವ ಮಾತನ್ನಾಡಬೇಕಿತ್ತು’ ಎಂದು ಪ್ರತಿಪಾದಿಸಿದರು.

‘ಎಲ್ಲೋ ಹೋಗುತ್ತಿದ್ದ ಸ್ವಾಮೀಜಿಯನ್ನು ಪೊಲೀಸರು ಗೌರವದಿಂದ ವಾಪಸ್ ಕರೆತಂದಿದ್ದು ಸರಿಯೇ? ಸ್ವಾಮೀಜಿ ಪರ ಇರುವುದಾಗಿ ಮಠದಲ್ಲಿ ಘೋಷಣೆ ಕೂಗುವ ಅಭಿಮಾನಿಗಳು, ತಪ್ಪು ಮಾಡಿದವರ ಪರ ಇದ್ದಾರೆಯೇ’ ಎಂದರು.

‘ಎಸ್ಐಟಿ ತನಿಖೆಗೆ ವಹಿಸಿ’

‘ಅತ್ಯಾಚಾರದ ಆರೋಪ ಹೊತ್ತಿರುವ ಚಿತ್ರದುರ್ಗದ ಮುರುಘಾ ಶರಣರನ್ನು ಕೂಡಲೇ ಬಂಧಿಸಿ, ಪ್ರಕರಣವನ್ನು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡಕ್ಕೆ (ಎಸ್ಐಟಿ) ವಹಿಸಬೇಕು’ ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರೆಗೋಡು ಆಗ್ರಹಿಸಿದರು.

ನಗರದಲ್ಲಿ ಮಂಗಳವಾರ ದಲಿತ ಸಂಘರ್ಷ ಸಮಿತಿ ಒಕ್ಕೂಟ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆರೋಪಿ ಸ್ವಾಮೀಜಿಯನ್ನು ಬಂಧಿಸದೆ ಪ್ರಕರಣದ ದಿಕ್ಕು ತಪ್ಪಿಸಲಾಗುತ್ತಿದೆ. ಪ್ರಕರಣವನ್ನು ಬಿಜೆಪಿಯೇತರ ಆಡಳಿತ ನಡೆಸುವ ಕೇರಳ, ತಮಿಳುನಾಡಿಗೆ ವರ್ಗಾಯಿಸಬೇಕು’ ಎಂದು ಒತ್ತಾಯಿಸಿದರು.

ದಸಂಸ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ‘ಮಕ್ಕಳ ನೋವು ಸರ್ಕಾರಕ್ಕೆ ಕೇಳಿಸುತ್ತಿಲ್ಲವೆ? ಮೀಸಲು ಕ್ಷೇತ್ರದಿಂದ ಗೆದ್ದ ಶಾಸಕರೂ ಬಾಯಿಗೆ ಬೀಗ ಹಾಕಿಕೊಂಡಿದ್ದಾರೆ’ ಎಂದು ದೂರಿದರು.

ಪ್ರಕರಣದ ಬಗ್ಗೆ ಆರು ತಿಂಗಳ ಮೊದಲೇ ತಿಳಿದಿತ್ತು ಎಂದು ಹೇಳಿಕೆ ನೀಡಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರನ್ನೂ ಬಂಧಿಸಬೇಕು

ಮಾವಳ್ಳಿ ಶಂಕರ್, ದಲಿತ ಸಂಘರ್ಷ ಸಮಿತಿಯ ರಾಜ್ಯ ಪ್ರಧಾನ ಸಂಚಾಲಕ

ರಾಜ್ಯಪಾಲರಿಗೆ ಪತ್ರ

ಬೆಂಗಳೂರು: ಶಿವಮೂರ್ತಿ ಶರಣರನ್ನು ಕೂಡಲೇ ಬಂಧಿಸಬೇಕು ಎಂದು ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಹಾಗೂ ದಸಂಸ ಒಕ್ಕೂಟದ ರಾಜ್ಯ ಸಮಿತಿ ರಾಜ್ಯಪಾಲರಿಗೆ ಪತ್ರ ಬರೆದು ಒತ್ತಾಯಿಸಿದೆ.

ಪೋಕ್ಸೊ ಕಾಯ್ದೆ ಮತ್ತು ದೌರ್ಜನ್ಯ ತಡೆ ಕಾಯ್ದೆ 1989ರ ಅನ್ವಯ ಪ್ರಕರಣ ದಾಖಲಾದ 24 ಗಂಟೆಗಳಲ್ಲಿ ಆರೋಪಿ ಬಂಧಿಸಿ ಕೋರ್ಟ್‌ಗೆ ಹಾಜರು ಪಡಿಸಬೇಕು. 164 (5ಎ) ಸಿಆರ್‌ಪಿಸಿ ಹಾಗೂ ಸರ್ಕಾರಿ ಮಹಿಳಾ ವೈದ್ಯರ ಸಮ್ಮುಖದಲ್ಲಿ ಪರೀಕ್ಷೆಗೆ ಒಳಪಡಿಸಬೇಕು. ಯಾರ ವಿರುದ್ಧ ದೂರು ನೀಡಲಾಗಿದೆಯೋ ಆ ಎಲ್ಲರನ್ನು ಕೂಡಲೇ ವಶಕ್ಕೆ ಪಡೆಯಬೇಕು’ ಎಂದು ಆಗ್ರಹಿಸಿದೆ.

ಒಕ್ಕೂಟದ ರಾಜ್ಯ ಸಮಿತಿ ಅಧ್ಯಕ್ಷ ಡಾ.ಆರ್. ಮೋಹನ್‌ರಾಜ್, ಎಸ್‌ಸಿ–ಎಸ್‌ಟಿ ಗುತ್ತಿಗೆದಾರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ದಲಿತ ಮಾನವ ಹಕ್ಕು ಸಮಿತಿ ರಾಜ್ಯ ಸಂಚಾಲಕರು ಬಸವರಾಜ್ ಕೌತಾಳ್, ಡಿಎಸ್ ಗೋಪಾಲಕೃಷ್ಣ ಹರಳಹಳ್ಳಿ, ಡಿಎಸ್‌ಎಸ್ ರಾಜ್ಯ ಅಧ್ಯಕ್ಷ ವೆಂಕಟಗಿರಿಯಯ್ಯ ಮನವಿಗೆ ಸಹಿ ಮಾಡಿದ್ದಾರೆ.



ಚಿತ್ರದುರ್ಗದ ಮುರುಘಾ ಮಠದ ಆವರಣದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮುಮ್ಮಡಿ ಶಿವರುದ್ರ ಸ್ವಾಮೀಜಿ ಮಾತನಾಡಿದರು. ಬಸವಕುಮಾರ ಸ್ವಾಮೀಜಿ, ಶಾಂತವೀರ ಸ್ವಾಮೀಜಿ, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಮಹಂತರುದ್ರ ಸ್ವಾಮೀಜಿ, ಶಿವಬಸವ ಸ್ವಾಮೀಜಿ ಸೇರಿ ವಿವಿಧ ಮಠಾಧೀಶರು ಇದ್ದಾರೆ.

ನ್ಯಾಯಾಧೀಶರ ಮುಂದೆ ಸಂತ್ರಸ್ತರ ಹೇಳಿಕೆ

ಒಂದನೇ ಪುಟದಿಂದ...

ಶರಣರಿಗೆ ಸ್ವಾಮೀಜಿಗಳ ಬೆಂಬಲ: ಮುರುಘಾ ಶರಣರಿಂದ ದೀಕ್ಷೆ ಪಡೆದ ದಲಿತ ಮತ್ತು ಹಿಂದುಳಿದ ಸಮುದಾಯದ ಮಠಾಧೀಶರು ಹಾಗೂ ಮುರುಘಾ ಪರಂಪರೆಯ ಶಾಖಾ ಮಠದ ಸ್ವಾಮೀಜಿಗಳು ಮಠದ ಆವರಣದಲ್ಲಿ ಪತ್ರಿಕಾಗೋಷ್ಠಿ ನಡೆಸಿ, ತಮ್ಮ ಬೆಂಬಲದ ನಿರ್ಧಾರ ಪ್ರಕಟಿಸಿದರು. ಈ ವೇಳೆ ಸ್ಥಳದಲ್ಲಿ ಹಾಜರಿದ್ದ ಸಾರ್ವಜನಿಕರು ಮಠಾಧೀಶರ ನಿಲುವನ್ನು ವಿರೋಧಿಸಿದರು.

ಮಠಾಧೀಶರ ಪ್ರತಿನಿಧಿಯಾಗಿ ಮಾತನಾಡಿದ ಕನಕಪುರ ಮರಳೆಗವಿ ಮಠದ ಮುಮ್ಮಡಿ ಶಿವರುದ್ರ ಸ್ವಾಮೀಜಿ, ‘ಮುರುಘಾಶ್ರೀ ಆರೋಪ ಮುಕ್ತರಾಗಿ ಹೊರಬರಲಿದ್ದಾರೆ’ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಕುಂಚಿಟಿಗ ಗುರುಪೀಠದ ಶಾಂತವೀರ ಸ್ವಾಮೀಜಿ, ಗಾಣಿಗ ಮಠದ ಬಸವಕುಮಾರ ಸ್ವಾಮೀಜಿ, ದಾವಣಗೆರೆ ಶಾಖಾ ಮಠದ ಬಸವಪ್ರಭು ಸ್ವಾಮೀಜಿ, ಉಳವಿ ಶಾಖಾಮಠದ ಶಿವಬಸವ ಸ್ವಾಮೀಜಿ, ಹೆಬ್ಬಾಳ ಮಠದ ಮಹಂತರುದ್ರ ಸ್ವಾಮೀಜಿ ಸೇರಿದಂತೆ 25ಕ್ಕೂ ಹೆಚ್ಚು ಮಠಾಧೀಶರು ಇದ್ದರು.

ಭಕ್ತರ ಭೇಟಿ ಮಾಡಿದ ಶರಣರು

ಇಡೀ ದಿನ ಮಠದಲ್ಲೇ ಇದ್ದ ಮುರುಘಾ ಶರಣರು ಭಕ್ತರನ್ನು ಭೇಟಿ ಮಾಡಿದರು. ಬೆಳಿಗ್ಗೆ ವಾಯುವಿಹಾರ ಮುಗಿಸಿ, ದೈನಂದಿನ ಧಾರ್ಮಿಕ ಕೈಂಕರ್ಯಗಳನ್ನು ನೆರವೇರಿಸಿದರು.

ನಾವು ಶಿವಮೂರ್ತಿ ಮುರುಘಾ ಶರಣರ ಶಿಷ್ಯರು. ಮುರುಘಾ ಮಠಕ್ಕೆ ಬಹುದೊಡ್ಡ ಪರಂಪರೆ ಇದೆ. ಮಠ ಹಾಗೂ ಮುರುಘಾ ಪರಂಪರೆಯ ಜೊತೆಗೆ ನಾವು ನಿಲ್ಲುತ್ತೇವೆ.

ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಎಲ್ಲ ನೈತಿಕ ಮೌಲ್ಯಗಳನ್ನು ಸೇರಿಸಿ ಎರಕ ಹೊಯ್ದ ಅತ್ಯಂತ ಉದಾತ್ತ ಮೌಲ್ಯವೆಂದರೆ ಪ್ರಾಮಾಣಿಕತೆ.

–ಡಾ. ಬಿ.ಆರ್. ಅಂಬೇಡ್ಕರ್

ಹುಳುಕುಗಳನ್ನು ತೆರೆದಿಟ್ಟ ಪ್ರವಾಹ ಪರಿಹಾರ ಕಾರ್ಯ ಚುರುಕುಗೊಳ್ಳಲಿ

ಕೆಲವು ದಿನಗಳಿಂದ ಮಳೆ ಅಬ್ಬರಿಸುತ್ತಿರುವ ಪರಿಣಾಮ ರಾಜ್ಯದ 20ಕ್ಕೂ ಹೆಚ್ಚು ಜಿಲ್ಲೆಗಳು ಸಂಪೂರ್ಣವಾಗಿ ನಲುಗಿಹೋಗಿವೆ. ಬಯಲುಸೀಮೆ, ಕರಾವಳಿ ಮತ್ತು ಮಲೆನಾಡು ಎನ್ನದೆ ರಾಜ್ಯದ ಎಲ್ಲೆಡೆಯೂ ಮಳೆ ಆರ್ಭಟಿಸುತ್ತಿದೆ. ಶಾಲೆಗಳಿಗೂ ರಜೆ ಘೋಷಿಸುವಂತಹ ಸ್ಥಿತಿ ನಿರ್ಮಾಣವಾಗಿದೆ. ರಾಜಧಾನಿ ಬೆಂಗಳೂರಿನ ಪೂರ್ವಭಾಗದ ಕೆಲವು ಪ್ರದೇಶಗಳು ಜಲಾವೃತಗೊಂಡಿದ್ದರೆ, ರಾಜ್ಯದ ಹಲವೆಡೆ ಸೇತುವೆಗಳು ಮುಳುಗಡೆಯಾಗಿ ಸಂಪರ್ಕವೇ ಕಡಿದುಹೋಗಿದೆ. 'ಇನ್ನೂ ಉದ್ಘಾಟನೆ ಆಗಬೇಕಿರುವ ಬೆಂಗಳೂರು–ಮೈಸೂರು ದಶಪಥ ರಸ್ತೆ ಕೂಡ ಜಲಾವೃತವಾಗಿ ರೂಪಾಂತರ' ತಾಳಿ ನಿಂತಿದ್ದು ಸೋಜಿಗ ಉಂಟುಮಾಡಿದೆ. ವಿಶ್ವನಿಯಾನಿದ್ದ ಸಾವಿರಾರು ಎಕರೆ ಕೃಷಿಭೂಮಿಯಲ್ಲಿ ಹಸಿರಲ್ಲ ಮಾಯವಾಗಿ ಬರೀ ನೀರು ತುಂಬಿಕೊಂಡಿದೆ. ಮಳೆಯ ಆಟಾಟೋಪ ಹೇಗಿದೆ ಎಂದರೆ ವಾಸದ ಮನೆ, ಧವಸ–ಧಾನ್ಯ, ದನಕರುಗಳ ಕೊಟ್ಟಿಗೆ, ಒಣಮೇವು, ಪಟ್ಟೆಪ್ರಾಣಿ ಜತೆಗೆ ಜನರ ಭವಿಷ್ಯದ ಕನಸುಗಳೂ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿವೆ. ಜತೆಗೆ ಜೀವಹಾನಿಯೂ ಆಗಿರುವುದು ಕಂಗೆಡಿಸಿದೆ. ಅತಿವೃಷ್ಟಿ ಮತ್ತು ಪ್ರವಾಹದಿಂದ ₹ 7,650 ಕೋಟಿಯಷ್ಟು ನಷ್ಟವಾಗಿದೆ ಎಂದು ಕಂದಾಯ ಇಲಾಖೆಯು ತಕ್ಷಣದ ಅಂದಾಜು ಮಾಡಿದೆಯಾದರೂ ನಷ್ಟದ ಬಾಬತ್ತು ಇದಕ್ಕಿಂತಲೂ ಹಲವು ಪಟ್ಟು ಹೆಚ್ಚಾಗಿದೆ. ನೂರಾರು ಗ್ರಾಮಗಳು ಜಲಾವೃತವಾಗುವ ಭೀತಿಯನ್ನು ಇನ್ನೂ ಎದುರಿಸುತ್ತಿವೆ. ಬರಪೀಡಿತ ರಾಮನಗರ, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳಲ್ಲಿ ಹಿಂದೆಂದೂ ಕಾಣದಂತಹ ಮಳೆ ಸುರಿದಿದೆ. ಬರಪೀಡಿತ ಪ್ರದೇಶಗಳ ಜನರಲ್ಲಿ ಜಲಸಿರಿಯಿಂದ ಸಂಭ್ರಮ ಮೂಡಿಸಿದಂತೆ ನಿಲ್ಲದ ಮಳೆ ಅಲ್ಲಿನ ಜನಜೀವನವನ್ನು ಸಂಪೂರ್ಣ ಅಸ್ತವ್ಯಸ್ತಗೊಳಿಸಿದೆ.



ಮಳೆಯ ಆರ್ಭಟ ಕಡಿಮೆಯಾದ ತಕ್ಷಣವೇ ಸಂತ್ರಸ್ತರು ಮತ್ತೆ ಬದುಕು ಕಟ್ಟಿಕೊಳ್ಳಲು ಸಾಧ್ಯವಿರುವ ಎಲ್ಲ ನೆರವನ್ನೂ ನೀಡಬೇಕು

ರಾಜ್ಯದಾದ್ಯಂತ ಈ ಎರಡು–ಮೂರು ದಿನಗಳಲ್ಲಿ ಸುರಿದ ಮಳೆಯು ಒಟ್ಟಾರೆ ವ್ಯವಸ್ಥೆಯ ಎಲ್ಲ ಹುಳುಕುಗಳನ್ನೂ ಬಯಲು ಮಾಡಿದೆ. ಒತ್ತುವರಿ ಸಮಸ್ಯೆ ರಾಜಧಾನಿಯನ್ನು ಮಾತ್ರವಲ್ಲ, ರಾಜ್ಯದ ಉಳಿದ ಭಾಗಗಳನ್ನೂ ಕಾಡುತ್ತಿರುವುದು ಢಾಳಾಗಿ ಎದ್ದುಕಂಡಿದೆ. ಕಾಡು–ಮೇಡು, ನದಿ, ಹಳ್ಳ–ಕೊಳ್ಳ ಯಾವುದನ್ನೂ ಬಿಡದಂತೆ ಒತ್ತುವರಿ ಮಾಡಿರುವುದಕ್ಕೆ ಸಣ್ಣ ಸಣ್ಣ ಊರುಗಳಲ್ಲೂ ಉಕ್ಕಿ ಹರಿದ ಪ್ರವಾಹ ಸಾಕ್ಷ್ಯ ನುಡಿಯುತ್ತಿದೆ. ಮಳೆ ನೀರಿನ ಸಹಜ ಹರಿವಿನ ಮಾರ್ಗಗಳೆಲ್ಲ ಒಂದೋ ಒತ್ತುವರಿ ಆಗಿವೆ, ಇಲ್ಲದಿದ್ದರೆ ಹೂಳು ತುಂಬಿಕೊಂಡು ನಿಂತಿವೆ ಎಂಬ ವಾದವನ್ನು ರಾಜ್ಯದ ಪ್ರವಾಹದ ಪರಿಸ್ಥಿತಿ ಪುಷ್ಟೀಕರಿಸುತ್ತಿದೆ. ಹಳ್ಳ, ಹೊಳೆಗಳಲ್ಲಿ ಹರಿಯಬೇಕಿದ್ದ ಮಳೆ ನೀರು ಮನೆಗಳನ್ನು ಹುಡುಕಿಕೊಂಡು ಬಂದಿದ್ದೇಕೆ ಎಂದು ಜನ ಯೋಚಿಸದಿರುವುದು ಆಶ್ಚರ್ಯ ಉಂಟುಮಾಡುತ್ತದೆ.

ಮಳೆಯ ಪ್ರಮಾಣದಲ್ಲಿ ಆಗುತ್ತಿರುವ ಈ ಪರಿಯ ಏರಿಳಿತಕ್ಕೆ ಹವಾಮಾನ ವೈಪರೀತ್ಯವೇ ಕಾರಣ ಎಂದು ತಜ್ಞರು ವಿಶ್ಲೇಷಿಸುತ್ತಾರೆ. ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ನಡೆಯುತ್ತಿರುವ ಅಭಿವೃದ್ಧಿ ಚಟುವಟಿಕೆಗಳು ಪರೋಕ್ಷವಾಗಿ ಮಳೆಚಕ್ರ ದಿಕ್ಕು ತಪ್ಪಲು ಕಾರಣ ಎಂದೂ ಹೇಳಲಾಗುತ್ತಿದೆ. ಪದೇ ಪದೇ ದುರಂತಗಳ ಕಹಿ ನೆನಪು ಕಾಡಿದರೂ ಹಳೆಯ ತಪ್ಪುಗಳಿಂದ ನಾವು ಪಾಠ ಕಲಿತಿಲ್ಲ. ಈಗಾಗಲೇ ವಿಳಂಬವಾಗಿದೆಯಾದರೂ ನಮ್ಮ ನೀತಿನಿರೂಪಕರು ಈ ವಿಷಯದಲ್ಲಿ ಇನ್ನಾದರೂ ಎಚ್ಚೆತ್ತುಕೊಳ್ಳಬೇಕು. ಪ್ರವಾಹ ಪರಿಸ್ಥಿತಿಗೆ ಏನು ಕಾರಣ ಎಂಬುದನ್ನು ಸಮಗ್ರ ವಿಶ್ಲೇಷಣೆಗೆ ಒಳಪಡಿಸಬೇಕು. ಮಳೆಯಿಂದ ಸಂಕಷ್ಟಕ್ಕೆ ಸಿಲುಕಿರುವ ಜನರ ಕಣ್ಣೀರು ಒರೆಸುವುದು ಆದ್ಯತೆಯಾಗಬೇಕು. ತಕ್ಷಣಕ್ಕೆ ಜಾರಿಗೊಳಿಸಬಹುದಾದ ಅಲ್ಪಾವಧಿ ಮತ್ತು ದೂರಗಾಮಿ ಪರಿಣಾಮ ಬೀರುವ ದೀರ್ಘಾವಧಿ ಯೋಜನೆಗಳ ಮೂಲಕ ಪ್ರವಾಹದ ಪರಿಸ್ಥಿತಿಯನ್ನು ನಿಭಾಯಿಸಬೇಕು. ಪ್ರವಾಹಪೀಡಿತ ಪ್ರದೇಶಗಳಲ್ಲಿ ಕಾಳಜಿ ಕೇಂದ್ರಗಳನ್ನು ತೆರೆದು ಕೈತೊಳೆದುಕೊಂಡರೆ ಸಾಲದು. ಸಂತ್ರಸ್ತರಿಗೆ ಅಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಕೆಲಸ ತಕ್ಷಣವೇ ಆಗಬೇಕು. ಕಾಳಜಿ ಕೇಂದ್ರಗಳು ತಾತ್ಕಾಲಿಕ ವ್ಯವಸ್ಥೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಂಡು, ಸಮೀಕ್ಷೆಯ ನೆಪದಲ್ಲಿ ವಿಳಂಬ ಮಾಡದೆ ಹಾನಿಗೊಳಗಾದ ಜನರಿಗೆ ಶೀಘ್ರ ಪರಿಹಾರ ದೊರಕಿಸಿಕೊಡುವ ಕೆಲಸ ಆಗಬೇಕು. ಮಳೆಯ ಆರ್ಭಟ ಕಡಿಮೆಯಾದ ತಕ್ಷಣವೇ ಸಂತ್ರಸ್ತರು ಮತ್ತೆ ಬದುಕು ಕಟ್ಟಿಕೊಳ್ಳಲು ಸಾಧ್ಯವಿರುವ ಎಲ್ಲ ನೆರವನ್ನೂ ನೀಡಬೇಕು. ಎಲ್ಲೆಲ್ಲಿ ಕೆರೆ–ಕಟ್ಟೆ, ಕಾಲುವೆಗಳನ್ನು ಒತ್ತುವರಿ ಮಾಡಲಾಗಿದೆಯೋ ಅದನ್ನೆಲ್ಲ ಸಮೀಕ್ಷೆ ನಡೆಸಿ, ಕಾಲಮಿತಿಯಲ್ಲಿ ತೆರವುಗೊಳಿಸಬೇಕು. ಹೂಳನ್ನು ತೆಗೆಸಿದ ನಾಟಕವಾಡದೆ ಕಾಲುವೆಗಳನ್ನು ನಿಜವಾಗಿಯೂ ಸುಸ್ಥಿತಿಯಲ್ಲಿಟ್ಟು ಮಳೆ ನೀರು ಸರಾಗವಾಗಿ ಹರಿಯಲು ಸನ್ನದ್ಧಗೊಳಿಸಬೇಕು. ಆದರೆ, ಚುನಾವಣೆಯತ್ತ ಕಣ್ಣು ನೆಟ್ಟಿರುವ ಸರ್ಕಾರಕ್ಕೆ ಇಂತಹ ವಿಷಯಗಳು ಆದ್ಯತೆಯಾಗಬಲ್ಲವೇ ಎನ್ನುವುದು ಕಾಡುವ ಪ್ರಶ್ನೆ.

ದಿನದ ಟ್ವೀಟ್

ನಾಚಿಕೆಗೇಡು



ಬೆಂಗಳೂರು ಸಲ್ಲದ ಕಾರಣಗಳಿಗಾಗಿ ಸುದ್ದಿಯಾಗುತ್ತಿದೆ. ಸಮುದ್ರ ಮಟ್ಟದಿಂದ 3,000 ಅಡಿ ಎತ್ತರದಲ್ಲಿರುವ ನಗರವು ಪ್ರವಾಹಕ್ಕೆ ಒಳಗಾಗುವುದು ನಾಚಿಕೆಗೇಡಿನ ಸಂಗತಿ. ಆಮ್‌ಸ್ಟರ್‌ಡ್ಯಾಮ್‌ನ ಬಹುಭಾಗ ಸಮುದ್ರ ಮಟ್ಟಕ್ಕಿಂತ ಕೆಳಗಿದೆ. ಇಂತಹ ನಗರಗಳಲ್ಲೇ ಪ್ರವಾಹ ಉಂಟಾಗುವುದಿಲ್ಲ.

ಆನಂದ ಗುಂಡೂರಾವ್, ಬಿ- ಪ್ಯಾಕ್ ಸದಸ್ಯ

ಕಿಡಿನುಡಿ



ಮೊಸರು, ಲಸ್ಸಿ, ಜೇನು ಮುಂತಾದ ಆಹಾರ ಪದಾರ್ಥಗಳ ಮೇಲೆ ಹೇರಿರುವ ಸರಕು ಮತ್ತು ಸೇವಾ ತೆರಿಗೆಯಿಂದ ಸಂಗ್ರಹವಾದ ಮೊತ್ತವನ್ನು ಶತಕೋಟಿಪತಿ ಗೆಳೆಯರ ಸಾಲಮನ್ನಾಕ್ಕೆ ಕೇಂದ್ರ ಸರ್ಕಾರ ಬಳಸಿಕೊಂಡಿದೆ.

ಮನೀಷ್ ಸಿಸೋಡಿಯಾ, ದೆಹಲಿ ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ — ಭಾನುವಾರ, 31-8-1997

• ವೈದ್ಯ ಸೀಟು ಹಂಚಿಕೆಗೆ ಮತ್ತೆ ಸಂದರ್ಶನ ಖಚಿತ

ಬೆಂಗಳೂರು, ಆಗಸ್ಟ್ 30– ಭಾರತೀಯ ವೈದ್ಯಕೀಯ ಮಂಡಲಿಯು ನಿಗದಿಪಡಿಸಿರುವ ಸೀಟುಗಳ ಪ್ರಮಾಣಕ್ಕೆ ಅನುಗುಣವಾಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ನೀಡಬೇಕೆಂದು ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಹಿನ್ನೆಲೆಯಲ್ಲಿ, ಸಾಮಾನ್ಯ ಪ್ರವೇಶ ಪರೀಕ್ಷಾ (ಸಿಇಟಿ) ಘಟಕವು ಸೀಟು ಹಂಚಿಕೆಗೆ ಮರು ಸಂದರ್ಶನ ನಡೆಸಲಿದೆ.

ಉನ್ನತ ಶಿಕ್ಷಣ ಹಾಗೂ ಕಾನೂನು ಇಲಾಖೆಯ ಅಧಿಕಾರಿಗಳ ಜತೆಗೆ ಚರ್ಚಿಸಿದ ನಂತರ ಭೇಟಿಯಾದ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ. ಎಂ. ಶಂಕರ ನಾಯ್ಕ್ ಅವರು, ನ್ಯಾಯಾಲಯದ ಆದೇಶ ಜಾರಿಗೊಳಿಸದೆ ಅನ್ಯ ಮಾರ್ಗವೇ ಇಲ್ಲ ಎಂದರು.

• ಸಂಬಂಧ ವೃದ್ಧಿಗೆ ಪಾಕ್ ಜತೆ ಗುಜ್ರಾಲ್ ಚರ್ಚೆ

ಶಾಂತಿನಿಕೇತನ, ಆಗಸ್ಟ್ 30 (ಪಿಟಿಐ)– ಭಾರತ ಮತ್ತು ಪಾಕಿಸ್ತಾನ ನಡುವೆ ಮುಂದಿನ ತಿಂಗಳು ನವದೆಹಲಿಯಲ್ಲಿ ನಡೆಯುವ ವಿದೇಶಾಂಗ ಕಾರ್ಯದರ್ಶಿ ಮಟ್ಟದ ಮಾತುಕತೆಯು ದ್ವಿಪಕ್ಷೀಯ ಸಹಕಾರ ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಲಿದೆ ಎಂಬ ಆಶಯವನ್ನು ಪ್ರಧಾನಿ ಐ.ಕೆ. ಗುಜ್ರಾಲ್ ಇಂದು ಇಲ್ಲಿ ವ್ಯಕ್ತಪಡಿಸಿದರು.

ಭಾರತ – ಪಾಕ್ ಸಂಬಂಧದ ಬಗ್ಗೆ ಮುಂದಿನ ತಿಂಗಳು ನ್ಯೂಯಾರ್ಕ್‌ನಲ್ಲಿ ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್ ಅವರೊಂದಿಗೆ ಮಾತುಕತೆ ನಡೆಸುವುದಾಗಿ ಪ್ರಕಟಿಸಿದರು.

50 ವರ್ಷಗಳ ಹಿಂದೆ — ಗುರುವಾರ, 31-8-1972

• ಅರಸು ಸಂಪುಟ ವಿರುದ್ಧ ಯತ್ನ ನಿಲ್ಲಿಸದಿದ್ದರೆ ಶಿಸ್ತುಕ್ರಮ– ಕೆಂಗಲ್‌ಗೆ ಎಚ್ಚರಿಕೆ

ನವದೆಹಲಿ, ಆಗಸ್ಟ್ 30– ಮೈಸೂರಿನಲ್ಲಿ ದೇವರಾಜ ಅರಸು ಸಂಪುಟವನ್ನು ಉಚ್ಚಾಟಿಸುವ ಪ್ರಯತ್ನಗಳನ್ನು ನಿಲ್ಲಿಸದಿದ್ದರೆ ತಮ್ಮ ವಿರುದ್ಧ ಬಲವಾದ ಶಿಸ್ತು ಕ್ರಮ ಕೈಗೊಳ್ಳಬೇಕಾಗುವುದೆಂದು ಕಾಂಗ್ರೆಸ್ ಅಧ್ಯಕ್ಷ ಶಂಕರ್ ದಯಾಳ್ ಶರ್ಮಾ ಅವರು ಮಾಜಿ ರೈಲ್ವೆ ಸಚಿವ ಕೆ. ಹನುಮಂತಯ್ಯ ಅವರಿಗೆ ಇಂದು ತಮ್ಮನ್ನು ಭೇಟಿ ಮಾಡಿದಾಗ ಎಚ್ಚರಿಕೆ ನೀಡಿದರೆಂದು ತಿಳಿದುಬಂದಿದೆ.

ಪಕ್ಷದ 'ಶುದ್ಧೀಕರಣ'ದ ಹೆಸರಿನಲ್ಲಿ ಮೈಸೂರು ಸಂಪುಟದ ಬಗೆಗೆ ಅವರ ಟೀಕೆ ಕುರಿತು ಹೈಕಮಾಂಡ್ ತೀವ್ರ ಅಭಿಪ್ರಾಯ ತಳೆದಿದೆ ಎಂದು ಶರ್ಮಾ ಸ್ಪಷ್ಟಪಡಿಸಿದುದಾಗಿ ಹೇಳಲಾಗಿದೆ.

• ಬಾಂಗ್ಲಾಕ್ಕೆ ಮನ್ನಣೆ ವಿಳಂಬವಾದರೆ ಚಿರಶಾಂತಿಗೆ ಅಡ್ಡಿ

ನವದೆಹಲಿ, ಆಗಸ್ಟ್ 30– ಬಾಂಗ್ಲಾ ದೇಶಕ್ಕೆ ಮಾನ್ಯತೆ ನೀಡುವುದನ್ನು ವಿಳಂಬಗೊಳಿಸಿದರೆ ಚಿರಶಾಂತಿ ಮೂಡಿಸುವ ಮತ್ತು ಬಾಂಧವ್ಯ ಸೌಹಾರ್ದಗೊಳಿಸುವ ಯತ್ನಕ್ಕೆ ಧಕ್ಕೆ ಉಂಟಾಗುವುದೇ ಅಲ್ಲದೆ ಸಿಮ್ಲಾ ಒಪ್ಪಂದದಲ್ಲಿ ರೂಪಿಸಿರುವ ಗುರಿಗಳ ಸಾಧನೆ ವಿಳಂಬವಾಗುವುದು ಎಂದು ಭಾರತವು ಪಾಕಿಸ್ತಾನ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದೆ. ಈ ಸಂಬಂಧ ವಿದೇಶಾಂಗ ವ್ಯವಹಾರ ಸಚಿವ ಸ್ವರಣ್ ಸಿಂಗ್ ಉಭಯ ಸದನಗಳಲ್ಲೂ ಇಂದು ಹೇಳಿಕೆ ನೀಡಿದರು.

ಪ್ರಾಚೀನ ಕಾವ್ಯಗಳಲ್ಲಿ ಹಾಸುಹೊಕ್ಕಾಗಿರುವ ಸೂಕ್ಷ್ಮವಿವೇಕ, ಜ್ಞಾನಪರಂಪರೆಗೆ ಬೆನ್ನುತಿರುಗಿಸುವುದು ಬೇಡ

ಹಳಗನ್ನಡ: ಇದು ನಿಚ್ಚಂ ಪೊಸತು



ವಿಶ್ಲೇಷಣೆ

ಡಾ. ಟಿ.ಎನ್. ವಾಸುದೇವಮೂರ್ತಿ

ಹಳಗನ್ನಡವನ್ನು ಪಂಪ ಈ ರೀತಿ ನಿರ್ವಚಿಸಿದ್ದಾನೆ: 'ಹಳಗನ್ನಡವನ್ನು ಅನುಸಂಧಾನ ಮಾಡುವವನ ಆಲೋಚನೆ ಹೊಸದಾಗಿರಬೇಕು, ಅಂತಹ ಹೊಸ ಆಲೋಚನೆ ಮೃದುವಾದ ಶಬ್ದಗಳಿಂದ ಕೂಡಿರಬೇಕು. ಹಾಗೆ ಕೂಡಿರುವ ಶಬ್ದ ಜೋಡಣೆ ದೇಸಿ ಅಥವಾ ಅಚ್ಚ ಗನ್ನಡದ್ದಾಗಿರಬೇಕು, ಈ ಅಚ್ಚಗನ್ನಡವು ಮಾರ್ಗವನ್ನು, ಅಂದರೆ ಸಂಸ್ಕೃತವನ್ನೂ ತನ್ನಲ್ಲಿ ಒಳಗೊಂಡಿರಬೇಕು. ಹೀಗೆ ದೇಸಿ- ಮಾರ್ಗಗಳೆರಡನ್ನೂ ಒಳಗೊಂಡ ಕಾವ್ಯಬಂಧ ವಸಂತಮಾಸದ ವೈಭವವನ್ನು ನೆನಪಿಸುತ್ತದೆ. ವಸಂತದಲ್ಲಿ ಅರಳುವ ಮಾವಿನ ಕೆಂದಳಿರಿಗೆ ದುಂಬಿಗಳೂ ಹಾಗೆಯೇ ಕೋಗಿಲೆಗಳೂ ಮುತ್ತಿ ಸೊಗಸನ್ನು ಉಂಟು ಮಾಡುವಂತೆ ದೇಸಿ- ಮಾರ್ಗಗಳೆರಡೂ ಕೂಡಿದಾಗ ಸೊಗಸು ಮೂಡುತ್ತದೆ' (ಪಂಪಭಾರತಂ 1-8).

ಒಂದು ಭಾಷೆ ಅನ್ಯ ಭಾಷೆಗಳನ್ನು ಧರಿಸಿದಾಗ (ತಳ್ತೊಡೆ) ಮಾತ್ರ ಅದು ಶ್ರೀಮಂತವಾಗಬಲ್ಲದು, ಜೀವಂತವಾಗಬಲ್ಲದು ಎಂದು ಪಂಪ ಇಲ್ಲಿ ಹೇಳಿದ್ದಾನೆ. ನಮ್ಮ ಶೈಕ್ಷಣಿಕ ವಲಯವು ಪ್ರಾಚೀನ ಕನ್ನಡದ ಈ ತಾಳುವ ಗುಣವನ್ನು ಕಾಣುವ ದೃಷ್ಟಿಯನ್ನೇ ಇತ್ತೀಚೆಗೆ ಕಳೆದುಕೊಳ್ಳುತ್ತಿದೆ. ನಾಡಿನ ವಿಶ್ವವಿದ್ಯಾಲಯಗಳು ತನ್ನ ಪಠ್ಯಕ್ರಮದಲ್ಲಿ ಹಳಗನ್ನಡ ವ್ಯಾಪ್ತಿಯನ್ನು ಹಂತ ಹಂತವಾಗಿ ಕಿರಿದುಗೊಳಿಸುತ್ತಿವೆ. ಬೆಂಗಳೂರಿನ ವಿಶ್ವ ವಿದ್ಯಾಲಯವೊಂದು ಇತ್ತೀಚೆಗೆ ಎನ್‌ಇಪಿ ಪದವಿ ಪಠ್ಯ ಪುಸ್ತಕಗಳನ್ನು ಪ್ರಕಟಿಸಿದ್ದು, ಅದರಲ್ಲಿ ನಮ್ಮ ಹಳಗನ್ನಡ ಪರಂಪರೆಯೇ ಗೈರುಹಾಜರಾಗಿದೆ.


ಇಂದು ಪದವಿ ವಿದ್ಯಾರ್ಥಿಗಳು ಪಂಪ, ರನ್ನ, ಕುಮಾರ ವ್ಯಾಸಾದಿಗಳ ಮೂಲ ಕಾವ್ಯಭಾಗಗಳನ್ನು ಶೈಕ್ಷಣಿಕ ಶಿಸ್ತಿನೊಂದಿಗೆ ಅಧ್ಯಯಿಸುತ್ತಿಲ್ಲ. ವಿಶ್ವವಿದ್ಯಾಲಯಗಳು ಕಾಟಾಚಾರಕ್ಕೆಂದು ಒಂದೋ ಎರಡೋ ಕಾವ್ಯಭಾಗ ಗಳನ್ನು- ಅದೂ ಮೂಲ ಪದ್ಯವನ್ನಲ್ಲ; ಹೊಸಗನ್ನಡ ಸರಳಾನುವಾದವನ್ನು- ಪಠ್ಯವನ್ನಾಗಿ ನಿಗದಿಪಡಿಸುವ ಅಭ್ಯಾಸ ರೂಢಿಸಿಕೊಳ್ಳಲಾರಂಭಿಸಿವೆ. ಶೈಕ್ಷಣಿಕ ವಲಯದ ಈ ಹೊಸ ಪ್ರವೃತ್ತಿಯನ್ನು ಗಮನಿಸಿದರೆ, ನಮ್ಮ ಹಳಗನ್ನಡ ಪರಂಪರೆಯನ್ನು ಸದ್ದಿಲ್ಲದಂತೆ ವಿಸ್ಮೃತಿಗೆ ಸರಿಸಿಬಿಡುವ ಒಂದು ವ್ಯವಸ್ಥಿತ ಹುನ್ನಾರ ನಡೆಯುತ್ತಿದೆಯೇನೋ ಎಂಬ ಅನುಮಾನ ಕಾಡುತ್ತದೆ.

ಈ ಸಂಬಂಧವಾಗಿ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿ (ಬಿಒಎಸ್) ಸಭೆಗಳಲ್ಲಿ ಮಂಡಿಸಲಾಗುವ ವಾದಗಳೂ ಹಾಸ್ಯಾಸ್ಪದವಾಗಿರುತ್ತವೆ. 'ಸಂಸ್ಕೃತ ಭೂಯಿಷ್ಠವಾದ ಹಳಗನ್ನಡ ಕಲಿತರೆ ಯಾರಿಗೆ ಲಾಭ?' 'ಕನ್ನಡವನ್ನು ಅನ್ನದ ಭಾಷೆಯನ್ನಾಗಿಸಬೇಕು', 'ಹಳಗನ್ನಡವನ್ನು ಹೊಸಗನ್ನಡದ ಆವೃತ್ತಿಯಲ್ಲಿ ಕಲಿಸಿದರೆ ತಪ್ಪೇನು?' 'ಹಳಗನ್ನಡದ ಪಾಠ ಮಾಡುವುದು ಕಷ್ಟಕರ!', 'ತಂತ್ರಜ್ಞಾನ ಕನ್ನಡ, ಅನುವಾದ ಕಲೆ ಇವು ಮುಂದಿನ ತಲೆಮಾರಿನ ಅಗತ್ಯಗಳಾಗಿವೆ'.

ಇವರ ವಾದ- ಕಾಳಜಿಗಳೆಲ್ಲ ಬಿಒಎಸ್ ಸಭೆಗಷ್ಟೇ ಸೀಮಿತವಾಗಿರುತ್ತವೆ. ಸಭೆಯ ನಿರ್ಣಯಗಳನ್ನು ಕಾರ್ಯಗತಗೊಳಿಸಿದ್ದರಿಂದ ಕನ್ನಡ ಎಷ್ಟು ಮಂದಿಗೆ ಅನ್ನದ ಭಾಷೆಯಾಗಿ ಒದಗಿಬಂತು, ತಂತ್ರಜ್ಞಾನ ಕನ್ನಡ, ಅನುವಾದ ಕಲೆಗಳನ್ನು ಕಲಿತು ಎಷ್ಟು ಮಂದಿ ಉದ್ಯೋಗ ಸಂಪಾದಿಸಿಕೊಂಡರು ಇವೇ ಮುಂತಾದವುಗಳ ಬಗ್ಗೆ ಸರ್ವೇಕ್ಷಣೆ ನಡೆಸಿ, ಪತ್ತೆ ಮಾಡುವ ಯಾವ ವ್ಯವಸ್ಥೆಯನ್ನೂ ವಿಶ್ವವಿದ್ಯಾಲಯಗಳು ಅಳವಡಿಸಿಕೊಂಡಿಲ್ಲ. ಒಂದು ಅಧ್ಯಯನ ವಿಷಯವನ್ನು ಪಠ್ಯದಿಂದ ಕೈಬಿಡಲು 'ಅರ್ಥ ಮಾಡಿಸುವುದು ಕಷ್ಟ' ಎಂಬ ವಾದವೇ ಮಾನದಂಡ ವಾಗುವುದಾದಲ್ಲಿ ಗಣಿತ, ಇಂಗ್ಲಿಷ್, ಕಂಪ್ಯೂಟರ್ ಸೈನ್ಸ್ ಹೀಗೆ ಒಂದೊಂದಾಗಿ ಎಲ್ಲ ವಿಷಯಗಳನ್ನೂ ಕೈಬಿಡುತ್ತಾ ಹೋಗಬೇಕಾಗುತ್ತದೆ.

ಹಿಂದೆ ಕನ್ನಡವನ್ನು ಶ್ರೀಮಂತಗೊಳಿಸಲೆಂದು ಬಿ.ವೆಂಕಟಾಚಾರ್ಯ, ಎ.ಆರ್. ಕೃಷ್ಣಶಾಸ್ತ್ರಿ ಮುಂತಾದವರು ಬಂಗಾಳಿ ಭಾಷೆಯನ್ನು ಕಲಿತು ಅಲ್ಲಿಯ ಅಮೂಲ್ಯ ಸಾಹಿತ್ಯ ಕೃತಿಗಳನ್ನು ಕನ್ನಡಕ್ಕೆ ತಂದರು. ಕ.ವೆಂ. ರಾಘವಾಚಾರ್ ಅವರು ಗ್ರೀಕ್ ಕಲಿತರು, ಡಿ.ಕೆ. ಭೀಮಸೇನರಾವ್ ಉರ್ದು, ಪಾರ್ಸಿ ಕಲಿತರು, ಆ.ನೇ. ಉಪಾಧ್ಯೆ ಮತ್ತು ಜಿ.ಪಿ. ರಾಜರತ್ನಂ ಪಾಳೀ, ಪ್ರಾಕೃತ ಭಾಷೆಗಳಲ್ಲಿ ವಿದ್ವತ್ತನ್ನು ಸಂಪಾದಿಸಿದರು. ಇಂದಿನವರು ಅನ್ಯಭಾಷೆ ಬೇಡ, ತಮ್ಮದೇ ಭಾಷೆಯ ಪ್ರಾಚೀನ ರೂಪ ವೈವಿಧ್ಯಗಳನ್ನು ಪರಿಚಯಿಸಿಕೊಳ್ಳಬಾರದೇ? ಕನ್ನಡ ಎಂ.ಎ ವಿದ್ಯಾರ್ಥಿಗಳು ಹಳಗನ್ನಡವನ್ನು ಸಮರ್ಥವಾಗಿ ಕಲಿಯಬೇಕೆಂಬ ಉದ್ದೇಶದಿಂದ ಹಿಂದೆ ಜಿ.ಎಸ್. ಶಿವ ರುದ್ರಪ್ಪನವರು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಅದಾಗಲೇ ನಿವೃತ್ತರಾಗಿದ್ದ ಎಸ್.ಆರ್. ಮಳಗಿಯವ ರನ್ನು ಕರೆತಂದು ನಿಯೋಜಿಸಿಕೊಂಡಿದ್ದರು. ಆದರೆ ವಿಶ್ವವಿದ್ಯಾಲಯಗಳಲ್ಲಿ ಜಿಎಸ್‌ಎಸ್ ಕುಳಿತಿದ್ದಂತಹ ಜಾಗದಲ್ಲಿ ಇಂದು ಕುಳಿತಿರುವವರು ಹಳಗನ್ನಡವನ್ನೇ ಕನ್ನಡ ವಿಭಾಗದಿಂದ ಹೊರಗಟ್ಟುತ್ತಿದ್ದಾರೆ.

'ಹಳಗನ್ನಡ ಕಷ್ಟ'ವೆಂಬ ಇವರ ವಾದವನ್ನು ಒಪ್ಪಬಹುದು. ಆದರೆ ಹಳಗನ್ನಡದ ಸರಳ ಗದ್ಯಾನು ವಾದವನ್ನು ಪಠ್ಯಕ್ರಮದಲ್ಲಿ ಅಳವಡಿಸುವುದು ಸರ್ವಥಾ ಸಮ್ಮತವಲ್ಲ. ಡಿ.ಎಲ್. ನರಸಿಂಹಾಚಾರ್ ಅವರಿಂದ ಹಿಡಿದು ಜಿ.ಪಿ.ರಾಜರತ್ನಂ, ಎಲ್. ಬಸವರಾಜು ಮತ್ತು ಇತ್ತೀಚಿನ ಪಿ.ವಿ. ನಾರಾಯಣ, ಎಚ್.ಎಸ್. ವೆಂಕಟೇಶಮೂರ್ತಿ ಅವರವರೆಗೆ ನಾಡಿನ ಹಲವು ವಿದ್ವಾಂಸರು ಪ್ರಾಚೀನ ಕಾವ್ಯಗಳನ್ನು ಸರಳಗನ್ನಡದಲ್ಲಿ ಪರಿಚಯಿಸುತ್ತ ಬಂದಿದ್ದಾರೆ. ಆದರೆ ಈ ಪ್ರಯೋಗಗಳು -ಬಿಒಎಸ್ ಭಾವಿಸಿರುವಂತೆ- ಆ ಅಭಿಜಾತ ಕಾವ್ಯಗಳಿಗೆ ಪರ್ಯಾಯವಲ್ಲ, ಪರ್ಯಾಯ ಆಗಲೂಬಾರದು.



ಹಿಂದಿನ ವಿದ್ವಾಂಸರ ಆಶಯವೂ ಅದಾಗಿರಲಿಲ್ಲ. ಉನ್ನತ ಶಿಕ್ಷಣ ಕಲಿಯದ, ಆದರೆ ಸಾಹಿತ್ಯಾಸಕ್ತಿಯುಳ್ಳ ಸಾಮಾನ್ಯ ಓದುಗರಿಗೆ ಅನುಕೂಲ ವಾಗಲೆಂದು ಅವರು ಆ ಪ್ರಯತ್ನ ಮಾಡಿದ್ದು. ಷೇಕ್ಸ್‌ಪಿಯರ್ ನಾಟಕಗಳ ಸರಳ ಇಂಗ್ಲಿಷ್ ಆವೃತ್ತಿಗೆ ಮಾರುಕಟ್ಟೆಯಲ್ಲಿ ಕ್ಷಾಮವಿದೆಯೇ? ಅದೇಕೆ ಈಗಲೂ ಇಂಗ್ಲಿಷ್ ವಿಭಾಗದವರು ಷೇಕ್ಸ್‌ಪಿಯರ್ ಮೂಲದಲ್ಲಿ ಬಳಸಿದ್ದ ಇಂಗ್ಲಿಷ್ ರೂಪವನ್ನೇ ಕಲಿಸುತ್ತಿದ್ದಾರೆ ಎಂಬುದರ ಕುರಿತು ನಮ್ಮವರು ಪರ್ಯಾಲೋಚಿಸಬೇಕಾಗಿದೆ.

ಈ ಹಳಗನ್ನಡ ಎಂಬ ಪದವೇ ದಾರಿ ತಪ್ಪಿಸು ವಂತಹುದಾಗಿದೆ- ಅದು ನಿರುಪಯುಕ್ತ, ಕೆಲಸಕ್ಕೆ ಬಾರದ ಎಂಬ ಅರ್ಥ ಕೊಡುತ್ತದೆ. ಆದರೆ ಪಂಪ ಅದನ್ನು ಹಾಗೆ ಭಾವಿಸಿರಲಿಲ್ಲ. ತನ್ನ ಕವಿತ್ವದ ಶೈಲಿಯನ್ನು 'ಇದು ನಿಚ್ಚಂ ಪೊಸತು ಅರ್ಣವಂಬೊಲ್ ಅತಿ ಗಂಭೀರಂ' ಎಂದು ವರ್ಣಿಸಿದ್ದ. ಇಂದಿನ ಬೆಳವಣಿಗೆಗಳನ್ನು ಗಮನಿಸಿದರೆ ಪಂಪಾದಿಗಳ ಕನ್ನಡವನ್ನು 'ಹಳಗನ್ನಡ'ವೆನ್ನುವ ಬದಲು 'ಅಭಿಜಾತ ಕನ್ನಡ' ಎಂದು ಕರೆಯುವುದೇ ಸೂಕ್ತವೆನಿಸುತ್ತದೆ. ಏಕೆಂದರೆ ಹಳಗನ್ನಡವು ಕಾವ್ಯ- ನಾಟಕಗಳಿಗಷ್ಟೇ ಸೀಮಿತವಾದುದಲ್ಲ. ಹಳಗನ್ನಡದ ಸರಿಯಾದ ತಿಳಿವಳಿಕೆಯಿಂದ ಕನ್ನಡದ ಸಮಸ್ತ ಜ್ಞಾನಪರಂಪರೆಯ ಪರಿಚಯ ನಮಗಾಗುತ್ತದೆ. ಇಂದು ಜಗತ್ತಿನೆಲ್ಲೆಡೆ ಯಾವೆಲ್ಲ ಕ್ಷೇತ್ರಗಳಲ್ಲಿ ಜಿಜ್ಞಾಸೆ, ಸಂಶೋಧನೆಗಳು ನಡೆಯುತ್ತಿವೆಯೋ ಆ ಎಲ್ಲ ಜ್ಞಾನ ಪ್ರಸ್ಥಾನದ ಮೂಲಧಾತುಗಳು ನಮ್ಮ ಹಳಗನ್ನಡದಲ್ಲಿ ಅಡಕಗೊಂಡಿವೆ. ಅದು ಕಳಲೆ ವೀರರಾಜೇಂದ್ರರ ವೈದ್ಯಶಾಸ್ತ್ರವಿರಬಹುದು, ಮಂಗರಸನ ಸೂಪಶಾಸ್ತ್ರ ವಿರಬಹುದು, ಪದ್ಮಣಪಂಡಿತ, ಬಾಚರಸ ಮುಂತಾದವರ ಅಶ್ವವೈದ್ಯ, ಸ್ತ್ರೀವೈದ್ಯ, ಪಶುವೈದ್ಯ, ಖಗೇಂದ್ರಮಣಿದರ್ಪಣ, ರತ್ನಶಾಸ್ತ್ರ, ಗಣಿತಶಾಸ್ತ್ರ, ಕಾಮಶಾಸ್ತ್ರ, ಸಂಗೀತಶಾಸ್ತ್ರ, ಸಿಂಹಭೂಪಾಲನ ನಾಟ್ಯಶಾಸ್ತ್ರ... ಹೀಗೆ ಪಟ್ಟಿ ಮಾಡುತ್ತ ಹೋಗಬಹುದು.

ಸದ್ಯಕ್ಕೆ ಹಳಗನ್ನಡ ಕಾವ್ಯವನ್ನು ನಿರಾಕರಿಸುವವರಿಗೆ ತಾವು ಹಳಗನ್ನಡದಲ್ಲಿ ಅಂತರ್ನಿಹಿತವಾದ ಸ್ವಂತಿಕೆ ಮತ್ತು ಬಂಡಾಯದ ಗುಣವನ್ನೂ ನಿರಾಕರಿಸು ತ್ತಿದ್ದೇವೆಂಬ ಪರಿವೆ ಇದ್ದಂತಿಲ್ಲ. ಹಳಗನ್ನಡ ಕವಿಗಳಲ್ಲಿ ಅಗಾಧವಾದ ವಿಮರ್ಶಾಶಕ್ತಿ ಇತ್ತು. 'ಕುಲಂ ಕುಲಮಲ್ತು' ಎಂಬ ಪಂಪನ ಕುಲವ್ಯಾಖ್ಯಾನ ಲೋಕಪ್ರಸಿದ್ಧವಾದುದು. ತನ್ನ ಕಾವ್ಯದುದ್ದಕ್ಕೂ ಕೃಷ್ಣನ ಭಜನೆ ಮಾಡುವ ಕುಮಾರವ್ಯಾಸ, ಶ್ರೀಕೃಷ್ಣ ತಪ್ಪು ಮಾಡಿದಾಗ ಅದನ್ನು ಸಮರ್ಥಿಸಿಕೊಳ್ಳದೆ ಕೆರಳುತ್ತಾನೆ. ದುರ್ಯೋಧನನ ತೊಡೆಗೆ ಗದೆ ಬೀಸು ಎಂದು ಭೀಮನಿಗೆ ಕಣ್ಸನ್ನೆ ಮಾಡಿದಾಗ, ಕೇವಲ ಲಿಪಿಕಾರನಾದ ಕುಮಾರವ್ಯಾಸ ಬರೆವುದನ್ನು ನಿಲ್ಲಿಸಿ 'ಇದಾವ ನ್ಯಾಯ, ಏನನ್ಯಾಯ! ಕೃಷ್ಣನ ಕುಹಕವ ನೋಡಲ್ಲಿ!' ಎಂದು ಉದ್ಗರಿಸುತ್ತ ತನ್ನ ಆರಾಧ್ಯದೈವವನ್ನೂ ಖಂಡಿಸುತ್ತಾನೆ.

ಇಂದು ನಾವು ಶ್ರದ್ಧೆ, ಗೌರವಗಳನ್ನು ಉಳಿಸಿಕೊಂಡೇ ಹಿಂದಿನ ಧಾರ್ಮಿಕ ಪುರುಷರ ದೋಷ, ಅಚಾತುರ್ಯ ಗಳನ್ನು ಪ್ರಶ್ನಿಸುವ, ವಿಮರ್ಶಿಸುವ ಧೈರ್ಯ-ವಿವೇಕವನ್ನು ಪೋಷಿಸಿಕೊಳ್ಳಬೇಕಾದ ಅಗತ್ಯವಿದೆ. ಅಂತಹ ಪೋಷಣೆ ಪ್ರಾಚೀನ ಕಾವ್ಯಪ್ರತಿಭೆಯಿಂದ ಸಿಗುತ್ತದೆ. ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಹಾಸುಹೊಕ್ಕಾಗಿರುವ ಇಂತಹ ಹಲವು ಸೂಕ್ಷ್ಮವಿವೇಕಗಳಿಗೆ, ಜ್ಞಾನಪರಂಪರೆಗೆ ಕುರುಡಾದವರು ಮಾತ್ರ ಹಳಗನ್ನಡವನ್ನು ಪಠ್ಯದಿಂದ ಹೊರಗಿಡಬಲ್ಲರು.

ಚುರುಮುರಿ



ವಾಟರ್ ಸಿಟಿ

• ಕೆ.ವಿ.ರಾಜಲಕ್ಷ್ಮಿ

'ಅಬ್ಬಾ ಅದೇನು ಮಳೆ? ಮೈಸೂರಿಗೆ ಹೋಗೋಕ್ಕೆ ರಸ್ತೆ ಜಲಾವೃತ, ಸದ್ಯಕ್ಕೆ ರೈಲಿಗೂ ನೋ ಎಂಟ್ರಿ' ನನ್ನವಳ ಕಿಟಿಕಿಟಿ.

'ನೆಂಟರ ಮದುವೆ ಕಮ್ ಹಬ್ಬದ ಪ್ರೋಗ್ರಾಮ್ ನೀರುಪಾಲು' ಅತ್ತೆಯ ಸಂಕಟ.

'ಎಲ್ಲೆಲ್ಲಿ ನೋಡಲಿ ನೀರೆಯರ ಕಾಣುವೆ...' ರಾಗವೆಳೆದೆ. ನನ್ನವಳ ಕಣ್ಣು ಕೆಂಪಾದಾಗ ನಾಲಗೆ ಜಾರಿದ್ದ ಅರಿವಾಗಿ 'ನೀರನ್ನೇ ಅನ್ನುವುದು ಜಾರಿ... ಸಾರಿ' ಎಂದೆ. ಪುಟ್ಟಿ ಕಿಸಕ್ಕನೆ ನಕ್ಕಳು.

'ಮನೆಯಿಂದ ಹೊರಗಡೆ ಕಾಲಿಡಲಾಗದು, ಬಟ್ಟೆ ಒಣಗದು, ವರ್ಷವಿಡೀ ವರ್ಷಾಕಾಲ ಅನ್ನೋ ಹಾಗಾಗಿದೆ. ಸಿಲಿಕಾನ್ ಸಿಟಿ ಬರ್ತಾ ಬರ್ತಾ ವಾಟರ್ ಸಿಟಿ ಆಗ್ತಿದೆ, ಸ್ಮಾರ್ಟ್ ಸಿಟಿ ದೂರದ ಮಾತು' ನನ್ನವಳ ಪ್ರಸ್ತುತಿ.

'ಅಲ್ವೇ ಮತ್ತೆ? ಪರಿಸರ ಸಂರಕ್ಷಣೆ ಇಲ್ಲದಿದ್ದರೆ, ಅವೈಜ್ಞಾನಿಕವಾಗಿ ನಗರ ಬೆಳೆದರೆ ಹೀಗೇ ವರ್ಷಕ್ಕೊಮ್ಮೆ ತುಂಬೋ ಕೆರೆ ಕಟ್ಟೆ ಇಷ್ಟಕ್ಕೇ ಕೋಡಿ ಒಡೆದು ಅವಾಂತರ ಸೃಷ್ಟಿಯಾಗುತ್ತೆ' ಅತ್ತೆಯ ಅನುಭವದ ಮಾತು.

'ಅಪ್ಪಾ ಇಂಗ್ಲಿಷ್ ಡಿಕ್ಷನರಿ ಬೇಕಿತ್ತು' ಪುಟ್ಟಿಯ ಮನವಿ. 'ಈಗಾಗಲೇ ಕೊಡಿಸಿದ್ದು ಹೊಸತಾಗೇ ಇದೆ, ಮತ್ಯಾಕೆ?' ನನ್ನವಳ ಕ್ವೈರಿ.

'ನಿನಗರ್ಥವಾಗೋಲ್ಲ ಬಿಡು, ಒಂದು ವೇಳೆ ಶಶಿ ತರೂರ್ ಕಾಂಗ್ರೆಸ್ ಅಧ್ಯಕ್ಷರಾದರೆ ಅವರ ಭಾಷಣ ಅರ್ಥ ಮಾಡ್ಕೊಳ್ಳೋಕೆ ಬೇಕಲ್ಲ?' ಪುಟ್ಟಿಯನ್ನು ವಹಿಸಿಕೊಂಡೆ.

ಅಷ್ಟರಲ್ಲಿ ಕಂಠಿಯ ಆಗಮನ, ಕೈಯಲ್ಲಿ ಮುದ್ದಾದ ಗಣಪನ ಮೂರ್ತಿ. 'ನಿಮಗೆಂತಲೇ ತಂದೆ, ಪರಿಸರಸ್ನೇಹಿ, ಹಬ್ಬದ ನಂತರ ಇದೇ ಮಣ್ಣಲ್ಲಿ ಗಿಡ ಬರುತ್ತೆ' ಎಂದ.

'ಅಂದ್ಹಾಗೆ ಬಾಸ್ ಮನೇಲಿ ಗೌರಿ ಬಾಗಿನಕ್ಕೆ ರೇಷ್ಮೆ ಸೀರೆ ಉಡುಗೊರೆ ಪ್ರಾಯೋಜಿಸಿದ್ದಾರೆ. ಮಳೆ ಕಾರಣ ಕೊರಿಯರ್ ಮಾಡ್ತಾರೆ, ನಿಮ್ಮ ವಿಳಾಸವನ್ನೂ ಕೊಟ್ಟಿದ್ದೀನಿ' ಎಂದ.

'ಇನ್ನೇನು ಹಾಲಿನ ಬೆಲೆ ಮೂರು ರೂಪಾಯಿ ಜಾಸ್ತಿಯಾಗಬಹುದು ಅನ್ನೋ ಸೂಚನೆ, ಅಷ್ಟರೊಳಗೆ ಗಟ್ಟಿಹಾಲಿನ ಕಾಫಿ ಕುಡಿದುಬಿಡಬೇಕು' ಅರ್ಥಗರ್ಭಿತವಾಗಿ ನನ್ನವಳತ್ತ ನೋಡಿದೆ. 'ಕಾಫಿ ತರ್ತೀನಿ ಇರಿ' ಎನ್ನುತ್ತಾ ನನ್ನವಳು ಅಡುಗೆಮನೆಗೆ ಹಾರಿದಳು.

ಸಂಗತ

ಶಾಲೆಗಳಲ್ಲಿ ಇ- ಕಸದ ಕಿರಿಕಿರಿ

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಟನ್‌ಗಟ್ಟಲೆ ಇ–ಕಸ ಸಂಗ್ರಹಗೊಂಡಿದ್ದು, ವಿಲೇವಾರಿ ಸಮಸ್ಯೆ ಎದುರಾಗಿದೆ

• ಗುರುರಾಜ್ ಎಸ್. ದಾವಣಗೆರೆ


ಸರ್ಕಾರಿ ಶಾಲೆಯೊಂದರ ಸೈನ್ಸ್ ಕ್ಲಬ್ ಉದ್ಘಾಟನೆಗೆಂದು ಹೋದಾಗ ಕಾರಿಡಾರ್‌ನ ಒಂದು ಭಾಗದಲ್ಲಿ ಹಳೆಯ ಆ್ಯಸಿಡ್ ಬ್ಯಾಟರಿ, ಡೆಸ್ಕ್‌ಟಾಪ್ ಕಂಪ್ಯೂಟರ್, ಮಾನಿಟರ್, ಡೇಟಾ ಪವರ್ ಕೇಬಲ್‌ಗಳು, ಪ್ರೊಜೆಕ್ಟರ್, ಇಯರ್ ಫೋನ್, ಯುಪಿಎಸ್, ಕೀಬೋರ್ಡ್, ಮೈಕು, ಟೆಲಿವಿಷನ್, ರೇಡಿಯೊ ಸೆಟ್, ಜಂಕ್ಷನ್ ಬಾಕ್ಸ್‌ಗಳನ್ನು ರಾಶಿ ಹಾಕಲಾಗಿತ್ತು. 'ಇದೇನು?' ಎಂದು ಶಾಲೆಯವರನ್ನು ಕೇಳಿದಾಗ, 'ಸಾರ್, ಇದು ನಮ್ಮ ಶಾಲೆಯಲ್ಲಿ ಶೇಖರಣೆ ಗೊಂಡಿರುವ ಇ- ತ್ಯಾಜ್ಯ. ಎಷ್ಟಿದೆ ಎಂದು ಲೆಕ್ಕ ಕೊಡಲು ಇಲಾಖೆ ಹೇಳಿದೆ, ಅದಕ್ಕಾಗಿ ಇಲ್ಲಿ ರಾಶಿ ಹಾಕಿದ್ದೇವೆ, ಇದರ ವಿಲೇವಾರಿ ದೊಡ್ಡ ತಲೆನೋವಾಗಿದೆ' ಎಂದರು.

ಹೌದು, ರಾಜ್ಯದಲ್ಲಿ ಈಗ ಲೆಕ್ಕ ಸಿಕ್ಕಿರುವ ಐದು ಸಾವಿರ ಶಾಲೆಗಳಲ್ಲಿ ಬರೋಬ್ಬರಿ 1,387 ಟನ್ ಇ- ಕಸ ಸಂಗ್ರಹಗೊಂಡಿದ್ದು ಶಿಕ್ಷಣ ಇಲಾಖೆಯ ನಿದ್ದೆಗೆಡಿಸಿದೆ. ಮಾಹಿತಿ ತಂತ್ರಜ್ಞಾನ ಕ್ರಾಂತಿಯ ಈ ದಿನಗಳಲ್ಲಿ ಗುಣಮಟ್ಟದ ಶಿಕ್ಷಣ ಸಂವಹನಕ್ಕೆ ಕಂಪ್ಯೂಟರ್, ಇಂಟರ್‌ನೆಟ್ ಬಳಕೆ ಅನಿವಾರ್ಯ ಎನ್ನುವಂತಾ ಗಿರುವುದರಿಂದ ಖಾಸಗಿ ಶಾಲೆಗಳು ಲಕ್ಷಾಂತರ ರೂಪಾಯಿ ಬಂಡವಾಳ ಹೂಡಿ ಅತ್ಯಾಧುನಿಕ ಕಂಪ್ಯೂಟರ್, ಲ್ಯಾಪ್ ಸ್ಮಾರ್ಟ್ ಬೋರ್ಡ್‌ಗಳುಳ್ಳ ತರಗತಿ ನಿರ್ಮಿಸಿ, ಇಂಟಿಗ್ರೇಟೆಡ್ ಕಂಪ್ಯೂಟರ್ ಟೆಕ್ನಾಲಜಿ ಬಳಸಿಕೊಂಡು ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಾ ವರ್ಷಗಳೇ ಕಳೆದಿವೆ. ಸರ್ಕಾರವೇ ಮುತುವರ್ಜಿ ವಹಿಸಿ ಸರ್ಕಾರಿ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್, ಇಂಟರ್‌ನೆಟ್ ಮತ್ತು ಅವು ಕೆಲಸ ಮಾಡಲು ಬೇಕಾದ ಎಲ್ಲ ಮೂಲಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ. ವಿದ್ಯಾರ್ಥಿಗಳು ಸಮರ್ಥವಾಗಿ ಬಳಸಿಕೊಂಡು ಜ್ಞಾನ, ಕೌಶಲ ಎರಡನ್ನೂ ಸಂಪಾದಿಸುತ್ತಿದ್ದಾರೆ.

ಇಪ್ಪತ್ತು ವರ್ಷಗಳಿಂದ ಕಂಪ್ಯೂಟರ್ ಶಿಕ್ಷಣವು ಶಾಲೆಗಳಲ್ಲಿ ಜಾರಿಯಲ್ಲಿದೆ. ಮೂಲ ವಿಧಾನಕ್ಕೆ ಪೂರಕ ಎಂಬಂತೆ ಇದರ ಬಳಕೆ ನಡೆಯುತ್ತಿತ್ತು. ಕೋವಿಡ್ ಸಾಂಕ್ರಾಮಿಕ ಉಲ್ಬಣಿಸಿ ವರ್ಷಗಳ ಕಾಲ ಶಾಲೆಗಳು ಬಾಗಿಲು ಮುಚ್ಚಿಕೊಂಡಾಗ ಕಂಪ್ಯೂಟರ್, ಇಂಟರ್‌ನೆಟ್ ಆಧಾರಿತ ಆನ್‌ಲೈನ್ ಶಿಕ್ಷಣ ಅನಿವಾರ್ಯ ವಾಯಿತು. ಜೂಮ್ ಮೀಟಿಂಗುಗಳು, ಸಂವಾದ, ಪ್ರಶ್ನೋತ್ತರ ಕಾರ್ಯಕ್ರಮಗಳು ಸಾಮಾನ್ಯ ಎನಿಸಿಬಿಟ್ಟವು. ಶಿಕ್ಷಕರು ಬದಲಾದ ಸನ್ನಿವೇಶಕ್ಕೆ ಹೊಂದಿಕೊಂಡು ಪಾಠ ಮಾಡಬೇಕೆನ್ನುವಷ್ಟರಲ್ಲಿ ರಾಶಿ ರಾಶಿ ಕಂಪ್ಯೂಟರ್, ಕೀಬೋರ್ಡ್, ಮೌಸ್, ಪ್ರೊಜೆಕ್ಟರ್, ಇಯರ್ ಫೋನ್, ಯುಪಿಎಸ್, ಡೇಟಾ ಕೇಬಲ್, ಸಿ.ಡಿ., ಡಿವಿಡಿ ಪ್ಲೇಯರ್, ಮೋಡೆಮ್‌ಗಳೆಲ್ಲ ಕಪಾಟಿನಿಂದ ಹೊರಬಂದವು. ಅವುಗಳಲ್ಲಿ ಹೆಚ್ಚಿನವು ಕೆಲಸ ಮಾಡುತ್ತಿರಲಿಲ್ಲ. ವಿಷಯವನ್ನು ಇಲಾಖೆಯ ಗಮನಕ್ಕೆ ತಂದಾಗ, ಕೆಲಸ ಮಾಡದ ಸಾಮಾನುಗಳನ್ನು ಲೆಕ್ಕಹಾಕಿ ಪಟ್ಟಿ ನೀಡುವಂತೆ ಇಲಾಖೆ ತಾಕೀತು ಮಾಡಿತು. ಹಾಗೆ ಲೆಕ್ಕ ಹಾಕಿದಾಗ ಸಿಕ್ಕಿದ್ದೇ ಈ ಕಸದ ರಾಶಿ.

ಕಂಪ್ಯೂಟರ್ ಶಿಕ್ಷಣವನ್ನು ಶಾಲಾ ಹಂತದಲ್ಲಿ ಪ್ರಾರಂಭಿಸಿದ ಹೊಸದರಲ್ಲಿ ಸರ್ಕಾರ ಮತ್ತು ಅನೇಕ ಕಂಪ್ಯೂಟರ್ ಕಂಪನಿಗಳ ಸಹಾಯದಿಂದ ಶಾಲೆಗಳಿಗೆ ಸರಬರಾಜಾದ ಡೆಸ್ಕ್‌ಟಾಪ್ ಕಂಪ್ಯೂಟರ್, ಬ್ಯಾಟರಿ, ಯುಪಿಎಸ್, ಪ್ರೊಜೆಕ್ಟರ್, ಪ್ರಿಂಟರ್, ಮಲ್ಟಿ ಫಂಕ್ಷನ್ ಅಡಾಪ್ಟರ್ ಇಂದಿಗೆ ಹತ್ತು ಹದಿನೈದು ವರ್ಷ ಹಳೆಯವು. ಎಂಎಲ್‌ಎ, ಎಂಪಿಗಳ ಅನುದಾನದಲ್ಲಿ ಮತ್ತಷ್ಟು ಹೊಸ ಕಂಪ್ಯೂಟರ್ ಹಾಗೂ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು ಶಾಲಾ ಕೊಠಡಿಗಳಲ್ಲಿ ಜಮಾ ಆದವು. ಈಗ ಅವು ಕೆಲಸ ನಿಲ್ಲಿಸಿವೆ. ರಿಪೇರಿ ಈಗ ಸಾಧ್ಯವಿಲ್ಲ.

ಪ್ರತೀ ಶಾಲೆಯಲ್ಲಿ ಈಗ ಹತ್ತತ್ತಿರ 500 ಕಿಲೊ ತೂಕದ ಎಲೆಕ್ಟ್ರಾನಿಕ್ಸ್ ತ್ಯಾಜ್ಯ ವಸ್ತುಗಳಿವೆ. ಮಾಹಿತಿಯಂತೆ, 30 ಸಾವಿರ ಆ್ಯಸಿಡ್ ಬ್ಯಾಟರಿ ಕೋಶಗಳು, 14 ಸಾವಿರ ಡೆಸ್ಕ್‌ಟಾಪ್‌ಗಳು, 20 ಸಾವಿರ ಮಾನಿಟರ್‌ಗಳು, 18 ಸಾವಿರ ಡೇಟಾ ಪವರ್ ಕೇಬಲ್‌ಗಳು, 11 ಸಾವಿರ ಕೀಬೋರ್ಡ್‌ಗಳು, 10 ಸಾವಿರ ಮೈಕುಗಳು, 2,600 ಟೆಲಿವಿಷನ್‌ಗಳು, 9 ಸಾವಿರ ರೇಡಿಯೊ ಸೆಟ್‌ಗಳು, ಹಲವು ಸಾವಿರ ಜಂಕ್ಷನ್ ಬಾಕ್ಸ್‌ಗಳು, ಹೀಗೆ ಟನ್‌ಗಟ್ಟಲೆ ಕಸ ಶಾಲೆಗಳಲ್ಲಿ ಜಮೆಯಾಗಿದೆ. ಕೇವಲ 5 ಸಾವಿರ ಶಾಲೆಗಳಿಂದ ಇಷ್ಟೊಂದು ಕಸ ಸೃಷ್ಟಿಯಾಗಿದೆಯೆಂದರೆ, ಕರ್ನಾಟಕ ದಲ್ಲಿ ಒಟ್ಟು 50 ಸಾವಿರ ಸರ್ಕಾರಿ ಶಾಲೆಗಳಿವೆ. ಅವುಗಳಿಂದ ಇನ್ನೆಷ್ಟು ಕಸ ಹೊರಬರಬಹುದು?



ಟೆಂಡರ್ ಕರೆದು ಸಮಸ್ಯೆ ಬಗೆಹರಿಸುವು ದಾಗಿ ಶಿಕ್ಷಣ ಇಲಾಖೆ ಹೇಳುತ್ತಿದೆ. ಯಾವುದೇ ಗುತ್ತಿಗೆದಾರ 5 ಸಾವಿರ ಶಾಲೆಗಳನ್ನು ಸಂಪರ್ಕಿಸಿ ಕಸ ಸಂಗ್ರಹಿಸುವುದು ತೀರಾ ದೊಡ್ಡ ಖರ್ಚಿನ ಬಾಬತ್ತು. ರಾಜ್ಯದ ಮೂಲೆ ಮೂಲೆಯ ಶಾಲೆಗಳಿಗೆ ಹೋಗಿ ಅಲ್ಲಿನ ಕಸವನ್ನು ಹೊತ್ತು ತರಲು ಕಂಪನಿಗಳು ಸಾವಿರಾರು ಕಿಲೊಮೀಟರ್ ದೂರ ವಾಹನ ಓಡಿಸಿ ಹೊಗೆ ಎಬ್ಬಿಸಿ ಮಾಲಿನ್ಯ ಹಬ್ಬಿಸಿದರೆ ಏನು ಪ್ರಯೋಜನ? ಇದರ ಬದಲು ಪ್ರತೀ ಜಿಲ್ಲಾ ಕೇಂದ್ರದಲ್ಲಿರುವ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಬಳಸಿಕೊಂಡು ಶಾಲೆಯ ಕಸಕ್ಕೆ ಮುಕ್ತಿ ನೀಡಬಹುದು. ಊರಿನ ಆಯಕಟ್ಟಿನ ಸ್ಥಳದಲ್ಲಿ ಇ- ಕಸ ಸಂಗ್ರಹ ಕೇಂದ್ರ ತೆರೆದರೆ ಮನೆ, ಸಂಘ ಸಂಸ್ಥೆ, ಜನ ಬಳಸಿ ಬಿಸಾಡಿದ ಇ- ತ್ಯಾಜ್ಯಕ್ಕೆ ಮುಕ್ತಿ ನೀಡಬಹುದು.

ಮಾಲಿನ್ಯ ನಿಯಂತ್ರಣ ಮಂಡಳಿಗೆ ದೊಡ್ಡ ಅವಕಾಶ ಅನಾಯಾಸವಾಗಿ ಒದಗಿಬಂದಿದೆ. ರೀಸೈಕ್ಲಿಂಗ್ ಘಟಕಗಳಿಗೂ ಬಹಳಷ್ಟು ಕೆಲಸ ಸಿಗುತ್ತದೆ. ಅದನ್ನವರು ಬಳಸಿಕೊಳ್ಳಬೇಕು ಅಷ್ಟೆ!

ವಾಚಕರ ವಾಣಿ

ಎಲ್ಲರಿಗೂ ಗೊತ್ತಿರುವ ಸತ್ಯ!

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕು ಪಂಚಾಯಿತಿಗೆ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಾಹಕ ಅಧಿಕಾರಿಯನ್ನು ನೇಮಕ ಮಾಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಆ. 30). ಆದರೆ ಈಗಿನ ಸರ್ಕಾರದಲ್ಲಿ ಇದು ಹೊಸ ವಿಷಯವೇನಲ್ಲ. ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ಈಗ ಎರಡು ವರ್ಷಗಳ ಹಿಂದೆಯೇ ಗುತ್ತಿಗೆ ಆಧಾರದ ಮೇಲೆ ನಿವೃತ್ತ ನೌಕರರೊಬ್ಬರನ್ನು ನೇಮಕ ಮಾಡಲಾಗಿದೆ. ಮತ್ತೂ ಆಶ್ಚರ್ಯಕರ ಸಂಗತಿ ಎಂದರೆ, ಅವರಿಗೆ 69 ವರ್ಷ ಹಾಗೂ ಇನ್ನೂ ಆ ಹುದ್ದೆಯಲ್ಲಿ ಮುಂದುವರಿಯುತ್ತಿದ್ದಾರೆ. ಈ ರೀತಿಯ ನೇಮಕಾತಿಗಳು ರಾಜಾರೋಷವಾಗಿ ನಡೆಯುತ್ತವೆ ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ.

ಆತ್ರೇಯ, ಶಿವಮೊಗ್ಗ

ತೆಂಗಿನ ಚಿಪ್ಪಿಗೂ ಒಂದು ಕಾಲ

ತೆಂಗಿನ ಚಿಪ್ಪನ್ನು ಒಂದು ಕಾಲದಲ್ಲಿ ಅನುಪಯುಕ್ತ ಎಂದು ಭಾವಿಸಿ ತಿಪ್ಪೆಗೆ ಎಸೆಯಲಾಗುತ್ತಿತ್ತು. ಈಗ ಅನೇಕ ಉತ್ಪನ್ನಗಳಿಗೆ ತೆಂಗಿನ ಚಿಪ್ಪು ಬಹಳ ಬೇಡಿಕೆಯ ಕಚ್ಚಾ ವಸ್ತುವಾಗಿದೆ. ತೆಂಗಿನ ಚಿಪ್ಪು ಪ್ರತಿವರ್ಷ ಬೇಡಿಕೆಯಲ್ಲಿ ಏರಿಕೆ ಕಾಣುತ್ತಿದೆ. ಕೆಲವೇ ವರ್ಷಗಳಲ್ಲಿ ಒಂದು ಟನ್ ತೆಂಗಿನ ಚಿಪ್ಪಿನ ಬೆಲೆ ಬಹುತೇಕ ದುಪ್ಪಟ್ಟಾಗಿದೆ ಎಂದು ವರದಿಗಳು ತಿಳಿಸುತ್ತವೆ. ಈ ವರ್ಷ ಮಾರುಕಟ್ಟೆಯಲ್ಲಿ ಒಂದು ಟನ್ ತೆಂಗಿನ ಚಿಪ್ಪಿನ ಬೆಲೆ ಸರಾಸರಿ ₹ 15,000 ತಲುಪಿದೆ. ಕೇರಳ ಮತ್ತು ತಮಿಳುನಾಡಿನ ನಂತರ ದೇಶದಲ್ಲಿ ತೆಂಗಿನಕಾಯಿ ಉತ್ಪಾದನೆಯಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ತೆಂಗಿನ ಚಿಪ್ಪು ಆಧಾರಿತ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿದ್ದರೂ, ಅದರಲ್ಲಿ ಪ್ರಮುಖವಾಗಿ ತೆಂಗಿನ ಚಿಪ್ಪಿನ ಇದ್ದಿಲು ಕೈಗಾರಿಕೆ ಸ್ಥಾಪಿಸುವುದು ಕಠಿಣ ಕೆಲಸವಾಗಿದೆ ಎಂಬುದು ತಜ್ಞರು ಮತ್ತು ಉತ್ಪಾದಕರ ನಿಲುವಾಗಿದೆ.

ಇನ್ನು ವಿದೇಶಗಳಲ್ಲಿ ಇದರ ಬೇಡಿಕೆ ಗಗನಕ್ಕೇರಿದೆ. ನಮ್ಮ ರಾಜ್ಯ ಇದನ್ನು ಯಶಸ್ವಿಯಾಗಿ ರಫ್ತು ಮಾಡುವಲ್ಲಿ ವಿಫಲಗೊಂಡಿದೆ ಎಂದರೆ ತಪ್ಪಾಗಲಾರದು. ತೆಂಗು ಅಭಿವೃದ್ಧಿ ಮಂಡಳಿ ಇದರ ಬಗ್ಗೆ ಗಮನಹರಿಸಿ, ತಕ್ಷಣ ಕಾರ್ಯೋನ್ಮುಖವಾಗಬೇಕಿದೆ ಮತ್ತು ತೆಂಗಿನ ಚಿಪ್ಪು ಬಳಕೆ ಮಾಡುವ ಗುಡಿ ಮತ್ತು ಸಣ್ಣ ಕೈಗಾರಿಕೆಗಳಿಗೆ ರಾಜ್ಯ ಸರ್ಕಾರ ಹೆಚ್ಚಿನ ಹಣಕಾಸು ನೆರವು ನೀಡುವ ಅವಶ್ಯಕತೆ ಇದೆ.

ವಿಜಯಕುಮಾರ್ ಎಚ್.ಕೆ., ರಾಯಚೂರು

ಹೆಚ್ಚುವರಿ ಮಹಡಿ: ಅಪಾಯ ಮನಗಾಣಿ

ದೆಹಲಿಯ ಸಮೀಪದ ನೊಯಿಡಾದಲ್ಲಿ ಕಾನೂನುಬಾಹಿರವಾಗಿ ಕಟ್ಟಿದ್ದ ಗಗನಚುಂಬಿ ಅವಳಿ ಕಟ್ಟಡಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ನಿರ್ದಾಕ್ಷಿಣ್ಯವಾಗಿ ಕೆಡವಲಾಗಿದೆ. ಬೆಂಗಳೂರೂ ಸೇರಿದಂತೆ ಅದೆಷ್ಟು ನಗರಗಳಲ್ಲಿ ಈ ರೀತಿಯ ಅನುಮತಿ ಮೀರಿ ಕಟ್ಟಿದ ಕಟ್ಟಡಗಳಿವೆಯೋ ಏನೋ? ದುರಾಸೆಯ ಬಿಲ್ಡರ್‌ಗಳು ಮಾತ್ರ ಹೀಗೆ ಕಾನೂನುಬಾಹಿರವಾಗಿ ಕಟ್ಟಡ ಕಟ್ಟುವುದಲ್ಲ, ಈ ವಿಷಯದಲ್ಲಿ ಜನಸಾಮಾನ್ಯರೂ ಕಡಿಮೆ ಏನಿಲ್ಲ.

ಚಿಕ್ಕ ಸೈಟುಗಳಲ್ಲಿ ಒಂದೆರಡು ಮಹಡಿಗಳಿಗೆ ಅನುಮತಿ ದೊರಕಿದರೆ ಮೂರು– ನಾಲ್ಕು ಮಹಡಿಗಳನ್ನು ಅದೆಷ್ಟು ಮಂದಿ ಕಟ್ಟಿ ಬಾಡಿಗೆಗೆ ನೀಡಿ ವಿಪರೀತ ದುಡ್ಡು ಮಾಡುವುದಿಲ್ಲ? ಇಂತಹ ಹೆಚ್ಚುವರಿ ಮಹಡಿಗಳಿಂದ ಅಲ್ಲಿ ವಾಸವಾಗಿರುವವರಿಗಷ್ಟೇ ಅಲ್ಲ ನೆರೆಹೊರೆಯವರಿಗೂ ಅಪಾಯ ಕಟ್ಟಿಟ್ಟ ಬುತ್ತಿ. ಹೀಗೆ ಕಾನೂನುಬಾಹಿರ ವಾಗಿ ಕಟ್ಟಿದ ಮಹಡಿಗಳ ಸರ್ವೆ ನಡೆಸಿ ಒಂದು ವರ್ಷದ ಒಳಗೆ ಕೆಡವುವಂತೆ ಎಲ್ಲ ರಾಜ್ಯಗಳ ಸರ್ಕಾರಗಳಿಗೆ ನ್ಯಾಯಾಲಯಗಳು ಕೂಡಲೇ ಆದೇಶ ನೀಡಬೇಕು. ಜನಹಿತದ ದೃಷ್ಟಿಯಿಂದ ಇದು ಅಪೇಕ್ಷಣೀಯ.

ಬಿ.ಎನ್.ಭರತ್, ಬೆಂಗಳೂರು

ಕಟ್ಟಿ ನಿಲ್ಲಿಸುವಾಗ ಕಾಣಲಿಲ್ಲವೇ?

ನೊಯಿಡಾದಲ್ಲಿ ನಿಯಮಬಾಹಿರವಾಗಿ ನಿರ್ಮಿಸಿದ್ದ ಬಹುಮಹಡಿ ಅವಳಿ ಕಟ್ಟಡಗಳನ್ನು ಉರುಳಿಸಿದ ಕಾರ್ಯವನ್ನು ಜನ ಚಪ್ಪಾಳೆ ಹೊಡೆದು ಸ್ವಾಗತಿಸಿದ್ದಾರೆ. ಕೋಟ್ಯಂತರ ರೂಪಾಯಿ ಮಣ್ಣುಪಾಲಾಗಿದೆ. ಆದರೆ ಇಷ್ಟು ದೊಡ್ಡ ಕಟ್ಟಡಗಳನ್ನು ಕಟ್ಟಿ ಮುಗಿಸುವವರೆಗೂ ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡುತ್ತಿದ್ದರು? ಅವರಿಗೆ ಯಾವ ಶಿಕ್ಷೆಯೂ ಇಲ್ಲವೇ? ಈ ದೇಶದ ಸಂಪತ್ತಿನ ನಾಶಕ್ಕೆ ಯಾರು ಹೊಣೆ?

ಚಂದ್ರಶೇಖರ ಎಚ್.ಎಸ್., ಬೆಂಗಳೂರು

ಹರಿಯುವ ನೀರಿಗೆ ತೊರೆ, ಕೆರೆಗಳಿರಲಿ

ರಾಜ್ಯದಲ್ಲಿ ಮಳೆ ಅಬ್ಬರದಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಈ ರೀತಿಯ ಅತಿವೃಷ್ಟಿ ಇದೇನು ಹೊಸತಲ್ಲ. ಮಳೆ ದಾಖಲೆಗಳನ್ನು ತಿರುವಿಹಾಕಿದರೆ, ಹಲವಾರು ಬಾರಿ ಇಂಥ ಅವ್ಯವಸ್ಥೆ ಘಟಿಸಿರುವುದು ತಿಳಿಯುತ್ತದೆ. ಹೀಗೆ ಮಳೆಯಿಂದ ಹೆಚ್ಚು ಹಾನಿ ಉಂಟಾಗಲು ಮಾನವನ ಹಸ್ತಕ್ಷೇಪವೇ ಮುಖ್ಯ ಕಾರಣವಾಗಿದೆ. ನೀರು ಸರಾಗವಾಗಿ ಹರಿಯುವ ರಾಜಕಾಲುವೆ, ತೊರೆಗಳನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ನೀರ ಹರಿವಿನ ಭಾಗಗಳಲ್ಲಿ ಅಡ್ಡಲಾಗಿ ರಸ್ತೆಗಳನ್ನು ಅವೈಜ್ಞಾನಿಕವಾಗಿ ನಿರ್ಮಾಣ ಮಾಡಿರುವುದರಿಂದ ನೀರು ರಸ್ತೆಗಳ ಮೇಲೆ ನಿಂತಿದೆ. ಕೆರೆಗಳನ್ನು ಒತ್ತುವರಿ ಮಾಡಿರುವುದರಿಂದ ಮತ್ತು ಕೆರೆ ಕೋಡಿಗಳು ದುರಸ್ತಿಯಾಗದಿರುವುದರಿಂದ ಹಾನಿಯುಂಟಾಗಿದೆ.

ಒಂದು ವರ್ಷಕ್ಕೆ ಮೊದಲು ಕೋಲಾರ ಜಿಲ್ಲೆಯ ಕೆರೆಗಳು ನೀರಿಲ್ಲದೆ ಭಣಗುಡುತ್ತಿದ್ದಾಗ, 'ನೀರಿಲ್ಲದ ನಾಡಿನಲ್ಲೇಕೆ ಕೆರೆಗಳು' ಎಂಬ ಉಪೇಕ್ಷೆಯ ಮಾತುಗಳನ್ನಾಡುತ್ತಿದ್ದ ಸಂದರ್ಭದಲ್ಲಿ, ಕೋಲಾರಮ್ಮನ ಕೆರೆಯನ್ನು ಉಳಿಸುವ ದಿಸೆಯಲ್ಲಿ ಮಾನವ ಸರಪಳಿಯನ್ನು ನಿರ್ಮಾಣ ಮಾಡಿ ಜಾಗೃತಿ ಮೂಡಿಸಲಾಯಿತು. ಈ ವರ್ಷ ಕೋಲಾರಮ್ಮನ ಕೆರೆ ತುಂಬಿ ಕೃಷಿಗೆ ನೀರುಣಿಸುತ್ತಿದೆ. ನೀರು ಜೀವಜಲವೇ ವಿನಾ ಮೃತ್ಯುವಲ್ಲ ಎಂಬುದನ್ನು ಮನಗಾಣಲಿ. ಈಗಲಾದರೂ ಜನರು ಮತ್ತು ಸರ್ಕಾರ ಎಚ್ಚೆತ್ತುಕೊಳ್ಳಲಿ. ನೀರ ಹರಿವಿನ ರಾಜಕಾಲುವೆ, ತೊರೆಗಳ ಒತ್ತುವರಿ ತೆರವಾಗಲಿ. ನಕಾಶೆಯಲ್ಲಿ ಇರುವಂತೆ, ಒತ್ತುವರಿಯಾದ ಕೆರೆಯ ಸ್ಥಳವು ನೀರಿಗಿರಲಿ, ಕೋಡಿಗಳು ದುರಸ್ತಿಯಾಗಲಿ. ನೀರನ್ನು ಕುರಿತ ನಮ್ಮ ಹಿಂದಿನವರ ತಿಳಿವಳಿಕೆ ನಮ್ಮದಾಗಲಿ.

ಡಾ. ರುದ್ರೇಶ್ ಅದರಂಗಿ, ಬೆಂಗಳೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಕಾಂಗ್ರೆಸ್‌ನಲ್ಲಿ ತಲ್ಲಣ ಪಕ್ಷ ತೊರೆಯಲು ಪೈಪೋಟಿ



ಕಾಂಗ್ರೆಸ್ ತೊರೆದ ಕೆಲವೇ ದಿನಗಳಲ್ಲಿ ಆರ್‌ಪಿಎನ್ ಸಿಂಗ್ ಅವರು ಬಿಜೆಪಿ ಸೇರಿದರು

ಇದೇ ಸೆಪ್ಟೆಂಬರ್ 7ರಂದು ಕಾಂಗ್ರೆಸ್ ತನ್ನ 'ಭಾರತ ಜೋಡಿಸಿ ಯಾತ್ರೆ'ಗೆ ಚಾಲನೆ ನೀಡಲಿದೆ. ದೇಶದಾದ್ಯಂತ 125 ದಿನಗಳ ಯಾತ್ರೆ ನಡೆಸಿ, ಜನರನ್ನು ಒಗ್ಗೂಡಿಸುವುದು ಈ ಯಾತ್ರೆಯ ಮುಖ್ಯ ಉದ್ದೇಶ. ಆದರೆ ಕಾಂಗ್ರೆಸ್ ಗಮನ ನೀಡಬೇಕಾದ ಅಂಶ ಬೇರೆಯದ್ದು ಎಂದು ಪಕ್ಷದ ನಾಯಕರಾಗಿದ್ದವರೇ ಹೇಳಿದ್ದಾರೆ. ಈಚೆಗಷ್ಟೇ ಪಕ್ಷವನ್ನು ತೊರೆದ ಮುಖಂಡ ಗುಲಾಂ ನಬಿ ಆಜಾದ್ ಅವರು, 'ಭಾರತ ಜೋಡಿಸಿ ಯಾತ್ರೆಗಿಂತ, ಭಾರತದಾದ್ಯಂತ ಕಾಂಗ್ರೆಸ್ ಜೋಡಿಸಿ ಯಾತ್ರೆ ನಡೆಸಬೇಕಾದ ಅನಿವಾರ್ಯ ಇದೆ' ಎಂದು ತಮ್ಮ ರಾಜೀನಾಮೆ ಪತ್ರದಲ್ಲಿ ಹೇಳಿದ್ದರು. 2022ರಲ್ಲಿ ಈವರೆಗೆ ಹಲವು ಪ್ರಮುಖ ನಾಯಕರನ್ನು ಕಾಂಗ್ರೆಸ್ ಕಳೆದುಕೊಂಡಿದೆ. ಕಾಂಗ್ರೆಸ್‌ನಲ್ಲಿನ ಈ ರಾಜೀನಾಮೆ ಪರ್ವ ಮುಂದುವರಿದಿದೆ


ಗುಲಾಂ ನಬಿ ಆಜಾದ್


ಕಪಿಲ್ ಸಿಬಲ್

ಆಧಾರ: ಪಿಟಿಐ, ವಿವಿಧ ಮೂಲಗಳಿಂದ

ಪ್ರಜಾವಾಣಿ ವಾರ್ತೆ

1970ರ ದಶಕದ ಆರಂಭದಲ್ಲಿ ಕಾಂಗ್ರೆಸ್ ಯುವ ಮೋರ್ಚಾದಿಂದ ರಾಜಕಾರಣ ಆರಂಭಿಸಿದ್ದ ಗುಲಾಂ ನಬಿ ಆಜಾದ್ ಅವರು, ಸುಮಾರು ಐವತ್ತು ವರ್ಷ ಪಕ್ಷದೊಟ್ಟಿಗೆ ಇದ್ದವರು. ಇಂದಿರಾ ಗಾಂಧಿ ಅವರ ಅಧಿಕಾರದ ಅವಧಿಯಿಂದ ಸೋನಿಯಾ ಗಾಂಧಿ ಅವರ ಅಧ್ಯಕ್ಷತೆಯವರೆಗೂ ಕಾಂಗ್ರೆಸ್‌ನ ಹಲವು ಏಳುಬೀಳುಗಳಿಗೆ ಅವರು ಸಾಕ್ಷಿಯಾಗಿದ್ದರು. 'ಪಕ್ಷವು ಅವರಿಗೆ ಎಲ್ಲವನ್ನೂ ನೀಡಿದೆ. ಅಧಿಕಾರದ ವಿಚಾರದಲ್ಲಿ ಅವರು ಒಮ್ಮೆಯೂ ಕೆಳಗಿಳಿದಿದ್ದೇ ಇಲ್ಲ' ಎಂದು ಅವರ ಓರಗೆಯ ಕಾಂಗ್ರೆಸ್ ನಾಯಕರು ಹೇಳಿದ್ದಾರೆ.

ಸೋನಿಯಾ ಗಾಂಧಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಇದೇ ಆಜಾದ್ ಅವರು, ಈಗ ಸೋನಿಯಾ ಅವರನ್ನು 'ನಾಮಕಾವಸ್ಥೆ ಅಧ್ಯಕ್ಷೆ' ಎಂದು ಕರೆದಿದ್ದಾರೆ. ಹಿರಿಯರನ್ನು ಕಡೆಗಣಿಸಲಾಗಿದೆ, ಪಕ್ಷದ ಸುಧಾರಣೆಗೆ ಸಲಹೆ ನೀಡಿದವರನ್ನು ತುಚ್ಛವಾಗಿ ನಡೆಸಿಕೊಳ್ಳಲಾಗಿದೆ. ಕಾಂಗ್ರೆಸ್‌ನಲ್ಲಿನ ಮನೋರೋಗಿಗಳ ಕೂಟವು ಪಕ್ಷಕ್ಕೆ ಸಂಬಂಧಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ತನ್ನ ಸ್ಥಾನವನ್ನು ಬಿಜೆಪಿಗೂ, ರಾಜ್ಯಮಟ್ಟದಲ್ಲಿ ಪ್ರಾದೇಶಿಕ ಪಕ್ಷಗಳಿಗೂ ಬಿಟ್ಟುಕೊಟ್ಟಿದೆ ಎಂದು ಅವರು ಆರೋಪಿಸಿದ್ದಾರೆ. ಕಾಂಗ್ರೆಸ್‌ಗೆ ನೂತನ ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಯಬೇಕಿದೆ. ಆದರೆ, 'ಪಕ್ಷದಲ್ಲಿನ ಆಂತರಿಕ ಚುನಾವಣೆ ಎಂಬುದು ಒಂದು ವಂಚನೆ' ಎಂದು ಆಜಾದ್ ಹೇಳಿದ್ದರು.

ಆಜಾದ್ ಅವರ ರಾಜೀನಾಮೆ ಪತ್ರದ ಬಹುಪಾಲು ವೈಯಕ್ತಿಕ ಟೀಕೆಯೇ ತುಂಬಿತ್ತು. ಆದರೆ, ಆಜಾದ್ ಅವರು ಎತ್ತಿದ್ದ ಪ್ರಶ್ನೆಗಳು ಮತ್ತು ಮಾಡಿದ ಟೀಕೆಗಳು ಈಚೆಗೆ ಕಾಂಗ್ರೆಸ್ ತೊರೆದ ಬಹುತೇಕ ಮಂದಿಯದ್ದೂ ಆಗಿದ್ದವು ಎಂಬುದು ಗಮನಾರ್ಹ.

ಯುಪಿಎ ಅವಧಿಯಲ್ಲಿ ಸಚಿವರಾಗಿದ್ದು, ಈ ವರ್ಷ ಕಾಂಗ್ರೆಸ್ ತೊರೆದವರಲ್ಲಿ ಆರ್‌ಪಿಎನ್ ಸಿಂಗ್, ಅಶ್ವಿನಿ ಕುಮಾರ್ ಮೊದಲಿಗರು. 1976ರಿಂದಲೂ ಕಾಂಗ್ರೆಸ್‌ನಲ್ಲೇ ಇದ್ದ ಅಶ್ವಿನಿ ಇದೇ ಫೆಬ್ರುವರಿಯಲ್ಲಿ ರಾಜೀನಾಮೆ ನೀಡಿದಾಗ, 'ನನ್ನ ಘನತೆಯನ್ನು ಉಳಿಸಿಕೊಳ್ಳುವುದೂ ಈ ರಾಜೀನಾಮೆಗೆ ಒಂದು ಪ್ರಮುಖ ಕಾರಣ' ಎಂದು ಹೇಳಿದ್ದರು. ನಾಲ್ಕು ದಶಕಗಳಲ್ಲಿ ಕಾಂಗ್ರೆಸ್‌ನ ಪ್ರಮುಖ ಏಳು ಬೀಳುಗಳಲ್ಲಿ ಜತೆಯಾಗಿದ್ದವರು ಈಗ ಪಕ್ಷವು ತೀರಾ ಕುಸಿದಿರುವಾಗ ಪಕ್ಷವನ್ನು ತೊರೆದಿದ್ದಾರೆ. 'ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಸ್ಥಾನವೂ ಕುಸಿಯುತ್ತಿದೆ ಮತ್ತು ಮತ ಪ್ರಮಾಣವೂ ಕುಸಿಯುತ್ತಿದೆ. ದೇಶದ ವಾಸ್ತವ ಸ್ಥಿತಿಯೊಂದಿಗೆ ಕಾಂಗ್ರೆಸ್ ಇಲ್ಲ ಮತ್ತು ಕಾಂಗ್ರೆಸ್ ಅಪ್ರಸ್ತುತವಾಗುತ್ತಿದೆ. ದೇಶದ ಇಂದಿನ ಎಲ್ಲಾ ಸಮಸ್ಯೆಗಳಿಗೆ ಒಬ್ಬನೇ ವ್ಯಕ್ತಿ ಕಾರಣ ಎಂದು ಹೇಳುವುದರಲ್ಲಿ ಅರ್ಥವಿಲ್ಲ' ಎಂದೂ ಅಶ್ವಿನಿ ಹೇಳಿದ್ದರು.

ಅಶ್ವಿನಿ ಹಾದಿ ಹಿಡಿದ ಸಿಬಲ್

ಅಶ್ವಿನಿ ಕಾಂಗ್ರೆಸ್ ತೊರೆದ ಕೆಲವೇ ದಿನಗಳಲ್ಲಿ ಮುಖಂಡ ಕಪಿಲ್ ಸಿಬಲ್ ಸಹ ಅದೇ ಮಾರ್ಗವನ್ನು ಅನುಸರಿಸಿದರು. ಹಲವು ದಶಕಗಳ ಕಾಲ ಪಕ್ಷಕ್ಕಾಗಿ ದುಡಿದಿದ್ದ ಮತ್ತು ಯುಪಿಎ ಅವಧಿಯಲ್ಲಿ ಸಚಿವರಾಗಿದ್ದ ಕಪಿಲ್ ಸಿಬಲ್ ಅವರು, ರಾಜೀನಾಮೆ ಸಂದರ್ಭದಲ್ಲಿ ವೈಯಕ್ತಿಕ ಟೀಕೆಗಳನ್ನು ಮಾಡಿರಲಿಲ್ಲ. 'ದೇಶದ ಪ್ರಮುಖ ಸಮಸ್ಯೆಗಳ ವಿರುದ್ಧ ಹೋರಾಡಬೇಕಿದೆ. ಈ ಹೋರಾಟದಲ್ಲಿ ನಾನು ಒಂದು ಸ್ವತಂತ್ರ ದನಿಯಾಗಬೇಕಿದೆ. ಹೀಗಾಗಿಯೇ ಪಕ್ಷ ರಾಜಕಾರಣವನ್ನು ತೊರೆಯುತ್ತಿದ್ದೇನೆ' ಎಂದು ತಮ್ಮ ರಾಜೀನಾಮೆ ಪತ್ರದಲ್ಲಿ ಅವರು ಬರೆದಿದ್ದರು. ಆದರೆ ಕಪಿಲ್ ಸಿಬಲ್ ಅವರ ದೆಹಲಿ ನಿವಾಸದ ಮೇಲೆ ವರ್ಷಗಳ ಹಿಂದೆ ಕಾಂಗ್ರೆಸ್ ಕಾರ್ಯಕರ್ತರೇ ದಾಳಿ ಮಾಡಿ, ದಾಂದಲೆ ನಡೆಸಿದ್ದರು. ಕಾಂಗ್ರೆಸ್‌ನಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕು ಎಂದು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದ 23 ನಾಯಕರಲ್ಲಿ ಸಿಬಲ್ ಸಹ ಒಬ್ಬರು. ಆ ಪತ್ರಕ್ಕೆ ಸಹಿ ಮಾಡಿದ ಕಾರಣಕ್ಕೇ ಸಿಬಲ್ ಅವರ ಮನೆಯ ಮೇಲೆ ದಾಳಿ ನಡೆದಿತ್ತು.

ಕಾಂಗ್ರೆಸ್ ತೊರೆದ ಹಿರಿಯ ನಾಯಕರಲ್ಲಿ ಕಪಿಲ್ ಸಿಬಲ್ ಈಗ ಯಾವುದೇ ಪಕ್ಷವನ್ನು ಸೇರದೆ, ತಮ್ಮ ಹೋರಾಟವನ್ನು ಮುಂದುವರಿಸಿದ್ದಾರೆ. ಆಜಾದ್ ಹೊಸ ಪಕ್ಷವನ್ನು ಆರಂಭಿಸುವ ಸಾಧ್ಯತೆ ದಟ್ಟವಾಗಿದೆ. ಆದರೆ ಪಕ್ಷವನ್ನು ತೊರೆದವರು ಬಿಜೆಪಿ ಸೇರಿದ್ದೂ ಇದೆ. ಪಕ್ಷದ ಮುಖಂಡ ಮತ್ತು ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ತಾರಾ ಪ್ರಚಾರಕರಾಗಿದ್ದ ಆರ್‌ಪಿಎನ್ ಸಿಂಗ್ ಅವರು, ಈ ವರ್ಷದ ಆರಂಭದಲ್ಲಿ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದರು. ಚುನಾವಣೆಯ ಹೊಸ್ತಿಲಲ್ಲೇ ಅವರು ಪಕ್ಷವನ್ನು ತೊರೆದದ್ದು ಪಕ್ಷಕ್ಕೆ ಭಾರಿ ಹೊಡೆತ ನೀಡಿತ್ತು. ತಮ್ಮನ್ನು ಕಡೆಗಣಿಸಲಾಗಿದೆ ಎಂದು ಕಾಂಗ್ರೆಸ್ ತೊರೆದಿದ್ದ ಅವರು, ಅದೇ ಕಾಂಗ್ರೆಸ್ ಮುಂದಾಳತ್ವದ ಯುಪಿಎ ಅವಧಿಯಲ್ಲಿ ಸಚಿವರೂ ಆಗಿದ್ದರು.

ಪಕ್ಷ ತೊರೆದ ಜಾಖಡ್

ಪಂಜಾಬ್ ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷರೂ ಆಗಿದ್ದ ಸುನಿಲ್ ಜಾಖಡ್ ಅವರು, 'ನನ್ನನ್ನು ಕಡೆಗಣಿಸಲಾಗುತ್ತಿದೆ' ಎಂದು ಹೇಳಿ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಪಂಜಾಬ್ ಮುಖ್ಯಮಂತ್ರಿಯಾಗಿದ್ದ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರನ್ನು ಆ ಹುದ್ದೆಯಿಂದ ಕೆಳಗೆ ಇಳಿಸಿದಾಗ, ಸುನಿಲ್ ಜಾಖಡ್ ಅವರು ಆ ಹುದ್ದೆಯ ಆಕಾಂಕ್ಷಿಯಾಗಿದ್ದರು. ಆದರೆ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಕಾಂಗ್ರೆಸ್ ಆ ಹುದ್ದೆಗೆ ಆಯ್ಕೆ ಮಾಡಿತು. ಅಲ್ಲಿಂದಲೇ ಜಾಖಡ್ ಅವರು ಪಕ್ಷದ ವಿರುದ್ಧ ಅಸಮಾಧಾನ ಹೊರಹಾಕಲಾರಂಭಿಸಿದ್ದರು. ಪಕ್ಷವನ್ನು ತೊರೆದ ನಂತರ, ಬಿಜೆಪಿ ಸೇರಿದರು. ಈಗ ಅವರಿಗೆ ಪಂಜಾಬ್ ಬಿಜೆಪಿಯಲ್ಲಿ ಪ್ರಮುಖ ಸ್ಥಾನ ನೀಡುವ ಬಗ್ಗೆ ಚರ್ಚೆ ನಡೆಯುತ್ತಿದೆ.

ಯುವನಾಯಕರ ವಿದಾಯ

ಆಜಾದ್, ಸಿಬಲ್ ಅವರಂತಹ ಮುಖಂಡರು ಮಾತ್ರವೇ ಪಕ್ಷದ ವಿರುದ್ಧ ಮುನಿಸಿಕೊಂಡಿಲ್ಲ. ಪಕ್ಷಕ್ಕೆ ಬಂದ ಒಂದೆರಡು ವರ್ಷಗಳಲ್ಲೇ ಯುವನಾಯಕರೂ ವಿದಾಯದ ಹಾದಿ ಹಿಡಿದಿದ್ದಾರೆ. ಹಾರ್ದಿಕ್ ಪಟೇಲ್, ಜೈವೀರ್ ಶೇರ್ಗಿಲ್ ಈ ಸಾಲಿನಲ್ಲಿರುವ ಪ್ರಮುಖರು. ಯುವನಾಯಕರ ಮಾತು ಕೇಳಿಸಿಕೊಳ್ಳಲು ಅಥವಾ ಭೇಟಿಗೆ ಅವಕಾಶ ನೀಡಲೂ ಪಕ್ಷದ ನಾಯಕರ ಬಳಿ ಸಮಯ ಹಾಗೂ ಮನಸ್ಸಿಲ್ಲ ಎಂಬುದು ಇವರ ವಾದ.

ಗುಜರಾತ್‌ನಲ್ಲಿ ಪಾಟೀದಾರ್ ಸಮುದಾಯದ ಹೋರಾಟದ ನೇತೃತ್ವ ವಹಿಸಿ ಹಾರ್ದಿಕ್ ಪ್ರವರ್ಧಮಾನಕ್ಕೆ ಬಂದರು. ಆದರೆ, ಅದಾದ ಬಳಿಕ ಸರಿಯಾದ ರಾಜಕೀಯ ನೆಲೆಯನ್ನು ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ನಾಯಕತ್ವ ಗುಣ ಹಾಗೂ ಸಮುದಾಯದ ಬಲವನ್ನು ಪರಿಗಣಿಸಿದ ಕಾಂಗ್ರೆಸ್, 2019ರಲ್ಲಿ ಇವರನ್ನು ಪಕ್ಷಕ್ಕೆ ಆಹ್ವಾನಿಸಿತು. ಒಂದೇ ವರ್ಷದಲ್ಲಿ ಪಕ್ಷದ ಕಾರ್ಯಾಧ್ಯಕ್ಷರೂ ಆದರು. ಆದರೆ, ಪಕ್ಷ ತಮ್ಮನ್ನು ನಿರ್ಲಕ್ಷಿಸುತ್ತಿದೆ ಎಂದು ಹಾರ್ದಿಕ್ ಪಟೇಲ್‌ಗೆ ಕೆಲವೇ ವರ್ಷಗಳಲ್ಲಿ ಭಾಸವಾಗಲು ಶುರುವಾಯಿತು. 'ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಅವರಿಗೆ ಗುಜರಾತ್‌ನ ಸಮಸ್ಯೆಗಳನ್ನು ವಿವರಿಸಿದೆ. ಆದರೆ ನನ್ನ ಮಾತುಗಳನ್ನು ಅವರು ಕಡೆಗಣಿಸಿದರು. ರಾಹುಲ್ ಗುಜರಾತ್‌ಗೆ ಭೇಟಿ ನೀಡಿದಾಗ, ರಾಜ್ಯದ ಮುಖಂಡರು ಅವರಿಗೆ ಚಿಕನ್ ಹಾಗೂ ಕೋಕ್ ಸರಬರಾಜು ಮಾಡುವ ಸಂಭ್ರಮದಲ್ಲಿದ್ದರೇ ವಿನಾ, ಸಮಸ್ಯೆಗಳನ್ನು ಹೇಳಿಕೊಳ್ಳಲು ತಯಾರಿರಲಿಲ್ಲ' ಎಂದು ಪಕ್ಷ ತೊರೆಯುವಾಗ ಹಾರ್ದಿಕ್ ಹೇಳಿದ್ದರು. ಬೇಸರದ ಬದಲಾಗಿ, ಧೈರ್ಯವಾಗಿ ಪಕ್ಷದಿಂದ ಹೊರನಡೆಯುತ್ತೇನೆ ಎಂದ ಅವರು ಕೆಲವು ವಾರಗಳಲ್ಲಿ ಬಿಜೆಪಿ ಸೇರ್ಪಡೆಯಾದರು.


ವೃತ್ತಿಯಿಂದ ಸುಪ್ರೀಂ ಕೋರ್ಟ್ ವಕೀಲರಾಗಿ ಹಾಗೂ ಪ್ರಮುಖ ಯುವ ಕಾಂಗ್ರೆಸ್ ನಾಯಕರಾಗಿ ಗುರುತಿಸಿಕೊಂಡಿದ್ದ ಜೈವೀರ್ ಶೇರ್ಗಿಲ್ ಅವರು ಆಗಸ್ಟ್ 24ರಂದು ಪಕ್ಷಕ್ಕೆ ರಾಜೀನಾಮೆ ನೀಡಿದರು. 'ಪಕ್ಷದ ಕೇಂದ್ರೀಯ ನಾಯಕತ್ವ ತೆಗೆದುಕೊಳ್ಳುತ್ತಿರುವ ನಿರ್ಧಾರಗಳು ಯುವಜನರ ಆಶೋತ್ತರಗಳಿಗೆ ಸ್ಪಂದಿಸುವ ರೀತಿಯಲ್ಲಿ ಇಲ್ಲ. ಬಹುತೇಕ ನಿರ್ಧಾರಗಳ ಹಿಂದೆ ಹೊಗಳುಭಟರ ಗುಂಪಿನ ಪ್ರಭಾವ ಇರುತ್ತದೆ' ಎಂದು ಅವರು ತಮ್ಮ ನಿರ್ಧಾರಕ್ಕೆ ಕಾರಣ ನೀಡಿದ್ದರು. ರಾಷ್ಟ್ರೀಯ ಹಾಗೂ ಸಾರ್ವಜನಿಕ ಹಿತಾಸಕ್ತಿಗಳ ಮೇಲೆ ಸ್ವಹಿತಾಸಕ್ತಿಗಳು ಸವಾರಿ ಮಾಡುತ್ತಿವೆ ಎಂದೂ ಅವರು ದೂರಿದ್ದರು.

ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಅವರನ್ನು ಭೇಟಿ ಮಾಡಲು ಒಂದು ವರ್ಷದಿಂದ ಕಾದಿದ್ದರೂ, ಅವಕಾಶ ಸಿಗಲಿಲ್ಲ ಎಂದು ಅವರು ದೂರಿದ್ದಾರೆ. 'ಭಟ್ಟಂಗಿತನವು ಕಾಂಗ್ರೆಸ್ ಅನ್ನು ಗೆದ್ದಲಿನ ರೀತಿ ತಿಂದುಹಾಕಲಿದೆ' ಎಂದು ಅವರು ಕಾಂಗ್ರೆಸ್‌ನ ವಾಸ್ತವವನ್ನು ವಿಶ್ಲೇಷಿಸಿದ್ದಾರೆ. ಪಂಜಾಬ್‌ನ ಜಲಂಧರ್‌ನವರಾದ ಶೇರ್ಗಿಲ್, ಮಾಧ್ಯಮ ಚರ್ಚೆಗಳಲ್ಲಿ ಭಾಗವಹಿಸುವ ಪಕ್ಷದ ಮುಖಂಡರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದರು. ಪಂಜಾಬ್ ಕಾಂಗ್ರೆಸ್ ಘಟಕದ ವಕ್ತಾರ ಹಾಗೂ ಕಾನೂನು ಘಟಕದ ಸಹ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ.


ಹಾರ್ದಿಕ್ ಪಟೇಲ್

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ರಾಜ್ಯದಲ್ಲಿ ಆರೋಗ್ಯ ಇಲಾಖೆ ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಕಡ್ಡಾಯ ಮಾಡಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 213

ಬ್ರಹ್ಮನ ಬಳಿ ದೇವತೆಗಳ ಮೊರೆ

ತಾರಕಾಸುರನ ಕಾಟ ತಾಳಲಾರದೆ ಸತ್ಯಲೋಕಕ್ಕೆ ಬಂದ ಇಂದ್ರಾದಿ ದೇವತೆಗಳೆಲ್ಲಾ ಬ್ರಹ್ಮನಿಗೆ ನಮಸ್ಕರಿಸಿ ಭಕ್ತಿಯಿಂದ ಸ್ತುತಿಸಿದರು. ಪ್ರಸನ್ನನಾದ ಬ್ರಹ್ಮ 'ಎಲೈ ದೇವತೆಗಳಿರಾ, ನೀವಿಲ್ಲಿಗೆ ಬಂದಿರುವ ಕಾರಣವೇನು?' ಎಂದು ಕೇಳಿದ.

ಬ್ರಹ್ಮನ ಮಾತುಗಳನ್ನು ಕೇಳಿ ದುಃಖಿತರಾದ ದೇವತೆಗಳು ಮತ್ತೊಮ್ಮೆ ಬ್ರಹ್ಮನಿಗೆ ಕೈ ಮುಗಿಯುತ್ತಾ ಹೇಳಿದರು, 'ಜಗದೊಡೆಯನಾದ ಬ್ರಹ್ಮನೇ! ನಿನಗೆ ತಿಳಿಯದ ವಿಚಾರವೇನೂ ಇಲ್ಲ. ತಾರಕನೆಂಬ ಅಸುರ ನಿನ್ನ ವರದಿಂದ ಕೊಬ್ಬಿ ನಮ್ಮೆಲ್ಲರನ್ನೂ ಸ್ವರ್ಗದಿಂದ ಬಲಾತ್ಕಾರದಿಂದ ಓಡಿಸಿ ನಮ್ಮ ಸ್ಥಾನವನ್ನಾಕ್ರಮಿಸಿದ್ದಾನೆ. ಸರ್ವಜ್ಞನನಾದ ನಿನಗೆ ತಿಳಿಯದಿರುವುದಾವುದು? ಆದಕಾರಣ ಈಗ ನೀನು ನಮಗೆ ಬಂದಿರುವ ದುಃಖವನ್ನು ಹೋಗಲಾಡಿಸು. ನಿನಗೆ ನಾವು ಶರಣು ಬಂದಿರುವೆವು. ತಾರಕನು ನಿತ್ಯವೂ ನಮ್ಮನ್ನು ಎಲ್ಲಿದ್ದರೂ ಹಿಂಸಿಸುತ್ತಾನೆ. ನಾವು ಎಲ್ಲೆಲ್ಲಿ ಓಡಿಹೋಗಿ ಅಡಗಿಕೊಂಡರೂ, ಮಾಯಾವಿಯಾದ ಅವನು ಅಲ್ಲಿ ಬಂದು ಪೀಡಿಸುತ್ತಾನೆ.

'ಓ ಜಗನ್ನಾಥ, ಆ ತಾರಕನಿಂದ ನಮಗೆ ಮಹಾದುಃಖ ಬಂದಿದೆ. ನಮ್ಮೆಲ್ಲರನ್ನೂ ಆ ದೈತ್ಯ ತುಂಬಾ ಹಿಂಸಿಸುತ್ತಿದ್ದಾನೆ. ಅಗ್ನಿ, ಯಮ, ವರುಣ, ನಿರ್‌ಋತಿ ಮತ್ತು ವಾಯು ಮೊದಲಾದ ದಿಕ್ಪಾಲಕರೆಲ್ಲರೂ ಆ ದೈತ್ಯನಿಗೆ ಅಧೀನರಾಗಿ ಮನುಷ್ಯರಂತೆ ಅವನ ಸೇವೆ ಮಾಡುತ್ತಿದ್ದಾರೆ. ಮಹಾದೇವತೆಗಳಾದ ಅವರಿಗೆಲ್ಲಾ ಸ್ವಾತಂತ್ರ್ಯವೇ ಇಲ್ಲದಂತಾಗಿದೆ. ದೇವತೆಗಳು ತಾರಕನಿಂದ ಪೀಡಿತರಾಗಿ ಸದಾ ಅವನ ಅಧೀನರಾಗಿದ್ದಾರೆ. ದೇವತೆಗಳೆಲ್ಲ ಅವನಿಗೆ ಬೇಕಾದಂತಹ ಕಾರ್ಯಗಳನ್ನು ಮಾಡಿಕೊಡುತ್ತಾ ಅವನನ್ನೇ ಆಶ್ರಯಿಸಿಕೊಂಡಿರುವಂತಾಗಿದೆ. ಓ ಪಿತಾಮಹ, ಅಪ್ಸರೆಯರನ್ನೂ ಆ ದೈತ್ಯ ಬಲಾತ್ಕಾರದಿಂದ ಅಪಹರಿಸಿ ಇಟ್ಟುಕೊಂಡಿದ್ದಾನೆ. ಆ ದುಷ್ಟ ತಾರಕಾಸುರನು ಯಜ್ಞಗಳನ್ನು ನಡೆಸಲು ಬಿಡುತ್ತಿಲ್ಲ. ತಪಸ್ವಿಗಳು ಅವನ ಭಯದಿಂದ ತಪಸ್ಸನ್ನೇ ಆಚರಿಸುತ್ತಿಲ್ಲ. ಲೋಕದಲ್ಲಿ ದಾನಧರ್ಮಗಳಾವುವೂ ನಡೆಯುತ್ತಿಲ್ಲ. ತಾರಕನಿಗೆ ಕ್ರೌಂಚನೆಂಬ ಮಹಾಪಾಪಿಯಾದ ಸೇನಾಪತಿ ಇದ್ದಾನೆ. ಅವನು ಪಾತಾಳಲೋಕಕ್ಕೆ ಹೋಗಿ ಅಲ್ಲಿನ ಪ್ರಜೆಗಳೆಲ್ಲರನ್ನು ಹಿಂಸಿಸುತ್ತಿದ್ದಾನೆ.

'ಓ ಸೃಷ್ಟಿಕರ್ತನೇ, ಹೀಗೆ ನಮ್ಮದಾಗಿದ್ದ ಮೂರು ಲೋಕಗಳನ್ನೆಲ್ಲ ತಾರಕಾಸುರ ಕಿತ್ತುಕೊಂಡು ಕರುಣೆ ಇಲ್ಲದೆ ನಮ್ಮನ್ನು ಹಿಂಸಿಸುತ್ತಾನೆ. ತಾರಕನಿಂದ ಓಡಿಸಲ್ಪಟ್ಟ ನಮಗೆ, ಸ್ಥಾನಮಾನವೇ ಇಲ್ಲವಾಗಿದೆ. ನಿರ್ಗತಿಕರಾದ ನಾವು ಈಗ ನೀನು ಹೇಳಿದ ಸ್ಥಾನಕ್ಕೆ ಹೋಗಲು ಸಿದ್ಧರಾಗಿರುವೆವು. ನಾವು ತಾರಕಾಸುರನೆಂಬ ದೊಡ್ಡ ಬೆಂಕಿಯಲ್ಲಿ ಬಿದ್ದು ದುಃಖಿತರಾಗಿರುವೆವು. ನಮ್ಮನ್ನು ನೀನೇ ಕಾಪಾಡಬೇಕು. ತಾರಕಾಸುರನ ಅಟ್ಟಹಾಸದ ಮುಂದೆ ನಮ್ಮ ಉಪಾಯಗಳೊಂದೂ ನಡೆಯುತ್ತಿಲ್ಲ. ಮಹಾಸನ್ನಿಪಾತಜ್ವರಗಳಲ್ಲಿ ಮಹಾಮಹಾ ಔಷಧಿಗಳೂ ಪ್ರಯೋಜನವಿಲ್ಲದಂತಾಗುವಂತೆ, ನಮಗೆ ವಿಷ್ಣುಚಕ್ರದಿಂದ ಆ ದೈತ್ಯನನ್ನು ಜಯಿಸಬಹುದೆಂಬ ಆಸೆ ಇತ್ತು. ಆದರೆ ಆ ಚಕ್ರವೂ ಬಿಟ್ಟೊಡನೆಯೇ ತಾರಾಕಾಸುರನ ಎದೆಗೆ ಹೂವಿನಂತೆ ಅಲಂಕೃತವಾಗಿ ಸೌಮ್ಯವಾಯಿತು' ಎಂದು ದೇವತೆಗಳು ಬ್ರಹ್ಮನಿಗೆ ವಾಸ್ತವಾಂಶಗಳನ್ನು ವಿವರಿಸಿ ಹೇಳಿದರು.

ದೇವತೆಗಳು ಹೇಳಿದ ಮಾತುಗಳನ್ನೆಲ್ಲ ಕೇಳಿದ ಬ್ರಹ್ಮ, 'ಎಲೈ ದೇವತೆಗಳಿರಾ, ತಾರಕಾಸುರ ನನ್ನ ವರಗಳಿಂದಲೇ ಅಭಿವೃದ್ಧಿಯನ್ನು ಹೊಂದಿದ್ದಾನೆ. ಆದಕಾರಣ ನನ್ನಿಂದಲೇ ಅವನು ಸಾಯುವಂತಿಲ್ಲ. ಅಭಿವೃದ್ಧಿಗೆ ತಂದವನೇ ಕೊಲ್ಲುವುದು ಯೋಗ್ಯವಲ್ಲ. ತಾನೇ ಬೆಳೆಸಿದ ವಿಷವೃಕ್ಷವನ್ನಾದರೂ ತಾನೇ ಕತ್ತರಿಸಕೂಡದು. ನಿಮ್ಮ ಕಾರ್ಯವನ್ನು ಶಂಕರ ಮಾತ್ರ ನಡೆಸಿಕೊಡಬಲ್ಲ. ಆದರೆ ತಾನೇ ಅದನ್ನು ಮಾಡಲು ಶಕ್ತನಲ್ಲ. ಇನ್ನೊಬ್ಬರ ಮೂಲಕ ಸಾಧಿಸಲು ಸಮರ್ಥನಾಗಿದ್ದಾನೆ' ಎಂದು ಶಿವನ ಸಹಾಯ ಪಡೆಯಲು ದೇವತೆಗಳಿಗೆ ಬ್ರಹ್ಮ ಸೂಚಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಪೆಗಾಸಸ್ ಗೂಢಚರ್ಯೆ' ಪ್ರಕರಣದ ತನಿಖೆಯಲ್ಲಿ ಕೇಂದ್ರ ಸರ್ಕಾರವು ಸಹಕಾರ ನೀಡುತ್ತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿಲ್ಲ. ಬದಲಿಗೆ ಈ ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮುಂದೆ ತೋರಿದ್ದ ನಿಲುವನ್ನೇ, ಸರ್ಕಾರವು ತಾಂತ್ರಿಕ ಸಮಿತಿಯ ಮುಂದೆಯೂ ತೋರಿದೆ ಎಂದಷ್ಟೇ ಹೇಳಿದೆ. ಎಲ್ಲರೂ ಆದೇಶ ಪತ್ರವನ್ನು ಓದಿ' ಎಂದು ಬಿಜೆಪಿ ಮಾಧ್ಯಮ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಅವರು ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್ ಅನ್ನು ಬಿಜೆಪಿಯ ಹಲವು ಕಾರ್ಯಕರ್ತರು ರಿಟ್ವೀಟ್ ಮಾಡಿದ್ದಾರೆ.


Amit Malviya @amitmalviya · Follow

Is having an IQ lower than Rahul Gandhi's a prerequisite for being in Congress?
The SC hasn't alleged non cooperation by central Govt in the Pegasus case.
It has merely said the stand of the Govt has been the same before the committee as well as the Supreme Court.
Read the order.


4:32 PM · Aug 25, 2022

995 Reply Share

Read 93 replies

'ಇದು ತಿರುಚಲಾದ ಮಾಹಿತಿ' ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಈ ಪ್ರಕರಣದ ವಿಚಾರಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಆದೇಶದಲ್ಲಿ, ಸರ್ಕಾರವು ತನಿಖೆಗೆ ಸಹಕಾರ ನೀಡದೇ ಇರುವ ಬಗ್ಗೆ ಯಾವುದೇ ಉಲ್ಲೇಖ ಇಲ್ಲ. ಸುಪ್ರೀಂ ಕೋರ್ಟ್‌ನ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಗಿರುವ ಆದೇಶ ಪತ್ರದಲ್ಲಿ ಈ ಬಗ್ಗೆ ಉಲ್ಲೇಖ ಇಲ್ಲ. ಆದರೆ, ವಿಚಾರಣೆಯ ವೇಳೆ ಅಂದಿನ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು, 'ವಿಚಾರಣೆಯಲ್ಲಿ ಕೇಂದ್ರ ಸರ್ಕಾರವು ಯಾವುದೇ ಸಹಕಾರ ನೀಡಿಲ್ಲ ಎಂದು ತಾಂತ್ರಿಕ ಸಮಿತಿಯು ತನ್ನ ವರದಿಯಲ್ಲಿ ಹೇಳಿದೆ' ಎಂದು ಹೇಳಿದ್ದರು. ಹಲವು ಮಾಧ್ಯಮ ಸಂಸ್ಥೆಗಳೂ ಇದೇ ರೀತಿ ವರದಿ ಮಾಡಿವೆ. ಸುದ್ದಿ ಸಂಸ್ಥೆಗಳು ಇದನ್ನು ವರದಿ ಮಾಡಿವೆ. ಹೀಗಾಗಿ ಅಮಿತ್ ಮಾಳವೀಯ ಅವರ ಟ್ವೀಟ್ ದಾರಿ ತಪ್ಪಿಸುವಂತಿದೆ' ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಶಾಂತವಾದ ಅಂತರಂಗದ ಕಡಲು

ಸಂತತದ ಶಿಕ್ಷೆಯಿಂ ದೀರ್ಘದಭ್ಯಾಸದಿಂ- |
ದಂತರಂಗದ ಕಡಲು ಶಾಂತಿಗೊಳಲಹುದು ||
ಸಂತೃಪ್ತವೃತ್ತಿಯಿಂದೇಕಾಂತಸೇವೆಯಿಂ |
ಸಂತಯಿಸು ಚಿತ್ತವನು – ಮಂಕುತಿಮ್ಮ || 705 ||

ಪದ-ಅರ್ಥ: ಸಂತತದ = ಸತತವಾದ, ದೀರ್ಘದಭ್ಯಾಸದಿಂದಂತರಂಗದ = ದೀರ್ಘದ + ಅಭ್ಯಾಸದಿಂದ + ಅಂತರಂಗದ, ಶಾಂತಿಗೊಳಲಹುದು = ಶಾಂತಿಗೊಳಲು + ಅಹುದು, ಸಂತೃಪ್ತವೃತ್ತಿಯಿಂದೇಕಾಂತಸೇವೆಯಿಂ = ಸಂತೃಪ್ತ + ವೃತ್ತಿಯಿಂ ದ + ಏಕಾಂತ + ಸೇವೆಯಿಂ(ಸೇವೆಯಿಂದ), ಸಂತಯಿಸು = ಸಮಾಧಾನಪಡಿಸು.

ವಾಚ್ಯಾರ್ಥ: ನಿರಂತರವಾದ ಶಿಕ್ಷಣದಿಂದ, ದೀರ್ಘಕಾಲದ ಪ್ರಯತ್ನದಿಂದ, ಅಂತರಂಗದ ಸಮುದ್ರ ಶಾಂತವಾಗುತ್ತದೆ. ಸಂತೃಪ್ತಿಯಾದ ಕೆಲಸದಿಂದ, ಏಕಾಂತದ ಚಿಂತನೆಯಿಂದ ಮನಸ್ಸನ್ನು ಸಮಾಧಾನ ಪಡಿಸು.

ವಿವರಣೆ: ಉತ್ಕಲದ ಶ್ರೀಮಂತನೊಬ್ಬ ತರುಣನನ್ನು ಮನೆಯ ಊಟಕ್ಕೆ ಕರೆದ. ಭರ್ಜರಿ ಭೋಜನ. ಒಂದಾದ ಮೇಲೊಂದು ರುಚಿರುಚಿಯಾದ ತಿನಿಸುಗಳು ಬಂದವು. ಎಲ್ಲರೂ ಆನಂದವಾಗಿರುವಾಗ ಈ ತರುಣ ಬಿಕ್ಕಿ ಬಿಕ್ಕಿ ಅತ್ತ. ಮನೆಯ ಯಜಮಾನ ಮತ್ತು ನೆರೆದವರು "ಯಾಕೆ, ಏನಾಯಿತು?" ಎಂದು ಕೇಳಿದರು. ತರುಣ ಹೇಳಿದ, "ಇಂಥ ವಿಶೇಷ ಊಟ ನನಗೆ ಸರಿಯೆ? ಯಾವ ನಾಡಿನಲ್ಲಿ ನನ್ನ ಜನ ಒಂದು ಹಿಡಿ ಅಕ್ಕಿಗಾಗಿ, ಪಡಬಾರದ ಪಾಡನ್ನು ಪಡುತ್ತಾರೋ, ಅಂಥ ನಾಡಿನ ನಾನು ಈ ಸಮೃದ್ಧ ಊಟವನ್ನು ಮಾಡಬಹುದೆ? ದೇವರು ಮೆಚ್ಚಿಯಾನೆ?". ಹೀಗೆ ಹೇಳಿ ಊಟಕ್ಕೆ ನಮಸ್ಕರಿಸಿ ಹೊರಗೆ ನಡೆದ. ಆತ ಗೋಪಬಂಧುದಾಸ. ಜನ ಅವನನ್ನು ಉತ್ಕಲದ ದೀನಬಂಧು ಎಂದು ಕರೆದರು. ಗೋಪಬಂಧು ಉತ್ಕಲ ಪ್ರಾಂತದ, ದೇಶಸೇವೆಯ ವ್ರತತೊಟ್ಟರು. ಹನ್ನೆರಡನೆಯ ವಯಸ್ಸಿಗೆ ಅವರ ಮದುವೆಯೂ ಆಯಿತು ಮತ್ತು ಇಪ್ಪತ್ತರ ಹೊತ್ತಿಗೆ ಹೆಂಡತಿ ತೀರಿಯೂ ಹೋದಳು. ಹೊಟ್ಟೆಪಾಡಿಗೆ ವಕೀಲಿ, ಹೃದಯತೃಪ್ತಿಗೆ ಸಮಾಜಸೇವೆ. ಪೂರಿ ಜಿಲ್ಲೆಯಲ್ಲಿ ಎಂದೂ ಕಾಣದ ಬರ. ಜನ ಹುಳಗಳಂತೆ ಸತ್ತರು. ಗೋಪ ಬಂಧು ಕಂಡವರಲ್ಲಿ ಬೇಡಿದರು, ಸರ್ಕಾರವನ್ನು ಕಾಡಿದರು. ಇವರ ಅಂತಃಕರಣದ ಕರೆಗೆ ಗವರ್ನರ್ ಓಡಿ ಬಂದ. ಸಹಾಯ ಬಂದಿತು. ಗೋಪಿಬಂಧು ಶಾಲೆ ಕಟ್ಟಿದರು. "ಉತ್ಕಲ ಸ್ವರಾಜ್ಯ ಶಿಕ್ಷಾಪೀಠ" ಸ್ಥಾಪಿಸಿದರು. ತರುಣರ ದೊಡ್ಡ ಪಡೆಯನ್ನು ನಿರ್ಮಿಸಿದರು. ಜನ ಅವರನ್ನು ಉತ್ಕಲದ ದ್ರೋಣಾಚಾರ್ಯ ಎಂದರು. ಗಾಂಧೀಜಿಯ ಕಣ್ಣಿಗೆ ಬಿದ್ದ ಗೋಪಬಂಧು ದಾಸರು ಮತ್ತಷ್ಟು ಮೈಮರೆತು ದುಡಿದರು. ಅದರಲ್ಲೇ ಶಾಂತಿಯನ್ನು ಪಡೆದರು. ತಮ್ಮ ಐವತ್ತನೆಯ ವಯಸ್ಸಿಗೆ ಬದುಕು ಮುಗಿಸಿದರು. ಅದೆಂಥ ಬದುಕು! ಸತತವಾದ ಶಿಕ್ಷೆಯಿಂದ, ದೀರ್ಘಕಾಲದ ಪ್ರಯತ್ನದಿಂದ ತಮ್ಮ ಅಂತರಂಗದ ಕಡಲನ್ನು ಶಾಂತಗೊಳಿಸಿಕೊಂಡವರು ಗೋಪಬಂಧು. ತಮಗೆ ಇಷ್ಟವಾದ, ತೃಪ್ತಿಯನ್ನು ನೀಡಿದ ಸಮಾಜಸೇವೆಯ ವೃತ್ತಿಯನ್ನೇ ಅಪ್ಪಿಕೊಂಡು, ಏನೊಂದನ್ನು ಅಪೇಕ್ಷಿಸದೆ ತಮ್ಮ ಮನಸ್ಸನ್ನು ಸಂತೈಸಿಕೊಂಡು, ಕಗ್ಗದ ಈ ಮುಕ್ತಕಕ್ಕೆ ಉದಾಹರಣೆಯಾದವರು ಗೋಪಬಂಧು ದಾಸ. ಅವರ ಸರ್ವಕಾರ್ಯದ ಆಧಾರ ದೈವಭಕ್ತಿ. ಅದೇ ಅವರ ಅಖಂಡ ತ್ಯಾಗದ ಚಿಲುಮೆ. ಅವರೀಗ ಬಹುಜನರಿಗೆ ನೆನಪಿಲ್ಲ. ನಮ್ಮ ನಾಡಿನ ಮಹಾಪುರುಷರಿಗೆ ನಾವು ತೋರುವ ಗೌರವ ಅದು!

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಆಗಸ್ಟ್ 31, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಚತುರ್ಥಿ ಗಂ. 15-23, ನಕ್ಷತ್ರ: ಚಿತ್ತಾ ಗಂ. 24-12 ಯೋಗ: ಶುಕ್ಲ ಗಂ. 22-47, ಕರಣ: ವಿಷ್ಟಿ ಗಂ. 15-23, ಸಿಂಹ ಮಾಸದ 14 ನೇ ದಿನ. ರಾಹುಕಾಲ : ಮಧ್ಯಾಹ್ನ 12:00 – 01:30, ಸೂರ್ಯೋದಯ : 06-23 ಸೂರ್ಯಾಸ್ತ : 06-39

ಮುಸ್ಲಿಂ ದಿನಾಂಕ : 03 ಸಫರ್

ದಿನ ವಿಶೇಷ : ಗಣೇಶ ಚತುರ್ಥಿ, ಸಂವತ್ಸರಿ (ಚತುರ್ಥಿಪಕ್ಷ-ಜೈನ್)

ಅದೃಷ್ಟ ಸಂಖ್ಯೆ : 6, 11

ಮೇಷ: ಮನೆಗೆ ನೂತನ ವಸ್ತುಗಳ ಆಗಮನ ಸಂತೋಷ ತರಲಿದೆ. ವಿದ್ಯಾರ್ಥಿಗಳಿಗೆ ಆಲಸ್ಯವೇ ಗುರಿ ಸಾಧನೆಗೆ ಅಡ್ಡಿ ಮಾಡುವುದು. ಪ್ರೀತಿ ಪಾತ್ರರಿಂದ ತಾತ್ಕಾಲಿಕವಾಗಿ ದೂರವಾಗುವ ಸಂಭವವಿದೆ.

ವೃಷಭ: ಕುಟುಂಬದ ಗುರು-ಹಿರಿಯರು ನಿಮ್ಮ ಮೇಲಿಟ್ಟಿರುವ ನಂಬಿಕೆಯನ್ನು ಉಳಿಸಿಕೊಂಡು ಹೋಗುವ ಬಗ್ಗೆ ನಿಮ್ಮ ಹೆಚ್ಚಿನ ಗಮನವಿರಲಿ. ಎಷ್ಟೇ ಕಷ್ಟಗಳು ಎದುರಾದರೂ ನಿರ್ಧಾರವನ್ನು ಬದಲಿಸುವುದು ಸರಿಯಲ್ಲ.

ಮಿಥುನ: ವಿವಾಹ ಅಪೇಕ್ಷಿಗಳಿಗೆ ಸುದಿನ. ದುಂದುವೆಚ್ಚದಿಂದ ದಿನಾಂತ್ಯದಲ್ಲಿ ಹಣದ ಅಭಾವ ಕಾಡುತ್ತದೆ. ಸಣ್ಣಸಣ್ಣ ಕಾರಣಗಳಿಗೆ ಅಥವಾ ಕಾರಣಗಳೇ ಇಲ್ಲದೇ ಅಕ್ಕ- ತಂಗಿಯರಲ್ಲಿ ಕಲಹವಾಗುವ ಸಂಭವವಿದೆ.

ಕರ್ಕಾಟಕ: ನಿಮ್ಮ ಸದುದ್ದೇಶ ನೆರವೇರಿಸಿಕೊಳ್ಳುವುದಕ್ಕೆ ನಡೆಸಿರುವ ಪ್ರಯತ್ನಗಳು ನಿಧಾನವಾಗಿ ಸಿದ್ಧಿಸಲಿದೆ. ವಾಣಿಜ್ಯ ಉದ್ಯಮಿಗಳಿಗೆ ವಿಶೇಷ ದಿನ. ಹವಾಮಾನದಲ್ಲಾಗುವ ಬದಲಾವಣೆ ಆರೋಗ್ಯದ ಮೇಲೆ ಪ್ರಭಾವ ಬೀರಲಿದೆ.

ಸಿಂಹ: ಮನೆಯಲ್ಲಿ ನೆಮ್ಮದಿಯ ವಾತಾವರಣ ವೃದ್ಧಿಯಾಗಲಿದೆ. ಇತರರ ಭಾವನೆಗಳಿಗೆ ಹೆಚ್ಚಿನ ಆದ್ಯತೆ ಕೊಡಲು ಕಲಿಯಬೇಕಾಗುತ್ತದೆ. ಮಕ್ಕಳೊಂದಿಗೆ-ಸುಖ ಭೋಜನ ನಡೆಯುವುದು.

ಕನ್ಯಾ: ವೈದ್ಯಕೀಯ ವೃತ್ತಿಯವರಿಗೆ ವೃತ್ತಿಪರವಾದ ಅನಿವಾರ್ಯ ಎದುರಾಗುವುದು. ಮಾತಿನಲ್ಲಿ ಸಹನೆ ಹಾಗೂ ಎಚ್ಚರವಿರಲಿ. ವಿಶೇಷ ಉಡುಗೊರೆ ಸಿಗುವ ಸಂಭವವಿದೆ. ಆತ್ಮೀಯರೊಂದಿಗೆ ಮನಸ್ಸಿನ ಭಾವನೆ ಹಂಚಿಕೊಳ್ಳುವಿರಿ.

ತುಲಾ: ಬದುಕಿನಲ್ಲಿ ನೆಲೆ ನಿಂತ ನೆಮ್ಮದಿ ಸಿಗಲಿದೆ. ಕುಟುಂಬದಲ್ಲಿ ವೈವಾಹಿಕ ಜೀವನದ ನಿಲುವುಗಳೇನು ಎಂಬುದನ್ನು ಸ್ಪಷ್ಟ ಪಡಿಸಬೇಕಾಗುವುದು. ಮನೆಯಲ್ಲಿನ ಆಗು ಹೋಗುಗಳ ಬಗೆಗೆ ಹೆಚ್ಚು ಗಮನ ನೀಡಿ.

ವೃಶ್ಚಿಕ: ಸಂಘ-ಸಂಸ್ಥೆಗಳ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ಸಿಗುತ್ತದೆ. ಮನರಂಜನೆಗೂ ಸಾಕಷ್ಟು ಸಮಯವನ್ನು ಮೀಸಲಿಟ್ಟು-ಸಂತಸದಿಂದಿರುವಂತೆ ಆಗುವುದು.

ಧನು: ನಿಮ್ಮ ನಯವಾದ ಮಾತುಗಳು ಎದುರಿನ ವ್ಯಕ್ತಿಯ ಮನವನ್ನು ಗೆಲ್ಲುವ ಮೂಲಕ ನಿಮ್ಮ ಕಾರ್ಯ ಸಾಧನೆ ಆಗುತ್ತದೆ. ಧಾರ್ಮಿಕ ಕಾರ್ಯದಲ್ಲಿ ಆಸಕ್ತಿ ವೃದ್ಧಿಯಾಗುವುದು. ಮನೆಯ ಕೆಲಸದಲ್ಲಿ ನಿರ್ಲಕ್ಷ್ಯ ವಹಿಸಬೇಡಿ.

ಮಕರ: ನಿಮ್ಮ ಜೀವನದಲ್ಲಿ ಅತಿಯಾಗಿ ನಂಬುವ ವ್ಯಕ್ತಿ ಜೊತೆ ಸಮಯ ಕಳೆಯುವಿರಿ. ಟ್ರಾವೆಲ್ ಏಜೆನ್ಸಿಯವರಿಗೆ ಆರ್ಥಿಕ ಮುನ್ನಡೆ ಇದ್ದು ಹೆಚ್ಚಿನ ಅವಕಾಶಗಳನ್ನು ಕಾಣುವಿರಿ. ದೇವಿಯ ಆರಾಧನೆಯಿಂದ ಮನಸ್ಸಿಗೆ ನೆಮ್ಮದಿ.

ಕುಂಭ: ಯಾರಲ್ಲಿಯೂ ಶತ್ರುತ್ವವನ್ನು ವೃದ್ಧಿಸಿಕೊಳ್ಳುವಂಥ ಘಟನೆಗಳಿಗೆ ಆಸ್ಪದ ನೀಡದಿರಿ. ತುಂಬಾ ದಿನಗಳಿಂದ ಬರಬೇಕಿದ್ದ ಹಣ ಇಂದು ನಿಮ್ಮ ಕೈ ಸೇರಲಿದೆ. ಎಣ್ಣೆ ಮತ್ತು ಬೇಳೆಕಾಳು ವ್ಯಾಪಾರದಲ್ಲಿ ಮಾರಾಟ ಉತ್ತಮ.


ಮೀನ: ಅಜಾಗರೂಕತೆಯಿಂದ ಹಣ ಕಳೆದುಕೊಳ್ಳುವಂತಾಗಬಹುದು ಎಚ್ಚರವಿರಲಿ. ಕಲಾವಿದರ ಆಸಕ್ತಿಯಿಂದ ಅವಕಾಶಗಳು ಲಭ್ಯ. ಹಿರಿಯರನ್ನು ತೀರ್ಥಯಾತ್ರೆಗೆ ಕಳುಹಿಸುವ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಿ.

ಪದಬಂಧ 5066

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಸುರರ ಅರಸಿದಾಗ ರಾಜ ಸಿಕ್ಕಿದನಲ್ಲಾ! (3)
3.ತಾರೀಕು ಇಲ್ಲಿ ನಮೂದಾಗಿದೆ (3)
4.ಬಿಡದಿ ಹತ್ತಿರ ಕಾಣಿಸಿದ ಹೆಂಡತಿ (3)
6.ಕ್ರೀಡೆಗೊಂದು ಪರ್ಯಾಯ ಪದ (2)
7.ವನದಲ್ಲಿ ತಿರುಗಿರುವಾಗ ಹೊಸದು ಕಂಡಿದೆ(2)
11.ಅಸತ್ಯವಿದು (2)
13.ಭೂಲೋಕದ ಅಮೃತ (2)
14.ಈತ ಎಲ್ಲರಿಗಿಂತ ದೊಡ್ಡವನು (3)
15.ಇಂದ್ರಿಯ ಇಲ್ಲಿದೆ (3)
16.ದಿಣ್ಣೆ ಇಲ್ಲಿಯೇ ಕಾಣುತ್ತಿದೆ(3)

ಮೇಲಿಂದ ಕೆಳಕ್ಕೆ
1.ಯಾವುದೇ ಕಳಂಕ ಇಲ್ಲದ್ದು (4)
2.ಹೊಂದಾಣಿಕೆಗೊಂದು ಪರ್ಯಾಯ ಪದ(4)
3.ದಿಟ್ಟತನದಿಂದ ನುಡಿದ ಸತ್ಯ (2)
5.ಇಪ್ಪತ್ನಾಲ್ಕು ಗಂಟೆಗಳ ಕಾಲ (2)
6.ಉದ್ದವಾದ ತೋಳು (5)
8.ಬಣ್ಣಗುಂದುವಿಕೆಯನ್ನು ಹೀಗೆನ್ನಿ (5)
9.ತನ್ನದೆಂಬ ಭಾವನೆ (4)
10.ಕೊಬ್ಬಿದ ಆನೆಯಿದು (4)
12.ಕಹಿಯಲ್ಲ! ಮಧುರತೆ! (2)
13.ದಾಕ್ಷಿಣವೇಕೆ?ಇದು ಸೊರಗಿದುದು (2)



5065ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಲೆಮಾರಿ 3.ಆಘ್ರಾಣಿಸು
5.ನಿಜ 7.ತಿರುಕ
8.ಹಂತ 9.ಜಲ
10.ಅಸುರ 12.ಕರ
14.ನರಾಕೃತಿ 15.ಪರಸ್ಪರ

ಮೇಲಿಂದ ಕೆಳಕ್ಕೆ:
1.ಅವಧಾನಿ 2.ರಿಯಾಯಿತಿ
3.ಆಮುಷ್ಮಿಕ 4.ಸುರಕ್ಷಿತ
6.ಜಟಿಲ 8.ಹಂತಕ
9.ಜಮಖಾನ 10.ಅನುಮತಿ
11.ರಜನಿಪ 13.ರತ್ನಾಕರ

ಸುಡೊಕು 5452

	4				1		2	
8		7		3				9
		5			9		8	3
	6					3		8
	7	4	1	8	3			
3						5		1
	8		3		4		1	
		1		9		8		4
4	3		5			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5451 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2







1. ಬೆಂಗಳೂರಿನ ಮಾರತಹಳ್ಳಿ ಇಕೋಸ್ಪೇಸ್ ಮುಂದಿನ ವರ್ತುಲ ರಸ್ತೆಯಲ್ಲಿ ನದಿಯಂತೆ ಹರಿದ ಕೆರೆ ಕೋಡಿ ನೀರು, ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್ 2. ಮಳೆಯಿಂದಾಗಿ ರಾಮನಗರದ ಟಿಪ್ಪು ನಗರದಲ್ಲಿನ ರಸ್ತೆ ಹಾಳಾಗಿರುವುದು 3. ನಾಗಮಂಗಲ ಪಟ್ಟಣದ ಬಸ್ ನಿಲ್ದಾಣದ ಡಿಪೋದಲ್ಲಿ ಮಂಗಳವಾರ ಮುಳುಗಡೆಯಾಗಿದ್ದ ಕೆಎಸ್ಆರ್‌ಟಿಸಿ ಬಸ್‌ಗಳು

ರಾಜ್ಯದಲ್ಲಿ ಅಬ್ಬರಿಸಿದ ಮಳೆ; ಕೊಚ್ಚಿ ಹೋದ ಬೆಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ, ಮಧ್ಯ ಕರ್ನಾಟಕದ ಬಹುತೇಕ ಕಡೆ ಸೋಮವಾರ ರಾತ್ರಿ ಮತ್ತು ಮಂಗಳವಾರ ಭಾರಿ ಮಳೆ ಸುರಿದಿದೆ. ಕೆರೆಕಟ್ಟೆಗಳು, ನದಿಗಳು ತುಂಬಿ ಹರಿಯುತ್ತಿವೆ. ಕೋಡಿಬಿದ್ದ ಕೆರೆ ನೀರು ಮತ್ತು ನದಿ ನೀರಿನಿಂದ ಹಲವು ಕಡೆ ಬೆಳೆಗಳು ಮತ್ತು ವಸತಿ ಪ್ರದೇಶಗಳು ಜಲಾವೃತಗೊಂಡಿವೆ. ಇದರಿಂದ ಜನ ಜೀವನವೂ ಅಸ್ತವ್ಯಸ್ತಗೊಂಡಿದೆ.

ಮೈಸೂರು ಭಾಗದಲ್ಲಿ ಚಾಮರಾಜನಗರ ಜಿಲ್ಲೆಯ ಮಾಂಬಳ್ಳಿ-ಅಗರ ಭಾಗದ ರಾಷ್ಟ್ರೀಯ ಹೆದ್ದಾರಿ-209 ಮುಳುಗಡೆ ಭೀತಿ ಎದುರಾಗಿದ್ದು, ಯಳಂದೂರು-ಕೊಳ್ಳೇಗಾಲ ಹೆದ್ದಾರಿಯಲ್ಲಿ ಹಾಗೂ ಬಿಳಿಗಿರಿರಂಗನ ಬೆಟ್ಟದ ರಸ್ತೆಯಲ್ಲಿ ಸಂಚಾರ ನಿರ್ಬಂಧಿಸಲಾಗಿತ್ತು.

ಲೋಕಪಾವನಿ ನದಿ ಉಕ್ಕಿ ಹರಿದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಚಂದಗಿರಿಕೊಪ್ಪಲು ಗ್ರಾಮದ ಜಮೀನುಗಳು ಜಲಾವೃತವಾಗಿವೆ. ಕೆ.ಆರ್.ಪೇಟೆ ತಾಲ್ಲೂಕು ದೊಡ್ಡಸೋಮನಹಳ್ಳಿಯಲ್ಲಿ ಮನೆಗಳು ಕುಸಿದಿದ್ದು, ನಿವಾಸಿಗಳು ಅಪಾಯದಿಂದ ಪಾರಾಗಿದ್ದಾರೆ. ಶಿಂಷಾನದಿ ತುಂಬಿ ತಟದ, ಮದ್ದೂರು ತಾಲ್ಲೂಕಿನ ಪ್ರಸಿದ್ಧ ಹೊಳೆ ಆಂಜನೇಯಸ್ವಾಮಿ ದೇವಾಲಯದ ತಡೆಗೋಡೆ ಕುಸಿದಿದೆ.

ಮೈಸೂರು ತಾಲ್ಲೂಕಿನ ಜಯಪುರ ಗ್ರಾಮದ ಹೊಸಕೆರೆ ಕೋಡಿ ಬಿದ್ದಿದೆ. ಹಾರೋಹಳ್ಳಿ ಕೆರೆ ತುಂಬಿ ವಾಹನಗಳ ಸಂಚಾರಕ್ಕೆ ತೊಂದರೆಯಾಗಿದೆ. ರಾಯನಕೆರೆ ಸಮೀಪದ ಎಣ್ಣೆಹೊಳೆ ಕೆರೆ ತುಂಬಿ ನೀರು ತೋಟಗಳಿಗೆ ನುಗ್ಗಿದೆ. ಡಿ.ಸಾಲುಂಡಿ ಹಾಗೂ ತಿ.ನರಸೀಪುರ ತಾಲ್ಲೂಕಿನ ತಲಕಾಡಿನಲ್ಲಿ ಮನೆ ಗೋಡೆ ಕುಸಿದಿದೆ. ಎಚ್.ಡಿ.ಕೋಟೆ ತಾಲ್ಲೂಕಿನ ಬೆಳಗನಹಳ್ಳಿ ಕಾವಲ್‌ನಲ್ಲಿ ಅಂತರ್ಜಲ ಮಟ್ಟ ಹೆಚ್ಚಿ, ಕೊಳವೆ ಬಾವಿಗಳಲ್ಲಿ ನೀರು ಉಕ್ಕುತ್ತಿದೆ.

ಉತ್ತರ ಕರ್ನಾಟಕದಲ್ಲಿ ಕೊಪ್ಪಳ ಸೇರಿ ಜಿಲ್ಲೆಯ ಮುನಿರಾಬಾದ್, ಅಳವಂಡಿ, ಕುಷ್ಟಗಿ, ಕುಕನೂರು, ಹನುಮಸಾಗರ, ಗಂಗಾವತಿ, ಆನೆಗೊಂದಿ, ಕನಕಗಿರಿ, ಯಲಬುರ್ಗಾ, ಬೀದರ್ ಜಿಲ್ಲೆಯ ಬಸವಕಲ್ಯಾಣ ಮತ್ತು ಹುಲಸೂರ ತಾಲ್ಲೂಕಿನಲ್ಲಿ ಮಳೆಯಾಗಿದೆ. ಕುಷ್ಟಗಿ ತಾಲ್ಲೂಕಿನಲ್ಲಿ ಕಟಾವು ಮಾಡಿದ್ದ ಎಳ್ಳು, ಸಜ್ಜೆ ಹಾನಿಗೀಡಾಗಿವೆ.

ದಾವಣಗೆರೆ ತಾಲ್ಲೂಕಿನ ಮಾಯಕೊಂಡ ಗ್ರಾಮ ಜಲಾವೃತವಾಗಿ, ಜನ ಪರದಾಡಿದರು. ರಾಮಗೊಂಡನಹಳ್ಳಿಯಲ್ಲಿ ಮನೆ–ತೋಟಗಳಿಗೆ ನೀರು ನುಗ್ಗಿದೆ. ನ್ಯಾಮತಿ, ಹೊನ್ನಾಳಿಯಲ್ಲೂ ಉತ್ತಮ ಮಳೆಯಾಗಿದೆ. ಚನ್ನಗಿರಿ ತಾಲ್ಲೂಕಿನ ವಿವಿಧೆಡೆ ಕೆರೆಗಳು ತುಂಬಿ ಕೋಡಿ ಬಿದ್ದಿವೆ. ಬಸವಾಪಟ್ಟಣ, ಸಂತೇಬೆನ್ನೂರು, ಜಗಳೂರಿನಲ್ಲಿ ಹಲವು ಮನೆಗಳು ಹಾನಿಗೀಡಾಗಿವೆ. ಸಾಸ್ವೆಹಳ್ಳಿ ಸುತ್ತಮುತ್ತ ಭತ್ತದ ಗದ್ದೆಗಳು ಜಲಾವೃತವಾಗಿವೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಕೋಣಂದೂರು, ಭದ್ರಾವತಿ, ರಿಪ್ಪನ್‌ಪೇಟೆ, ಶಿರಾಳಕೊಪ್ಪ ಭಾಗದಲ್ಲಿ ರಾತ್ರಿಯಿಡೀ ಮಳೆ ಸುರಿದಿದೆ. ತೀರ್ಥಹಳ್ಳಿ ತಾಲ್ಲೂಕಿನ ಹಣಗೆರೆ ಕಟ್ಟೆ ಗ್ರಾಮ ಪಂಚಾಯಿತಿಯ ಕಳ್ಳಿಗದ್ದೆ ಗ್ರಾಮದಲ್ಲಿರುವ ಸಂಕ್ಲಾಪುರ ಸಂಪರ್ಕ ಸೇತುವೆ ತಡೆಗೋಡೆ ಕುಸಿದಿದ್ದು, ಹಲವು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಭದ್ರಾವತಿ ತಾಲ್ಲೂಕಿನ ಹೊಸೂರು ಕೆರೆ ತುಂಬಿ ಹರಿದ ಪರಿಣಾಮ ಭಂಡಾರಹಳ್ಳಿಯ 20 ಎಕರೆ ಭತ್ತದ ಬೆಳೆ ನೀರಿನಲ್ಲಿ ಮುಳುಗಿದೆ.

ಹಿರಿಯೂರಿನ ವಾಣಿವಿಲಾಸ ಸಾಗರದ ಜಲಾಶಯ ಕೋಡಿ ಬೀಳಲು ಅರ್ಧ ಅಡಿ ಮಾತ್ರ ಬಾಕಿ ಉಳಿದಿದೆ. ಹೊಳಲ್ಕೆರೆ ತಾಲ್ಲೂಕಿನ ಬಿ. ದುರ್ಗದಲ್ಲಿ 128.2 ಮಿ.ಮೀ ಮಳೆ ದಾಖಲಾಗಿದೆ. ಬಹುತೇಕ ಭಾಗದಲ್ಲಿ 60 ಮಿ.ಮೀಗೂ ಅಧಿಕ ಮಳೆ ಸುರಿದಿದೆ.

ಚಿತ್ರದುರ್ಗ ತಾಲ್ಲೂಕಿನ ಸಿಂಗಾಪುರ ಗ್ರಾಮ ಜಲಾವೃತವಾಗಿದೆ. ಧರ್ಮಪುರ ಹೋಬಳಿಯ ಅರಳೀಕೆರೆ ಕೆರೆ ಕೋಡಿ ಬಿದ್ದ ಪರಿಣಾಮ ನೂರಾರು ಎಕರೆ ದಾಳಿಂಬೆ, ಹತ್ತಿ, ಅಡಿಕೆ ತೋಟ ಹಾಳಾಗಿದೆ.

ಹಂಪಿ ಸ್ಮಾರಕಗಳು ಬಹುತೇಕ ಜಲಾವೃತ

ಹುಬ್ಬಳ್ಳಿ: ಧಾರವಾಡ, ಗದಗ, ಹಾವೇರಿ, ಬೆಳಗಾವಿ, ಬಳ್ಳಾರಿ–ವಿಜಯನಗರ ಜಿಲ್ಲೆಯಲ್ಲಿ ಮಳೆಯ ಅಬ್ಬರ ಮುಂದುವರಿದಿದೆ. ಧಾರವಾಡದಲ್ಲಿ ನಸುಕಿನಿಂದ ಎಂಟು ಗಂಟೆ ಸತತವಾಗಿ ಮಳೆ ಸುರಿದಿದೆ.

ಹಂಪಿ ವಿಜಯ ವಿಠಲ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿನ ಸೇತುವೆ ಮೇಲಿನಿಂದ ನೀರು ಹರಿಯುತ್ತಿರುವುದರಿಂದ ಸಂಪರ್ಕ ಕಡಿತಗೊಂಡಿದೆ. ಹಂಪಿಯ ಬಹುತೇಕ ಸ್ಮಾರಕಗಳ ಪರಿಸರದಲ್ಲಿ ನೀರು ಸಂಗ್ರಹಗೊಂಡಿದೆ.

ತುಂಗಭದ್ರಾ ಜಲಾಶಯದಿಂದ ನದಿಗೆ ಒಂದು ಲಕ್ಷ ಕ್ಯುಸೆಕ್‌ಗೂ ಅಧಿಕ ನೀರು ಹರಿಸುತ್ತಿರುವುದರಿಂದ ಹಂಪಿ ಕರ್ಮ ಮಂಟಪ, ಪುರಂದರದಾಸರ ಮಂಟಪ, ಚಕ್ರತೀರ್ಥ, ಸ್ನಾನಘಟ್ಟ, ವಿಜಯನಗರ ಕಾಲದ ಕಾಲು ಸೇತುವೆ ಮತ್ತೆ ಮುಳುಗಿವೆ. ಹರಪನಹಳ್ಳಿ ತಾಲ್ಲೂಕಿನ ನಾಗತಿಕಟ್ಟೆ-ಗೌಳೇರಹಟ್ಟಿ, ಬೇವಿನಹಳ್ಳಿ-ಉಚ್ಚಂಗಿದುರ್ಗ, ಉಚ್ಚಂಗಿದುರ್ಗ-ಅರಸೀಕೆರೆ ರಸ್ತೆ ಸಂಪರ್ಕ ಕಡಿತಗೊಂಡಿದೆ.

ಬಳ್ಳಾರಿ ಜಿಲ್ಲೆಯ ಕಂಪ್ಲಿ–ಗಂಗಾವತಿ ಸೇತುವೆ ಮೇಲೆ ನೀರು ಹರಿಯುತ್ತಿರುವುದರಿಂದ ವಾಹನ ಸಂಚಾರ ಬಂದ್ ಆಗಿದೆ. ಹರಪನಹಳ್ಳಿ ತಾಲ್ಲೂಕುವೊಂದರಲ್ಲೇ 825 ಹೆಕ್ಟೇರ್ ಭತ್ತ, ಮೆಕ್ಕೆ ಜೋಳ ಹಾಳಾಗಿದೆ. ಅವಳಿ ಜಿಲ್ಲೆಗಳ 15ಕ್ಕೂ ಹೆಚ್ಚು ಕೆರೆಗಳ ಕೋಡಿ ಬಿದ್ದಿದೆ. ಬಹುತೇಕ ಕೆರೆ, ಕಟ್ಟೆ, ಚೆಕ್ ಡ್ಯಾಂಗಳು ತುಂಬಿವೆ. ನಾಲ್ಕು ದಿನಗಳಿಂದ ಸತತ ಮಳೆ ಸುರಿಯುತ್ತಿರುವುದರಿಂದ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

ಬೆಳಗಾವಿ ನಗರ ಹಾಗೂ ಜಿಲ್ಲೆಯ ಚಿಕ್ಕೋಡಿ, ರಾಮದುರ್ಗ, ಬೈಲಹೊಂಗಲ, ಯರಗಟ್ಟಿ ತಾಲ್ಲೂಕುಗಳ ಕೆಲವು ಕಡೆಗಳಲ್ಲಿ ಸಾಧಾರಣ ಮಳೆ ಸುರಿಯಿತು. ಸವದತ್ತಿ ಪಟ್ಟಣ ಹಾಗೂ ಸುತ್ತಲಿನ ಪ್ರದೇಶದಲ್ಲಿ ಸಂಜೆಗೆ ಬಿರುಸು ಪಡೆದ ಮಳೆ, ಒಂದು ತಾಸಿನವರೆಗೂ ಸುರಿಯಿತು.

ಹಾವೇರಿ ಜಿಲ್ಲೆಯ ಗುತ್ತಲ ಮೂರು ದಿನಗಳಿಂದ ಸುರಿದ ಬಾರಿ ಮಳೆಗೆ ನೆಗಳೂರ ಬಳಿಯ ತುಂಗಾ ಮೇಲ್ದಂಡೆ ಕಾಲುವೆ ಕೊಚ್ಚಿಹೋಗಿದೆ. ಕಾಲುವೆಯ ನೀರು ಜಮೀನಿಗೆ ನುಗ್ಗಿದ ಪರಿಣಾಮ ಬೆಳೆ ನಾಶವಾಗಲಿದೆ ಎಂದು ಗುತ್ತಲ, ನೆಗಳೂರ, ಹಾವನೂರ, ಹುರಳಿಹಾಳ, ಬೆಳವಗಿ, ಗಳಗನಾಥ ಗ್ರಾಮಗಳ ರೈತರು ಆತಂಕ ವ್ಯಕ್ತಪಡಿಸಿದ್ದಾರೆ.

ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಜಮೀನುಗಳು ಜಲಾವೃತಗೊಂಡವು. ಕೊಯ್ಲಿಗೆ ಬಂದಿದ್ದ ಬೆಂಡೆ, ಹಾಗಲ, ಸವತೆ, ಕುಂಬಳ, ಬದನೆ, ಟೊಮೊಟೊ ಮೊದಲಾದ ತರಕಾರಿ ಬೆಳೆ ಸಂಪೂರ್ಣವಾಗಿ ಜಲಾವೃತಗೊಂಡಿತು. ಹಾವೇರಿ ಜಿಲ್ಲೆಯ ತುಮ್ಮಿನಕಟ್ಟಿಯ ಎಸ್ ಸಿ ಕಾಲೊನಿ ಹಾಗೂ ಶಿವಾಜಿ ನಗರದಲ್ಲಿ ತಲಾ ಒಂದೊಂದು ಮನೆಯ ಚಾವಣಿ ಕುಸಿದಿವೆ.

ಪ್ರಮುಖಾಂಶಗಳು

- ಗೌರಿಬಿದನೂರು ತಾಲ್ಲೂಕಿನ ಉತ್ತರ ಪಿನಾಕಿನಿ ತುಂಬಿ ಹರಿಯುತ್ತಿದ್ದು ಸಂಚಾರ ಬಂದ್
- ಧಾರವಾಡ ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನಲ್ಲಿ ಬೆಣ್ಣಿಹಳ್ಳ ಉಕ್ಕಿ ಹರಿದು ಬೆಳೆ ನಾಶ
- ಚಿತ್ರದುರ್ಗ ಜಿಲ್ಲೆ ಹಿರಿಯೂರಿನ ವಾಣಿವಿಲಾಸ ಸಾಗರದ ಜಲಾಶಯಕ್ಕೆ ಒಳ ಹರಿವು ಹೆಚ್ಚಳ
- ವಿಜಯನಗರ, ಗದಗ ಜಿಲ್ಲೆಗಳಲ್ಲಿ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು
- ವಿಜಯನಗರ–ಬಳ್ಳಾರಿ ಜಿಲ್ಲೆಗಳಲ್ಲಿ 105 ಮನೆಗಳಿಗೆ ಹಾನಿ
- ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನಲ್ಲಿ 8 ಮನೆಗಳಿಗೆ ಹಾನಿ
- ಯಳಂದೂರು ತಾಲ್ಲೂಕಿನಲ್ಲಿ 107 ಮನೆಗಳಿಗೆ ಭಾಗಶಃ ಹಾನಿ
- ಸೂಳೆಕೆರೆ ಕೋಡಿಯಿಂದಲೂ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುತ್ತಿದೆ

ನದಿಯಂತಾದ ಬೆಳ್ಳಂದೂರು ರಸ್ತೆ

ಬೆಂಗಳೂರು: ಹಾಲನಾಯಕನಹಳ್ಳಿ ಕೆರೆ ಕೋಡಿ ಹರಿದಿರುವುದರಿಂದ ರಾಜಧಾನಿಯಲ್ಲಿ ಮಹದೇವಪುರ ವಲಯದ ಹಲವಾರು ರಸ್ತೆ, ಬಡಾವಣೆಗಳು ಜಲಾವೃತವಾಗಿವೆ. 70 ಹೆಕ್ಟೇರ್ ವಿಸ್ತೀರ್ಣವಿರುವ ಈ ಕೆರೆ 40 ವರ್ಷಗಳಲ್ಲಿ ಮೊದಲ ಬಾರಿಗೆ ತುಂಬಿದೆ.

ಕೆರೆಯಿಂದ ನೀರು ಅತಿ ಹೆಚ್ಚಾಗಿ, ರಭಸವಾಗಿ ಹರಿಯುತ್ತಿರುವುದರಿಂದ ಮಹದೇವಪುರ, ಬೆಳ್ಳಂದೂರು, ಮಾರತ್‌ಹಳ್ಳಿ ಭಾಗದಲ್ಲಿ ಬಹುತೇಕ ಕಡೆ ಜಲಾವೃತವಾಗಿದೆ. ಹಾಲನಾಯಕಹಳ್ಳಿಯಿಂದ ಸವಳು ಕೆರೆ ಮಾರ್ಗವಾಗಿ ಬೆಳ್ಳಂದೂರಿಗೆ ನೀರು ಹರಿಯುತ್ತದೆ. ಆದರೆ ರಾಜಕಾಲುವೆಗಳು ಮುಚ್ಚಿಹೋಗಿರುವುದರಿಂದ ನೀರೆಲ್ಲ ರಸ್ತೆ ಹಾಗೂ ಬಡಾವಣೆಗಳಲ್ಲಿ ಹರಿಯುತ್ತಿದೆ.

ಮಹದೇವಪುರ ವಲಯದ ದೊಡ್ಡನೆಕ್ಕುಂದಿಯಲ್ಲಿ ಸೋಮವಾರ 109 ಎಂ.ಎಂ. ಮಳೆಯಾಗಿದೆ. ಸಮೀಪದ ಬ್ರೂಕ್‌ಫೀಲ್ಡ್‌ನಲ್ಲಿ ಕಾರ್ಮಿಕರ 80ಕ್ಕೂ ಗುಡಿಸಿಲುಗಳು ಸಂಪೂರ್ಣ ಜಲಾವೃತಗೊಂಡಿವೆ.

ಗರಿಷ್ಠ ಮಳೆ ಪ್ರಮಾಣ	
ಚಿತ್ರದುರ್ಗ ಜಿಲ್ಲೆ	ಹೊಳಲ್ಕೆರೆ ತಾಲ್ಲೂಕಿನ ಬಿ. ದುರ್ಗ 12.8 ಸೆಂ.ಮೀ.
ವಿಜಯನಗರ ಜಿಲ್ಲೆ	ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿ 13.5 ಸೆಂ.ಮೀ

20 ಜಿಲ್ಲೆಗಳಲ್ಲಿ ಹಾನಿ: ಅಶೋಕ

ಒಂದನೇ ಪುಟದಿಂದ...

27 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಜೂನ್‌ನಿಂದ ಈವರೆಗೆ 187 ಹಳ್ಳಿಗಳಲ್ಲಿ ಮಳೆಯಿಂದ ಹೆಚ್ಚು ಹಾನಿಯಾಗಿದೆ. 95 ಕಾಳಜಿ ಕೇಂದ್ರಗಳಲ್ಲಿ 9,244 ಮಂದಿ ಆಶ್ರಯ ಪಡೆದಿದ್ದಾರೆ. ಉತ್ತರ ಕನ್ನಡ, ಬೆಳಗಾವಿ, ರಾಮನಗರ ಜಿಲ್ಲೆಗಳಿಗೆ ಎನ್‌ಡಿಆರ್‌ಎಫ್‌ನ ಐದು ತಂಡ ನಿಯೋಜಿಸಲು ನಿರ್ಧರಿಸಲಾಗಿದೆ ಎಂದರು.

ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕೇಂದ್ರದ ಅನುದಾನ ಬಿಡುಗಡೆ ಆಗುವವರೆಗೂ ಕಾಯುವುದಿಲ್ಲ. ತಕ್ಷಣ ಪರಿಹಾರ ನೀಡಲಿದೆ ಎಂದರು.

ಹೆದ್ದಾರಿ ಕಾರಣವಲ್ಲ: ಬೆಂಗಳೂರು–ಮೈಸೂರು ಹೆದ್ದಾರಿ ನಿರ್ಮಾಣ ಅವೈಜ್ಞಾನಿಕವಾಗಿದೆ ಎಂಬ ಟೀಕೆ ಸರಿಯಲ್ಲ. ಕೆರೆಗಳಲ್ಲಿ ಹೆಚ್ಚಿನ ನೀರು ಬಂದಿರುವುದರಿಂದ ಸಮಸ್ಯೆಯಾಗಿದೆ ಎಂದರು.

ಮಳೆಯಿಂದ ಆಗಿರುವ ಹಾನಿಯ ಒಟ್ಟು ವಿವರ (ಜುಲೈನಿಂದ)	
ಬೆಳೆ ಹಾನಿ	5.80 ಲಕ್ಷ ಹೆಕ್ಟೇರ್
ಮನೆಗಳ ಕುಸಿತ	24,408
ಜೀವಹಾನಿ	96
ಜಾನುವಾರು ಸಾವು	462
ರಸ್ತೆಗಳ ಉದ್ದ	22,734 ಕಿ.ಮೀ
ಸೇತುವೆ, ಕಾಲುವೆಗಳು ಸಂಖ್ಯೆ	1,471
ಸಣ್ಣ ನೀರಾವರಿ ಕೆರೆಗಳು	624
ಸಣ್ಣ ಕೆರೆಕಟ್ಟೆ	499
ಸರ್ಕಾರಿ ಕಟ್ಟಡಗಳು	11,244

ರಾಮನಗರದಲ್ಲಿ ಅಪಾರ ಬೆಳೆ ಹಾನಿ

ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಭಾಗದಲ್ಲಿ ಅತಿ ಹೆಚ್ಚು ಮಳೆ ಬಿದ್ದಿದ್ದು, ಹಾರೋಹಳ್ಳಿ ಕೆರೆ ಕೋಡಿ ಒಡೆದು ಜಲಾವೃತಗೊಂಡಿರುವ ಸಮುದಾಯ ಆರೋಗ್ಯ ಕೇಂದ್ರದಿಂದ ರೋಗಿಗಳನ್ನು ಅಂಬೇಡ್ಕರ್ ಭವನಕ್ಕೆ ಸ್ಥಳಾಂತರಿಸಲಾಗಿದೆ. ಮಾವತ್ತೂರು ಕೆರೆ ಕೋಡಿ ಬಿದ್ದು ಬೂದುಗುಪ್ಪೆ ಬಳಿ ಕೆಳ ಹಂತದ ಸೇತುವೆ ಕೊಚ್ಚಿ ಹೋಗಿದೆ.

ರಾಮನಗರ ತಾಲ್ಲೂಕಿನ ಮೇಗಳದೊಡ್ಡಿ ಕೆರೆಯಲ್ಲಿ ದೊಡ್ಡ ಬಿರುಕು ಕಾಣಿಸಿಕೊಂಡಿದ್ದು, ಏರಿ ಒಡೆಯುವ ಆತಂಕ ಎದುರಾಗಿದೆ. ಚನ್ನಪಟ್ಟಣ ತಾಲ್ಲೂಕಿನ ಕೊಂಡಾಪುರದಲ್ಲಿ ಕೆರೆ ಕೋಡಿಯಿಂದ ಮೂವತ್ತಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ.

ಡಿಕೆಶಿ, ಎಚ್‌ಡಿಕೆ ಭೇಟಿ

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಂಗಳವಾರ ಚನ್ನಪಟ್ಟಣ ಹಾಗೂ ರಾಮನಗರ ತಾಲ್ಲೂಕುಗಳಿಗೆ ಭೇಟಿ ನೀಡಿ ಮಳೆ ಹಾನಿ ಪರಿಶೀಲಿಸಿದರು. ಸಂತ್ರಸ್ತರ ಜೊತೆ ಚರ್ಚಿಸಿದರು.

‘ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಪರಿಹಾರ ಘೋಷಿಸಿದಂತೆ, ರಾಮನಗರಕ್ಕೂ ಹೆಚ್ಚಿನ ಪರಿಹಾರ ಘೋಷಿಸಬೇಕು’ ಎಂದು ಅವರು ಇದೇ ಸಂದರ್ಭ ಆಗ್ರಹಿಸಿದರು.

ಚನ್ನಪಟ್ಟಣದಲ್ಲಿ ಶಾಸಕ ಎಚ್.ಡಿ. ಕುಮಾರಸ್ವಾಮಿ ಕಾಳಜಿ ಕೇಂದ್ರಗಳಿಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ಅಂಕಿ-ಅಂಶಗಳು

500 ಹೆಕ್ಟೇರ್ ರಾಮನಗರ ಜಿಲ್ಲೆಯಲ್ಲಿ ಮಳೆಯಿಂದ ಆದ ಬೆಳೆ ಹಾನಿ

250 ಮಳೆಯಿಂದ ಕುಸಿದ ಮನೆಗಳು

4000 ನೀರು ನುಗ್ಗಿದ ಮನೆಗಳ ಸಂಖ್ಯೆ

7 ಜಿಲ್ಲಾಡಳಿತ ತೆರೆದ ಕಾಳಜಿ ಕೇಂದ್ರ

925 ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದವರ ಸಂಖ್ಯೆ

ಹಲವೆಡೆ ತಗ್ಗದ ಮಳೆ ಅಬ್ಬರ

ಒಂದನೇ ಪುಟದಿಂದ...

ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ತುಮರಿಕೊಪ್ಪದಲ್ಲಿ ಮನೆ ಕುಸಿದು ನಿಂಬವ್ವ ಮೈಲಾರೆಪ್ಪ ನೆಗಳೂರ (51) ಎಂಬುವವರು ಸಾವಿಗೀಡಾಗಿದ್ದಾರೆ. ನೆಗಳೂರ ಗ್ರಾಮದ ಬಳಿ ತುಂಗಾ ಮೇಲ್ದಂಡೆ ಕಾಲುವೆಯೂ ಕೊಚ್ಚಿಹೋಗಿದೆ.

ವಿಜಯನಗರ–ಬಳ್ಳಾರಿಯ ಹೆಚ್ಚಿನ ಭಾಗಗಳಲ್ಲಿ ಸತತ ನಾಲ್ಕನೇ ದಿನವೂ ಮಳೆಯ ಆರ್ಭಟ ಮುಂದುವರಿದಿದೆ. ವಿಶ್ವ ಪ್ರಸಿದ್ಧ ಹಂಪಿ ನೆಲಸ್ತರ ಶಿವ ದೇವಾಲಯಕ್ಕೆ ಹೊಂದಿಕೊಂಡಿರುವ ಪ್ರಸನ್ನ ದೇಗುಲದ ಮಂಟಪದ ಗೋಡೆ ಕುಸಿದು ಬಿದ್ದಿದೆ. ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲೂ ಮಳೆಯಾಗಿದೆ.

ಉದ್ಘಾಟನೆ ಮುನ್ನವೇ ದಶಪಥ ಹೆದ್ದಾರಿಗೆ ಹಾನಿ!: ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಗೆ ಇನ್ನೂ ಕೇಂದ್ರ ತಂಡ ಸುರಕ್ಷತೆ ನಿರಾಕ್ಷೇಪಣಾ ಪತ್ರ ನೀಡಿಲ್ಲ. ಇದಕ್ಕೂ ಮೊದಲೇ ಹೆದ್ದಾರಿಯ ಬಿಡದಿ, ರಾಮನಗರ–ಚನ್ನಪಟ್ಟಣ ಬೈಪಾಸ್ ರಸ್ತೆಗಳನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ. ಹೆದ್ದಾರಿ ಅಧಿಕೃತವಾಗಿ ಉದ್ಘಾಟನೆಯಾಗುವ ನ್ನವೇ ಭಾಗಶಃ ಹಾನಿಗೀಡಾಗಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ದ್ರಾಕ್ಷಿ ಬೆಳೆ ಹಾನಿ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಬೀಡಗಾನಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿಯ ಕೆಳಸೇತುವೆಯಲ್ಲಿ ನೀರು ತುಂಬಿ ಹರಿದ ಪರಿಣಾಮ ಸರ್ವಿಸ್ ರಸ್ತೆಯಲ್ಲಿ ಕೆಲಕಾಲ ಸಂಚಾರ ಬಂದ್ ಮಾಡಲಾಗಿತ್ತು.

ಬೀಡಗಾನಹಳ್ಳಿ ಹಾಗೂ ಯಲುವಳ್ಳಿ ಸುತ್ತಮುತ್ತಲಿನ ದ್ರಾಕ್ಷಿ, ಹಿಪ್ಪುನೇರಳೆ, ಆಲೂಗಡ್ಡೆ ಸೇರಿದಂತೆ ವಿವಿಧ ಬೆಳೆಗಳು ಜಲಾವೃತವಾಗಿವೆ. ಚಿಕ್ಕಬಳ್ಳಾಪುರ ನಗರದ 8 ಮತ್ತು 9ನೇ ವಾರ್ಡ್‌ನ ಹಲವು ಮನೆಗಳಿಗೆ ನೀರು ನುಗ್ಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	123.82	26,509	23,849
ಹಾರಂಗಿ	2,859	2856.51	3,380	1,400
ಕಬಿನಿ	2284	2,283.27	16,142	20,000
ಹೇಮಾವತಿ	2,922	2,921.62	5,178	8,000
ಲಿಂಗನಮಕ್ಕಿ	1,819	1,814	7,537	7,409
ಸೂಪಾ (ಮೀ)	564	550.25	4,066	1,341
ಮಾಣಿ	595	588	844	483
ತುಂಗಭದ್ರಾ	1,633	1,632.72	1,10,601	98,997
ಮಲಪ್ರಭಾ	2079.5	2,079	5,662	894
ಘಟಪ್ರಭಾ	2175	2,175	3,816	3,816
ಭದ್ರಾ	186	185	7,436	5,931
ಆಲಮಟ್ಟಿ (ಮೀ)	519.6	519.59	22,500	25,000
ನಾರಾಯಣಪುರ (ಮೀ)	492.25	492.10	20,000	19,680

* ನೆಲಮಟ್ಟದಿಂದ

₹3,783 ಕೋಟಿ ಯೋಜನೆ ಪ್ರಧಾನಿ ಮೋದಿ ಚಾಲನೆ

ಮಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 2ರಂದು ಮಂಗಳೂರಿಗೆ ಭೇಟಿ ನೀಡುವ ಸಮಯ ಬದಲಾವಣೆ ಆಗಿದ್ದು, ಮಧ್ಯಾಹ್ನ 1.30ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ.

ಈ ಮೊದಲು ಮೋದಿ ಅವರ ಕಾರ್ಯಕ್ರಮ ಮಧ್ಯಾಹ್ನ 4 ಗಂಟೆಗೆ ನಿಗದಿಯಾಗಿತ್ತು.

ಮಧ್ಯಾಹ್ನ 12.55ಕ್ಕೆ ಮಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರುವ ಪ್ರಧಾನಿ, ಅಲ್ಲಿಂದ ಸಮಾವೇಶ ನಡೆಯುವ ನವ ಮಂಗಳೂರು ಬಂದರು ಪ್ರಾಧಿಕಾರದ ಪ್ರಾಂಗಣಕ್ಕೆ ಹೆಲಿಕಾಪ್ಟರ್‌ನಲ್ಲಿ ತೆರಳುವರು. ಅಲ್ಲಿಂದ ರಸ್ತೆ ಮಾರ್ಗವಾಗಿ ಸಭಾ ಕಾರ್ಯಕ್ರಮ ನಡೆಯುವ ಬಂಗ್ರಕೂಳೂರಿನ ಗೋಲ್ಡ್‌ಫಿಂಚ್ ಸಿಟಿ ಮೈದಾನಕ್ಕೆ ಆಗಮಿಸುವರು. ಸಂಜೆ 4.20ಕ್ಕೆ ಮಂಗಳೂರಿನಿಂದ ನಿರ್ಗಮಿಸುವರು. ಕೇಂದ್ರದ ಬಂದರು ಸಚಿವ ಸರ್ಬಾನಂದ ಸೋನಾವಾಲ್ ಅವರು ಮಂಗಳವಾರ ನಗರಕ್ಕೆ ಬಂದಿದ್ದು, ಪ್ರಧಾನಿ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿದರು.

ಶಾಲಾ–ಕಾಲೇಜುಗಳಿಗೆ ರಜೆ: ಪ್ರಧಾನಿ ಭೇಟಿ ನೀಡಲಿರುವ ಸೆಪ್ಟೆಂಬರ್ 2ರಂದು, ಗಣೇಶೋತ್ಸವ ಕಾರಣಕ್ಕಾಗಿ ಮಂಗಳೂರು ನಗರ ವ್ಯಾಪ್ತಿಯ ಶಾಲೆಗಳಿಗೆ ರಜೆ ಘೋಷಿಸಲಾಗಿದೆ.

‘ಅಂದು ನಗರದಲ್ಲಿ ಗಣಪತಿ ವಿಗ್ರಹಗಳ ವಿಸರ್ಜನೆಯ ಶೋಭಾಯಾತ್ರೆ ಕಾರ್ಯಕ್ರಮಗಳು ನಡೆಯಲಿದ್ದು, ಹೆಚ್ಚಿನ ಜನ–ವಾಹನದಟ್ಟಣೆ ಆಗುವ ಸಂಭವವಿದೆ ಎಂದು ಪೊಲೀಸ್ ಇಲಾಖೆಯ ಮಾಹಿತಿಯಂತೆ ರಜೆ ಘೋಷಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ. ಆದೇಶದಲ್ಲಿ ಹೇಳಿದ್ದಾರೆ.

ಪ್ರಮುಖ ಯೋಜನೆಗಳು

- ಎನ್‌ಎಂಪಿಎ ಬಂದರಿನಲ್ಲಿ ಕಂಟೈನರ್ ಹಾಗೂ ಇತರ ಸರಕುಗಳನ್ನು ನಿರ್ವಹಿಸುವ 14ನೇ ಸಂಖ್ಯೆಯ ದಕ್ಕೆ ಲೋಕಾರ್ಪಣೆ. (₹ 281 ಕೋಟಿ ವೆಚ್ಚದ ಈ ಯೋಜನೆಯ ಮೊದಲ ಹಂತ (₹ 127.46 ಕೋಟಿ) ಪೂರ್ಣಗೊಂಡಿದೆ.
- ಏಕೀಕೃತ ಎಲ್‌ಪಿಜಿ ಮತ್ತು ಬಲ್ಕ್ ದ್ರವ ಪಿಒಎಲ್ (ಪೆಟ್ರೋಲಿಯಂ, ತೈಲ, ಲ್ಯೂಬ್ರಿಕಂಟ್) ಘಟಕಕ್ಕೆ ಶಂಕುಸ್ಥಾಪನೆ (ಯೋಜನಾ ವೆಚ್ಚ ₹ 500 ಕೋಟಿ)
- ಖಾದ್ಯ ತೈಲ ಸಂಸ್ಕರಣೆ ಮತ್ತು ಸಂಗ್ರಹ ಘಟಕಕ್ಕೆ ಶಂಕು ಸ್ಥಾಪನೆ (ಯೋಜನಾ ವೆಚ್ಚ: ₹ 100 ಕೋಟಿ)
- ಎಂಆರ್‌ಪಿಎಲ್‌ನ ಬಿಎಸ್–6 ಮೇಲ್ದರ್ಜೆಗೇರಿಸುವ ಯೋಜನೆ ಲೋಕಾರ್ಪಣೆ (ಯೋಜನಾ ವೆಚ್ಚ (₹1,829 ಕೋಟಿ)
- ಸಮುದ್ರದ ನೀರಿನಿಂದ ಉಪ್ಪನ್ನು ಬೇರ್ಪಡಿಸಿ ಶುದ್ಧೀಕರಿಸುವ ಘಟಕ (₹677 ಕೋಟಿ)

ಸಚಿವ ಆನಂದ್ ಸಿಂಗ್‌ರಿಂದ ಕೊಲೆ ಬೆದರಿಕೆ ಆರೋಪ

ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಡಿ. ಪೋಲಪ್ಪ ಎಂಬುವರು ತನ್ನ ಕುಟುಂಬದ ಒಂಬತ್ತು ಜನ ಸದಸ್ಯರೊಂದಿಗೆ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಮಂಗಳವಾರ ಸಂಜೆ ನಡೆದಿದೆ.

ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳಲು ಯತ್ನಿಸುತ್ತಿದ್ದಂತೆ ಪೊಲೀಸ್ ಸಿಬ್ಬಂದಿ ಅವರನ್ನು ತಡೆದಿದ್ದಾರೆ. ನಂತರ ಮೈಮೇಲೆ ನೀರು ಹಾಕಿ, ನಂತರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಘಟನೆ ನಡೆದಾಗ ಎಸ್ಪಿ ಡಾ. ಅರುಣ್ ಕೆ. ಅವರು ಕಚೇರಿಯಲ್ಲಿ ಇರಲಿಲ್ಲ.



ಡಿ.ಪೋಲಪ್ಪ ಹಾಗೂ ಅವರ ಕುಟುಂಬ ಸದಸ್ಯರು ಹೊಸಪೇಟೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಮಂಗಳವಾರ ಸಂಜೆ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದರು

‘ಆನಂದ್ ಸಿಂಗ್ ಅವರು ಸರ್ಕಾರಿ ಜಾಗ ಒತ್ತುವರಿ ಮಾಡಿಕೊಂಡು ಮನೆ ಕಟ್ಟಿಸಿದ್ದಾರೆ. ಅದನ್ನು ತೆರವುಗೊಳಿಸುವಂತೆ ವರ್ಷದ ಹಿಂದೆ ದಾಖಲೆಗಳ ಸಮೇತ ದೂರು ಕೊಟ್ಟಿದ್ದೆ. ಇತ್ತೀಚೆಗೆ ನಗರಸಭೆ ಪೌರಾಯುಕ್ತರ ಗಮನಕ್ಕೂ ತಂದಿದ್ದೆ. ನನಗೆ ಈ ಹಿಂದೆಯೂ ಜೀವ ಬೆದರಿಕೆ ಹಾಕಿದ್ದರು. ಮಂಗಳವಾರ ಮಧ್ಯಾಹ್ನ 35 ರಿಂದ 40 ಜನರೊಂದಿಗೆ ಏಕಾಏಕಿ ನನ್ನ ಮನೆಗೆ ಬಂದರು.

> **ನನ್ನ ವಿರುದ್ಧದ ಆರೋಪ ಶುದ್ಧ ಸುಳ್ಳು. ನಾನು ಯಾವ ತಪ್ಪು ಮಾಡಿಲ್ಲ. ಜೀವ ಬೆದರಿಕೆ ಹಾಕಿಲ್ಲ. ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ. ಸಾಕ್ಷಿಗಳಿದ್ದರೆ ಕೊಡಲಿ.**
> **ಆನಂದ್ ಸಿಂಗ್,** ಪ್ರವಾಸೋದ್ಯಮ ಸಚಿವ

‘ಪದೇ ಪದೇ ನನ್ನ ವಿರುದ್ಧ ದೂರು ಕೊಡುವುದು, ಮಾತನಾಡುವುದು ಸರಿಯಲ್ಲ. ಚುನಾವಣೆ ಸಂದರ್ಭದಲ್ಲಿ ನನ್ನ ಹೆಸರು ಕೆಡಿಸಲು ಪ್ರಯತ್ನಿಸುತ್ತಿದ್ದೀರಿ. ನೀವು ಬದುಕಿದ್ದರೆ ತಾನೇ ಇವೆಲ್ಲ. ನಿನ್ನ ಕುಟುಂಬದವರನ್ನು ಜೀವ ಸಮೇತ ಉಳಿಸಲ್ಲ’ ಎಂದು ಪ್ರಾಣ ಬೆದರಿಕೆ ಹಾಕಿದರು. ನಗರಸಭೆಯವರನ್ನು ಕರೆಸಿ, ಇವರ ಆಸ್ತಿ ಸರ್ಕಾರದ ವಶಕ್ಕೆ ಪಡೆಯಬೇಕೆಂದೂ ಹೇಳಿ ಹೋದರು’ ಎಂದು ಪೋಲಪ್ಪ ಆರೋಪಿಸಿದರು.

‘ನನಗೆ ಹಿಂದೆ ಮುಂದೆ ಯಾರೂ ಇಲ್ಲ. ಸಚಿವರೇ ಹೀಗೆ ಬೆದರಿಸಿದರೆ ಏನು ಮಾಡುವುದು ಎಂದು ಯೋಚಿಸಿ ಮನೆ ಮಂದಿಯೆಲ್ಲ ಎಸ್ಪಿ ಕಚೇರಿಗೆ ದೂರು ಕೊಡಲು ಬಂದಿದ್ದೆವು. ಎಸ್ಪಿಯವರು ಇರಲಿಲ್ಲ. ಎಲ್ಲರೂ ಪೆಟ್ರೋಲ್ ಸುರಿದುಕೊಂಡು ಜೀವಂತ ದಹನಕ್ಕೆ ಮುಂದಾದಾಗ ನಮ್ಮನ್ನು ತಡೆದರು. ಸಚಿವರ ವಿರುದ್ಧ ಹೋರಾಟ ನಡೆಸುತ್ತಿರುವುದಕ್ಕೆ ನನಗೆ ಈ ಗತಿ ಆಗಿದೆ’ ಎಂದರು.

ಎಸ್ಪಿ ಡಾ. ಅರುಣ್ ಕೆ. ಅವರನ್ನು ಸಂಪರ್ಕಿಸಿದಾಗ, ‘ನನ್ನ ಕಚೇರಿ ಎದುರು ಆತ್ಮಹತ್ಯೆಗೆ ಯತ್ನಿಸಿದ್ದು ನಿಜ. ಎಲ್ಲರನ್ನೂ ಆಸ್ಪತ್ರೆಗೆ ಕಳಿಸಿ ಚಿಕಿತ್ಸೆ ಕೊಡಿಸಲಾಗಿದೆ. ಅವರು ಕೊಡುವ ದೂರು ಆಧರಿಸಿ, ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲಾಗುವುದು. ಆತ್ಮಹತ್ಯೆಗೆ ಯತ್ನಿಸಿದವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು’ ಎಂದು ತಿಳಿಸಿದರು.

ಹೊಸ ವೈಮಾನಿಕ, ರಕ್ಷಣಾ ನೀತಿಯಿಂದ ರಾಜ್ಯದಲ್ಲಿ ಹೆಚ್ಚಲಿವೆ ನವೋದ್ಯಮ

ಬಾಹ್ಯಾಕಾಶ, ರಕ್ಷಣಾ ಉತ್ಪಾದನೆ 'ನಂ 1' ಗುರಿ!

• ಎಸ್. ರವಿಪ್ರಕಾಶ್

ಬೆಂಗಳೂರು: ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ (ಐಟಿ– ಬಿಟಿ) ಮುಂಚೂಣಿಯಲ್ಲಿರುವ ಕರ್ನಾಟಕ ಮುಂದಿನ ಐದು ವರ್ಷಗಳಲ್ಲಿ ವೈಮಾನಿಕ ಮತ್ತು ರಕ್ಷಣಾ ಉದ್ಯಮ ಕ್ಷೇತ್ರದಲ್ಲೂ ದೇಶದಲ್ಲೇ ನಂ1 ಸ್ಥಾನಕ್ಕೇರುವ ಉದ್ದೇಶದಿಂದ 'ಕರ್ನಾಟಕ ವೈಮಾನಿಕ ಮತ್ತು ರಕ್ಷಣಾ ನೀತಿ'ಯನ್ನು ರೂಪಿಸಿದೆ.

ಈ ಹೊಸ ನೀತಿಯಿಂದ ಮುಂದಿನ ಐದು ವರ್ಷಗಳಲ್ಲಿ ಸುಮಾರು ₹45 ಸಾವಿರ ಕೋಟಿ ಹೂಡಿಕೆಯಾಗಲಿದ್ದು, 60 ಸಾವಿರಕ್ಕೂ ಹೆಚ್ಚು ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ಈ ಕ್ಷೇತ್ರದಲ್ಲಿ ಎಂಎಸ್‌ಎಂಇ ಜತೆಗೆ ದೊಡ್ಡ ಸಂಖ್ಯೆಯಲ್ಲಿ ನವೋದ್ಯಮಗಳೂ ಸ್ಥಾಪನೆಯಾಗಲಿವೆ ಎಂದು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಮೂಲಗಳು ತಿಳಿಸಿವೆ.

'ಕರ್ನಾಟಕ ಈಗಾಗಲೇ ವೈಮಾನಿಕ ಮತ್ತು ರಕ್ಷಣಾ ವಲಯದ ರಫ್ತಿನಲ್ಲಿ ಶೇ 65 ಕ್ಕೂ ಹೆಚ್ಚು ಪಾಲು ಹೊಂದಿದೆ. ಇದನ್ನು ಶೇ 100 ಕ್ಕೆ ತಲುಪಿಸುವ ಗುರಿ ಸರ್ಕಾರದ್ದು. 'ಆತ್ಮನಿರ್ಭರ್ ಭಾರತ್' ಯೋಜನೆಯಡಿ ದೇಶೀಯ ಉತ್ಪಾದನೆಗೆ ಈ ನೀತಿ ಹೆಚ್ಚಿನ ಸಹಕಾರಿಯಾಗಲಿದೆ. ಅಲ್ಲದೆ, ಜಾಗತಿಕ ಹೂಡಿಕೆದಾರರೂ ಕರ್ನಾಟಕದಲ್ಲಿ ಬಂಡವಾಳ ಹೂಡುವ ಸಾಧ್ಯತೆ ಇದೆ' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ತಿಳಿಸಿದ್ದಾರೆ.

'ಈ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೆ ಉದ್ಯಮಿಗಳಿಗೆ ಉತ್ತೇಜನ ನೀಡಲು ಸಹಾಯಧನ, ವಿದ್ಯುತ್ ತೆರಿಗೆ ವಿನಾಯಿತಿ, ಮುದ್ರಾಂಕ ಶುಲ್ಕ ರಿಯಾಯಿತಿ ಮತ್ತು ನೋಂದಣಿ ಶುಲ್ಕದಲ್ಲೂ ರಿಯಾಯಿತಿಗಳನ್ನು ನೀಡಲಾಗುವುದು' ಎಂದು ರಾಜ್ಯ ಸರ್ಕಾರ ಆಗಸ್ಟ್ 26 ರಂದು ಹೊರಡಿಸಿದ ಆದೇಶದಲ್ಲಿ ತಿಳಿಸಿದೆ.

ಪ್ರಜಾವಾಣಿ ವಿಶೇಷ

ದೇಶದ ಶೇ 25 ರಷ್ಟು ವಿಮಾನ ಮತ್ತು ಬಾಹ್ಯಾಕಾಶ ನೌಕೆಗಳ ನಿರ್ಮಾಣಕ್ಕ ಸಂಬಂಧಿಸಿದ ಉದ್ಯಮಗಳು ರಾಜ್ಯದಲ್ಲಿಯೇ ನೆಲೆಗೊಂಡಿವೆ. ರಕ್ಷಣಾ ಸೇವೆಗಳಿಗಾಗಿ ತಯಾರಿಸುವ ಎಲ್ಲ ರೀತಿಯ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಉತ್ಪಾದನೆಯಲ್ಲಿ ಶೇ 67 ರಷ್ಟು ಭಾಗ ಕರ್ನಾಟಕದಲ್ಲೇ ಆಗುತ್ತದೆ. ಸುಧಾರಿತ ತಂತ್ರಜ್ಞಾನಗಳ ಅಭಿವೃದ್ಧಿಯನ್ನು ಉತ್ತೇಜಿಸಲು, ಬಾಹ್ಯಾಕಾಶ ಸಂಬಂಧಿತ ಅಪ್ಲಿಕೇಶನ್‌ಗಳಿಗಾಗಿ ಉತ್ಪಾದನಾ ಅಭಿವೃದ್ಧಿ ಉತ್ತೇಜಿಸಲು, ವಿಶ್ವ ದರ್ಜೆಯ ನುರಿತ ಮಾನವಸಂಪನ್ಮೂಲ ಅಭಿವೃದ್ಧಿಪಡಿಸಲಾಗುವುದು ಎಂದೂ ಸರ್ಕಾರ ನೀತಿಯಲ್ಲಿ ತಿಳಿಸಿದೆ.

ಹೊಸ ನೀತಿಯ ಪ್ರತಿಪಾದನೆ

- ರಾಜ್ಯದಲ್ಲಿ 2,000 ಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಗಾತ್ರದ (ವೈಮಾನಿಕ ಮತ್ತು ರಕ್ಷಣಾ) ಉದ್ಯಮಗಳಿವೆ. ದೇಶದ ಶೇ 70 ರಷ್ಟು ಪೂರೈಕೆದಾರರ ನೆಲೆಯೊಂದಿಗೆ ಏರೋಸ್ಪೇಸ್‌ನಲ್ಲಿ ಪರಿಣತಿಯನ್ನು ಹೊಂದಿವೆ. ಇವು ಸಾರ್ವಜನಿಕ ವಲಯದ ಉದ್ಯಮಗಳಿಗೆ ಉಪಗುತ್ತಿಗೆ ಕೆಲಸವನ್ನು ಮಾಡುವ ಪ್ರಮುಖ ನೆಲೆಯಾಗಿವೆ.
- ಬೆಂಗಳೂರು ಭಾರತದ 'ಸಿಲಿಕಾನ್ ವ್ಯಾಲಿ' ಎಂದು ಗುರುತಿಸಲ್ಪಟ್ಟಿದೆ. ಐಟಿ ಮತ್ತು ಐಟಿ ಸಂಬಂಧಿತ ಸೇವೆಗಳು ಹಾಗೂ ಎಲೆಕ್ಟ್ರಾನಿಕ್ಸ್ ಹಾರ್ಡ್‌ವೇರ್‌ನಲ್ಲಿ ಹಲವಾರು ಉನ್ನತ ಕಂಪನಿಗಳನ್ನು ಹೊಂದಿದೆ. ಅವುಗಳಲ್ಲಿ ಹಲವು ಏರೋಸ್ಪೇಸ್ ವಲಯಕ್ಕೆ ಪೂರೈಕೆಯ ಸರಪಳಿಯ ಭಾಗವಾಗಿದೆ.

ತಾಳಿಕಟ್ಟೆ ಶಾಲೆಗೆ ನೋಟಿಸ್

ಭ್ರಷ್ಟಾಚಾರ ಆರೋಪ ಮಾಡಿದ್ದಕ್ಕೆ ಸೇಡಿನ ಕ್ರಮ– ಲೋಕೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣ ಇಲಾಖೆಯಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ' ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಸಂಘದ (ರುಪ್ಸ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಆರೋಪಿಸಿದ ಬೆನ್ನಲ್ಲೆ, ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ಅವರ ಒಡೆತನದಲ್ಲಿರುವ ಎರಡು ಶಾಲೆಗಳಿಗೆ ಶಿಕ್ಷಣ ಇಲಾಖೆ ಅಧಿಕಾರಿಗಳು ತೆರಳಿ ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ. ಅಲ್ಲದೆ, ಪರಿಶೀಲನಾ ವರದಿ ಆಧರಿಸಿ ಇಲಾಖೆ ಜಿಲ್ಲಾ ಉಪ ನಿರ್ದೇಶಕರು ನೋಟಿಸ್ ನೀಡಿದ್ದಾರೆ.

ಇಲಾಖೆ ನಡೆಗೆ ಆಕ್ರೋಶ ವ್ಯಕ್ತಪಡಿಸಿರುವ ಲೋಕೇಶ್ ತಾಳಿಕಟ್ಟೆ, 'ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದ ಕಾರಣಕ್ಕೆ ಸೇಡು ತೀರಿಸಿಕೊಳ್ಳಲು ದಾಖಲೆಗಳ ಪರಿಶೀಲನೆ ನೆಪದಲ್ಲಿ ದಾಳಿ ನಡೆದಿದೆ. ಸಂಘಟನೆಯ ಇತರ ಕೆಲವು ಪದಾಧಿಕಾರಿಗಳ ಶಾಲೆಗಳಲ್ಲೂ ಅಧಿಕಾರಿಗಳು ಪರಿಶೀಲನೆ ನಡೆಸಿ ನೋಟಿಸ್ ನೀಡಿದ್ದಾರೆ' ಎಂದಿದ್ದಾರೆ.

ಚಿತ್ರದುರ್ಗದ ಹೊಳಲ್ಕೆರೆಯ ತಾಳಿಕಟ್ಟೆಯಲ್ಲಿರುವ ಶ್ರೀರಾಮಪ್ಪ ಮೆಮೋರಿಯಲ್ ಎಜುಕೇಷನ್ ಟ್ರಸ್ಟ್‌ನ ಸಂದೀಪನಿ ಇಂಟರ್‌ನ್ಯಾಷನಲ್ ಸ್ಕೂಲ್‌ಗೆ ತೆರಳಿ ಪರಿಶೀಲನೆ ನಡೆಸಿದ ಕ್ಷೇತ್ರ ಶಿಕ್ಷಣಾಧಿಕಾರಿ, ಶಾಲೆಗೆ ಸಂಬಂಧಿಸಿದಂತೆ ಆಡಳಿತ ಮಂಡಳಿಯ ನೋಂದಣಿ ಪ್ರಮಾಣಪತ್ರ ಸಲ್ಲಿಸಿಲ್ಲ, ಪೂರ್ವ ಪ್ರಾಥಮಿಕ ಶಾಲೆ ಹಾಗೂ 6 ಮತ್ತು 8ನೇ ತರಗತಿ ನಡೆಸಲು ಪಡೆದ ಅನುಮತಿ, 2020–21, 2021–22ನೇ ಸಾಲಿನ ಲೆಕ್ಕ ಪತ್ರ ಸಲ್ಲಿಸಿಲ್ಲ, ಸ್ಥಿರನಿಧಿ ಠೇವಣಿಯ ದಾಖಲೆ ಒದಗಿಸಿಲ್ಲ ಎಂಬುದೂ ಸೇರಿದಂತೆ 10 ವಿಷಯಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಸಲ್ಲಿಸಿಲ್ಲ ಎಂದು ವರದಿ ನೀಡಿದ್ದಾರೆ.

ಹೊಳಲ್ಕೆರೆಯ ಓಂ ಈಶ್ವರಿ ವಿದ್ಯಾಸಂಸ್ಥೆಯ ಅಡಿಯಲ್ಲಿ ತಾಲ್ಲೂಕಿನ ಕುಡಿನೀರ ಕಟ್ಟೆಯಲ್ಲಿರುವ ಸಂದೀಪನಿ ಇಂಟರ್‌ನ್ಯಾಷನಲ್ ಸ್ಕೂಲ್‌ಗೆ ತೆರಳಿ ಪರಿಶೀಲನೆ ನಡೆಸಿದ ಸಮಗ್ರ ಶಿಕ್ಷಣ ಕರ್ನಾಟಕದ ಚಿತ್ರದುರ್ಗ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿ, ಶಾಲೆಯ ಆಡಳಿತ ಮಂಡಳಿಯ ನೋಂದಣಿ ಪ್ರಮಾಣಪತ್ರ ಸಲ್ಲಿಸಿಲ್ಲ, ರಾಜ್ಯ ಪಠ್ಯಕ್ರಮದಲ್ಲಿ 1ರಿಂದ 5, 6ರಿಂದ 8ನೇ ತರಗತಿವರೆಗೆ ನಡೆಸಲು ನೀಡಿರುವ ಅನುಮತಿ, ಮಾನ್ಯತೆ ನವೀಕರಣ ಪ್ರತಿ ಒದಗಿಸಿಲ್ಲ. ಶುಲ್ಕ ವಸೂಲಿ ಕುರಿತು ರಸೀದಿ ಪುಸ್ತಕ ಲಭ್ಯ ಇಲ್ಲ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ವರದಿ ನೀಡಿದ್ದಾರೆ.

'ಪರಿಶೀಲನೆ ಸಂದರ್ಭದಲ್ಲಿ ಒದಗಿಸದ ದಾಖಲೆಗಳನ್ನು ಮೂರು ದಿನಗಳ ಒಳಗೆ ಸಲ್ಲಿಸದಿದ್ದರೆ ಕರ್ನಾಟಕ ಶಿಕ್ಷಣ ಕಾಯ್ದೆ ಅನ್ವಯ ಕ್ರಮತೆಗೆದುಕೊಳ್ಳುವಂತೆ ಮೇಲಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು' ಎಂದು ಎರಡೂ ಶಾಲೆಗಳ ಆಡಳಿತ ಮಂಡಳಿಗೆ ಶಿಕ್ಷಣ ಇಲಾಖೆಯ ಚಿತ್ರದುರ್ಗ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ನೋಟಿಸ್ ನೀಡಿದ್ದಾರೆ.

'ಆಯುಕ್ತರಿಗೆ ನಾಳೆ ದಾಖಲೆ ಸಲ್ಲಿಕೆ'

'ಶಿಕ್ಷಣ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳ ಕುರಿತು ಇದೇ 26ರಂದು ಪ್ರಧಾನಿಗೆ ಪತ್ರ ಬರೆದಿದ್ದೆವು. ಈ ವಿಚಾರದ ಕುರಿತು ಇಲಾಖೆಯ ಆಯುಕ್ತರು ದಾಖಲೆಗಳೊಂದಿಗೆ ಸೆ. 1ರಂದು ಮಧ್ಯಾಹ್ನ 3 ಗಂಟೆಗೆ ಹಾಜರಾಗಲು ತಿಳಿಸಿದ್ದಾರೆ. ಅವರ ಸೂಚನೆಯಂತೆ, ದಾಖಲೆಗಳ ಸಹಿತ ಸಂಘದ ಆಯ್ದ ಪದಾಧಿಕಾರಿಗಳ ಜೊತೆ ಆಯುಕ್ತರನ್ನು ಭೇಟಿ ಮಾಡುತ್ತೇವೆ. ನಂತರ ಮಾಧ್ಯಮಗಳಿಗೂ ದಾಖಲೆಗಳನ್ನು ಬಿಡುಗಡೆ ಮಾಡುತ್ತೇವೆ' ಎಂದು ಲೋಕೇಶ್ ತಾಳಿಕಟ್ಟೆ ತಿಳಿಸಿದರು.

ನಿರೀಕ್ಷಣಾ ಜಾಮೀನು ಅರ್ಜಿ: ಒಡನಾಡಿ ತಕರಾರು

ಪ್ರಜಾವಾಣಿ ವಾರ್ತೆ

ಮೈಸೂರು: ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದಾರೆನ್ನಲಾದ ಬಾಲಕಿಯರ ಪರ ಕಾನೂನು ಹೋರಾಟ ಮಾಡಲು ಒಡನಾಡಿ ಸಂಸ್ಥೆಯು ನಿರ್ಧರಿಸಿದೆ.

ಆರೋಪಿ, ಚಿತ್ರದುರ್ಗದ ಡಾ.ಶಿವಮೂರ್ತಿ ಮುರುಘಾ ಶರಣರಿಗೆ ನಿರೀಕ್ಷಣಾ ಜಾಮೀನು ಕೊಡಬಾರದು ಎಂದು ಕೋರಿ, ಸಂಸ್ಥೆಯ ಪರವಾಗಿ ಬೆಂಗಳೂರಿನ ಹೈಕೋರ್ಟ್ ವಕೀಲ ಶ್ರೀನಿವಾಸ ಅವರು ಸೆ.1ರಂದು ಚಿತ್ರದುರ್ಗ ನ್ಯಾಯಾಲಯದಲ್ಲಿ ತಕರಾರು ಅರ್ಜಿ ಸಲ್ಲಿಸಲಿದ್ದಾರೆ.

ನಿರೀಕ್ಷಣಾ ಜಾಮೀನು ಕೋರಿ ಸ್ವಾಮೀಜಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಸೋಮವಾರ ನಡೆದಿದ್ದು, ಗುರುವಾರಕ್ಕೆ (ಸೆ.1) ಮುಂದೂಡಲಾಗಿದೆ. ಪೋಕ್ಸೊ ಕಾಯ್ದೆಯ ಅನ್ವಯ, ಸರ್ಕಾರಿ ಅಭಿಯೋಜಕರಷ್ಟೇ ಅಲ್ಲದೆ, ಸಂತ್ರಸ್ತ ಬಾಲಕಿಯರು ಮತ್ತು ಪೋಷಕರು ಹಾಗೂ ಬಾಲಕಿಯರಿಗೆ ಯಾರ ಮೇಲೆ ವಿಶ್ವಾಸವಿದೆಯೋ ಅವರ ಮೂಲಕವೂ ತಕರಾರು ಅರ್ಜಿ ಸಲ್ಲಿಸಬಹುದು.

'ಕಿರುಕುಳದ ವಿರುದ್ಧ ಸಂತ್ರಸ್ತ ಬಾಲಕಿಯರಿಂದ ದೂರು ಕೊಡಿಸುವುದರ ಜೊತೆಗೆ, ಅವರಿಗೆ ನ್ಯಾಯ ದೊರಕಿಸಬೇಕು ಎಂಬುದು ಸಂಸ್ಥೆಯ ಉದ್ದೇಶ. ಬಾಲಕಿಯರು ಕೂಡ ಸಂಸ್ಥೆಯ ಮೇಲೆ ವಿಶ್ವಾಸವಿಟ್ಟಿರುವುದರಿಂದ, ಸಂಸ್ಥೆಯೂ ನ್ಯಾಯಾಲಯಕ್ಕೆ ತಕರಾರು ಅರ್ಜಿ ಸಲ್ಲಿಸಿ, ನಿರೀಕ್ಷಣಾ ಜಾಮೀನು ವಿರುದ್ಧ ವಾದ ಮಂಡಿಸಲಾಗುವುದು' ಎಂದು ವಕೀಲ ಶ್ರೀನಿವಾಸ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಬಾಲಕಿಯರಿಗೆ ನ್ಯಾಯಾಲಯದ ನೋಟಿಸ್ ತಲುಪಿದ ಕೂಡಲೇ, ತಕರಾರು ಅರ್ಜಿ ಸಲ್ಲಿಸಲಾಗುವುದು. ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಸಂಸ್ಥೆ ನಿರ್ಧರಿಸಿದೆ' ಎಂದು ಹೇಳಿದರು.

'ಮಕ್ಕಳ ಸಂರಕ್ಷಣೆ ಕುರಿತು ನಿಯಮಿತವಾಗಿ ಪರಿಶೀಲನೆ ನಡೆಸುವುದೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕರ್ತವ್ಯ. ಆದರೆ ಈ ಪ್ರಕರಣದಲ್ಲಿ ಘಟಕ ವಿಫಲವಾಗಿದೆ. ಅದರ ಮೇಲುಸ್ತುವಾರಿ ವಹಿಸಬೇಕಾಗಿದ್ದ ಜಿಲ್ಲಾಧಿಕಾರಿ ಹಾಗೂ ಎಸ್ಪಿ ವಿರುದ್ಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ದೂರು ಪತ್ರ ಬರೆಯಲಾಗುವುದು' ಎಂದು ಸಂಸ್ಥೆಯ ಸಂಚಾಲಕ ಎಂ.ಎಲ್.ಪರಶುರಾಂ ತಿಳಿಸಿದ್ದಾರೆ.

ಬಂಧನಕ್ಕೆ ಮಹಿಳಾ ಸಂಘಟನೆಗಳ ಒತ್ತಾಯ

ಬೆಂಗಳೂರು: ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಶಿವಮೂರ್ತಿ ಮುರುಘಾ ಶರಣರನ್ನು ಕೂಡಲೇ ಬಂಧಿಸಬೇಕು ಎಂದು ವಿವಿಧ ಮಹಿಳಾ ಸಂಘಟನೆಗಳು ಒತ್ತಾಯಿಸಿವೆ.

ಸ್ತ್ರೀ ಜಾಗೃತಿ ಸಮಿತಿ, ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ, ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಲೈಂಗಿಕ ಕಾರ್ಯಕರ್ತೆಯರ ಸಂಘ, ಕರ್ನಾಟಕ ಜನ ಶಕ್ತಿ ಸೇರಿ ಹಲವು ಮಹಿಳಾ ಸಂಘಟನೆಗಳ ಜಂಟಿ ನಿಯೋಗವು ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ಪೊಲೀಸ್ ಮಹಾನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕರಿಗೂ ಮನವಿ ನೀಡಿತು.

'ಮಕ್ಕಳ ಮೇಲೆ ದೌರ್ಜನ್ಯ ಎಸಗಿದ ಗಂಭೀರ ಆರೋಪ ಇದ್ದು, ಮುರುಘಾ ಶರಣರು ಇರುವ ಸ್ಥಳ ಗೊತ್ತಿದ್ದರೂ ಪೊಲೀಸರು ಬಂಧಿಸದಿರುವುದು ಅನ್ಯಾಯ. ಮಕ್ಕಳು ಬಹಳ ಕಾಲ ಆರೋಪಿಗಳ ಅಧೀನದಲ್ಲಿದ್ದು, ಬೆದರಿಕೆಗೆ ಒಳಗಾಗುವ ಸ್ಥಿತಿ ಇದೆ. ಆರೋಪಿ ಪ್ರಭಾವ ಬಳಸಿ ಸಾಕ್ಷ್ಯಗಳನ್ನು ನಾಶ ಮಾಡುವ ಸಾಧ್ಯತೆಯೂ ಇದೆ. ಈ ಎಲ್ಲಾ ಕಾರಣಗಳಿಂದ ಶರಣರನ್ನು ಕೂಡಲೇ ಬಂಧಿಸಬೇಕು' ಎಂದು ಸಂಘಟನೆಗಳು ಒತ್ತಾಯಿಸಿವೆ.

'ಸಂತ್ರಸ್ತರಲ್ಲಿ ಒಬ್ಬಳು ಪರಿಶಿಷ್ಟ ಸಮುದಾಯಕ್ಕೆ ಸೇರಿದವಳು ಎಂದು ವರದಿಯಾಗಿದೆ. ಆರೋಪಿಗಳ ವಿರುದ್ಧ ಕೂಡಲೇ ಎಸ್‌ಸಿ, ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆ ಅಡಿಯಲ್ಲೂ ಕ್ರಮ ಜರುಗಿಸಬೇಕು. ಮಕ್ಕಳಿಗೆ ರಕ್ಷಣೆ ಮತ್ತು ಪುನರ್ವಸತಿ ಕಲ್ಪಿಸಬೇಕು' ಎಂದು ಮನವಿ ಮಾಡಿವೆ.

'ಕಾಳಿ' ಸಿನಿಮಾಗೆ ತಡೆಯಾಜ್ಞೆ: ಲೀನಾಗೆ ಮತ್ತೊಮ್ಮೆ ಸಮನ್ಸ್ ಜಾರಿ

ನವದೆಹಲಿ (ಪಿಟಿಐ): ಲೀನಾ ಮಣಿಮೇಕಲೈ ಅವರು ನಿರ್ಮಿಸಿರುವ 'ಕಾಳಿ' ಸಿನಿಮಾಗೆ ನೀಡಿರುವ ತಡೆಯಾಜ್ಞೆಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ಸಂಬಂಧ ದೆಹಲಿ ನ್ಯಾಯಾಲಯವು ಲೀನಾ ಅವರಿಗೆ ಮತ್ತೊಮ್ಮೆ ಸಮನ್ಸ್ ಜಾರಿ ಮಾಡಿದೆ.

ಆದೇಶ ಕೊಡುವ ಮೊದಲು ಲೀನಾ ಅವರ ವಾದವನ್ನು ಕೇಳಬೇಕು ಎಂದು ನ್ಯಾಯಾಲಯ ಹೇಳಿದೆ. ಈ ಹಿಂದೆ ನ್ಯಾಯಾಲಯವು ಆಗಸ್ಟ್ 6ರಂದು ಲೀನಾ ಅವರಿಗೆ ಸಮನ್ಸ್ ನೀಡಿತ್ತು.

'ಲೀನಾ ಹಾಗೂ ಟೂರಿಂಗ್ ಟಾಕೀಸ್ ಮೀಡಿಯಾ ವರ್ಕ್ಸ್ ಪ್ರೈ.ಲಿ ಅವರಿಗೆ ಈ ಹಿಂದೆ ನೀಡಿದ್ದ ಸಮನ್ಸ್ ತಲುಪಿಲ್ಲ. ಆದ್ದರಿಂದ ವಾಟ್ಸ್‌ಆ್ಯಪ್, ಇ–ಮೇಲ್ ಮೂಲಕ ಹೊಸ ಸಮನ್ಸ್ ನೀಡಬೇಕು' ಎಂದು ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶ ಅಭಿಷೇಕ್ ಕುಮಾರ್ ಅವರು ನಿರ್ದೇಶಿಸಿದರು. ಅರ್ಜಿಯ ವಿಚಾರಣೆಯನ್ನು ನವೆಂಬರ್ 1ಕ್ಕೆ ಮುಂದೂಡಿತು.

3 ಉಗ್ರರು ಹತ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಲಷ್ಕರ್–ಇ–ತಯಬಾ (ಎಲ್‌ಇಟಿ) ಉಗ್ರ ಸಂಘಟನೆಗೆ ಸೇರಿದ ಮೂವರು ಉಗ್ರರು ಹತರಾಗಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಜಿಲ್ಲೆಯ ನಗ್ಬಾಲ್ ಪ್ರದೇಶದಲ್ಲಿ ಉಗ್ರರು ಅಡಗಿದ್ದಾರೆ ಎಂಬ ಮಾಹಿತಿಯ ಮೇರೆಗೆ ಭದ್ರತಾ ಪಡೆಗಳು ಪಹರೆ ಮತ್ತು ಶೋಧ ಕಾರ್ಯಾಚರಣೆ ಕೈಗೊಂಡಿದ್ದವು. ಕಾರ್ಯಾಚರಣೆಯು ಎನ್‌ಕೌಂಟರ್ ಆಗಿ ಬದಲಾಯಿತು ಎಂದು ಪೊಲೀಸರು ಹೇಳಿದ್ದಾರೆ.

'ಬೆಟರ್ ಜೆಕೆ': ಹೊಸ ಯುಗಕ್ಕೆ ಗುಲಾಂ ನಬಿ ಆಜಾದ್ ಆಹ್ವಾನ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಂಗ್ರೆಸ್ ತೊರೆದಿರುವ ಗುಲಾಂ ನಬಿ ಆಜಾದ್ ಅವರು ಸೆಪ್ಟೆಂಬರ್ 4ರಂದು 'ಬೆಟರ್ ಜೆ ಆ್ಯಂಡ್ ಕೆ' ಎನ್ನುವ ರ‍್ಯಾಲಿಯೊಂದನ್ನು ಆಯೋಜಿಸಲಿದ್ದಾರೆ.

ಈ ವೇಳೆ ಆಜಾದ್ ಅವರು ಹೊಸ ಪಕ್ಷವನ್ನು ಘೋಷಿಸಬಹುದು ಎಂದು ನಿರೀಕ್ಷಿಸಲಾಗಿದೆ.

ಅಜಾದ್ ಅವರ ಹೊಸ ಪಕ್ಷಕ್ಕೆ ಸೇರ್ಪಡೆಯಾಗುವ ಸಲುವಾಗಿ ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸ್‌ನ 51ಕ್ಕೂ ಹೆಚ್ಚು ಮುಖಂಡರು ಮಂಗಳವಾರ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದಾರೆ. ಜಮ್ಮು ಕಾಶ್ಮೀರ ವಿಧಾನಸಭೆಯ ಮಾಜಿ ಉಪಸ್ಪೀಕರ್ ಗುಲಾಂ ಹೈದರ್ ಮಲಿಕ್ ಸೇರಿದಂತೆ ಮೂವರು ಕಾಂಗ್ರೆಸ್ ನಾಯಕರು ಆಜಾದ್ ಅವರ ಹೊಸ ಪಕ್ಷಕ್ಕೆ ತಮ್ಮ ಬೆಂಬಲ ಸೂಚಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಮಹೇಶ್ವರ್ ಸಿಂಗ್ ಮನ್‌ಹಾಸ್ ಅವರೂ ಪಕ್ಷ ತೊರೆದಿದ್ದಾರೆ. ಜೊತೆಗೆ ಅಪ್ನಿ ಪಾರ್ಟಿಯ ಪ್ರಮುಖ ಕಾರ್ಯಕರ್ತರು ಪಕ್ಷಕ್ಕೆ ರಾಜೀನಾಮೆ ನೀಡಿ, ಆಜಾದ್ ಅವರ ಹೊಸ ಪಕ್ಷಕ್ಕೆ ಬೆಂಬಲ ಘೋಷಿಸಿದ್ದಾರೆ.

'ಕಳೆದುಕೊಂಡದ್ದನ್ನು ಪಡೆದುಕೊಳ್ಳುವುದಕ್ಕಾಗಿ ಎಲ್ಲರೂ ಸಿದ್ಧರಾಗಿ. ಸೈನಿಕ್ ಕಾಲೊನಿಯಲ್ಲಿ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ 'ಬೆಟರ್ ಜೆ ಆ್ಯಂಡ್ ಕೆ' ರ‍್ಯಾಲಿಯಲ್ಲಿ ಭಾಗವಹಿಸಿ' ಎಂದು ಆಜಾದ್ ಅವರು ಜಮ್ಮು ಮತ್ತು ಕಾಶ್ಮೀರದ ಜನರನ್ನು ಕೋರಿದ್ದಾರೆ.

'ಹೊಸ ಆರಂಭಕ್ಕಾಗಿ ಹೃದಯ ತುಂಬಿ ಶುಭಾಶಯಗಳನ್ನು ಹೇಳಲು ಜಮ್ಮು ಮತ್ತು ಕಾಶ್ಮೀರದ ಉದ್ದಗಲದಿಂದ ಬರುವ ಜನರನ್ನು ಹಾಗೂ ರಾಜಕೀಯ ಪಕ್ಷಗಳ ನಾಯಕರನ್ನು ನೋಡಲು ಉತ್ಸುಕನಾಗಿದ್ದೇನೆ' ಎಂದಿದ್ದಾರೆ.

ಕಾಂಗ್ರೆಸ್‌ಗೆ ಮಂಗಳವಾರ ರಾಜೀನಾಮೆ ನೀಡಿದವರಲ್ಲಿ ಜಮ್ಮು ಮತ್ತು ಕಾಶ್ಮೀರದ ಮಾಜಿ ಉಪಮುಖ್ಯಮಂತ್ರಿ ತಾರಾ ಚಂದ್, ಮಾಜಿ ಸಚಿವರಾದ ಅಬ್ದುಲ್ ಮಜೀದ್ ವಾನಿ, ಮನೋಹರ್ ಲಾಲ್ ಶರ್ಮಾ ಪ್ರಮುಖರು.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಡಾ. ರಿತೇಶ್ ಕುಮಾರ್ ಸಿಂಗ್ ಅವರನ್ನು ನೇಮಿಸಲಾಗಿದೆ. ಈ ಹುದ್ದೆಯಲ್ಲಿದ್ದ ಎಸ್.ಸೆಲ್ವಕುಮಾರ್ ಅವರಿಗೆ ಯಾವುದೇ ಹುದ್ದೆ ತೋರಿಸಿಲ್ಲ. ವರ್ಗಾವಣೆಗೊಂಡವರು:

ಪಲ್ಲವಿ ಅಕುರಾತಿ– ಜಂಟಿ ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ. ಪ್ರಿಯಾಂಕ ಮೇರಿ ಫ್ರಾನ್ಸಿಸ್– ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.

ಎನ್. ಮಂಜುಶ್ರೀ– ನಿರ್ದೇಶಕರು, ಪೌರಾಡಳಿತ. ಆರ್. ವೆಂಕಟೇಶಕುಮಾರ್– ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ (ವೆಚ್ಚ), ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಚುನಾವಣೆ).

ಡಾ. ಆರ್. ರಾಗಪ್ರಿಯಾ– ಮಿಷನ್ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಯೋಜನೆ (ಎನ್‌ಎಲ್‌ಎಂ). ದಿವ್ಯಾ ಪ್ರಭು ಜಿ.ಆರ್.ಜೆ.– ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ.

ರಜೆ ವಿಸ್ತರಣೆ

ಬೆಂಗಳೂರು: ಪದವಿ ಪೂರ್ವ ಕಾಲೇಜುಗಳ ಮಧ್ಯಂತರ ರಜೆಯನ್ನು ಒಂದು ದಿನ ವಿಸ್ತರಿಸಲಾಗಿದೆ. 2022–23ನೇ ಶೈಕ್ಷಣಿಕ ಸಾಲಿನ ದಾಖಲಾತಿ ಮಾರ್ಗಸೂಚಿಯಲ್ಲಿ ಪದವಿ ಪೂರ್ವ ಕಾಲೇಜುಗಳಿಗೆ ಮಧ್ಯಂತರ ರಜೆಯನ್ನು ಅ.1ರಿಂದ 12ರವರೆಗೆ ನೀಡಲಾಗಿತ್ತು. ಈಗ ಅ.13ರಂದು ಒಂದು ದಿನ ಹೆಚ್ಚುವರಿ ರಜೆ ನೀಡಲಾಗಿದೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಯ್ದೆ ವಿರುದ್ಧ ಧ್ವನಿ ಎತ್ತದಂತೆ ತಡೆಯುವುದು ವಾಕ್ ಸ್ವಾತಂತ್ರ್ಯದ ಉಲ್ಲಂಘನೆ: ರಾಹುಲ್–ಸೋನಿಯಾ

ನವದೆಹಲಿ (ಪಿಟಿಐ): 'ಸಂಸತ್ತು ಅಂಗೀಕರಿಸುವ ಯಾವುದೇ ಕಾನೂನು ಅಥವಾ ಮಸೂದೆ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸದಂತೆ ನಾಗರಿಕರನ್ನು ನಿರ್ಬಂಧಿಸುವುದು ವಾಕ್ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವದ ತತ್ವಗಳ ಉಲ್ಲಂಘನೆಯಾಗುತ್ತದೆ' ಎಂದು ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ದೆಹಲಿ ಹೈಕೋರ್ಟ್‌ಗೆ ಮಂಗಳವಾರ ಸಲ್ಲಿಸಿರುವ ಪ್ರತ್ಯೇಕ ಅಫಿಡವಿಟ್‌ಗಳಲ್ಲಿ ತಿಳಿಸಿದ್ದಾರೆ.

ದ್ವೇಷ ಭಾಷಣದ ಮೂಲಕ 2020ರ ಫೆಬ್ರುವರಿಯಲ್ಲಿ ನಡೆದಿದ್ದ ಗಲಭೆಗೆ ಪ್ರಚೋದನೆ ನೀಡಿದ ಆರೋಪದಡಿ ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಿರುವುದನ್ನು ಅವರು ಪ್ರಶ್ನಿಸಿದ್ದಾರೆ.

ನ್ಯಾಯಮೂರ್ತಿಗಳಾದ ಸಿದ್ದಾರ್ಥ್ ಮೃದುಲ್ ಮತ್ತು ಅಮಿತ್ ಶರ್ಮಾ ಅವರಿದ್ದ ದ್ವಿಸದಸ್ಯ ಪೀಠವು ಪ್ರಕರಣದ ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 27ಕ್ಕೆ ನಿಗದಿಪಡಿಸಿದೆ.



ಪ್ರತಿಭಟನೆಗೆ ಪೊಲೀಸರ ತಡೆ

ದೆಹಲಿ ಸರ್ಕಾರದ ನೂತನ ಅಬಕಾರಿ ನೀತಿ ವಿರೋಧಿಸಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಮನೆ ಬಳಿ ಮಂಗಳವಾರ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಈ ವೇಳೆ ಪೊಲೀಸ್ ಬ್ಯಾರಿಕೇಡ್ ನುಗ್ಗಿ ಮುನ್ನುಗ್ಗಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ತಡೆದರು –ಪಿಟಿಐ ಚಿತ್ರ

2002ರ ಗುಜರಾತ್ ಹಿಂಸಾಚಾರ ಪ್ರಕರಣಗಳ ತನಿಖೆಗೆ ಕೋರಿ 'ಸುಪ್ರೀಂ'ಗೆ ಸಲ್ಲಿಸಿದ್ದ ಅರ್ಜಿ

ಎನ್‌ಎಚ್‌ಆರ್‌ಜಿ ಅರ್ಜಿ ಸೇರಿ 10 ಅರ್ಜಿ ವಿಲೇವಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: 2002ರ ಗುಜರಾತ್ ಗಲಭೆಯ ಹಿಂಸಾಚಾರ ಪ್ರಕರಣಗಳ ಸೂಕ್ತ ತನಿಖೆಗೆ ಕೋರಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸಲ್ಲಿಸಿದ್ದ ಮನವಿ ಸೇರಿ ಹತ್ತು ಅರ್ಜಿಗಳನ್ನು ಸುಪ್ರೀಂಕೋರ್ಟ್ ಮಂಗಳವಾರ ವಿಲೇವಾರಿ ಮಾಡಿದೆ.

ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಮತ್ತು ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಹಾಗೂ ಜೆ.ಬಿ. ಪಾರ್ದೀವಾಲ ಅವರಿದ್ದ ಪೀಠವು, ಈ ಪ್ರಕರಣಗಳನ್ನು ನಿರರ್ಥಕವೆಂದು ಪರಿಗಣಿಸಿ ವಿಲೇಮಾಡಿದೆ.

ಸಿಟಿಜನ್ಸ್ ಫಾರ್ ಪೀಸ್ ಆ್ಯಂಡ್ ಜಸ್ಟೀಸ್ ಸರ್ಕಾರೇತರ ಸಂಸ್ಥೆಯ ತೀಸ್ತಾ ಸೆಟಲ್‌ವಾಡ್ ಅವರು ಗುಜರಾತ್ ಗಲಭೆ ಪ್ರಕರಣಗಳ ಸೂಕ್ತ ತನಿಖೆ ನಡೆಸುವಂತೆ ಮತ್ತು ತಮಗೆ ರಕ್ಷಣೆ ಕೋರಿ ವಕೀಲೆ ಅಪರ್ಣಾ ಭಟ್ ಮೂಲಕ ಅರ್ಜಿ ಸಲ್ಲಿಸಿದ್ದರು.

ಗುಜರಾತ್ ಗಲಭೆಗಳಿಗೆ ಸಂಬಂಧಿಸಿದ ಒಂಬತ್ತು ಪ್ರಕರಣಗಳ ತನಿಖೆಗೆ ಉನ್ನತ ನ್ಯಾಯಾಲಯ ರಚಿಸಿದ್ದ ಎಸ್‌ಐಟಿ, ಎಂಟು ಪ್ರಕರಣಗಳ ತನಿಖೆ ಪೂರ್ಣಗೊಳಿಸಿದೆ. ಉಳಿದ ಒಂದು ಪ್ರಕರಣದ ಅಂತಿಮ ವಾದ ವಿಚಾರಣಾ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದು ಪೀಠ ಹೇಳಿದೆ.

ತೀಸ್ತಾ ರಕ್ಷಣೆಗೆ ಕೋರಿದ್ದ ಅರ್ಜಿಯನ್ನು ಪೀಠವು ವಿಚಾರಣೆಗೆ ಬಾಕಿ ಇರಿಸಿ, ಸಂಬಂಧಿಸಿದ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಲು ತೀಸ್ತಾ ಅವರಿಗೆ ಅವಕಾಶ ನೀಡಿದೆ.

ಎಸ್‌ಐಟಿ ಪ್ರತಿನಿಧಿಸುತ್ತಿರುವ ಹಿರಿಯ ವಕೀಲ ಮುಕುಲ್ ರೋಹಟಗಿ, ಒಂಬತ್ತು ಪ್ರಕರಣಗಳಲ್ಲಿ ನರೋಡಾ ಗಾಂವ್ ಪ್ರದೇಶದ ಪ್ರಕರಣದ ವಿಚಾರಣೆ ನಡೆಯುತ್ತಿದ್ದು, ಅಂತಿಮ ವಾದದ ಹಂತದಲ್ಲಿ ಬಾಕಿ ಇದೆ.

ಇತರ ಪ್ರಕರಣಗಳ ವಿಚಾರಣೆಗಳು ಪೂರ್ಣಗೊಂಡಿವೆ. ಆ ಪ್ರಕರಣಗಳು ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನಲ್ಲಿವೆ ಎಂದು ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿದ್ದರು.

ಸೆ. 1ಕ್ಕೆ ತೀಸ್ತಾ ಜಾಮೀನು ಅರ್ಜಿ ವಿಚಾರಣೆ



ನವದೆಹಲಿ (ಪಿಟಿಐ): 2002ರ ಗುಜರಾತ್ ಕೋಮುಗಲಭೆ ಪ್ರಕರಣದಲ್ಲಿ 'ಮುಗ್ಧರನ್ನು ಬಂಧಿಸಲು' ನಕಲಿ ಸಾಕ್ಷ್ಯಾಧಾರಗಳನ್ನು ಸೃಷ್ಟಿಸಿರುವ ಆರೋಪದಲ್ಲಿ ಬಂಧಿತವಾಗಿರುವ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೆ. 1ರಂದು ನಡೆಸಲಿದೆ.

ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್, ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಮತ್ತು ಸುಧಾಂಶು ಧುಲಿಯಾ ಅವರನ್ನೊಳಗೊಂಡ ನ್ಯಾಯಪೀಠವು ಮಂಗಳವಾರ ಮಧ್ಯಾಹ್ನ 3.45ಕ್ಕೆ ಅರ್ಜಿಯ ವಿಚಾರಣೆಯನ್ನು ಆರಂಭಿಸಬೇಕಿತ್ತು. ಆದರೆ, ಸಮಯದ ಅಭಾವದಿಂದ ಪ್ರಕರಣದ ವಿಚಾರಣೆಯನ್ನು ಸೆ.1ರಂದು ಮಧ್ಯಾಹ್ನ 3ಕ್ಕೆ ನಡೆಸಲಾಗುವುದು ಎಂದು ನ್ಯಾಯಪೀಠವು ಆದೇಶ ನೀಡಿತು.

ಜಾಮೀನು ಪ್ರಕ್ರಿಯೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಗುಜರಾತ್ ಸರ್ಕಾರವು, 'ಹಿರಿಯ ರಾಜಕೀಯ ನಾಯಕರ ಆಜ್ಞೆಯ ಮೇರೆಗೆ ತೀಸ್ತಾ ಅವರು ಇತರರೊಂದಿಗೆ ಸೇರಿ 'ಸಂಚು' ರೂಪಿಸಿದ್ದಾರೆ. ಅಷ್ಟೇ ಅಲ್ಲ, ತೀಸ್ತಾ ಅವರು ಆ ರಾಜಕೀಯ ನಾಯಕರೊಂದಿಗೆ ಸಭೆಯನ್ನೂ ನಡೆಸಿ, ಇದಕ್ಕೆ ಸಂಬಂಧಿಸಿದಂತೆ ಬೃಹತ್ ಮೊತ್ತದ ಹಣವನ್ನೂ ಪಡೆದಿದ್ದಾರೆ' ಎಂದು ಆರೋಪ ಮಾಡಿದೆ.

ಈ ಪ್ರಕರಣದಲ್ಲಿ ಜೂನ್‌ನಲ್ಲಿ ಬಂಧನಕ್ಕೊಳಗಾಗಿದ್ದ ತೀಸ್ತಾ ಸೆಟಲ್‌ವಾಡ್ ಅವರ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆಗಸ್ಟ್ 22ರಂದು ಗುಜರಾತ್ ಸರ್ಕಾರದಿಂದ ಪ್ರತಿಕ್ರಿಯೆ ಕೇಳಿತ್ತು.

ನಿಲುವು ಸ್ಪಷ್ಟಪಡಿಸಲು 3 ವಾರ ಅವಕಾಶ: 'ಸುಪ್ರೀಂ'

ಮತಾಂತರಗೊಂಡ ಪರಿಶಿಷ್ಟರಿಗೂ ಮೀಸಲು ಪ್ರತಿಕ್ರಿಯೆಗೆ ಸೂಚನೆ

ನವದೆಹಲಿ (ಪಿಟಿಐ): ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿರುವ ಪರಿಶಿಷ್ಟರಿಗೂ, ಮೀಸಲಾತಿ ಸೌಲಭ್ಯವನ್ನು ನೀಡಬೇಕು ಎಂಬ ಬೇಡಿಕೆ ಕುರಿತಂತೆ ಮೂರು ವಾರಗಳಲ್ಲಿ ನಿಲುವು ಸ್ಪಷ್ಟಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಈ ಕುರಿತು ಸಲ್ಲಿಸಲಾಗಿರುವ ಸಾರ್ವಜನಿಕರ ಹಿತಾಸಕ್ತಿ ಅರ್ಜಿಯಲ್ಲಿ, ಮತಾಂತರಗೊಂಡಿರುವ ದಲಿತರಿಗೂ ಹಿಂದೂ, ಬೌದ್ಧ ಮತ್ತು ಸಿಖ್ ಧರ್ಮ ಪಾಲಿಸುತ್ತಿರುವ ದಲಿತರಿಗೂ ನೀಡಬೇಕು ಎಂದು ಕೋರಲಾಗಿದೆ. ಇನ್ನೊಂದು ಅರ್ಜಿಯಲ್ಲಿ ಮೂಲತಃ ಪರಿಶಿಷ್ಟರಾಗಿದ್ದ ಕ್ರೈಸ್ತರಿಗೂ ಮೀಸಲಾತಿ ಸೌಲಭ್ಯಗಳನ್ನು ವಿಸ್ತರಿಸಬೇಕು ಎಂದು ಮನವಿ ಮಾಡಲಾಗಿದೆ.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಈ ಕುರಿತಂತೆ ಸರ್ಕಾರದ ನಿಲುವನ್ನು ತಿಳಿಸಲಾಗುವುದು ಎಂದು ನ್ಯಾಯಮೂರ್ತಿ ಎಸ್.ಕೆ.ಕೌಲ್ ಅವರಿದ್ದ ಪೀಠಕ್ಕೆ ತಿಳಿಸಿದರು.

ನ್ಯಾಯಮೂರ್ತಿಗಳಾದ ಎ.ಎಸ್. ಓಕಾ, ವಿಕ್ರಂ ನಾಥ್ ಅವರೂ ಪೀಠದಲ್ಲಿದ್ದಾರೆ.

ಅರ್ಜಿದಾರರ ಪರ ವಕೀಲರು ವಾರದಲ್ಲಿ ಪ್ರತಿಕ್ರಿಯೆ ದಾಖಲಿಸಲಾಗುವುದು ಎಂದು ತಿಳಿಸಿದ್ದಾರೆ. ಮೂರು ಪುಟಗಳಿಗೆ ಮೀರದಂತೆ ಮುಂದಿನ ವಿಚಾರಣೆ ದಿನದ ಮೂರು ದಿನ ಮೊದಲು ಪ್ರತಿಕ್ರಿಯೆ ದಾಖಲಿಸಬೇಕು ಎಂದು ನ್ಯಾಯಮೂರ್ತಿ ತಿಳಿಸಿದರು.

ಮುಂದಿನ ವಿಚಾರಣೆಯನ್ನು ಅಕ್ಟೋಬರ್ 11ಕ್ಕೆ ಮುಂದೂಡಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದ ಕಾನೂನು ತೊಡಕುಗಳನ್ನು ಬಗೆಹರಿಸಬೇಕು ಎಂದು ಪೀಠವು ಅಭಿಪ್ರಾಯಪಟ್ಟಿತು.

ಹಿಸ್ಸಾ ಆಸ್ತಿಗೆ ಹೊಸ ಸರ್ವೆ ನಂಬರ್

ಒಂದನೇ ಪುಟದಿಂದ

'ಈ ಹೊಸ ಪದ್ಧತಿ ಜಾರಿಗೆ ಬಂದ ಮೇಲೆ ಪರಿವರ್ತನೆಯಾದ ಭೂಮಿಗೆ ಹೊಸ ಸರ್ವೆ ನಂಬರ್ ಸಿಗಲಿದೆ. ಈ ಮೊದಲು 10 ಎಕರೆಯಲ್ಲಿ 2 ಎಕರೆ ಪರಿವರ್ತನೆಯಾಗಿದ್ದರೆ ಅದು ಎಲ್ಲೂ ದಾಖಲಾಗುತ್ತಿರಲಿಲ್ಲ. ಈಗ ಪರಿವರ್ತನೆಯಾದ 2 ಎಕರೆಗೆ ಹೊಸ ಸರ್ವೆ ನಂಬರ್, ಹೊಸ ಆರ್‌ಟಿಸಿ ಸಿಗಲಿದೆ. ಒಂದು 11ಎ ಪೋಡಿ ಸ್ಕೆಚ್ (ಆಕಾರ್‌ಬಂದ್) ಪಡೆದ ನಂತರ ಮತ್ತೆ ಸರ್ವೆ ಇಲಾಖೆಗೆ ಬರಬೇಕಾಗುವುದಿಲ್ಲ. ಎಷ್ಟೇ ಮ್ಯೂಟೇಷನ್ ಇದ್ದರೂ ಅದು ಏಕ ಸಮಯದಲ್ಲೇ ಆಗುತ್ತದೆ. ಭೂದಾಖಲೆಗಳಲ್ಲಿ ಎಲ್ಲವೂ ಸ್ಪಷ್ಟವಾಗಿರಲು ಈ ವ್ಯವಸ್ಥೆ ಜಾರಿಯಾಗುತ್ತಿದೆ. ಇದರಿಂದ ಎಲ್ಲರಿಗೂ ಅನುಕೂಲ' ಎಂದು ಮಾಹಿತಿ ನೀಡಿದರು.

ಕಳೆದು ಹೋಗಿದ್ದ ಮಗು ಬಿಜೆಪಿ ನಾಯಕಿ ಮನೆಯಲ್ಲಿ ಪತ್ತೆ

ಮಥುರಾ (ಪಿಟಿಐ): ಉತ್ತರಪ್ರದೇಶದ ಮಥುರಾ ರೈಲು ನಿಲ್ದಾಣದಲ್ಲಿ ಆಗಸ್ಟ್ 24ರಂದು ಅಪಹರಣಕ್ಕೊಳಗಾಗಿದ್ದ ಮಗುವು ಫಿರೋಜಾಬಾದ್ ನಗರಸಭೆ ಕಾರ್ಪೊರೇಟರ್ ಹಾಗೂ ಬಿಜೆಪಿ ನಾಯಕಿ ವಿನಿತಾ ಅಗರವಾಲ್ ಅವರ ಮನೆಯಲ್ಲಿ ಪತ್ತೆಯಾಗಿದೆ.

ಅಪಹರಣಕ್ಕೆ ಸಂಬಂಧಿಸಿದಂತೆ ಮಥುರಾ ರೈಲ್ವೆ ಪೊಲೀಸರು ಬಹುದೊಡ್ಡ ಮಾನವ ಕಳ್ಳಸಾಗಣೆ ಜಾಲವನ್ನು ಪತ್ತೆ ಹಚ್ಚಿದ್ದಾರೆ. ಈ ಸಂಬಂಧ ವಿನಿತಾ ಅಗರವಾಲ್, ಅವರ ಪತಿ ಕೃಷ್ಣಮುರಾರಿ ಅಗರವಾಲ್ ಮತ್ತು ಇತರ ಆರು ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಆ. 24ರಂದು ರಾತ್ರಿ ಮಥುರಾ ರೈಲು ನಿಲ್ದಾಣದಲ್ಲಿ ತನ್ನ ತಾಯಿ ಜೊತೆ ಪ್ಲಾಟ್‌ಫಾರ್ಮ್ ಮೇಲೆ ಎರಡು ವರ್ಷದ ಗಂಡು ಮಗುವೊಂದು ಮಲಗಿತ್ತು. ರಾತ್ರಿ ಬಂದ ವ್ಯಕ್ತಿಯೊಬ್ಬ ಮಗುವನ್ನು ಎತ್ತಿಕೊಂಡು ಪರಾರಿಯಾಗಿದ್ದ. ಅಪಹರಣದ ದೃಶ್ಯವು ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಇದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಮಗು ಅಪಹರಿಸಿದ್ದ ದೀಪ್ ಕುಮಾರ್‌ನ ಮೊಬೈಲ್ ಟ್ರೇಸ್ ಮಾಡಿ, ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಿದಾಗ ಮಗು ವಿನಿತಾ ಮನೆಯಲ್ಲಿರುವುದು ಗೊತ್ತಾಯಿತು.

ಹತ್ರಾಸ್‌ನ ವೈದ್ಯ ದಂಪತಿ ಪ್ರೇಮ್ ಬಿಹಾರಿ, ದಯಾವತಿ ಅವರು ಈ ಪ್ರಕರಣದ ಕಿಂಗ್‌ಪಿನ್ ಎನ್ನಲಾದ ವಿನಿತಾ ಜೊತೆಯಾಗಿ ಮಾನವ ಕಳ್ಳಸಾಗಣೆ ಜಾಲವನ್ನು ನಡೆಸುತ್ತಿದ್ದರು ಎನ್ನಲಾಗಿದೆ.

ಈದ್ಗಾ: ಚೌತಿಗಿಲ್ಲ ಅವಕಾಶ

ಒಂದನೇ ಪುಟದಿಂದ

ಸುಮಾರು ಎರಡು ಗಂಟೆಗಳ ಕಾಲ ಪ್ರಕರಣದ ವಿಚಾರಣೆ ನಡೆಸಿದ ತ್ರಿಸದಸ್ಯ ಪೀಠವು, 'ಈ ಪ್ರಕರಣದ ಬಗ್ಗೆ ಹೈಕೋರ್ಟ್ ಏಕಸದಸ್ಯ ಪೀಠ ಈಗಾಗಲೇ ಆದೇಶ ಹೊರಡಿಸಿದೆ. ಜಾಗದ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಕಕ್ಷಿದಾರರು ತಮ್ಮ ಅಹವಾಲುಗಳನ್ನು ಏಕಸದಸ್ಯ ಪೀಠದ ಮುಂದೆ ಸಲ್ಲಿಸಿ ಬಗೆಹರಿಸಿಕೊಳ್ಳಬೇಕು' ಎಂದು ಹೇಳಿ ಮೇಲ್ಮನವಿಯನ್ನು ವಿಲೇವಾರಿ ಮಾಡಿತು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, '1871ರಿಂದಲೂ ಈ ಜಾಗ ಅರ್ಜಿದಾರರ ಸ್ವಾಧೀನದಲ್ಲಿದೆ. ಪ್ರತಿವಾದಿಗಳು ಈ ಜಾಗವನ್ನು ಪ್ರವೇಶಿಸದಂತೆ 1964ರಲ್ಲಿ ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ. ತನ್ನ ಆಸ್ತಿಯನ್ನು ಬೇರೆಯವರು ಬಳಸುವುದಕ್ಕೆ ಅನುವು ಮಾಡಿಕೊಡುವಂತೆ ನ್ಯಾಯಾಲಯಗಳು ಬಲವಂತ ಮಾಡಲಾಗದು' ಎಂದು ವಾದಿಸಿದರು.

ಬಾಬ್ರಿ ಮಸೀದಿ ಧ್ವಂಸ ಪ್ರಕರಣದ ವಾರ್ಷಿಕೋತ್ಸವದ ಅಂಗವಾಗಿ ಈ ಮೈದಾನದಲ್ಲಿದ್ದ ಕಟ್ಟಡವನ್ನು ನೆಲಸಮಗೊಳಿಸುವುದಾಗಿ ಬೆದರಿಕೆ ಹಿನ್ನೆಲೆಯಲ್ಲಿ ಪೊಲೀಸರು ದಾಖಲಿಸಿರುವ ಸ್ವಯಂಪ್ರೇರಿತವಾಗಿ ಎಫ್‌ಐಆರ್ ಅನ್ನು ಉಲ್ಲೇಖಿಸಿದರು.

ಅರ್ಜಿದಾರರ ಪರವಾಗಿ ಹಾಜರಾದ ಮತ್ತೊಬ್ಬ ವಕೀಲ ದುಷ್ಯಂತ್ ದಾವೆ, 'ದೇಶದ ಯಾವುದೇ ದೇಗುಲದ ಆವರಣದಲ್ಲಿ ನಮಾಜ್ ನಡೆಸಲು ಅವಕಾಶ ಕಲ್ಪಿಸುತ್ತಾರೆಯೇ ಎಂಬ ಪ್ರಶ್ನೆ ಕಾಡುತ್ತಿದೆ' ಎಂದರು.

ಕರ್ನಾಟಕ ಸರ್ಕಾರದ ಪರವಾಗಿ ಹಾಜರಾದ ಹಿರಿಯ ವಕೀಲ ಮುಕುಲ್ ರೋಹಟಗಿ, 'ಅರ್ಜಿದಾರರಿಗೆ ವಿವಾದಿತ ಪ್ರದೇಶದ ಮಾಲೀಕತ್ವ ಅಥವಾ ಸಂಪೂರ್ಣ ಸ್ವಾಧೀನದ ಹಕ್ಕನ್ನು ನೀಡಲಾಗಿಲ್ಲ. ದೇಶದ ಇತರ ಭಾಗಗಳಲ್ಲಿ ದುರ್ಗಾ ಪೂಜೆ ಮತ್ತು ದಾಂಡಿಯಾಗೆ ಸ್ಥಳಾವಕಾಶ ಒದಗಿಸಿದಂತೆ, ಈ ಭೂಮಿಯಲ್ಲಿ ಕೂಡ ಗಣೇಶ ಚತುರ್ಥಿಗೆ ಅವಕಾಶ ಕಲ್ಪಿಸಬಹುದು' ಎಂದು ವಾದಿಸಿದರು.

ಈ ವಿವಾದಿತ ಭೂಮಿಯಲ್ಲಿ ದಸರಾ, ಶಿವರಾತ್ರಿಯಂತಹ ಹಬ್ಬಗಳ ಆಚರಣೆಗೆ ಬಳಸುವ ಕುರಿತು ಎಲ್ಲ ರಾಜಕೀಯ ಪಕ್ಷಗಳು 2006ರಲ್ಲಿ ಮಾಡಿಕೊಂಡ ಒಪ್ಪಂದವನ್ನು ಕೂಡ ರೋಹಟಗಿ ಉಲ್ಲೇಖಿಸಿದರು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ವಿವಾದಿತ ಪ್ರದೇಶದಲ್ಲಿ ಯಾವುದೇ ಶಾಶ್ವತ ಕಟ್ಟಡ ಸ್ಥಾಪಿಸುವುದಿಲ್ಲ ಎಂಬ ಭರವಸೆಯ ಮೇಲೆ ಎರಡು ದಿನಗಳ ಕಾಲ ಉತ್ಸವಕ್ಕೆ ಅವಕಾಶ ನೀಡಲು ಕರ್ನಾಟಕ ಸರ್ಕಾರ ಮುಂದಾಗಿತ್ತು' ಎಂದರು.

ಆಗ ಮಧ್ಯಪ್ರವೇಶಿಸಿದ ದುಷ್ಯಂತ್ ದವೆ, 'ಈ ಹಿಂದೆ ಉತ್ತರ ಪ್ರದೇಶದ ಮುಖ್ಯಮಂತ್ರಿ (ಕಲ್ಯಾಣ್ ಸಿಂಗ್) ಈ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದರು ಹಾಗೂ ಬಳಿಕ ಬಾಬ್ರಿ ಮಸೀದಿಯನ್ನು ಕೆಡವಲಾಗಿತ್ತು' ಎಂದರು.

ಕಪಿಲ್ ಸಿಬಲ್, 'ಈ ಮೈದಾನದಲ್ಲಿ ಮಕ್ಕಳು ಆಟವಾಡಬಹುದು. ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ನಡೆಸಬಹುದು. ಆದರೆ, ಬೇರೆ ಧರ್ಮದವರ ಸಮಾರಂಭಗಳಿಗೆ ಅನುವು ಮಾಡಿಕೊಟ್ಟರೆ ಸಮಸ್ಯೆ ಸೃಷ್ಟಿಯಾಗುತ್ತದೆ' ಎಂದರು.

ಆರಾಧನಾ ಸ್ಥಳಗಳ ಕಾಯ್ದೆಯ ಸೆಕ್ಷನ್ 3ರ ಅಡಿಯಲ್ಲಿ ಒಂದು ಧರ್ಮಕ್ಕೆ ಸೇರಿದ ಜಾಗವನ್ನು ಬೇರೆ ಧರ್ಮದವರು ಬಳಸುವುದಕ್ಕೆ ನಿರ್ಬಂಧ ಇದೆ ಎಂದು ದವೆ ಉಲ್ಲೇಖಿಸಿದರು.

ಇದಕ್ಕೂ ಮುನ್ನ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠವು ಸಹಮತಕ್ಕೆ ಬರಲಿಲ್ಲ. ಈ ಪ್ರಕರಣವನ್ನು ಮುಖ್ಯ ನ್ಯಾಯಮೂರ್ತಿ ಪೀಠಕ್ಕೆ ಶಿಫಾರಸು ಮಾಡಿತು. ಬಳಿಕ ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ಅವರು, ತ್ರಿಸದಸ್ಯ ಪೀಠ ರಚಿಸಿದ್ದರು.

18– 59 ವಯೋಮಾನ: ಶೇ12ರಷ್ಟು ಮಂದಿಗೆ ಕೋವಿಡ್ ಮುನ್ನೆಚ್ಚರಿಕಾ ಡೋಸ್

ನವದೆಹಲಿ: 18ರಿಂದ 59 ವರ್ಷದೊಳಗಿನ 77 ಕೋಟಿ ಜನರಲ್ಲಿ ಶೇ 12ರಷ್ಟು ಮಂದಿ ಮಾತ್ರ ಕೋವಿಡ್ ಲಸಿಕೆಯ ಮುನ್ನೆಚ್ಚರಿಕಾ ಡೋಸ್ ಪಡೆದುಕೊಂಡಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

60 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯೋಮಾನದ 16.80 ಕೋಟಿ ಜನರಲ್ಲಿ ಶೇ 35ರಷ್ಟು ಮಂದಿಗೆ ಮುನ್ನೆಚ್ಚರಿಕಾ ಡೋಸ್ ನೀಡಲಾಗಿದೆ ಎಂದೂ ಹೇಳಿದ್ದಾರೆ.

ಇದುವರೆಗೆ ಒಟ್ಟು 15.66 ಕೋಟಿ ಮುನ್ನೆಚ್ಚರಿಕಾ ಡೋಸ್‌ಗಳನ್ನು ನೀಡಲಾಗಿದೆ ಎಂದೂ ವಿವರಿಸಿದ್ದಾರೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ

ನವದೆಹಲಿ (ಪಿಟಿಐ): ಕಳೆದ 24 ಗಂಟೆಗಳಲ್ಲಿ ದೇಶದಾದ್ಯಂತ ಹೊಸದಾಗಿ 5,439 ಕೋವಿಡ್ ಸೋಂಕಿತ ಪ್ರಕರಣಗಳು ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 65,732ಕ್ಕೆ ಕುಸಿದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕೋವಿಡ್‌ನ ದೈನಂದಿನ ಪಾಸಿಟಿವಿಟಿ ದರ ಶೇಕಡ 1.70ರಷ್ಟಿದ್ದರೆ, ವಾರದ ಪಾಸಿಟಿವಿಟಿ ದರವು ಶೇಕಡ 2.64ರಷ್ಟಿದೆ.

ಗಣೇಶನ ಕುಟುಂಬ ಪ್ರೀತಿ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಗಣೇಶ ಚತುರ್ಥಿ

ಒಮ್ಮೆ ಕೈಲಾಸದಲ್ಲಿ ಶಿವ ಮತ್ತು ಪಾರ್ವತಿ ಕುಳಿತಿದ್ದಾರೆ; ನಡುವೆ ಅವರ ಮುದ್ದಿನ ಮಗ ಗಣೇಶನನ್ನೂ ಕುಳ್ಳಿರಿಸಿಕೊಂಡಿದ್ದಾರೆ. ತಂದೆ–ತಾಯಿಗಳಿಗಿಬ್ಬರಿಗೂ ಏಕಕಾಲದಲ್ಲಿ ಒಂದು ಆಸೆ ಮೂಡಿದೆ – ಮಗನನ್ನು ಮುದ್ದಿಸಬೇಕು ಎಂದು. ಈ ಸಂಗತಿಯನ್ನು ಗಣೇಶ ಅದು ಹೇಗೋ ಗ್ರಹಿಸಿದ್ದಾನೆ. ಒಂದು ಕಡೆಯಿಂದ ಅಪ್ಪ, ಇನ್ನೊಂದು ಕಡೆಯಿಂದ ಅಮ್ಮ – ಗಣೇಶನ ಆ ಕಡೆ ಕೆನ್ನೆಗೆ, ಈ ಕಡೆ ಕೆನ್ನೆಗೆ ಮತ್ತು ಕೊಡಲು ಮುಂದಾದರು. ಇನ್ನೇನು ಅವರಿಬ್ಬರ ತುಟಿಗಳು ಗಣೇಶನ ಕೆನ್ನೆಗಳನ್ನು ಸ್ಪರ್ಶಿಸಬೇಕು – ಅಷ್ಟರಲ್ಲಿ ಅವನು ತನ್ನ ಮುಖವನ್ನು ಸ್ವಲ್ಪ ಹಿಂದಕ್ಕೆ ಸೆಳೆದುಕೊಂಡ! ಮಗನಿಗೆ ಮುತ್ತು ಕೊಡಲು ಬಂದ ದಂಪತಿ ಈಗ ಪರಸ್ಪರ ಮುತ್ತನ್ನು ಕೊಟ್ಟುಕೊಳ್ಳುವಂತಾಯಿತು!

ಸಂಸ್ಕೃತ ಪದ್ಯವೊಂದರ ತಾತ್ಪರ್ಯವಿದು.

ನಮ್ಮ ಸಂಸ್ಕೃತಿಯಲ್ಲಿ ದೇವತೆಗಳನ್ನೂ ನಮ್ಮ ಹಾಸ್ಯಕ್ಕೂ ವಿಮರ್ಶೆಗೂ ಪ್ರೀತಿಗೂ ಕ್ರೋಧಕ್ಕೂ ಬಳಸಿಕೊಳ್ಳಲು ಸಾಧ್ಯವಿದೆ. ಹೀಗಾಗಿ ನಮ್ಮ ಆಶಯಗಳು, ಆಲೋಚನೆಗಳು, ಮೌಲ್ಯಗಳು, ಔದಾರ್ಯಗಳು ದೇವತೆಗಳ ಕಲ್ಪನೆಯಲ್ಲಿ ಸಹಜವಾಗಿಯೇ ಪ್ರತಿಫಲನಗೊಳ್ಳುತ್ತವೆ. ಈ ಆತ್ಮವಿಸ್ತರಣದ ಭಾಗವಾಗಿ ತೋರಿಕೊಂಡಿರುವ ದೇವತೆಗಳಲ್ಲಿ ಗಣೇಶನಿಗೆ ತುಂಬ ವಿಶಿಷ್ಟವಾದ ಸ್ಥಾನವಿದೆ.




ಮೇಲಣ ಪದ್ಯವನ್ನು ಮೆಲುಕು ಹಾಕುವಾಗ ಒಂದು ಕುಟುಂಬದ ಚಿತ್ರ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ಈ ಕುಟುಂಬವಾದರೂ ಆದರ್ಶದ ಕುಟುಂಬ, ಸುಖೀ ಕುಟುಂಬ. ಗಣೇಶತತ್ತ್ವದ ಪ್ರಧಾನ ಸಂದೇಶವೇ ಇದು: ನಮ್ಮ ಕೌಟುಂಬಿಕ ಜೀವನ ಸುಖವಾಗಿರಬೇಕು. ಶಿವನ ಸಂಸಾರ ಎಂದರೆ ಅದು ಆದರ್ಶದ ಸಂಸಾರ. ಎಷ್ಟೆಲ್ಲ ಇಜ್ಜೋಡುಗಳು ನಡುವೆಯೂ ಸಾಮರಸ್ಯವನ್ನೂ ಆನಂದವನ್ನೂ ಸಾಧಿಸಿರುವ ಕುಟುಂಬವದು.

ಶಿವನ ವಾಹನ ಎತ್ತು, ಪಾರ್ವತಿಯ ವಾಹನ ಸಿಂಹ; ಗಣಪತಿಯ ವಾಹನ ಇಲಿ, ಸುಬ್ರಹ್ಮಣ್ಯನ ವಾಹನ ನವಿಲು; ಶಿವನ ಆಭರಣ ಹಾವು; ಇಷ್ಟನ್ನು ನೋಡಿದರೂ ಸಾಕು, ಜಗತ್ತಿನ ಸಮಸ್ಯೆಗಳೆಲ್ಲವೂ ಏಕತ್ರ ಸೇರಿಕೊಂಡಿರುವುದು ಎದ್ದುಕಾಣುತ್ತದೆ. ಆದರೆ ಶಿವನ ಪರಿವಾರ ಇಷ್ಟೆಲ್ಲ ವೈರಗಳನ್ನು ಹತ್ತಿರದಲ್ಲಿಯೇ ಇಟ್ಟುಕೊಂಡಿದ್ದರೂ ಅದು ಸಾಮರಸ್ಯದಿಂದಿದೆ, ಸಂತೋಷದಿಂದಿದೆ. ಮಾತ್ರವಲ್ಲ, ಬೇರೆಯವರಿಗೂ ಅಭಯ–ಆನಂದಗಳನ್ನು ನೀಡುತ್ತಿದೆ. ಈ ಕುಟುಂಬದ ಕೌಟುಂಬಿಕ ಪ್ರೀತಿಗೆ ಸಂಕೇತದಂತಿದೆ, ಗೌರೀ–ಗಣೇಶ ಹಬ್ಬ. ತಾಯಿಯೊಬ್ಬಳೇ ತವರಿಗೆ ಬಂದದ್ದು ತಿಳಿದು ಗಣೇಶ ಕೂಡಲೇ ಇಲ್ಲಿಗೆ ಓಡಿಬರುತ್ತಾನೆ; ತಾಯಿ ಇರುವಷ್ಟು ದಿನ ಅವಳೊಂದಿಗೆ ಉಳಿಯುತ್ತಾನೆ; ಬಳಿಕ ಜೊತೆಯಲ್ಲಿಯೇ ಜೋಪಾನವಾಗಿ ಮನೆಗೆ ಕರೆದುಕೊಂಡುಹೋಗುತ್ತಾನೆ.

ನಮ್ಮ ಜೀವನದ ಹಲವು ಆಯಾಮಗಳ ಮೀಮಾಂಸೆಯನ್ನು ಗಣೇಶನ ಕಲ್ಪನೆಯಲ್ಲಿ ಕಾಣುತ್ತೇವೆ. ನಾವು ಜಗತ್ತಿಗೆ ಕಿವಿಯಾಗಬೇಕು ಎಂಬದುನ್ನು ಅವನ ಕಿವಿಗಳು ಸಂಕೇತಿಸುತ್ತವೆ. ಅವನ ಸೊಂಡಿಲು ಅದು ಪ್ರಣವಕ್ಕೆ ಸಂಕೇತ. ಅವನ ದೊಡ್ಡ ಶರೀರವನ್ನು ಇಲಿಯಂಥ ಸಣ್ಣ ಜೀವಿ ಹೊರುತ್ತಿದೆ; ದೊಡ್ಡದು–ಸಣ್ಣದು ಎಂಬುದು ಸಾಪೇಕ್ಷ ಎನ್ನುತ್ತಿದೆ. ಅವನು ಸೊಂಟಕ್ಕೆ ಸುತ್ತಿಕೊಂಡಿರುವ ಹಾವು ಅದು ಸಾಧನೆಗೆ ಸಂಕೇತ. ಅವನು ಬ್ರಹ್ಮಚಾರಿಯೇ ಹೌದು; ಆದರೆ ಸಿದ್ಧಿ–ಬುದ್ಧಿಗಳನ್ನೇ ಅವನು ವರಿಸಿದ್ದಾನೆ. ಆದಿದಂಪತಿಗಳನ್ನೇ ತನ್ನ ತುಂಟಾಟಕ್ಕೆ ವಸ್ತುವಾಗಿಸಿಕೊಂಡವನು ಗಣೇಶ. ಆದರೆ ಅಪಹಾಸ್ಯ ಮಾಡಿದ ಚಂದ್ರನನ್ನು ಅವನು ಶಪಿಸಿದೆ ಬಿಡಲಿಲ್ಲ.

ಒಟ್ಟಿನಲ್ಲಿ ಗಣೇಶ ಹಬ್ಬದ ದಿನ ಅವನ ತತ್ತ್ವಗಳ ಅನುಸಂಧಾನವೂ ನಡೆಯಬೇಕು; ಆಗ ನಮ್ಮ ಜೀವನವು ಸತ್ಯ ಶಿವ ಸುಂದರಗಳ ನೆಲೆಯಾಗುವುದು ಖಂಡಿತ.

ರೈತರ ಆತ್ಮಹತ್ಯೆ: ರಾಜ್ಯಕ್ಕೆ 2ನೇ ಸ್ಥಾನ



ನವದೆಹಲಿ (ಪಿಟಿಐ): ಕೋವಿಡ್ ಸಾಂಕ್ರಾಮಿಕ ಸನ್ನಿವೇಶವಿದ್ದ 2021ರಲ್ಲಿ ದೇಶದಲ್ಲಿ 10,881 ರೈತರು ಮತ್ತು ರೈತ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಪಟ್ಟಿಯಲ್ಲಿ ಮಹಾರಾಷ್ಟ್ರ (ಶೇ 37.3) ಮತ್ತು ಕರ್ನಾಟಕ (ಶೇ 19.9) ಮೊದಲೆರಡು ಸ್ಥಾನಗಳಲ್ಲಿವೆ.

ಆತ್ಮಹತ್ಯೆ ಪ್ರಕರಣಗಳ ವರದಿ ಬಿಡುಗಡೆ ಮಾಡಿರುವ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ವರದಿಯಲ್ಲಿ ಇದನ್ನು ಉಲ್ಲೇಖಿಸಲಾಗಿದೆ.

ನಂತರದ ಮೂರು ಸ್ಥಾನಗಳಲ್ಲಿ ಕ್ರಮವಾಗಿ ಆಂಧ್ರಪ್ರದೇಶ (ಶೇ 9.8), ಮಧ್ಯಪ್ರದೇಶ (ಶೇ 6.2) ಮತ್ತು ತಮಿಳುನಾಡು (ಶೇ 5.5) ರಾಜ್ಯಗಳಿವೆ. ಪಶ್ಚಿಮ ಬಂಗಾಳ, ಬಿಹಾರ, ಜಾರ್ಖಂಡ್, ಒಡಿಶಾ, ತ್ರಿಪುರ, ಮಣಿಪುರ, ಅರುಣಾಚಲ ಪ್ರದೇಶ, ಉತ್ತರಾಖಂಡ, ಚಂಡೀಗಡ, ಲಕ್ಷದ್ವೀಪ, ಪುದುಚೇರಿಯಲ್ಲಿ ರೈತರು ಮತ್ತು ರೈತ ಕಾರ್ಮಿಕರ ಆತ್ಮಹತ್ಯೆ ನಡೆದಿಲ್ಲ ಎಂದು ಹೇಳಿದೆ.

ಆತ್ಮಹತ್ಯೆ ಮಾಡಿಕೊಂಡವರಲ್ಲಿ 5,318 ಕೃಷಿಕರು ಮತ್ತು 5,563 ಕೃಷಿ ಕಾರ್ಮಿಕರು ಹಾಗೂ 211 ರೈತ ಮಹಿಳೆಯರು ಎಂದು ವಿಂಗಡಿಸಲಾಗಿದೆ.

ಕಳೆದ ವರ್ಷ ದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಶ್ರಮಿಕ ವರ್ಗದವರೇ ಹೆಚ್ಚಿದ್ದು, ದಿನಗೂಲಿಗಳು (37,751), ಸ್ವ ಉದ್ಯೋಗಿಗಳು (18,803) ಮತ್ತು ನಿರುದ್ಯೋಗಿಗಳು (11,724) ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಎನ್‌ಸಿಆರ್‌ಬಿ ವರದಿ ಹೇಳಿದೆ

ರಸ್ತೆ ಅಪಘಾತ: ದೇಶದಲ್ಲಿ ಸಂಭವಿಸುತ್ತಿರುವ ರಸ್ತೆ ಅಪಘಾತಗಳಿಗೆ ಅತಿ ವೇಗ ಮತ್ತು ಅಜಾಗರೂಕ ಚಾಲನೆಯೇ ಪ್ರಮುಖ ಕಾರಣಗಳಾಗಿದ್ದು, 2021ರಲ್ಲಿ ಒಟ್ಟು 1,55,622 ಜನರು ಜೀವ ಕಳೆದುಕೊಂಡಿದ್ದಾರೆ ಎಂದು ಎನ್‌ಸಿಆರ್‌ಬಿ ವರದಿ ಹೇಳಿದೆ.

ಕಳೆದ ಒಂದು ವರ್ಷದಲ್ಲಿ ನಡೆದ ಒಟ್ಟು 4,03,116 ರಸ್ತೆ ಅಪಘಾತಗಳಲ್ಲಿ ಅತಿಯಾದ ವೇಗದಿಂದ ಸಂಭವಿಸಿದ ಅಪಘಾತಗಳ ಸಂಖ್ಯೆ 2,40,828 (ಶೇ 59.7). ಇದರಲ್ಲಿ 87,050 ಜನರು ಮೃತಪಟ್ಟಿದ್ದು, 2,28,274 ಜನರು ಗಾಯಗೊಂಡಿದ್ದಾರೆ. ಈ ಪಟ್ಟಿಯಲ್ಲಿ ತಮಿಳುನಾಡು (11,419 ಮಂದಿ ಸಾವು) ಮೊದಲ (ಶೇ 13.1) ಸ್ಥಾನದಲ್ಲಿದ್ದರೆ, ಕರ್ನಾಟಕ (8,797) ಎರಡನೇ (ಶೇ 10.1) ಸ್ಥಾನದಲ್ಲಿದೆ.

ಅಪಾಯಕಾರಿ ಚಾಲನೆ ಮತ್ತು ವಾಹನ ಹಿಂದಿಕ್ಕುವ ಭರದಲ್ಲಿ ಸಂಭವಿಸಿದ ಅಪಘಾತಗಳ ಸಂಖ್ಯೆ 1,03,629. ಇದರಲ್ಲಿ 42,853 ಜನರು ಮೃತಪಟ್ಟಿದ್ದು, 91,839 ಜನರು ಗಾಯಗೊಂಡಿದ್ದಾರೆ. ಈ ಪಟ್ಟಿಯಲ್ಲಿ ಉತ್ತರಪ್ರದೇಶ (11,479) ಮತ್ತು ರಾಜಸ್ಥಾನ (4,299) ಮೊದಲೆರಡು ಸ್ಥಾನಗಳಲ್ಲಿವೆ. ಮಾದಕ ವಸ್ತು ಸೇವನೆಯಿಂದ ಸಂಭವಿಸಿದ ಅಪಘಾತಗಳಲ್ಲೂ ಉತ್ತರಪ್ರದೇಶ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಕ್ರಮವಾಗಿ ತೆಲಂಗಾಣ, ಜಾರ್ಖಂಡ್, ಮಧ್ಯಪ್ರದೇಶ, ಮಹಾರಾಷ್ಟ್ರ ರಾಜ್ಯಗಳಿವೆ ಎಂದು ವರದಿ ಹೇಳಿದೆ.

ಎನ್‌ಸಿಆರ್‌ಬಿಯ ಇತ್ತೀಚಿನ ವರದಿ ಪ್ರಕಾರ, ಒಟ್ಟು ಅಪಘಾತಗಳಲ್ಲಿ ಮಾದಕ ವಸ್ತು ಅಥವಾ ಮದ್ಯ ಸೇವನೆಯಿಂದಾದ ಅಪಘಾತಗಳ ಪ್ರಮಾಣ ಶೇ 1.9 ಇದ್ದು, 2,935 ಜನರು ಮೃತಪಟ್ಟು, 7,235 ಜನರು ಗಾಯಗೊಂಡಿದ್ದಾರೆ.

‘ಸಿಸೋಡಿಯಾಗೆ ಶಿಕ್ಷೆ ಖಚಿತ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ದೆಹಲಿಯಲ್ಲಿ ಅಬಕಾರಿ ನೀತಿ ಜಾರಿಯಲ್ಲಿ ನಡೆದಿರುವ ಅಕ್ರಮ ಪ್ರಕರಣದಲ್ಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು ಶಿಕ್ಷೆಗೊಳಗಾಗುವುದು ಖಚಿತ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸೋಡಿಯಾ ವಿರುದ್ಧ ಬಲವಾದ ಸಾಕ್ಷ್ಯಗಳಿವೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಲೇ ಭ್ರಷ್ಟಾಚಾರ ಮಾಡಿರುವುದು ಅವರ ನಿರ್ಲಜ್ಜತನಕ್ಕೆ ಸಾಕ್ಷಿಯಾಗಿದೆ. ಶಿಕ್ಷೆಗೊಳಗಾಗುವ ಭಯದಿಂದ ಇಡೀ ಪ್ರಕರಣವನ್ನು ಬೇರೆಡೆಗೆ ತಿರುಗಿಸಲು ಬಿಜೆಪಿ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಾ, ಹೊಸ ನಾಟಕ ಶುರು ಮಾಡಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು

‘ದೆಹಲಿಯಲ್ಲಿ ನಮ್ಮವರು ಕೇವಲ 8 ಶಾಸಕರಿದ್ದಾರೆ. ಎಎಪಿ ಸರ್ಕಾರವನ್ನು ಕೆಡವಿ ನಾವು ಸರ್ಕಾರ ರಚಿಸಬೇಕಾದರೆ, ಆ ಪಕ್ಷದ 32 ಶಾಸಕರು ಬರಬೇಕಾಗುತ್ತದೆ. ಅವರು ಬಾರದ ಹೊರತು ಸರ್ಕಾರ ರಚನೆಗೆ ನಾವು ಕೈಹಾಕಲ್ಲ. ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ದೊಡ್ಡ ನಾಟಕಕಾರ. ಅವರು ರಾಜಕಾರಣದಲ್ಲಿರುವ ಬದಲು ನಾಟಕ ಕಂಪನಿಯಲ್ಲಿರಬೇಕಿತ್ತು’ ಎಂದರು.

‘ಎಎಪಿ ಸರ್ಕಾರದ ಸಚಿವರೊಬ್ಬರು ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಸೇರಿದ್ದಾರೆ. ಹೈಕೋರ್ಟ್‌ನಲ್ಲೂ ಅವರಿಗೆ ಜಾಮೀನು ಸಿಕ್ಕಿಲ್ಲ. ಆದರೂ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡದಿರುವುದು ನಾಚಿಗೇಡಿತನದ ಪರಮಾವಧಿ ಇದು’ ಎಂದು ಟೀಕಿಸಿದರು.


ಸೆ.2ರಂದು ನೌಕಾಪಡೆಯ ಹೊಸ ಲಾಂಛನ ಅನಾವರಣ

ನವದೆಹಲಿ (ಪಿಟಿಐ): ಸೆಪ್ಟೆಂಬರ್ 2ರಂದು ಹಮ್ಮಿಕೊಂಡಿರುವ ಸ್ವದೇಶಿ ನಿರ್ಮಿತ ವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್‌ನ ಕಾರ್ಯಾರಂಭ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನೌಕಾಪಡೆಯ ಹೊಸ ಲಾಂಛನವನ್ನು ಅನಾವರಣಗೊಳಿಸಲಿದ್ದಾರೆ ಎಂದು ಪ್ರಧಾನಿ ಕಾರ್ಯಾಲಯ ಮಂಗಳವಾರ ತಿಳಿಸಿದೆ.

ಕೊಚ್ಚಿಯ ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ ಹಮ್ಮಿಕೊಂಡಿರುವ ಸಮಾರಂಭದಲ್ಲಿ ಐಎನ್‌ಎಸ್ ವಿಕ್ರಾಂತ್‌ಗೆ ಪ್ರಧಾನಿ ಚಾಲನೆ ನೀಡಲಿದ್ದಾರೆ ಎಂದಿದೆ.

ಅಬಕಾರಿ ಅವ್ಯವಹಾರ ಆರೋಪ: ಸಿಬಿಐ ಪರಿಶೀಲನೆಯಲ್ಲಿ ಏನೂ ಸಿಕ್ಕಿಲ್ಲ ಎಂದ ದೆಹಲಿ ಡಿಸಿಎಂ

ಸಿಸೋಡಿಯಾ ಲಾಕರ್ ಶೋಧ



ಸಿಸೋಡಿಯಾ

ಗಾಜಿಯಾಬಾದ್ (ಪಿಟಿಐ): ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರ ಬ್ಯಾಂಕ್ ಲಾಕರ್ ಅನ್ನು ಸಿಬಿಐ ಅಧಿಕಾರಿಗಳು ಮಂಗಳವಾರ ಶೋಧ ನಡೆಸಿದ್ದಾರೆ. ನಾಲ್ವರು ಅಧಿಕಾರಿಗಳ ತಂಡವು ಸುಮಾರು ಎರಡು ತಾಸು ಶೋಧ ನಡೆಸಿದೆ. ಈ ಸಂದರ್ಭದಲ್ಲಿ, ಸಿಸೋಡಿಯಾ ಮತ್ತು ಅವರ ಹೆಂಡತಿ ಹಾಜರಿದ್ದರು. ಲಾಕರ್‌ನಲ್ಲಿ ₹70,000–₹80,000 ಮೌಲ್ಯದ ಆಭರಣಗಳು ಇದ್ದವು. ಅದು ಬಿಟ್ಟು ಬೇರೇನೂ ಸಿಕ್ಕಿಲ್ಲ ಎಂದು ಸಿಸೋಡಿಯಾ ಹೇಳಿದ್ದಾರೆ.

ದೆಹಲಿಯ ಹೊರವಲಯದ ವಸುಂಧರ ಎಂಬಲ್ಲಿರುವ ಪಂಜಾಬ್ ನ್ಯಾಷನಲ್ ಬ್ಯಾಂಕ್ ಶಾಖೆಯಲ್ಲಿ ಸಿಸೋಡಿಯಾ ಅವರ ಲಾಕರ್ ಇದೆ.

ಅಬಕಾರಿ ನೀತಿ ಜಾರಿ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪದ ಪ್ರಕರಣದಲ್ಲಿ ಸಿಸೋಡಿಯಾ ಸೇರಿ 15 ಮಂದಿಯ ಮೇಲೆ ಸಿಬಿಐ ಎಫ್‌ಐಆರ್ ದಾಖಲಿಸಿಕೊಂಡಿದೆ.

ಸಿಬಿಐ ಒತ್ತಡದಲ್ಲಿದೆ. ಹಾಗಾಗಿ, ಈ ಶೋಧ ನಡೆಯುತ್ತಿದೆ ಎಂದು ಸಿಸೋಡಿಯಾ ಹೇಳಿದ್ದಾರೆ.

‘ನನ್ನ ಮನೆಯ ಹಾಗೆಯೇ ಲಾಕರ್‌ನಲ್ಲಿಯೂ ಏನೂ ಸಿಕ್ಕಿಲ್ಲ. ನನ್ನ ಹೆಂಡತಿ ಮತ್ತು ಮಕ್ಕಳ ₹70 ಸಾವಿರದಿಂದ ₹80 ಸಾವಿರ ಮೌಲ್ಯದ ಆಭರಣಗಳು ಲಾಕರ್‌ನಲ್ಲಿ ಇದ್ದವು. ಇಂದಿನ (ಮಂಗಳವಾರ) ಶೋಧದಲ್ಲಿಯೂ ಸಿಬಿಐ ನನ್ನನ್ನು ನಿರ್ದೋಷಿ ಎಂದು ಘೋಷಿಸಿರುವುದು ಸಂತಸ ತಂದಿದೆ’ ಎಂದು ಸಿಸೋಡಿಯಾ ಹೇಳಿದ್ದಾರೆ.

‘ಪ್ರಧಾನಿಯವರು ನನ್ನ ಲಾಕರ್ ಶೋಧಕ್ಕೆ ಸಿಬಿಐ ತಂಡವನ್ನು ಕಳುಹಿಸಿದ್ದಾರೆ. ಅವರಿಗೆ ಏನೂ ಸಿಕ್ಕಿಲ್ಲ. ನಾನು ಮತ್ತು ನನ್ನ ಕುಟುಂಬವು ನಿರ್ದೋಷಿ ಎಂಬುದಕ್ಕೆ ಇದುವೇ ಪುರಾವೆ. ಪ್ರಧಾನಿ ನಡೆಸಿದ ಎಲ್ಲ ತನಿಖೆಗಳಲ್ಲಿಯೂ ನಾನು ನಿರ್ದೋಷಿ ಎಂಬುದು ಸಾಬೀತಾಗಿದೆ. ಪ್ರಶ್ನಾರ್ಹವಾದ ಒಂದು ಪೈಸೆಯೂ ಸಿಕ್ಕಿಲ್ಲ’ ಎಂದು ಅವರು ಹೇಳಿಕೊಂಡಿದ್ದಾರೆ.

‘ನನ್ನ ಜೊತೆ ಮತ್ತು ಕುಟುಂಬದ ಜತೆ ಸಿಬಿಐ ಅಧಿಕಾರಿಗಳು ಸೌಜನ್ಯದಿಂದ ವರ್ತಿಸಿದ್ದಾರೆ’ ಎಂದಿದ್ದಾರೆ.

ಕೇಜ್ರಿವಾಲ್‌ಗೆ ಅಧಿಕಾರದ ಅಮಲು: ಹಜಾರೆ



ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಅವರು ದೆಹಲಿ ಅಬಕಾರಿ ನೀತಿಯನ್ನು ಖಂಡಿಸಿದ್ದಾರೆ. ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಪತ್ರ ಬರೆದಿರುವ ಹಜಾರೆ, ಮುಖ್ಯಮಂತ್ರಿಯು ಅಧಿಕಾರದ ಅಮಲಿನಲ್ಲಿ ಮುಳುಗಿದ್ದಾರೆ ಎಂದು ಟೀಕಿಸಿದ್ದಾರೆ. ಹೊಸ ನೀತಿಯು ಮದ್ಯ ಮಾರಾಟ ಮತ್ತು ಕುಡಿತವನ್ನು ಹೆಚ್ಚಿಸಲಿದೆ. ಭ್ರಷ್ಟಾಚಾರಕ್ಕೆ ಉತ್ತೇಜನ ನೀಡಲಿದೆ ಎಂದೂ ಅವರು ಹೇಳಿದ್ದಾರೆ.

ಮಹಾರಾಷ್ಟ್ರದ ಅಹ್ಮದ್‌ನಗರ ಜಿಲ್ಲೆಯ ರಾಳೇಗಣ ಸಿದ್ಧಿಯಲ್ಲಿ ಸಂಪೂರ್ಣ ಮದ್ಯ ನಿಷೇಧ ಇರುವುದನ್ನು ಪತ್ರದಲ್ಲಿ ಹಜಾರೆ ಉಲ್ಲೇಖಿಸಿದ್ದಾರೆ. ಕೇಜ್ರಿವಾಲ್ ಅವರು ತಮ್ಮ ಪುಸ್ತಕ ‘ಸ್ವರಾಜ್’ನಲ್ಲಿ ಮದ್ಯ ನಿಷೇಧದ ಪರವಾಗಿ ವಾದಿಸಿದ್ದಾರೆ ಎಂಬುದನ್ನು ನೆನಪಿಸಿದ್ದಾರೆ. ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಕೇಜ್ರಿವಾಲ್ ಅವರು ಹಜಾರೆ ಅವರ ಜತೆಗಿದ್ದರು.

ಕೇಜ್ರಿವಾಲ್ ಮುಖ್ಯಮಂತ್ರಿಯಾದ ಮೇಲೆ ಇದೇ ಮೊದಲಿಗೆ ಅವರಿಗೆ ಬರೆದಿರುವುದಾಗಿ ಹಜಾರೆ ಹೇಳಿದ್ದಾರೆ. ದೆಹಲಿ ಸರ್ಕಾರದ ಅಬಕಾರಿ ನೀತಿಯ ಕುರಿತ ವರದಿಗಳನ್ನು ಓದುವಾಗ ನೋವಾಗುತ್ತದೆ ಎಂದಿದ್ದಾರೆ.

‘ಆದರ್ಶವಾದಿಯಾದ ಹಲವು ವಿಚಾರಗಳನ್ನು ನಿಮ್ಮ ಪುಸ್ತಕದಲ್ಲಿ ಬರೆದಿದ್ದೀರಿ. ನಿಮ್ಮ ಬಗ್ಗೆ ಎಲ್ಲರಿಗೂ ಬಹಳ ನಿರೀಕ್ಷೆಗಳಿದ್ದವು. ಆದರೆ, ಮುಖ್ಯಮಂತ್ರಿಯಾದ ಬಳಿಕ ಆ ಆದರ್ಶಗಳನ್ನು ನೀವು ಮರೆತಿದ್ದೀರಿ’ ಎಂದು ಪತ್ರದಲ್ಲಿ ಹಜಾರೆ ಹೇಳಿದ್ದಾರೆ.

ಬಿಜೆಪಿ ಮೇಲೆ ಆಕ್ರೋಶ

ಅರವಿಂದ ಕೇಜ್ರಿವಾಲ್ ಅವರು ಹಜಾರೆ ಅವರ ಪತ್ರದ ಬಳಿಕ ಬಿಜೆಪಿ ವಿರುದ್ಧ ಹರಿಹಾಯ್ದಿದ್ದಾರೆ.

ಪಂಜಾಬ್ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ತಮ್ಮನ್ನು ಭಯೋತ್ಪಾದಕ ಎಂದು ಬಿಜೆಪಿ ಕರೆದಿತ್ತು. ಜನರು ಅದನ್ನು ನಂಬಲಿಲ್ಲ. ಹಾಗಾಗಿ, ಕುಮಾರ್ ವಿಶ್ವಾಸ್ ಅವರನ್ನು ತಮ್ಮ ವಿರುದ್ಧ ಬಳಸಿಕೊಳ್ಳಲಾಯಿತು. ಈಗ ಅವರು ಎಎಪಿ ಸರ್ಕಾರವನ್ನು ಗುರಿ ಮಾಡಲು ಅಣ್ಣಾ ಹಜಾರೆ ಅವರನ್ನು ಬಳಸಿಕೊಂಡಿದ್ದಾರೆ ಎಂದು ಕೇಜ್ರಿವಾಲ್ ಅವರು ಹೇಳಿದ್ದಾರೆ.

> ಈ ಇಡೀ ಕಾರ್ಯಾಚರಣೆಗೆ ಕಾರಣವೇ ಕೊಳಕು ರಾಜಕಾರಣ. ಇದು ಕೊನೆಯಾಗುತ್ತದೆ, ಕೆಲಸ ಮಾಡಲು ನಮಗೆ ಅವಕಾಶ ದೊರೆಯುತ್ತದೆ ಎಂಬ ಭರವಸೆ ಇದೆ
> **ಅರವಿಂದ ಕೇಜ್ರಿವಾಲ್**
> ದೆಹಲಿ ಮುಖ್ಯಮಂತ್ರಿ

> ನನ್ನನ್ನು ಎರಡು–ಮೂರು ತಿಂಗಳು ಜೈಲಿಗೆ ಕಳುಹಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಂದ ಸಿಬಿಐ ಮೇಲೆ ಒತ್ತಡ ಇದೆ. ಸತ್ಯಕ್ಕೆ ಜಯವಾಗಲಿ
> **ಮನೀಷ್ ಸಿಸೋಡಿಯಾ**
> ದೆಹಲಿ ಉಪಮುಖ್ಯಮಂತ್ರಿ

> ಶರಾಬು, ಶಿಕ್ಷಣ ಹಗರಣಗಳು ಎಎಪಿ ಸರ್ಕಾರವು ನಡೆಸಿದ ಭ್ರಷ್ಟಾಚಾರದ ಅವಳಿ ಗೋಪುರಗಳು. ಜನರು ಪಾಠಶಾಲೆ ಕೇಳಿದರೆ, ಎಎಪಿ ಸರ್ಕಾರವು ಮಧುಶಾಲೆ ಕೊಟ್ಟಿತು
> **ಶಹಜಾದ್ ಪೂನಾವಾಲಾ**
> ಬಿಜೆಪಿ ಮುಖಂಡ

ಪ್ರಶಾಂತ್, ತೇಜಪಾಲ್ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣ ಕೈಬಿಟ್ಟ ‘ಸುಪ್ರೀಂ’

ನವದೆಹಲಿ (ಪಿಟಿಐ): 2009ರಲ್ಲಿ ನ್ಯಾಯಾಂಗದ ವಿರುದ್ಧ ನೀಡಿದ್ದ ಹೇಳಿಕೆಗೆ ಸಂಬಂಧಿಸಿದಂತೆ ಸಾಮಾಜಿಕ ಕಾರ್ಯಕರ್ತ– ವಕೀಲ ಪ್ರಶಾಂತ್ ಭೂಷಣ್ ಮತ್ತು ಪತ್ರಕರ್ತ ತರುಣ್ ತೇಜಪಾಲ್ ವಿರುದ್ಧ ದಾಖಲಾಗಿದ್ದ ನ್ಯಾಯಾಂಗ ನಿಂದನೆ ಪ್ರಕರಣವನ್ನು ಸುಪ್ರೀಂ ಕೋರ್ಟ್ ಮಂಗಳವಾರ ಕೈಬಿಟ್ಟಿದೆ.

ಇಬ್ಬರೂ ಕ್ಷಮಾಪಣೆ ಕೋರಿದ್ದಾರೆ ಎಂದು ಹಿರಿಯ ವಕೀಲ ಕಪಿಲ್ ಸಿಬಲ್ ಅವರು ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ, ಸೂರ್ಯಕಾಂತ್ ಮತ್ತು ಎಂ.ಎಂ ಸುಂದ್ರೇಶ್ ಅವರ ಪೀಠಕ್ಕೆ ತಿಳಿಸಿದರು. ನಂತರ ಪೀಠವು ವಿಚಾರಣೆ ಮುಕ್ತಾಯಗೊಳಿಸಿತು.

'ಟೀಕಾಕಾರರು ಕ್ಷಮೆಯಾಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ, ನ್ಯಾಯಾಂಗ ನಿಂದನೆಯನ್ನು ಮುಂದುವರಿಸುವುದು ಅಗತ್ಯವೆಂದು ನಾವು ಭಾವಿಸುವುದಿಲ್ಲ. ನಿಂದನೆ ಪ್ರಕ್ರಿಯೆಗಳನ್ನು ಕೈಬಿಡಲಾಗಿದೆ’ ಎಂದು ಪೀಠ ಹೇಳಿದೆ. ಸುದ್ದಿ ನಿಯತಕಾಲಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಕೆಲವು ನ್ಯಾಯಾಧೀಶರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಆರೋಪದ ಮೇಲೆ 2009ರ ನವೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ಪ್ರಶಾಂತ್ ಭೂಷಣ್ ಮತ್ತು ತೇಜಪಾಲ್‌ಗೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿತ್ತು. ಆಗ ತೇಜಪಾಲ್ ಅವರು ಪತ್ರಿಕೆಯ ಸಂಪಾದಕರಾಗಿದ್ದರು.

ನ್ಯಾಯಾಧೀಶರ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಮಾಡುವುದು ನ್ಯಾಯಾಲಯದ ನಿಂದನೆಯಾಗುವುದಿಲ್ಲ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಕೇವಲ ಹೇಳಿಕೆಯು ನ್ಯಾಯಾಲಯದ ನಿಂದನೆಯಾಗುವುದಿಲ್ಲ ಎಂದು ಪ್ರಶಾಂತ್ ಭೂಷಣ್ ಅವರು ಸುಪ್ರೀಂ ಕೋರ್ಟ್‌ಗೆ ವಿಚಾರಣೆ ವೇಳೆ ಹೇಳಿದ್ದರು.

ಜಾರ್ಖಂಡ್: ಆಪರೇಷನ್ ಕಮಲ ಭೀತಿ

ಶಾಸಕರು ಛತ್ತೀಸಗಡಕ್ಕೆ ಸ್ಥಳಾಂತರ

ರಾಯಪುರ (ಪಿಟಿಐ): ಜಾರ್ಖಂಡ್‌ನ ಆಡಳಿತಾರೂಢ ಯುಪಿಎ ಮೈತ್ರಿಕೂಟ ಸರ್ಕಾರವು ತನ್ನ ಶಾಸಕರನ್ನು ಕಾಂಗ್ರೆಸ್ ಆಡಳಿತ ಇರುವ ಛತ್ತೀಸಗಡಕ್ಕೆ ಮಂಗಳವಾರ ರವಾನಿಸಿದೆ. ಆಡಳಿತ ಪಕ್ಷಗಳ ಶಾಸಕರನ್ನು ಬಿಜೆಪಿ ಸೆಳೆಯುವ ಸಾಧ್ಯತೆಯಿದೆ ಎನ್ನಲಾಗಿದ್ದು, ಅವರನ್ನು ರಾಯಪುರದ ಐಷಾರಾಮಿ ರೆಸಾರ್ಟ್‌ನಲ್ಲಿ ಇರಿಸಲಾಗಿದೆ.

ಜೆಎಂಎಂ, ಕಾಂಗ್ರೆಸ್ ಹಾಗೂ ಆರ್‌ಜೆಡಿ ಪಕ್ಷಗಳ32 ಶಾಸಕರನ್ನು ಹೊತ್ತ ವಿಶೇಷ ವಿಮಾನವು ಸಂಜೆ 5.30ಕ್ಕೆ ರಾಯಪುರದ ಸ್ವಾಮಿ ವಿವೇಕಾನಂದ ವಿಮಾನ ನಿಲ್ದಾಣವನ್ನು ತಲುಪಿತು. ಶಾಸಕರು ಮೂರು ಬಸ್‌ಗಳಲ್ಲಿ ನವರಾಯಪುರ ಸಮೀಪದ ಮೇಫೇರ್ ಲೇಕ್ ರೆಸಾರ್ಟ್‌ಗೆ ಬಂದರು ಎಂದು ಸ್ಥಳೀಯ ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದ್ದಾರೆ. ಬಸ್‌ಗಳಿಗೆ ಬೆಂಗಾವಲು ವಾಹನಗಳು ಭದ್ರತೆ ಒದಗಿಸಿದ್ದವು. ರೆಸಾರ್ಟ್ ಸುತ್ತಮುತ್ತ ಬಿಗಿಭದ್ರತೆ ಒದಗಿಸಲಾಗಿದ್ದು, ಮಾಧ್ಯಮದವರಿಗೆ ಪ್ರವೇಶ ನಿರಾಕರಿಸಲಾಗಿದೆ. ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಶಾಸಕರನ್ನು ರಾಂಚಿ ವಿಮಾನ ನಿಲ್ದಾಣದಲ್ಲಿ ಬೀಳ್ಕೊಟ್ಟು ವಾಪಸಾದರು.

ಸೊರೇನ್ ಅವರ ಶಾಸಕ ಸ್ಥಾನದ ಅನರ್ಹತೆ ವಿಚಾರವಾಗಿ ಕೇಂದ್ರ ಚುನಾವಣಾ ಆಯೋಗ ಸಲ್ಲಿಸಿರುವ ವರದಿಯ ಬಗ್ಗೆ ಜಾರ್ಖಂಡ್ ರಾಜ್ಯಪಾಲರು ಈವರೆಗೂ ನಿರ್ಧಾರ ತೆಗೆದುಕೊಂಡಿಲ್ಲ. ಸೊರೇನ್ ಅನರ್ಹತೆಗೆ ಆಯೋಗ ಶಿಫಾರಸು ಮಾಡಿದೆ ಎಂಬ ಊಹಾಪೋಹಗಳಿದ್ದು, ಅದು ದೃಢಪಟ್ಟಿಲ್ಲ.

ಪಾಕಿಸ್ತಾನ: ಭಾರಿ ಮಳೆ, ಪ್ರವಾಹ ಮೃತರ ಸಂಖ್ಯೆ 1,136ಕ್ಕೆ ಏರಿಕೆ

ಇಸ್ಲಾಮಾಬಾದ್ (ಪಿಟಿಐ): ಧಾರಾಕಾರ ಮಳೆ, ಅದರಿಂದ ಉಂಟಾದ ಪ್ರವಾಹದ ಪರಿಣಾಮ ಪಾಕಿಸ್ತಾನದಲ್ಲಿ ತೀವ್ರವಾಗಿದ್ದು, ಮೃತರ ಸಂಖ್ಯೆ 1,136ಕ್ಕೆ ಏರಿದೆ. ಒಟ್ಟು 1,634 ಜನರು ಗಾಯಗೊಂಡಿದ್ದಾರೆ. ಮೂರು ಕೋಟಿಗೂ ಅಧಿಕ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ.

ಪ್ರವಾಹ ಪೀಡಿತರ ರಕ್ಷಣೆ ಮತ್ತು ಪರಿಹಾರ ಕಾರ್ಯ ಚುರುಕಿನಿಂದ ನಡೆದಿದೆ. ಪ್ರವಾಹದಿಂದ ಆಗಿರುವ ಹಾನಿಯನ್ನು ಸರಿಪಡಿಸಲು 10 ಬಿಲಿಯನ್‌ಗೂ ಹೆಚ್ಚಿನ ಹಣಕಾಸು ಅಗತ್ಯವಿದೆ ಎಂದು ಪಾಕಿಸ್ತಾನದ ಒಳಾಡಳಿತ ಸಚಿವ ಅಶಾನ್ ಇಕ್ಬಾಲ್ ಹೇಳಿದ್ದಾರೆ.

ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಅವರು, ‘ಈ ಬಾರಿ ವಾಡಿಕೆಗಿಂತಲೂ ನಿರೀಕ್ಷೆಯನ್ನು ಮೀರಿದ ಮಳೆಯಾಗಿದೆ. ಒಟ್ಟು 72 ಜಿಲ್ಲೆಗಳಲ್ಲಿ ಪ್ರವಾಹದ ಪರಿಣಾಮ ತೀವ್ರವಾಗಿದೆ. 3.30 ಕೋಟಿ ಜನರು ಸಂತ್ರಸ್ತರಾಗಿದ್ದಾರೆ’ ಎಂದು ತಿಳಿಸಿದ್ದಾರೆ.



ಧಾರಾಕಾರ ಮಳೆ, ಪ್ರವಾಹ ಸ್ಥಿತಿಯಿಂದಾಗಿ ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದ ಜಫಾರಾಬಾದ್ ಜಿಲ್ಲೆಯಲ್ಲಿ ಜನವಸತಿ ಜಲಾವೃತವಾಗಿರುವುದು –ಎಎಫ್‌ಪಿ ಚಿತ್ರ

ಅತಂತ್ರ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಹೆಚ್ಚಿನವರು ಆಹಾರ, ನೀರು ಮತ್ತು ಆಸರೆಯನ್ನು ಕಳೆದುಕೊಂಡಿದ್ದು, ಆತಂಕದಲ್ಲಿ ದಿನ ದೂಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದ್ದಾರೆ.

ಜಂಟಿ ಮನವಿ: ಪಾಕಿಸ್ತಾನದಲ್ಲಿ ಧಾರಾಕಾರ ಮಳೆ ಮತ್ತು ಪ್ರವಾಹ ಸಂತ್ರಸ್ತರಿಗೆ ಪರಿಹಾರ ಕಾರ್ಯಗಳಿಗಾಗಿ 160 ಮಿಲಿಯನ್ ಡಾಲರ್ ನೆರವು ಅಗತ್ಯವಿದ್ದು, ವಿಶ್ವ ಸಮುದಾಯವು ಸ್ಪಂದಿಸಬೇಕು ಎಂದು ಪಾಕಿಸ್ತಾನ ಮತ್ತು ವಿಶ್ವಸಂಸ್ಥೆಯು ಮಂಗಳವಾರ ಜಂಟಿಯಾಗಿ ಮನವಿ ಮಾಡಿವೆ.

ಅಭಿಷೇಕ್ ಬ್ಯಾನರ್ಜಿಗೆ ಇ.ಡಿ ಸಮನ್ಸ್

ಕೋಲ್ಕತ್ತ (ಪಿಟಿಐ): ಕಲ್ಲಿದ್ದಲು ಹಗರಣದ ತನಿಖೆಗೆ ಸಂಬಂಧಿಸಿದ ವಿಚಾರಣೆಗಾಗಿ ತೃಣಮೂಲ ಕಾಂಗ್ರೆಸ್‌ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಅವರನ್ನು ಶುಕ್ರವಾರ ಬೆಳಿಗ್ಗೆ ಕೋಲ್ಕತ್ತದ ಕಚೇರಿಗೆ ಹಾಜರಾಗುವಂತೆ ಕೇಂದ್ರೀಯ ಸಂಸ್ಥೆ ಹೇಳಿದೆ.

ಅಮೆಜಾನ್ ಕಾನನದಲ್ಲಿದ್ದ ನಿರ್ದಿಷ್ಟ ಬುಡಕಟ್ಟಿನ ಕಟ್ಟಕಡೇ ವ್ಯಕ್ತಿ ಸಾವು

ಬ್ರಸಿಲಿಯ (ಎಎಫ್‌ಪಿ): ಬ್ರೆಜಿಲ್‌ನ ಅಮೆಜಾನ್ ಕಾನನದ ತನರು ಪ್ರಾಂತ್ಯದಲ್ಲಿದ್ದ ನಿರ್ದಿಷ್ಟ ಬುಡಕಟ್ಟು ಸಮುದಾಯಕ್ಕೆ ಸೇರಿದ್ದ ಕಟ್ಟ ಕಡೆಯ, ಹೆಸರೇ ಇಲ್ಲದಿದ್ದ ವ್ಯಕ್ತಿ ಮೃತಪಟ್ಟಿದ್ದಾರೆ. ಇದರೊಂದಿಗೆ ಆ ಬುಡಕಟ್ಟಿನ ಅಸ್ತಿತ್ವವೂ ಅಂತ್ಯಗೊಂಡಿದೆ.

ರಂಡೊನಿಯ, ಬೊಲಿವಿಯದ ಗಡಿಯಲ್ಲಿರುವ ಅರಣ್ಯದಲ್ಲಿರುವ ಗುಡಿಸಿಲಿನಲ್ಲಿ, ಕಟ್ಟಿಕೊಂಡಿದ್ದ ಉಯ್ಯಾಲೆಯಲ್ಲಿ ಆತನ ಶವ ಆ.23ರಂದು ಪತ್ತೆಯಾಗಿದೆ ಎಂದು ಬ್ರೆಜಿಲ್ ರಾಷ್ಟ್ರೀಯ ಪ್ರತಿಷ್ಠಾನ (ಎಫ್‌ಯುಎನ್‌ಎಐ) ಹೇಳಿಕೆ ನೀಡಿದೆ.


ಸಾವಿನ ಕಾರಣ ಅಥವಾ ಆತನ ವಯಸ್ಸು ಕುರಿತು ಅಧಿಕಾರಿಗಳು ಪ್ರತಿಕ್ರಿಯೆ ನೀಡಿಲ್ಲ. ಆದರೆ, ‘ಮೃತಪಟ್ಟಿರುವ ಸ್ಥಳದಲ್ಲಿ ಹಿಂಸೆಯ ಕುರುಹು ಇಲ್ಲ. ಮೇಲ್ನೋಟಕ್ಕೆ ಇದು ಸಹಜ ಸಾವು ಎಂದೇ ಕಾಣಿಸುತ್ತದೆ’ ಎಂದು ಎಫ್‌ಯುಎನ್‌ಎಐ ಪ್ರತಿನಿಧಿ ಪ್ರತಿಕ್ರಿಯಿಸಿದ್ದಾರೆ. ಈತನ ಜತೆಗಿದ್ದ ಬುಡಕಟ್ಟು ಜನರನ್ನು 1990ರ ಆರಂಭದಲ್ಲಿ ಕಳ್ಳಸಾಗಣೆದಾರರು, ಅಕ್ರಮ ಗಣಿಗಾರಿಕೆಗೆ ಬಂದವರು ಹತ್ಯೆಗೈದಿದ್ದರು. ಬದುಕುಳಿದಿದ್ದ ಈತನೂ ಆ ಬಳಿಕ ಹೊರಜಗತ್ತಿನಿಂದ ದೂರವಾಗಿದ್ದ. ಸುಮಾರು 26 ವರ್ಷ ದಟ್ಟ ಕಾನನದ ನಡುವೆಯೇ ಏಕಾಂಗಿಯಾಗಿ ಬದುಕು ಸವೆಸಿದ್ದ.

ಸ್ಥಳೀಯ ಮಾಧ್ಯಮದ ಪ್ರಕಾರ, ಆಹಾರಕ್ಕಾಗಿ ಆತ ಬೇಟೆ, ಹಸಿ ಬೆಳೆ ಆಧರಿಸಿದ್ದ. ತನ್ನ ಗುಡಿಸಿಲಿನ ಒಳಗೆ ದೊಡ್ಡ ಗುಂಡಿ ತೋಡಿಕೊಂಡಿದ್ದ. ರಕ್ಷಣೆಗಾಗಿ ಅಥವಾ ಪ್ರಾಣಿಗಳನ್ನು ಖೆಡ್ಡಾಗೆ ಕೆಡವುವುದು ಇದರ ಉದ್ದೇಶವಿರಬಹುದು. ಈ ಕಾರಣದಿಂದಲೇ ಆತನನ್ನು ‘ದ ಮ್ಯಾನ್ ಆಫ್ ದ ಹೋಲ್‘ ಎಂದು ಗುರುತಿಸುತ್ತಿತ್ತು.

‘ಈತನ ಸಾವಿನೊಂದಿಗೆ ಈತ ಪ್ರತಿನಿಧಿಸುತ್ತಿದ್ದ ಬುಡಕಟ್ಟು ಸಮುದಾಯದ ಅಸ್ತಿತ್ವವೂ ಅಂತ್ಯಗೊಂಡಂತಾಗಿದೆ’ ಎಂದು ತನರು ಪ್ರಾಂತ್ಯಕ್ಕೆ 2004ರಲ್ಲಿ ಭೇಟಿ ನೀಡಿದ್ದ ಅಧಿಕಾರಿ ಫಿಯೊನಾ ವಾಟ್ಸನ್ ಪ್ರತಿಕ್ರಿಯಿಸಿದರು.

‘ಆಗ ನಡೆದದ್ದು ನಿಜಕ್ಕೂ ಹತ್ಯಾಕಾಂಡ. ಭೂಮಿ ಮತ್ತು ಪ್ರಾಕೃತಿಕ ಸಂಪತ್ತಿಗಾಗಿ ಹಾತೊರೆಯುತ್ತಿದ್ದ ಕಳ್ಳ ಸಾಗಣೆದಾರರು ಇಡೀ ಸಮುದಾಯವನ್ನೇ ನಿರ್ಮೂಲನೆ ಮಾಡಿದ್ದರು’ ಎಂದೂ ಆಗಿನ ಚಿತ್ರಣವನ್ನು ಸ್ಮರಿಸಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,312
ಇಂದಿನ ಅಂತ್ಯ	17,759
▲	446
ದಿನದ ಗರಿಷ್ಠ	17,777

ವಿನಿಮಯ ದರ

$ ಡಾಲರ್	79.52
£ ಪೌಂಡ್	93.28
€ ಯುರೊ	79.65
¥ ಯೆನ್ (100ಕ್ಕೆ)	57.46

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹420
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹422

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1670 (1680)
ಸೋಯಾ (ರಿಫೈನ್ಡ್)	₹1260 (1265)
ಸೂರ್ಯಕಾಂತಿ (ರಿಫೈನ್ಡ್)	₹1500 (1510)
ಪಾಮೋಲಿನ್	₹1050 (1070)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹1200-1400
ಮಧ್ಯಮ	₹800-1200
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹154
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹137

ಬ್ಯಾಂಕಿಂಗ್, ಐ.ಟಿ ಮತ್ತು ತೈಲ ವಲಯದಲ್ಲಿ ಭಾರಿ ವಹಿವಾಟು

ಪುಟಿದೆದ್ದ ಸೆನ್ಸೆಕ್ಸ್, ನಿಫ್ಟಿ: ಶೇಕಡ 2.5ರಷ್ಟು ಗಳಿಕೆ



ಮುಂಬೈ (ಪಿಟಿಐ): ಬ್ಯಾಂಕಿಂಗ್, ಐ.ಟಿ. ಮತ್ತು ತೈಲ ವಲಯದ ಷೇರುಗಳ ಖರೀದಿ ಭರಾಟೆ ಜೋರಾಗಿ ನಡೆದ ಕಾರಣದಿಂದಾಗಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಮಂಗಳವಾರ ಶೇಕಡ 2.5ರಷ್ಟು ಹೆಚ್ಚಿನ ಪ್ರಮಾಣದ ಏರಿಕೆ ಕಂಡವು. ಇದು ಮೇ 20ರ ನಂತರ ಒಂದು ದಿನದಲ್ಲಿ ಕಂಡ ಅತ್ಯುತ್ತಮ ಗಳಿಕೆ.

ಸೆನ್ಸೆಕ್ಸ್ 1,564 ಅಂಶ ಮತ್ತು ನಿಫ್ಟಿ 446 ಅಂಶ ಏರಿಕೆ ಕಂಡವು. ಹಣದುಬ್ಬರ ನಿಯಂತ್ರಿಸುವ ಉದ್ದೇಶದಿಂದ ಅಮೆರಿಕದ ಕೇಂದ್ರೀಯ ಬ್ಯಾಂಕ್ ಬಡ್ಡಿ ದರ ಹೆಚ್ಚಳವನ್ನು ಮುಂದುವರಿಸಲಿದೆ ಎಂದು ಬ್ಯಾಂಕ್ ಅಧ್ಯಕ್ಷ ಜೆರೋಮ್ ಪೊವೆಲ್ ಹೇಳಿದ್ದರು. ಇದಾದ ನಂತರ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಶೇ 1.4ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಕುಸಿದಿದ್ದವು.

'ಸೂಚ್ಯಂಕಗಳು ಮಂಗಳವಾರ ದಾಖಲಿಸಿರುವ ಏರಿಕೆಯು, ಜಾಗತಿಕ ಷೇರುಪೇಟೆಗಳಿಗೆ ಹೋಲಿಸಿದರೆ ದೇಶದ ಷೇರುಪೇಟೆಗಳು ಹೆಚ್ಚು ಶಕ್ತಿಯುತವಾಗಿವೆ ಎಂಬುದನ್ನು ತೋರಿಸುತ್ತಿದೆ. ವಿದೇಶಿ ಹೂಡಿಕೆದಾರರು ಹೂಡಿಕೆ ಮುಂದುವರಿಸಿರುವುದು ದೇಶದ ಷೇರುಪೇಟೆಗಳ ಏರಿಕೆಗೆ ನೆರವಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕವು ಶೇ 1.97ರಷ್ಟು ಏರಿಕೆ ಕಂಡಿದೆ. ಸ್ಮಾಲ್‌ಕ್ಯಾಪ್ ಸೂಚ್ಯಂಕವು ಶೇ 1.40ರಷ್ಟು ಏರಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 2.60ರಷ್ಟು ಇಳಿಕೆ ಆಗಿದ್ದು, ಪ್ರತಿ ಬ್ಯಾರಲ್‌ಗೆ 102.52 ಡಾಲರ್‌ಗೆ ತಲುಪಿದೆ.

ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 4,165 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಶಿಪ್ಪಿಂಗ್ ಕಾರ್ಪೊರೇಷನ್ ಮಾರಾಟಕ್ಕೆ ಮಾರ್ಚ್‌ನಲ್ಲಿ ಬಿಡ್

ಐಡಿಬಿಐ ಖಾಸಗೀಕರಣ: ಮುಂದಿನ ತಿಂಗಳು ಪ್ರಾಥಮಿಕ ಬಿಡ್

ನವದೆಹಲಿ (ಪಿಟಿಐ): ಐಡಿಬಿಐ ಬ್ಯಾಂಕ್‌ನಲ್ಲಿನ ಷೇರುಪಾಲನ್ನು ಮಾರಾಟ ಮಾಡುವ ಉದ್ದೇಶ ಹೊಂದಿರುವ ಕೇಂದ್ರ ಸರ್ಕಾರವು ಅದಕ್ಕಾಗಿ ಪ್ರಾಥಮಿಕ ಬಿಡ್‌ಗಳನ್ನು ಮುಂದಿನ ತಿಂಗಳು ಆಹ್ವಾನಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಕೆಲವು ವಿಷಯಗಳ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮತ್ತು ಭಾರತೀಯ ಷೇರು ಪೇಟೆ ನಿಯಂತ್ರಣ ಮಂಡಳಿ (ಸೆಬಿ) ಜೊತೆ ಮಾತುಕತೆ ಇನ್ನೂ ಆಗ ಬೇಕಿದೆ' ಎಂದು ಅಧಿಕಾರಿ ತಿಳಿಸಿದ್ದಾರೆ.

'ಬ್ಯಾಂಕ್ ಖಾಸಗೀಕರಣದ ವಿಚಾರದಲ್ಲಿ ಐಡಿಬಿಐ ಬ್ಯಾಂಕ್‌ನ ಖಾಸಗೀಕರಣವು ಮೊದಲನೆಯದು. ಹೀಗಾಗಿ, ಬ್ಯಾಂಕ್‌ನ ಷೇರುಪಾಲು ಖರೀದಿಗೆ ಹೂಡಿಕೆದಾರರಿಂದ ಅರ್ಜಿ ಆಹ್ವಾನಿಸಿದಾಗ, ಅವರ ಕಡೆಯಿಂದ ಬಹಳಷ್ಟು ಪ್ರಶ್ನೆಗಳು ಬರುವ ನಿರೀಕ್ಷೆ ಇದೆ. ಈ ಹಣಕಾಸು ವರ್ಷದಲ್ಲಿ ಮಾರಾಟ ಪ್ರಕ್ರಿಯೆ ಪೂರ್ಣಗೊಳ್ಳಲಿಕ್ಕಿಲ್ಲ' ಎಂದು ಅವರು ಹೇಳಿದ್ದಾರೆ.

ಐಡಿಬಿಐ ಬ್ಯಾಂಕ್‌ನಲ್ಲಿ ಷೇರು ಪಾಲನ್ನು ಮಾರಾಟ ಮಾಡಲು ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಸಂಪುಟ ಸಮಿತಿಯು 2021ರ ಮೇ ತಿಂಗಳಲ್ಲಿ ಒಪ್ಪಿಗೆ ನೀಡಿದೆ. ಈಗ ಐಡಿಬಿಐ ಬ್ಯಾಂಕ್‌ನಲ್ಲಿ ಕೇಂದ್ರ ಸರ್ಕಾರವು ಶೇಕಡ 45.48ರಷ್ಟು ಷೇರುಗಳನ್ನು ಹಾಗೂ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಶೇಕಡ 49.24ರಷ್ಟು ಷೇರು ಗಳನ್ನು ಹೊಂದಿವೆ.

ಎಷ್ಟು ಷೇರುಪಾಲನ್ನು ಮಾರಾಟ ಮಾಡಬೇಕು ಎಂಬುದನ್ನು ಕೇಂದ್ರ ಸರ್ಕಾರ ಹಾಗೂ ಎಲ್‌ಐಸಿ ಜೊತೆಯಾಗಿ ತೀರ್ಮಾನಿಸಲಿವೆ.

ಶಿಪ್ಪಿಂಗ್ ಕಾರ್ಪೊರೇಷನ್ ಮಾರಾಟಕ್ಕೆ ಬಿಡ್: ಸರ್ಕಾರಿ ಸ್ವಾಮ್ಯದ ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ (ಎಸ್‌ಸಿಐ) ಖಾಸಗೀಕರಣಕ್ಕೆ ಹಣಕಾಸಿನ ಬಿಡ್‌ಗಳನ್ನು ಕೇಂದ್ರ ಸರ್ಕಾರವು ಮಾರ್ಚ್ ತ್ರೈಮಾಸಿಕದಲ್ಲಿ ಆಹ್ವಾನಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

'ಈ ಕಂಪನಿಯ ಮುಖ್ಯವಲ್ಲದ ಹಾಗೂ ಜಮೀನು ಆಸ್ತಿಗಳನ್ನು ಪ್ರತ್ಯೇಕಿಸುವ ಕೆಲಸವು ಮುಖ್ಯ ಹಂತವನ್ನು ತಲುಪಿದೆ. ಈ ಪ್ರಕ್ರಿಯೆಯು ಇನ್ನು ಮೂರು ತಿಂಗಳಲ್ಲಿ ಪೂರ್ಣವಾಗುವ ನಿರೀಕ್ಷೆ ಇದೆ. ಇದಾದ ನಂತರ ಹಣಕಾಸಿನ ಬಿಡ್ ಆಹ್ವಾನಿಸಲಾಗುತ್ತದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಸ್‌ಸಿಐ ನೀಡಿರುವ ಮಾಹಿತಿ ಪ್ರಕಾರ, ಪ್ರತ್ಯೇಕಗೊಳಿಸಲು ಗುರುತಿಸಲಾಗಿರುವ ಮುಖ್ಯವಲ್ಲದ ಆಸ್ತಿಗಳ ಮೌಲ್ಯವು ಮಾರ್ಚ್ 31ಕ್ಕೆ ₹ 2,392 ಕೋಟಿ. 2021ರ ಮಾರ್ಚ್‌ನಲ್ಲಿ ಕೇಂದ್ರ ಸರ್ಕಾರವು ಎಸ್‌ಸಿಐ ಖಾಸಗೀಕರಣಕ್ಕೆ ಹಲವು ಬಿಡ್‌ಗಳನ್ನು ಸ್ವೀಕ ರಿಸಿತ್ತು. ಆದರೆ, ಮುಖ್ಯವಲ್ಲದ ಆಸ್ತಿಗಳನ್ನು ಪ್ರತ್ಯೇಕಗೊಳಿಸುವ ಪ್ರಕ್ರಿಯೆಯು ತಡವಾಯಿತು. ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆಯು (ಡಿಐಪಿಎಎಂ) ಕೇಂದ್ರ ಸರ್ಕಾರದ ಅಷ್ಟೂ (ಕಂಪನಿ ಯಲ್ಲಿ ಶೇ 63.75ರಷ್ಟು) ಷೇರುಗಳ ಮಾರಾಟಕ್ಕೆ 2020ರ ಡಿಸೆಂಬರ್‌ನಲ್ಲಿ ಬಿಡ್ ಆಹ್ವಾನಿಸಿತ್ತು.

ರಿಲಯನ್ಸ್ ಉತ್ತರಾಧಿಕಾರ: ಯೋಜನೆ ವಿವರಿಸಿದ ಅಂಬಾನಿ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಅಧ್ಯಕ್ಷ ಮುಕೇಶ್ ಅಂಬಾನಿ ಅವರು ತಮ್ಮ ಉದ್ಯಮ ಸಮೂಹದ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಯೋಜನೆಯನ್ನು ತೆರೆದಿರಿಸಿದ್ದಾರೆ. ಆಕಾಶ್ ಅಂಬಾನಿ ಮತ್ತು ಇಶಾ ಅಂಬಾನಿ ಅವರನ್ನು ದೂರಸಂಪರ್ಕ ಹಾಗೂ ರಿಟೇಲ್ ವಹಿವಾಟುಗಳ ನಾಯಕರನ್ನಾಗಿ ಗುರುತಿಸಿದ್ದಾರೆ.

ಕಿರಿಯ ಮಗ ಅನಂತ್ ಅಂಬಾನಿ ಅವರನ್ನು ಇಂಧನ ವಿಭಾಗದ ನಾಯಕರನ್ನಾಗಿ ಗುರುತಿಸಿದ್ದಾರೆ. ಆದರೆ, ತಾವು ಈಗಲೇ ನಿವೃತ್ತರಾಗುವುದಿಲ್ಲ ಎಂಬುದನ್ನು ಮುಕೇಶ್ ಅಂಬಾನಿ ಸ್ಪಷ್ಟಪಡಿಸಿದ್ದಾರೆ. ಆರ್‌ಐಎಲ್ ಮೂರು ಬಗೆಯ ವಹಿವಾಟುಗಳನ್ನು ಹೊಂದಿದೆ. ತೈಲ ಸಂಸ್ಕರಣೆ ಮತ್ತು ಪೆಟ್ರೊಕೆಮಿಕಲ್ಸ್ ವಹಿವಾಟು, ರಿಟೇಲ್ ವಹಿವಾಟು, ದೂರಸಂಪರ್ಕ ಸೇವೆಗಳನ್ನು ಒಳಗೊಂಡಿರುವ ಡಿಜಿಟಲ್ ಸೇವಾ ವಹಿವಾಟು. ರಿಟೇಲ್ ಮತ್ತು ಡಿಜಿಟಲ್ ವಹಿವಾಟುಗಳನ್ನು ಜಿಯೋ ಪ್ಲಾಟ್‌ಫಾರ್ಮ್ಸ್ ಮತ್ತು ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್ (ಆರ್‌ಆರ್‌ವಿಎಲ್) ಅಡಿ ತರಲಾಗಿದೆ. ಈವರೆಗೆ ಆಕಾಶ್ ಮಾತ್ರ ಕಂಪನಿಯೊಂದರ ಕಾರ್ಯನಿರ್ವಾಹಕ ಮುಖ್ಯಸ್ಥ ಹುದ್ದೆಯನ್ನು ಹೊಂದಿದ್ದಾರೆ. ಇನ್ನಿಬ್ಬರು ಆಡಳಿತ ಮಂಡಳಿಗಳಲ್ಲಿ ಮಾತ್ರ ಇದ್ದಾರೆ.

ಸೋಮವಾರ ನಡೆದ ರಿಲಯನ್ಸ್ ಕಂಪನಿಯ ವಾರ್ಷಿಕ ಮಹಾಸಭೆಯಲ್ಲಿ ಮುಕೇಶ್ ಅಂಬಾನಿ ಅವರು ಇಶಾ ಅವರನ್ನು 'ರಿಟೇಲ್ ವಹಿವಾಟುಗಳ ನಾಯಕಿ' ಎಂದು ಪರಿಚಯಿಸಿದರು. ಅನಂತ್ ಅವರು ನವ ಇಂಧನ ವಹಿವಾಟುಗಳನ್ನು ನೋಡಿಕೊಳ್ಳುತ್ತಿರುವುದಾಗಿ ತಿಳಿಸಿದರು.

ಮುಂಬೈ ಧಾರಣೆ

ಶೇಂಗಾ

30-8-2022

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1680 (1690)
ಒಂದು ವಾರದ ಡೆಲಿವರಿ	1675 (1685)
ಸೋಯಾ ಕಚ್ಚಾ	1200 (1212)
ಪಾಮ್ ವಾರದ ಡೆಲಿವರಿ	1048 (1058)
ಸೂರ್ಯಕಾಂತಿ ಎಣ್ಣೆ ಕಚ್ಚಾ	1450 (1460)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,000 (51,150)
ಬೆಳ್ಳಿ ಕೆ.ಜಿ 54,400 (54,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಅಕ್ಕಿ ರಫ್ತು ನಿರ್ಬಂಧ ಇಲ್ಲ'

ನವದೆಹಲಿ (ಪಿಟಿಐ): ಅಕ್ಕಿ ರಫ್ತಿನ ಮೇಲೆ ನಿರ್ಬಂಧ ಹೇರುವ ಯಾವ ಆಲೋಚನೆಯೂ ಕೇಂದ್ರ ಸರ್ಕಾರಕ್ಕೆ ಈಗ ಇಲ್ಲ ಎಂದು ಸರ್ಕಾರದ ಮೂಲಗಳು ಹೇಳಿವೆ.

ದೇಶಿ ಬೇಡಿಕೆ ಪೂರೈಸಲು ಅಗತ್ಯವಿರುವ ಸಂಗ್ರಹ ಇದೆ ಎಂದೂ ಮೂಲಗಳು ಸ್ಪಷ್ಟಪಡಿಸಿವೆ. ಅಕ್ಕಿ ರಫ್ತಿನ ಮೇಲೆ ನಿರ್ಬಂಧ ವಿಧಿಸುವ ಚರ್ಚೆಗಳು ನಡೆದಿದ್ದವು. ಆದರೆ ಯಾವ ತೀರ್ಮಾನವನ್ನೂ ಕೈಗೊಂಡಿಲ್ಲ. ಸರ್ಕಾರವು ನಿರ್ಬಂಧ ವಿಧಿಸುವ ಸಾಧ್ಯತೆ ಕಡಿಮೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಹತ್ತು ಸಾವಿರ ನವೋದ್ಯಮಗಳಿಗೆ ಉತ್ತೇಜನ'

ನವದೆಹಲಿ (ಪಿಟಿಐ): ಮುಂದಿನ 5-6 ವರ್ಷಗಳಲ್ಲಿ ಒಟ್ಟು 10 ಸಾವಿರ ನವೋದ್ಯಮಗಳಿಗೆ ಉತ್ತೇಜನ ನೀಡುವ ಉದ್ದೇಶ ಕೇಂದ್ರಕ್ಕೆ ಇದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವಾಲಯದ ಕಾರ್ಯದರ್ಶಿ ಅಲಕೇಶ್ ಕುಮಾರ್ ಶರ್ಮ ಹೇಳಿದ್ದಾರೆ. 'ಜೆನೆಸಿಸ್ ಯೋಜನೆಯ ಅಡಿಯಲ್ಲಿ 10 ಸಾವಿರ ನವೋದ್ಯಮಗಳಿಗೆ ಉತ್ತೇಜನ ನೀಡಲಿದ್ದೇವೆ' ಎಂದು ತಿಳಿಸಿದ್ದಾರೆ.

ಅಂಧ ಪದವೀಧರನಿಗೆ ₹ 47 ಲಕ್ಷದ ಮೈಕ್ರೋಸಾಫ್ಟ್ ಉದ್ಯೋಗ

ಇಂದೋರ್ (ಪಿಟಿಐ): ಮಧ್ಯ ಪ್ರದೇಶದ 25 ವರ್ಷ ವಯಸ್ಸಿನ ಅಂಧ ಸಾಫ್ಟ್‌ವೇರ್ ಎಂಜಿನಿಯರ್ ಯಶ್ ಸೊನಾಕಿಯಾ ಅವರು ಮೈಕ್ರೋಸಾಫ್ಟ್‌ನಲ್ಲಿ ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ. ಅವರಿಗೆ ವಾರ್ಷಿಕ ₹47 ಲಕ್ಷ ವೇತನ ನೀಡಲು ಸಂಸ್ಥೆ ಮುಂದಾಗಿದೆ.

ಯಶ್ ವ್ಯಾಸಂಗ ಮಾಡಿದ ಇಂದೋರ್‌ನ ಶ್ರೀ ಗೋವಿಂದ್‌ರಾಮ್ ಸೆಕ್ಸರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಸೈನ್ಸ್ (ಎಸ್‌ಜಿಎಸ್‌ಐಟಿಎಸ್) ಕಾಲೇಜಿನ ಅಧಿಕಾರಿಯೊಬ್ಬರು ಈ ಕುರಿತು ಮಾಹಿತಿ ನೀಡಿದ್ದಾರೆ. ಯಶ್ ಈ ಕಾಲೇಜಿನಿಂದ 2021ರಲ್ಲಿ ಬಿ.ಟೆಕ್ ಪದವಿ ಪಡೆದಿದ್ದಾರೆ.

ಗ್ಲುಕೊಮಾದಿಂದ 8ನೇ ವಯಸ್ಸಿಗೆ ಸಂಪೂರ್ಣವಾಗಿ ದೃಷ್ಟಿ ಕಳೆದುಕೊಂಡ ಯಶ್, 'ಸ್ಕ್ರೀನ್ ರೀಡರ್' ತಂತ್ರಾಂಶದ ಸಹಾಯದಿಂದ ವಿದ್ಯಾಭ್ಯಾಸ ಪೂರ್ಣಗೊಳಿಸಿದ್ದರು.




ಯಶ್ ಸೊನಾಕಿಯಾ ಹಾಗೂ ಅವರ ತಂದೆ ಯಶ್‌ಪಾಲ್ –ಪಿಟಿಐ ಚಿತ್ರ

'ಮೈಕ್ರೋಸಾಫ್ಟ್‌ನ ಉದ್ಯೋಗ ಪ್ರಸ್ತಾವವನ್ನು ಸ್ವೀಕರಿಸಿದ್ದು, ಸದ್ಯದಲ್ಲೇ ಉದ್ಯೋಗಕ್ಕಾಗಿ ಸಂಸ್ಥೆಯ ಬೆಂಗಳೂರಿನ ಕಚೇರಿಗೆ ಹಾಜರಾಗಲಿದ್ದೇನೆ. ಸದ್ಯಕ್ಕೆ ಮನೆಯಿಂದಲೇ ಕೆಲಸ ಮಾಡಲು ಸೂಚಿಸಲಾಗಿದೆ' ಎಂದು ಯಶ್ ತಿಳಿಸಿದರು.

'ಹುಟ್ಟಿನಿಂದಲೇ ಗ್ಲುಕೊಮಾ ಕಾಯಿಲೆ ಹೊಂದಿದ್ದ ನನ್ನ ಮಗ ಸಾಫ್ಟ್‌ವೇರ್ ಇಂಜಿನಿಯರ್ ಆಗುವ ಆಕಾಂಕ್ಷೆ ಹೊಂದಿದ್ದ. ಆತ ಸಂಪೂರ್ಣವಾಗಿ ದೃಷ್ಟಿ ಕಳೆದುಕೊಂಡ ಬಳಿಕವೂ ನಾವು ಅವನ ಆಸೆಗೆ ಬಂಬಲವಾಗಿ ನಿಂತಿದ್ದೆವು. ಅವನು 5ನೇ ತರಗತಿಯವರೆಗೆ ವಿಶೇಷ ಮಕ್ಕಳ ಶಾಲೆಯಲ್ಲಿ ವ್ಯಾಸಂಗ ಮಾಡಿದ. ಬಳಿಕ ಸಾಮಾನ್ಯ ಶಾಲೆಗೆ ಸೇರಿಸಿದೆವು. ಆತನ ಸಹೋದರಿಯೊಬ್ಬಳು ಆತನಿಗೆ ಓದಿಗೆ ನೆರವಾದಳು. ವಿಶೇಷವಾಗಿ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಆಕೆ ಸಹಕಾರ ನೀಡಿದಳು' ಎಂದು ಇಂದೋರ್‌ನಲ್ಲಿ ಕ್ಯಾಂಟೀನ್ ನಡೆಸುತ್ತಿರುವ ಯಶ್ ತಂದೆ ಯಶ್‌ಪಾಲ್ ಹೇಳಿದರು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶಂಕರ, ಊರು ಬೇಡ

• **ಪ್ರಶ್ನೆ:** ನಾನು ಸರ್ಕಾರದ ನಿವೃತ್ತ ನೌಕರ. ವಯಸ್ಸು 76 ವರ್ಷ. ವಾರ್ಷಿಕ ಪಿಂಚಣಿ ₹ 4 ಲಕ್ಷ. ಬ್ಯಾಂಕ್ ಹಾಗೂ ಅಂಚೆ ಕಚೇರಿಯ ಬಡ್ಡಿ ಸುಮಾರು ₹ 3 ಲಕ್ಷ. ಬ್ಯಾಂಕ್ ಹಾಗೂ ಅಂಚೆ ಕಚೇರಿಗೆ ಏಪ್ರಿಲ್ ಮೊದಲ ವಾರ ಫಾರಂ 15 ಎಚ್ ನೀಡುತ್ತೇನೆ. ಅಂಚೆ ಕಚೇರಿಯಲ್ಲಿ ಹಿರಿಯ ನಾಗರಿಕರ ಉಳಿತಾಯ ಯೋಜನೆ ಹಾಗೂ ಎನ್‌ಎಸ್‌ಸಿ ಹೂಡಿಕೆ ಇದೆ. ಇವುಗಳಿಗೆ ಬರುವ ಬಡ್ಡಿ ಹೊರತುಪಡಿಸಿ ಬೇರೆ ಬಡ್ಡಿ ಆದಾಯವಿಲ್ಲ. ನನಗೆ 75 ವರ್ಷಕ್ಕೂ ಹೆಚ್ಚು ವಯಸ್ಸಾಗಿರುವುದರಿಂದ ಐಟಿಆರ್ ಸಲ್ಲಿಸಲಿಲ್ಲ. ದಯವಿಟ್ಟು ಸೂಕ್ತ ಸಲಹೆ ನೀಡಿ.

ಉತ್ತರ: ನೀವು 60ರಿಂದ 80 ವರ್ಷ ವಯೋಮಾನದಲ್ಲಿರುವ ಕಾರಣ ನಿಮ್ಮ ಗರಿಷ್ಠ ತೆರಿಗೆ ವಿನಾಯಿತಿ ಮೊತ್ತ ₹ 3 ಲಕ್ಷ. ನಿಮ್ಮ ವಯಸ್ಸು 80 ವರ್ಷ ಆದಾಗ (ಸೂಪರ್ ಸೀನಿಯರ್ ವರ್ಗ) ಈಗ ಇರುವ ಆದಾಯ ತೆರಿಗೆ ನಿಯಮದಂತೆ ₹ 5 ಲಕ್ಷದ ತನಕ ತೆರಿಗೆ ವಿನಾಯಿತಿ ಇರಲಿದೆ. ಮೇಲೆ ತಿಳಿಸಿದ ಗರಿಷ್ಠ ತೆರಿಗೆ ವಿನಾಯಿತಿ ಮಿತಿಗಿಂತ ಹೆಚ್ಚಿಗೆ ಆದಾಯ ಇರುವ ಎಲ್ಲರೂ ತೆರಿಗೆ ವಿವರ ಸಲ್ಲಿಸಬೇಕು. ಗರಿಷ್ಠ ತೆರಿಗೆ ವಿನಾಯಿತಿ ಮೊತ್ತ ನಿಮ್ಮ ವಯಸ್ಸನ್ನು ಅವಲಂಬಿತವಾಗಿರುತ್ತದೆ.

75 ವರ್ಷ ವಯಸ್ಸು ಮೀರಿದ ವ್ಯಕ್ತಿಗಳು ತೆರಿಗೆ ವಿವರ ಸಲ್ಲಿಸುವುದಕ್ಕಿರುವ ವಿನಾಯಿತಿ ಪ್ರಸ್ತಾವನೆ, ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 194(ಪಿ)ಯಲ್ಲಿ ಇದೆ. ಇದರ ಪ್ರಯೋಜನ ಪಡೆಯಲು ಮೊದಲನೆಯದಾಗಿ ವ್ಯಕ್ತಿಯು ನಿವಾಸಿ ಭಾರತೀಯನಾಗಿದ್ದು ವಯಸ್ಸು 75 ವರ್ಷ ಆಗಿರಬೇಕು ಹಾಗೂ ಅಂಥವರು ಪಿಂಚಣಿ ಮತ್ತು ಬಡ್ಡಿ ಆದಾಯ ಮಾತ್ರ ಗಳಿಸುತ್ತಿರಬೇಕು. ಪಿಂಚಣಿ ಆದಾಯ ನಿಗದಿತ ಬ್ಯಾಂಕ್ ಖಾತೆಗೆ ಜಮಾ ಆಗುತ್ತಿದ್ದು, ತೆರಿಗೆ ವಿಚಾರಕ್ಕೆ ಸಂಬಂಧಿಸಿದ ಅರ್ಜಿ ನಮೂನೆಯನ್ನು ಬ್ಯಾಂಕಿಗೆ ಸಲ್ಲಿಸಿರಬೇಕು. ನಿಮಗೆ ತೆರಿಗೆ ಅನ್ವಯವಾದಲ್ಲಿ ಅಂತಹ ತೆರಿಗೆ ಮೊತ್ತವನ್ನು ಕಡಿತಗೊಳಿಸಿ ಬ್ಯಾಂಕ್‌ಗಳು ಪಾವತಿಸಿರಬೇಕು.

ನೀವು ನೀಡಿರುವ ಮಾಹಿತಿಯಂತೆ, ಪಿಂಚಣಿ ಹಾಗೂ ಬಡ್ಡಿ ಆದಾಯಗಳಿಂದ ನಿಮಗೆ ಒಟ್ಟು ₹ 7 ಲಕ್ಷ ಬರುತ್ತಿದೆ. ಮೂಲ ತೆರಿಗೆ ಕಡಿತ ₹ 50,000 ಹಾಗೂ ಬಡ್ಡಿ ವಿನಾಯಿತಿ ₹ 50,000 ಪರಿಗಣಿಸಿದರೂ ₹ 6 ಲಕ್ಷ ಮೊತ್ತಕ್ಕೆ ತೆರಿಗೆ ಬರುತ್ತದೆ. ನೀವು ಈಗಾಗಲೇ 'ಫಾರಂ 15 ಎಚ್'ಅನ್ನು ಸಂಬಂಧಿತ ಇಲಾಖೆಗೆ ನೀಡಿದ್ದು ಅವರು ಅದನ್ನು ಪರಿಗಣಿಸಿದ್ದರೂ, ನಿಮ್ಮ ಒಟ್ಟು ಆದಾಯವು ಗರಿಷ್ಠ ತೆರಿಗೆ ವಿನಾಯಿತಿ ಮಿತಿಗಿಂತ ಹೆಚ್ಚಿಗೆ ಇರುವ ಕಾರಣ ಅದರ ಪ್ರಾಮುಖ್ಯತೆ ತೆರಿಗೆ ಕಡಿತ ಮಾಡದಿರುವುದಕ್ಕೆ ಸೀಮಿತವೇ ಹೊರತು ಸಂಪೂರ್ಣ ತೆರಿಗೆ ವಿನಾಯಿತಿಗೆ ಸಂಬಂಧಿಸಿಲ್ಲ. ನಿಮ್ಮ ಪ್ಯಾನ್ ಖಾತೆಯಲ್ಲಿ ಪ್ರಸ್ತುತ ವರ್ಷದಲ್ಲಿ ತೆರಿಗೆ ಕಡಿತ ಆಗಲಿಲ್ಲವೆಂದು ಪರಿಗಣಿಸಿ ಹೇಳುವುದಾದರೆ, ನಿಮ್ಮ ಒಟ್ಟು ಆದಾಯದ ಮೇಲೆ ಇನ್ನೂ ತೆರಿಗೆ ಪಾವತಿಸಬೇಕಾಗುತ್ತದೆ ಹಾಗೂ ಜುಲೈ ನಂತರ ತಡವಾಗಿ ವಿವರ ಸಲ್ಲಿಸುವುದಕ್ಕೆ ದಂಡ ಪಾವತಿಸಬೇಕಾಗುತ್ತದೆ. ಪ್ರಸ್ತುತ ನಿಮ್ಮ ಅಂಚೆ ಕಚೇರಿಯ ಹೂಡಿಕೆ 80 ಸಿ ಸೆಕ್ಷನ್ ಅಡಿ ತೆರಿಗೆ ಲಾಭ ಕೊಡುವ ಹೂಡಿಕೆಯಾಗಿದ್ದರೆ ಇನ್ನಷ್ಟು ತೆರಿಗೆ ಉಳಿತಾಯವಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ನಿಮ್ಮ ಎಲ್ಲಾ ಆದಾಯ ಹಾಗೂ ಉಳಿತಾಯದ ಮಾಹಿತಿಯೊಂದಿಗೆ, ಸಮೀಪದ ತೆರಿಗೆ ಸಲಹೆಗಾರರ ಜೊತೆ ಚರ್ಚಿಸಿ.

ಹೆಸರು ಬೇಡ, ಬೆಂಗಳೂರು

• **ಪ್ರಶ್ನೆ:** ಇತ್ತೀಚೆಗೆ ಬಿಡುಗಡೆಯಾದ ಚಿನ್ನದ ಬಾಂಡ್ ಖರೀದಿಸಲು ನನಗೆ ಆಗಲಿಲ್ಲ. ಇದನ್ನು ಕೇಂದ್ರ ಸರ್ಕಾರ ವರ್ಷದಲ್ಲಿ ಎರಡು ಬಾರಿ ಬಿಡುಗಡೆ ಮಾಡುತ್ತದೆ ಎಂದು ಕೇಳಿದ್ದೇನೆ. ಇದರಲ್ಲಿ ಹೂಡಿಕೆ ಮಾಡುವುದರಿಂದ ಆರ್ಥಿಕವಾಗಿ ಪ್ರಯೋಜನವಿದೆಯೇ? ಹೆಣ್ಣು ಮಕ್ಕಳ ವಿವಾಹದ ಸಂದರ್ಭದಲ್ಲಿ ಇದು ಹೇಗೆ ನೆರವಾಗುತ್ತದೆ?

ಉತ್ತರ: ಚಿನ್ನದ ಬಾಂಡ್‌ಗಳನ್ನು ಭಾರತ ಸರ್ಕಾರದ ಪರವಾಗಿ ರಿಸರ್ವ್ ಬ್ಯಾಂಕ್, ಬಾಂಡ್ ರೂಪದಲ್ಲಿ ಹೂಡಿಕೆದಾರರಿಗೆ ನೀಡುತ್ತದೆ. ಇದಕ್ಕೆ ಸರ್ಕಾರದ ಭದ್ರತೆ ಇದ್ದು ಭೌತಿಕ ಚಿನ್ನವನ್ನು ಮನೆಯಲ್ಲಿ ಅಥವಾ ಬ್ಯಾಂಕ್ ಲಾಕರ್‌ಗಳಲ್ಲಿ ಇಟ್ಟುಕೊಳ್ಳುವ ಬದಲು ಇರುವ ಪರ್ಯಾಯ ವ್ಯವಸ್ಥೆಯಾಗಿದೆ. ಬಾಂಡ್ ನೀಡುವಾಗಿನ ಚಿನ್ನದ ಮಾರುಕಟ್ಟೆ ಬೆಲೆಯನ್ನೇ ಬಾಂಡ್‌ಗೂ ನಿಗದಿ ಮಾಡಲಾಗುತ್ತದೆ. ಇದರ ವಿಶೇಷವೆಂದರೆ, ಶೇಕಡ 2.5ರಷ್ಟು ಬಡ್ಡಿಯನ್ನು ಅರ್ಧ ವರ್ಷಕ್ಕೊಮ್ಮೆ ಹೂಡಿಕೆದಾರರಿಗೆ ಆರಂಭಿಕ ಮೊತ್ತದ ಮೇಲೆ ನೀಡಲಾಗುತ್ತದೆ. ಬಾಂಡ್ ಖರೀದಿಯ ಸಂದರ್ಭದಲ್ಲಿ, ಚಿನ್ನಾಭರಣಗಳಿಗೆ ಖರೀದಿ ಸಮಯದಲ್ಲಿ ವಿಧಿಸುವ ಶುಲ್ಕ ಇರುವುದಿಲ್ಲ ಮತ್ತು ಶುದ್ಧತೆ ಪ್ರಶ್ನೆ ಇರುವುದಿಲ್ಲ. ಬಾಂಡ್‌ನಲ್ಲಿನ ಪ್ರತಿ ವರ್ಷ ಕನಿಷ್ಠ ಹೂಡಿಕೆ 1 ಗ್ರಾಂ, ಗರಿಷ್ಠ ಹೂಡಿಕೆ 4 ಕೆ.ಜಿ. ಇದು 8 ವರ್ಷಗಳ ಅವಧಿಯ ಹೂಡಿಕೆಯಾಗಿದ್ದು, 5, 6, 7ನೇ ವರ್ಷದಲ್ಲಿ ಹಣ ಹಿಂಪಡೆಯುವ ಅವಕಾಶವಿದೆ.

ಚಿನ್ನದ ಬಾಂಡ್‌ಗಳನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು, ಶೆಡ್ಯೂಲ್ಡ್ ಪ್ರೈವೇಟ್ ಬ್ಯಾಂಕ್‌ಗಳು, ನಿಗದಿತ ಅಂಚೆ ಕಚೇರಿಗಳು, ಮತ್ತು ಅಧಿಕೃತ ಸ್ಟಾಕ್ ಎಕ್ಸ್‌ಚೇಂಜ್ ಕಚೇರಿಗಳು ಅಥವಾ ಶಾಖೆಗಳ ಮೂಲಕ ನೇರವಾಗಿ ಅಥವಾ ಅವರ ಏಜೆಂಟ್‌ಗಳ ಮೂಲಕ ಮಾರಾಟ ಮಾಡಲಾಗುತ್ತದೆ. ಇಂಟರ್ನೆಟ್ ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ಬಾಂಡ್ ಖರೀದಿಸುವ ಗ್ರಾಹಕರಿಗೆ ಸಾಮಾನ್ಯವಾಗಿ ₹ 50ರಷ್ಟು ಕಡಿಮೆ ದರ ನಿಗದಿ ಮಾಡಲಾಗುತ್ತದೆ.

ಗ್ರಾಹಕರಿಗೆ ಬಾಂಡ್ ವಿತರಿಸಿದ ದಿನಾಂಕದಂದು ಹೋಲ್ಡಿಂಗ್ ಪ್ರಮಾಣಪತ್ರ ನೀಡಲಾಗುತ್ತದೆ. ಅರ್ಜಿ ನಮೂನೆಯಲ್ಲಿ ಇಮೇಲ್ ವಿಳಾಸ ಒದಗಿಸಿದರೆ, ಬಾಂಡ್‌ಗಳನ್ನು ಇಮೇಲ್ ಮೂಲಕವೂ ಪಡೆಯಬಹುದು. ಬಾಂಡ್‌ಗಳನ್ನು ಡಿಮ್ಯಾಟ್ ಖಾತೆಯಲ್ಲೂ ಹೊಂದಬಹುದು. ಹೂಡಿಕೆಯ ಅವಧಿ ಮುಗಿದಾಗ ಪ್ರತಿ ಗ್ರಾಂಗೆ ಅಂದಿನ ಮಾರುಕಟ್ಟೆ ಮೌಲ್ಯವನ್ನು ನೀಡಲಾಗುತ್ತದೆ. ಇದನ್ನು ಬಳಸಿ ಅಗತ್ಯ ಭೌತಿಕ ಚಿನ್ನವನ್ನು ಮಾರುಕಟ್ಟೆಯಿಂದ ಕೊಳ್ಳಬಹುದು. ಮಕ್ಕಳ ವಿವಾಹಕ್ಕೆ ಅಥವಾ ಹೂಡಿಕೆಯ ಉದ್ದೇಶಕ್ಕೆ ಇದು ಉತ್ತಮ ಅವಕಾಶ ನೀಡುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಟಾಪ್–10 ಕಂಪನಿಗಳ ಸಾಲಿಗೆ ಅದಾನಿ ಟ್ರಾನ್ಸ್‌ಮಿಷನ್

ನವದೆಹಲಿ (ಪಿಟಿಐ): ಮಾರುಕಟ್ಟೆ ಬಂಡವಾಳದ ಲೆಕ್ಕದಲ್ಲಿ ದೇಶದ ಅತ್ಯಂತ ಮೌಲ್ಯಯುತ 10 ಕಂಪನಿಗಳ ಪಟ್ಟಿಯಲ್ಲಿ ಅದಾನಿ ಟ್ರಾನ್ಸ್‌ಮಿಷನ್ ಕಂಪನಿ ಹೊಸದಾಗಿ ಸೇರಿಕೊಂಡಿದೆ. ಈಗ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 4.43 ಲಕ್ಷ ಕೋಟಿ ಆಗಿದ್ದು, ಟಾಪ್–10 ಪಟ್ಟಿಯಲ್ಲಿ 9ನೇ ಸ್ಥಾನ ಪಡೆದಿದೆ.

ಮಂಗಳವಾರದ ವಹಿವಾಟಿನಲ್ಲಿ ಕಂಪನಿಯ ಷೇರುಗಳ ಮೌಲ್ಯವು ಶೇಕಡ 3.05ರಷ್ಟು ಹೆಚ್ಚಳವಾಗಿದೆ. ಷೇರು ಮೌಲ್ಯವು ಈ ವರ್ಷದಲ್ಲಿ ಇದುವರೆಗೆ ಶೇಕಡ 129.19ರಷ್ಟು ಏರಿಕೆ ಕಂಡಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿವೆ. ಇನ್ಫೊಸಿಸ್ ಮತ್ತು ಹಿಂದುಸ್ತಾನ್ ಯುನಿಲಿವರ್ ನಾಲ್ಕು ಮತ್ತು ಐದನೆಯ ಸ್ಥಾನಗಳಲ್ಲಿವೆ. ಟಾಪ್–10 ಪಟ್ಟಿಯಲ್ಲಿನ ಸ್ಥಾನವನ್ನು ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಕಳೆದುಕೊಂಡಿದೆ. ಎಲ್‌ಐಸಿ ಈಗ ಹನ್ನೊಂದನೆಯ ಸ್ಥಾನಕ್ಕೆ ಕುಸಿದಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹258-595
ದ್ವಿತಳಿ (ಬಿ.ವಿ)	₹292-758

ಕೊಬ್ಬರಿ ಧಾರಣೆ

ಅರಸೀಕೆರೆ	₹12000-14400
ಪುತ್ತೂರು (ಇತರ)	₹4000-8500

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-47500
ಚನ್ನಗಿರಿ	
ರಾಶಿ	49099-53799
ಕಾರ್ಕಳ	
ಹೊಸತು	40000-47500
ಹಳತು	46000-56000
ಪುತ್ತೂರು	
ಕೋಕ	11000-26000
ಹೊಸತು	34500-47500
ಶಿವಮೊಗ್ಗ	
ಬೆಟ್ಟೆ	50499-55769
ಗೊರಬಲು	21200-39869
ರಾಶಿ	49510-54269
ಸರಕು	56109-79100
ಸಿದ್ದಾಪುರ	
ಬಿಳಿಗೋಟು	28009-34589
ಚಾಲಿ	38619-42939
ಕೋಕ	26199-34689
ಕೆಂಪುಗೋಟು	31911-33389
ರಾಶಿ	49599-52309
ತಟ್ಟಿಬೆಟ್ಟೆ	44109-49889
ಶಿರಸಿ	
ಬೆಟ್ಟೆ	41209-47518
ಬಿಳಿಗೋಟು	28739-35656
ಚಾಲಿ	39519-43808
ರಾಶಿ	48116-51119
ಯಲ್ಲಾಪುರ	
ಆಪಿ	60008-60008
ಬಿಳಿಗೋಟು	28212-34373
ಚಾಲಿ	37819-43390
ಕೋಕ	23399-32699
ಕೆಂಪುಗೋಟು	35719-35719
ರಾಶಿ	49899-55808
ತಟ್ಟಿಬೆಟ್ಟೆ	37226-48739

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16700	16000	16550	242 ಸೆಂಟ್ಸ್
ಎಸಿ	9100	8500	9200	
ಆರ್‌ಪಿ	10200	9800	9825	ಲಂಡನ್
ಆರ್‌ಸಿ	4800	4600	4750	2281 ಡಾಲರ್ಸ್

ಉದ್ಯೋಗ ವಾಣಿ

ಸೆರೆನಾ ವಿಲಿಯಮ್ಸ್ ಶುಭಾರಂಭ

ಅಮೆರಿಕ ಓಪನ್: ವಿದಾಯ ಟೂರ್ನಿಯಲ್ಲಿ ಎರಡನೇ ಸುತ್ತು ಪ್ರವೇಶ

ನ್ಯೂಯಾರ್ಕ್ (ಎಎಫ್‌ಪಿ): ವೃತ್ತಿ ಜೀವನದ ಕೊನೆಯ ಗ್ರ್ಯಾನ್‌ಸ್ಲಾಮ್ ಟೂರ್ನಿ ಆಡುತ್ತಿರುವ ಅಮೆರಿಕದ ಸೆರೆನಾ ವಿಲಿಯಮ್ಸ್, ತಮ್ಮ ಇನ್ನೊಂದು ಪಂದ್ಯ ವೀಕ್ಷಿಸುವ ಅವಕಾಶವನ್ನು ಅಭಿಮಾನಿಗಳಿಗೆ ನೀಡಿದ್ದಾರೆ.

ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಅವರು 6–3, 6–3 ರಲ್ಲಿ ಮಾಂಟೆನೆಗ್ರೊದ ಡಂಕಾ ಕೊವಿನಿಚ್ ವಿರುದ್ಧ ಗೆದ್ದು ಎರಡನೇ ಸುತ್ತು ಪ್ರವೇಶಿಸಿದರು.

ಇತ್ತೀಚಿನ ಫಾರ್ಮ್ ನೋಡಿದಾಗ, ಸೆರೆನಾ ಮೊದಲ ಸುತ್ತಿನ ತಡೆ ದಾಟುವುದು ಅನುಮಾನ ಎನಿಸಿತ್ತು. ಸೋಮವಾರದ ಪಂದ್ಯವೇ ಅವರ ಕೊನೆಯ ಪಂದ್ಯ ಆಗಲಿದೆ ಎಂದು ಅಭಿಮಾನಿಗಳು ಭಾವಿಸಿದ್ದರು. ಇದರಿಂದ ಆರ್ಥರ್ ಆ್ಯಶ್ ಕ್ರೀಡಾಂಗಣದಲ್ಲಿ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು.

ಆದರೆ 40 ವರ್ಷದ ಸೆರೆನಾ ಅಮೋಘ ಆಟವಾಡಿ ಎರಡನೇ ಸುತ್ತು ಪ್ರವೇಶಿಸಿದರು. ಮುಂದಿನ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಆಟಗಾರ್ತಿ, ಎಸ್ಟೋನಿಯದ ಅನೆಟ್ ಕೊಂತಾವೆತ್ ಅವರನ್ನು ಎದುರಿಸುವರು.

ತಾರೆಯರ ದಂಡು: ಸೆರೆನಾ ಪಂದ್ಯ ವೀಕ್ಷಿಸಲು ಅಮೆರಿಕದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್, ಮಾಜಿ ಹೆವಿವೇಟ್ ಚಾಂಪಿಯನ್ ಮೈಕ್ ಟೈಸನ್, ಹಾಲಿವುಡ್ ತಾರೆಯರಾದ ಹ್ಯೂ ಜಾಕ್‌ಮನ್, ಕ್ವೀನ್ ಲತೀಫಾ, ಮಾಡೆಲಿಂಗ್ ಕ್ಷೇತ್ರದ ಪ್ರಮುಖರು, ಮಾಜಿ ಕ್ರೀಡಾಪಟುಗಳು ಸೇರಿದಂತೆ 23,500 ಮಂದಿ ಸೇರಿದ್ದರು.

ಹಲೆಪ್‌ಗೆ ಆಘಾತ: ವಿಶ್ವದ ಮಾಜಿ ಅಗ್ರ ರ‍್ಯಾಂಕಿಂಗ್‌ನ ಆಟಗಾರ್ತಿ ಸಿಮೊನಾ ಹಲೆಪ್ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು. ಇಲ್ಲಿ ಏಳನೇ ಶ್ರೇಯಾಂಕ ಹೊಂದಿದ್ದ ಅವರನ್ನು ಉಕ್ರೇನ್‌ನ ಡರಿಯಾ ಸ್ನಿಗರ್ 6–2, 0–6, 6–4 ರಲ್ಲಿ ಮಣಿಸಿ ಅಚ್ಚರಿಗೆ ಕಾರಣರಾದರು.

ಮುಗ್ಗರಿಸಿದ ಸಿಸಿಪಸ್: ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲೂ ಅಚ್ಚರಿಯ ಫಲಿತಾಂಶ ದಾಖಲಾಗಿದ್ದು, ನಾಲ್ಕನೇ ಶ್ರೇಯಾಂಕದ ಆಟಗಾರ ಗ್ರೀಕ್‌ನ ಸ್ಟೆಫಾನೊಸ್ ಸಿಸಿಪಸ್ ಸೋತು ಹೊರಬಿದ್ದರು. ಅರ್ಹತಾ ಸುತ್ತಿನಲ್ಲಿ ಗೆದ್ದು ಬಂದಿರುವ ಕೊಲಂಬಿಯದ ಡೇನಿಯಲ್ ಗಲಾನ್ 6-0, 6-1, 3-6, 7-5 ರಲ್ಲಿ ಸಿಸಿಪಸ್ ಎದುರು ಗೆದ್ದರು. ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಪ್ರಧಾನ ಸುತ್ತಿನಲ್ಲಿ ಆಡಿದ ಗಲಾನ್ ಪಂದ್ಯದ ಮೊದಲ 11 ಗೇಮ್‌ಗಳನ್ನು ಗೆದ್ದು ಎದುರಾಳಿಯನ್ನು ಕಂಗೆಡಿಸಿದರು.

ಇತರ ಪಂದ್ಯಗಳಲ್ಲಿ ಇಟಲಿಯ ಮಟೆಯೊ ಬೆರೆಟಿನಿ 6-2, 6-3, 6-3 ರಲ್ಲಿ ಚಿಲಿಯ ನಿಕೊಲಸ್ ಜೆರಿ ಎದುರು, ನಾರ್ವೆಯ ಕ್ಯಾಸ್ಪರ್ ರೂಡ್ 6-3, 7-5, 6-2 ರಲ್ಲಿ ಬ್ರಿಟನ್‌ನ ಕೈಲ್ ಎಡ್ಮಂಡ್ ಎದುರು ಗೆದ್ದರು.



ಮೊದಲ ಸುತ್ತಿನ ಪಂದ್ಯ ಗೆದ್ದಾಗ ಸಂಭ್ರಮಿಸಿದ ಸೆರೆನಾ ವಿಲಿಯಮ್ಸ್ –ಎಎಫ್‌ಪಿ ಚಿತ್ರ

ವು ಯಿಬಿಂಗ್ ಸಾಧನೆ

ಚೀನಾದ ವು ಯಿಬಿಂಗ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತು ಪ್ರವೇಶಿಸಿ ಐತಿಹಾಸಿಕ ಸಾಧನೆ ಮಾಡಿದರು. ಚೀನಾದ ಆಟಗಾರ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಪುರುಷರ ವಿಭಾಗದ ಪಂದ್ಯದಲ್ಲಿ ಗೆಲುವು ಪಡೆದದ್ದು 1959ರ ಬಳಿಕ ಇದೇ ಮೊದಲು. ಯಿಬಿಂಗ್ 6-3, 6-4, 6-0 ರಲ್ಲಿ ಜಾರ್ಜಿಯದ ನಿಕೊಲೋಜ್ ಬಸಿಲಶ್ವಿಲಿ ಅವರನ್ನು ಮಣಿಸಿದರು.

ಆದರೆ ಚೀನಾದ ಇನ್ನೊಬ್ಬ ಆಟಗಾರ ಜಾಂಗ್ ಜಿಜಿನ್ 3-6, 6-7 (4/7), 7-6 (11/9), 6-1, 6-4 ರಲ್ಲಿ ನೆದರ್ಲೆಂಡ್ಸ್‌ನ ಟಿನ್ ವಾನ್ ರಿತೊವೆನ್ ಎದುರು ಪರಾಭವಗೊಂಡರು.

ಮುಖ್ಯಾಂಶಗಳು
- ಸಿಸಿಪಸ್, ಹಲೆಪ್‌ಗೆ ಆಘಾತ
- ಚೀನಾದ ವು ಯಿಬಿಂಗ್ ಐತಿಹಾಸಿಕ ಸಾಧನೆ
- ರೂಡ್, ಬೆರೆಟಿನಿಗೆ ಗೆಲುವು

ಭಾರತಕ್ಕೆ ಸುಲಭ ಜಯದ ನಿರೀಕ್ಷೆ: ಲಯ ಕಂಡುಕೊಳ್ಳುವರೇ ರಾಹುಲ್?

ಹಾಂಗ್‌ಕಾಂಗ್ ಹಣಿಯಲು ಸಜ್ಜು

ದುಬೈ (ಪಿಟಿಐ): ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ 'ಎ' ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ಭಾರತ ತಂಡ ಬುಧವಾರ ಹಾಂಗ್‌ಕಾಂಗ್ ತಂಡವನ್ನು ಎದುರಿಸಲಿದ್ದು, ಸುಲಭ ಗೆಲುವಿನ ನಿರೀಕ್ಷೆಯಲ್ಲಿದೆ.

ಪಾಕಿಸ್ತಾನ ಮತ್ತು ಭಾರತ ಮೂಲದ ಆಟಗಾರರನ್ನೇ ಒಳಗೊಂಡಿರುವ ಹಾಂಗ್‌ಕಾಂಗ್ ತಂಡ, ರೋಹಿತ್ ಶರ್ಮ ಬಳಗಕ್ಕೆ ಸರಿಸಾಟಿಯಾಗಿ ನಿಲ್ಲದು. ಆದ್ದರಿಂದ ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಹೋರಾಟ ಭಾರತಕ್ಕೆ 'ಅಭ್ಯಾಸ ಪಂದ್ಯ' ಎನಿಸಿಕೊಂಡಿದೆ.

ಟೂರ್ನಿಯ 'ಸೂಪರ್ ಫೋರ್' ಹಂತಕ್ಕೆ ಮುನ್ನ ಫಾರ್ಮ್ ಕಂಡುಕೊಳ್ಳುವ ಪ್ರಯತ್ನದಲ್ಲಿರುವ ಆಟಗಾರರಿಗೆ ಈ ಪಂದ್ಯ ಉತ್ತಮ ಅವಕಾಶ ಕಲ್ಪಿಸಿದೆ. ಪಾಕಿಸ್ತಾನದ ಎದುರಿನ ಪಂದ್ಯದಲ್ಲಿ ಮೊದಲ ಎಸೆತದಲ್ಲೇ ಔಟಾಗಿದ್ದ ಕೆ.ಎಲ್.ರಾಹುಲ್‌ಗೆ ಬುಧವಾರದ ಪಂದ್ಯ ಮಹತ್ವದ್ದು. ಭರ್ಜರಿ ಆಟವಾಡಿ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಲು ಅವರಿಗೆ ವೇದಿಕೆ ಲಭಿಸಿದೆ.

ಉತ್ತಮ ಆರಂಭ ಪಡೆದರೂ, ಅದನ್ನು ದೊಡ್ಡ ಮೊತ್ತವನ್ನಾಗಿ ಪರಿವರ್ತಿಸಲು ಎಡವುತ್ತಿರುವ ವಿರಾಟ್ ಕೊಹ್ಲಿ ಕೂಡಾ ಈ ಪಂದ್ಯವನ್ನು ಗಂಭೀರವಾಗಿ ತೆಗೆದುಕೊಳ್ಳುವ ಸಾಧ್ಯತೆಯಿದೆ.

ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗೆ ತಂಡವನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಪ್ರಯೋಗಗಳು ಮುಂದುವರಿಯಲಿದೆ ಎಂದು ನಾಯಕ ರೋಹಿತ್ ಶರ್ಮ ಹೇಳಿದ್ದಾರೆ. ಈ ಪಂದ್ಯಕ್ಕೆ ಅಂತಿಮ ಹನ್ನೊಂದರ ಬಳಗದಲ್ಲಿ ಕೆಲವು ಬದಲಾವಣೆ ನಿರೀಕ್ಷಿಸಬಹುದು.

ದಿನೇಶ್ ಕಾರ್ತಿಕ್ ಬದಲು ರಿಷಭ್ ಪಂತ್‌ಗೆ ಅವಕಾಶ ಲಭಿಸುವುದೇ ಎಂಬುದನ್ನು ನೋಡಬೇಕು. ಬ್ಯಾಟಿಂಗ್ ಕ್ರಮಾಂಕದಲ್ಲಿ ಬದಲಾವಣೆ ನಡೆದರೂ ಅಚ್ಚರಿಯಿಲ್ಲ. ಪಾಕ್ ಎದುರು ರವೀಂದ್ರ ಜಡೇಜ ಬಡ್ತಿ ಪಡೆದು ನಾಲ್ಕನೇ ಕ್ರಮಾಂಕದಲ್ಲಿ ಆಡಿದ್ದರು.

ಯಜುವೇಂದ್ರ ಚಾಹಲ್ ಮತ್ತು ರವೀಂದ್ರ ಜಡೇಜ ಅವರಿಗೆ ವಿಶ್ರಾಂತಿ ನೀಡಿ, ರವಿಚಂದ್ರನ್ ಅಶ್ವಿನ್ ಹಾಗೂ ರವಿ ಬಿಷ್ಣೋಯಿಗೆ ಅವಕಾಶ ನೀಡುವ ಆಲೋಚನೆಯನ್ನೂ ತಂಡದ ಆಡಳಿತ ಮಾಡಿದೆ.

ಹಾಂಗ್‌ಕಾಂಗ್ ಹೆಚ್ಚಿನ ಪಂದ್ಯಗಳನ್ನು ಆಡದೇ ಇರುವುದರಿಂದ ಆ ತಂಡದ ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗದ ಶಕ್ತಿ, ದೌರ್ಬಲ್ಯದ ಬಗ್ಗೆ ತಿಳಿದಿಲ್ಲ. ಆದ್ದರಿಂದ ಭಾರತ ಎಚ್ಚರಿಕೆಯಿಂದಲೇ ಆಡಬೇಕಿದೆ.



ಕೆ.ಎಲ್.ರಾಹುಲ್

ಏಷ್ಯಾ ಕಪ್ ಯುಎಇ 2022

ಇಂದಿನ ಪಂದ್ಯ
ಭಾರತ Vs ಹಾಂಗ್‌ಕಾಂಗ್
ಸ್ಥಳ: ದುಬೈ
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್
ರಾತ್ರಿ 7.30

ಭಾರತ–ನ್ಯೂಜಿಲೆಂಡ್ ಎ ತಂಡಗಳ ಸೆಣಸು ನಾಳೆಯಿಂದ

ಬೆಂಗಳೂರು: ಭಾರತ ಮತ್ತು ನ್ಯೂಜಿಲೆಂಡ್ ಎ ತಂಡಗಳ ನಡುವಣ ನಾಲ್ಕು ದಿನಗಳ ಮಾದರಿಯ ಕ್ರಿಕೆಟ್ ಪಂದ್ಯವು ಗುರುವಾರ ಆರಂಭವಾಗಲಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಭಾರತ ತಂಡದ ನಾಯಕತ್ವವನ್ನು ಪ್ರಿಯಾಂಕ್ ಪಾಂಚಾಲ್ ವಹಿಸಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 10 ಗಂಟೆ

ಪ್ರಸಾರ ಹಕ್ಕು: ಡಿಸ್ನಿ ಸ್ಟಾರ್–ಝೀ ಒಪ್ಪಂದ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ)ಯ ಭಾರತದ ಮಾರುಕಟ್ಟೆ ವಿಭಾಗದ ಪ್ರಸಾರ ಹಕ್ಕುಗಳಿಗೆ ಸಂಬಂಧಿಸಿದಂತೆ ಡಿಸ್ನಿ ಸ್ಟಾರ್ ಸಂಸ್ಥೆಯು ಝೀ ಜತೆ ಒಪ್ಪಂದ ಮಾಡಿಕೊಂಡಿದೆ.

ಈ ಒಪ್ಪಂದದ ಪ್ರಕಾರ 2024 ರಿಂದ 2027ರ ಅವಧಿಗೆ ಭಾರತದಲ್ಲಿ ಐಸಿಸಿ ಪುರುಷರ ಮತ್ತು 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಗಳ ಪ್ರಸಾರದ ಹಕ್ಕು ಝೀ ಸಂಸ್ಥೆಗೆ ದೊರೆತಿದೆ.

ಮುಂದಿನ ನಾಲ್ಕು ವರ್ಷಗಳವರೆಗೆ ಐಸಿಸಿ ಟೂರ್ನಿಗಳ ಟಿ.ವಿ ಹಾಗೂ ಡಿಜಿಟಲ್ ಪ್ರಸಾರ ಹಕ್ಕುಗಳನ್ನು ಡಿಸ್ನಿ ಸ್ಟಾರ್ ₹ 24 ಸಾವಿರ ಕೋಟಿಗೆ ತನ್ನದಾಗಿಸಿಕೊಂಡಿತ್ತು. ತನಗೆ ದೊರೆತ ಹಕ್ಕನ್ನು ಸ್ಟಾರ್ ಇದೀಗ ಝೀ ಜತೆ ಹಂಚಿಕೊಂಡಿದೆ.

2024 ಮತ್ತು 2026ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿ, 2025ರ ಚಾಂಪಿಯನ್ಸ್ ಟ್ರೋಫಿ ಮತ್ತು 2027ರ ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯಗಳನ್ನು ಝೀ ಪ್ರಸಾರ ಮಾಡಲಿದೆ.



ವಿಕೆಟ್ ಗಳಿಸಿದ ಅಫ್ಗನ್ ತಂಡದ ಮುಜೀಬ್ ಉರ್ ರೆಹಮಾನ್ ಸಹ ಆಟಗಾರರ ಜತೆ ಸಂಭ್ರಮಿಸಿದರು –ಎಪಿ ಚಿತ್ರ

ಏಷ್ಯಾ ಕಪ್: ನಬಿ ಬಳಗಕ್ಕೆ ಸತತ ಎರಡನೇ ಗೆಲುವು

ಬಾಂಗ್ಲಾಗೆ ಆಘಾತ ನೀಡಿದ ಅಫ್ಗನ್

ಶಾರ್ಜಾ (ಪಿಟಿಐ): ಆಲ್‌ರೌಂಡ್ ಆಟವಾಡಿದ ಅಫ್ಗಾನಿಸ್ತಾನ ತಂಡ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ಬಾಂಗ್ಲಾದೇಶಕ್ಕೆ ಆಘಾತ ನೀಡಿತು.

ಶಾರ್ಜಾದಲ್ಲಿ ನಡೆದ ಪಂದ್ಯದಲ್ಲಿ ಅಫ್ಗನ್ ತಂಡ ಏಳು ವಿಕೆಟ್‌ಗಳ ಜಯ ಸಾಧಿಸಿತು. ಮೊದಲ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಮಣಿಸಿದ್ದ ಮೊಹಮ್ಮದ್ ನಬಿ ಬಳಗ ಇದರೊಂದಿಗೆ 'ಬಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದು 'ಸೂಪರ್ ಫೋರ್' ಹಂತ ಪ್ರವೇಶಿಸಿತು.

ಮೊದಲು ಬ್ಯಾಟ್ ಮಾಡಿದ ಬಾಂಗ್ಲಾದೇಶ ತಂಡ ಮುಜೀಬ್ ಉರ್ ರೆಹಮಾನ್ ಮತ್ತು ರಶೀದ್ ಖಾನ್ ಅವರ ಪ್ರಭಾವಿ ಬೌಲಿಂಗ್ ದಾಳಿಗೆ ನಲುಗಿ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 127 ರನ್ ಗಳಿಸಿತು. ಮುಜೀಬ್ ಮತ್ತು ರಶೀದ್ ತಲಾ ಮೂರು ವಿಕೆಟ್ ಪಡೆದರು. ಸಾಧಾರಣ ಗುರಿ ಬೆನ್ನಟ್ಟಿದ ಅಫ್ಗನ್ 18.3 ಓವರ್‌ಗಳಲ್ಲಿ 3 ವಿಕೆಟ್‌ಗೆ 131 ರನ್ ಗಳಿಸಿ ಜಯ ಸಾಧಿಸಿತು. ಇಬ್ರಾಹಿಂ ಜದ್ರಾನ್ (ಔಟಾಗದೆ 42, 41 ಎ., 4X4) ಮತ್ತು ನಜೀಬುಲ್ಲಾ ಜದ್ರಾನ್ (ಔಟಾಗದೆ 43, 17 ಎ., 4X1, 6X6) ಅವರು ತಂಡದ ಗೆಲುವಿನ ಹಾದಿ ಸುಗಮಗೊಳಿಸಿದರು. ಆರು ಸಿಕ್ಸರ್ ಸಿಡಿಸಿದ ನಜೀಬುಲ್ಲಾ, ಬಾಂಗ್ಲಾ ಬೌಲಿಂಗ್‌ನ ದಿಕ್ಕು ತಪ್ಪಿಸಿದರು.

ಪ್ರಭಾವಿ ಬೌಲಿಂಗ್: ಟಾಸ್ ಗೆದ್ದ ಬಾಂಗ್ಲಾ ನಾಯಕ ಶಕೀಬ್ ಅಲ್ ಹಸನ್ ಅವರು ಬ್ಯಾಟ್ ಮಾಡಲು ನಿರ್ಧರಿಸಿದರು. ಮೊಸದ್ದೆಕ್ ಹೊಸೇನ್ (ಅಜೇಯ 48, 31 ಎ., 4X4, 6X1) ಹೊರತುಪಡಿಸಿ ಎಲ್ಲರೂ ವಿಫಲರಾದರು.

ಆರಂಭಿಕ ಆಟಗಾರರಾದ ಮೊಹಮ್ಮದ್ ನಯೀಮ್ (6) ಮತ್ತು ಅನಾಮುಲ್ ಹಕ್ (5) ಅವರನ್ನು ಪೆವಿಲಿಯನ್‌ಗಟ್ಟಿದ ಮುಜೀಬ್, ಅಲ್ಪ ಸಮಯದ ಬಳಿಕ ನಾಯಕ ಶಕೀಬ್ (11) ಅವರ ವಿಕೆಟ್ ಕೂಡಾ ಪಡೆದರು.

ಮುಷ್ಫಿಕುರ್ ರಹೀಂ (1) ಮತ್ತು ಅಫೀಫ್ ಹೊಸೇನ್ (12) ಅವರು ರಶೀದ್ ಖಾನ್ ಕೈಚಳಕ್ಕೆ ವಿಕೆಟ್ ಒಪ್ಪಿಸಿದರು. 53 ರನ್ ಗಳಿಸುವಷ್ಟರಲ್ಲಿ ಐದು ವಿಕೆಟ್‌ಗಳು ಬಿದ್ದವು.

ಮೊಸದ್ದೆಕ್ ಅವರು ಮಹಮೂದುಲ್ಲಾ (25 ರನ್, 27 ಎಸೆತ) ಜತೆ ಆರನೇ ವಿಕೆಟ್‌ಗೆ 36 ರನ್ ಹಾಗೂ ಮೆಹ್ದಿ ಹಸನ್ ಜತೆ 7ನೇ ವಿಕೆಟ್‌ಗೆ 38 ರನ್ ಕಲೆಹಾಕಿದರು. ಇದರಿಂದ ತಂಡದ ಮೊತ್ತ 100ರ ಗಡಿ ದಾಟಿತು.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 7ಕ್ಕೆ 127 (ಶಕೀಬ್ ಅಲ್ ಹಸನ್ 11, ಅಫೀಫ್ ಹೊಸೇನ್ 12, ಮಹಮೂದುಲ್ಲಾ 25, ಮೊಸದ್ದೆಕ್ ಹೊಸೇನ್ ಅಜೇಯ 48, ಮೆಹ್ದಿ ಹಸನ್ 14, ಮುಜೀಬ್ ಉರ್ ರೆಹಮಾನ್ 16ಕ್ಕೆ 3, ರಶೀದ್ ಖಾನ್ 22ಕ್ಕೆ 3).

ಅಫ್ಗಾನಿಸ್ತಾನ: 18.3 ಓವರ್‌ಗಳಲ್ಲಿ 3 ವಿಕೆಟ್‌ಗೆ 131 (ಹಜ್ರತುಲ್ಲಾ ಝಝೈ 23, ಇಬ್ರಾಹಿಂ ಜದ್ರಾನ್ ಔಟಾಗದೆ 42, ನಜೀಬುಲ್ಲಾ ಜದ್ರಾನ್ ಔಟಾಗದೆ 43, ಶಕೀಬ್ ಅಲ್ ಹಸನ್ 13ಕ್ಕೆ 1) ಫಲಿತಾಂಶ: ಅಫ್ಗಾನಿಸ್ತಾನಕ್ಕೆ 7 ವಿಕೆಟ್ ಗೆಲುವು

ಸಂಕ್ಷಿಪ್ತ ಸುದ್ದಿ

ಕ್ರಿಕೆಟ್: ಆಂಧ್ರ ತಂಡಕ್ಕೆ ಯರೇಗೌಡ ತರಬೇತುದಾರ



ಯರೇಗೌಡ

ಬೆಂಗಳೂರು: ಕರ್ನಾಟಕ ಕ್ರಿಕೆಟ್ ತಂಡದ ಕೋಚ್ ಆಗಿದ್ದ ಯರೇಗೌಡ ಅವರು ಮುಂಬರುವ ಋತುವಿನಿಂದ ಆಂಧ್ರ ರಣಜಿ ತಂಡದ ಕೋಚ್ ಆಗಿ ನೇಮಕಗೊಂಡಿದ್ದಾರೆ.

ರಾಜ್ಯ ತಂಡದ ಕೋಚ್ ಆಗಿ ನಾಲ್ಕು ವರ್ಷ ಕಾರ್ಯನಿರ್ವಹಿಸಿದ್ದ ಅವರ ಒಪ್ಪಂದದ ಅವಧಿ 2021–22ರ ಋತುವಿನೊಂದಿಗೆ ಕೊನೆಗೊಂಡಿತ್ತು.

ಹೊಸ ಜವಾಬ್ದಾರಿಯನ್ನು ಉತ್ಸಾಹದಿಂದ ಎದುರು ನೋಡುತ್ತಿರುವುದಾಗಿ 50 ವರ್ಷದ ಯರೇಗೌಡ ಹೇಳಿದ್ದಾರೆ.

'ಒಬ್ಬ ಆಟಗಾರನಾಗಿ ಎರಡು ತಂಡಗಳನ್ನು (ಕರ್ನಾಟಕ ಮತ್ತು ರೈಲ್ವೇಸ್) ಪ್ರತಿನಿಧಿಸಿದ್ದೇನೆ. ಆದರೆ ಇನ್ನೊಂದು ರಾಜ್ಯ ತಂಡದ ಕೋಚ್ ಹುದ್ದೆ ಹೊಸ ಸವಾಲು ಆಗಿದೆ' ಎಂದಿದ್ದಾರೆ.

ಪ್ರಣಯ್ ಮುನ್ನಡೆ

ಒಸಾಕ, ಜಪಾನ್ (ಪಿಟಿಐ): ಭಾರತದ ಎಚ್.ಎಸ್. ಪ್ರಣಯ್ ಅವರು ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮಂಗಳವಾರ ಪ್ರೀಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದ ವೇಳೆ ಅವರ ಎದುರಾಳಿ ಎನ್‌ಜಿ ಕಾ ಲಾಂಗ್ ಆ್ಯಗ್ನಸ್ ಹಿಂದೆ ಸರಿದ ಕಾರಣ ಪ್ರಣಯ್ ಮುನ್ನಡೆದರು.ಪಂದ್ಯದ ಮೊದಲ ಗೇಮ್‌ನಲ್ಲಿ ಪ್ರಣಯ್ 11–10ರಿಂದ ಮುಂದಿದ್ದ ವೇಳೆ ಹಾಂಗ್‌ಕಾಂಗ್‌ನ ಆ್ಯಗ್ನಸ್ ಗಾಯಗೊಂಡರು.

ರಾಷ್ಟ್ರೀಯ ಶೂಟಿಂಗ್: ದಿವ್ಯಾಗೆ ಚಿನ್ನ

ನವದೆಹಲಿ (ಪಿಟಿಐ): ಕರ್ನಾಟಕದ ದಿವ್ಯಾ ಟಿ.ಎಸ್., ರಾಷ್ಟ್ರೀಯ ಶೂಟಿಂಗ್ ಟ್ರಯಲ್ಸ್‌ನ ಮಹಿಳೆಯರ 10 ಮೀಟರ್ಸ್ ಏರ್ ಪಿಸ್ತೂಲ್ ಟಿ6 ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದರು. ಫೈನಲ್‌ನಲ್ಲಿ ದಿವ್ಯಾ 16–12ರಿಂದ ಹರಿಯಾಣದ ರಿಧಮ್ ಸಂಗ್ವಾನ್ ಅವರನ್ನು ಸೋಲಿಸಿದರು.

ರಿಧಮ್, ಯೂತ್ ಮತ್ತು ಜೂನಿಯರ್ ಏರ್ ಪಿಸ್ತೂಲ್ ಟಿ6 ಟ್ರಯಲ್ಸ್‌ನಲ್ಲಿ ಅಗ್ರಸ್ಥಾನ ಗಳಿಸಿದರು.



ಗೋಲು ಗಳಿಸಿದ ಕಿಕ್‌ಸ್ಟಾರ್ಟ್ ತಂಡದ ಅಭಿಷೇಕ್ ಶಂಕರ್ (ಬಲ) ಸಂಭ್ರಮಿಸಿದರು–ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಫುಟ್‌ಬಾಲ್: ಕಿಕ್‌ಸ್ಟಾರ್ಟ್‌ಗೆ ಜಯ

ಬೆಂಗಳೂರು: ಹೊಂದಾಣಿಕೆಯ ಆಟವಾಡಿದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಪಡೆದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ 6–0 ಗೋಲುಗಳಿಂದ ಬಿಯುಎಫ್‌ಸಿ ತಂಡವನ್ನು ಮಣಿಸಿತು.

ಪ್ರಿನ್ಸ್‌ವಿಲ್ ಎಮೆಕಾ ಅವರು (35, 59 ಮತ್ತು 77ನೇ ನಿ.) ಮೂರು ಗೋಲುಗಳನ್ನು ಗಳಿಸಿದರೆ, ಪ್ರಶಾಂತ್ ಕಳಿಂಗ (18), ಅಭಿಷೇಕ್ ಶಂಕರ್ (56) ಹಾಗೂ ನಿಖಿಲ್ ರಾಜ್ ತಲಾ ಒಂದು ಗೋಲು ತಂದಿತ್ತರು.

ರೂಟ್ಸ್ ಎಫ್‌ಸಿ ಮತ್ತು ಎಫ್‌ಸಿ ಡೆಕ್ಕನ್ ತಂಡಗಳ ನಡುವಿನ ಪಂದ್ಯ 1–1 ಗೋಲಿನ ಡ್ರಾದಲ್ಲಿ ಕೊನೆಗೊಂಡಿತು. ಅನಿರುದ್ಧ್ ಮುಕುಂದನ್ 59ನೇ ನಿಮಿಷದಲ್ಲಿ ರೂಟ್ಸ್ ತಂಡಕ್ಕೆ ಹಾಗೂ ಕೆ.ಕವಿಯರಸನ್ 67ನೇ ನಿಮಿಷದಲ್ಲಿ ಡೆಕ್ಕನ್ ತಂಡಕ್ಕೂ ಗೋಲು ಗಳಿಸಿದರು.

ಡುರಾಂಡ್ ಕಪ್ ಫುಟ್‌ಬಾಲ್: ನಾಕೌಟ್‌ಗೆ ಬಿಎಫ್‌ಸಿ

ಸುನಿಲ್, ಶಿವಶಕ್ತಿ ಕಾಲ್ಚಳಕ

ಕೋಲ್ಕತ್ತ: ನಾಯಕ ಸುನಿಲ್ ಚೆಟ್ರಿ ಮತ್ತು ಶಿವಶಕ್ತಿ ನಾರಾಯಣನ್ ಗಳಿಸಿದ ಗೋಲುಗಳ ನೆರವಿನಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಡುರಾಂಡ್ ಕಪ್ ಟೂರ್ನಿಯ ನಾಕೌಟ್ ಹಂತಕ್ಕೆ ಲಗ್ಗೆಯಿಟ್ಟಿತು.

ಇಲ್ಲಿಯ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 2–2ರಿಂದ ಎಫ್‌ಸಿ ಗೋವಾ ತಂಡದೊಂದಿಗೆ ಡ್ರಾ ಸಾಧಿಸಿತು. ಇದರೊಂದಿಗೆ ನಾಕೌಟ್ ತಲುಪಲು ಅಗತ್ಯವಿದ್ದ ಪಾಯಿಂಟ್ ಕಲೆಹಾಕಿತು.

ಪಂದ್ಯದ ಆರಂಭದಲ್ಲಿ ಬೆಂಗಳೂರು ಹಿಡಿತ ಸಾಧಿಸಿತ್ತು. ಪ್ರಿನ್ಸ್ ಇಬಾರ ಅವರು ಗಾಯಗೊಂಡು ಹಿಂದೆ ಸರಿದ ಬಳಿಕ ಶಿವಶಕ್ತಿ ಕಣಕ್ಕೆ ಇಳಿದರು. 24ನೇ ನಿಮಿಷದಲ್ಲಿ ತಂಡಕ್ಕೆ ಮುನ್ನಡೆ ಸಿಕ್ಕಿತು. ಫ್ರಿ ಕಿಕ್ ಅವಕಾಶದಲ್ಲಿ ಚೆಟ್ರಿ, ಗೋವಾದ ಗೋಲ್‌ಕೀಪರ್ ಹೃತಿಕ್ ತಿವಾರಿ ಅವರ ಕಣ್ತಪ್ಪಿಸಿ ಸೊಗಸಾದ ಗೋಲು ಗಳಿಸಿದರು.

ಶಿವಶಕ್ತಿ ನಾರಾಯಣನ್ ತಂಡದ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. 26ನೇ ನಿಮಿಷದಲ್ಲಿ ಉದಾಂತ ಸಿಂಗ್ ನೆರವು ಪಡೆದ ಅವರು ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು. ಗೆಲುವಿನ ಕನಸಿನೊಂದಿಗೆ ಬಿಎಫ್‌ಸಿ ವಿರಾಮಕ್ಕೆ ತೆರಳಿತು. ಬಳಿಕ ಗೋವಾ ತಿರುಗೇಟು ನೀಡಿತು. ಫ್ರಾಂಗ್‌ಕಿ ಬುವಮ್ 53ನೇ ನಿಮಿಷದಲ್ಲಿ ಗೋಲು ದಾಖಲಿಸಿ ತಂಡದ ಹಿನ್ನಡೆಯನ್ನು ತಗ್ಗಿಸಿದರು. ಇದಾದ ನಂತರ ಬೆಂಗಳೂರು ತಂಡದ ಗೋಲು ಗಳಿಕೆಯ ಅವಕಾಶವೊಂದನ್ನು ಹೃತಿಕ್ ಯಶಸ್ವಿಯಾಗಿ ತಪ್ಪಿಸಿದರು. ಆದರೆ 64ನೇ ನಿಮಿಷದಲ್ಲಿ ಲೆಸ್ಲಿ ರೆಬೆಲ್ಲೊ ಮೂಲಕ ಗೋಲು ದಾಖಲಿಸಿದ ಗೋವಾ, ಸಮಬಲ ಸಾಧಿಸುವಲ್ಲಿ ಯಶಸ್ವಿಯಾಯಿತು.



ಚೆಂಡಿನೊಂದಿಗೆ ಮುನ್ನುಗ್ಗಿದ ಸುನಿಲ್ ಚೆಟ್ರಿ

ವಿಶ್ವ ಟಿಟಿ: ಶರತ್ ಅಲಭ್ಯ

ನವದೆಹಲಿ (ಪಿಟಿಐ): ಭಾರತದ ಅನುಭವಿ ಆಟಗಾರ ಅಚಂತ ಶರತ್ ಕಮಲ್ ಅವರು ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಿಂದ ಹಿಂದೆ ಸರಿದಿದ್ದಾರೆ.

ಸೆಪ್ಟೆಂಬರ್ 30ರಿಂದ ಅಕ್ಟೋಬರ್ 9ರವರೆಗೆ ಚೀನಾದ ಚೆಂಗ್ಡುನಲ್ಲಿ ಚಾಂಪಿಯನ್‌ಷಿಪ್ ನಿಗದಿಯಾಗಿದ್ದು, ವೈಯಕ್ತಿಕ ಕಾರಣಗಳಿಂದಾಗಿ ಶರತ್ ಆಡುತ್ತಿಲ್ಲ.

ಇತ್ತೀಚೆಗೆ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ 40 ವರ್ಷದ ಶರತ್, ಮೂರು ಚಿನ್ನದ ಪದಕ ಜಯಿಸಿದ್ದರು. ಅವರ ಅನುಪಸ್ಥಿತಿಯಲ್ಲಿ ಜಿ.ಸತ್ಯನ್ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಪುರುಷರ ತಂಡವನ್ನು ಮುನ್ನಡೆಸಲಿದ್ದು, ಮಣಿಕಾ ಬಾತ್ರಾ ಮಹಿಳೆಯ ವಿಭಾಗದ ಸಾರಥ್ಯ ವಹಿಸಲಿದ್ದಾರೆ.

ತಂಡ ಇಂತಿದೆ: ಪುರುಷರು: ಜಿ.ಸತ್ಯನ್, ಸನಿಲ್ ಶೆಟ್ಟಿ, ಹರ್ಮೀತ್ ದೇಸಾಯಿ, ಮಾನುಷ್ ಶಾ, ಮಾನವ್ ಥಕ್ಕರ್.

ಮಹಿಳೆಯರು: ಮಣಿಕಾ ಬಾತ್ರಾ, ಶ್ರೀಜಾ ಅಕುಲಾ, ರೀತ್ ರಿಷ್ಯಾ, ದಿಯಾ ಚಿತಳೆ ಮತ್ತು ಸ್ವಸ್ತಿಕಾ ಘೋಷ್.

ಕೋಚ್‌ಗಳು: ಎಸ್.ರಾಮನ್ ಮತ್ತು ಅನಿಂದಿತಾ ಚಕ್ರವರ್ತಿ ಅಥವಾ ಕ್ರಿಸ್ ಆ್ಯಡ್ರಿಯನ್ ಪಿಫೆರ್ (ವೈಯಕ್ತಿಕ ಕೋಚ್). ಮಸಾಜ್ ತಜ್ಞೆ: ಹರ್ಮೀತ್ ಕೌರ್.



ಅಚಂತ ಶರತ್ ಕಮಲ್

ಕೊಕ್ಕೊ: ರಾಜಸ್ಥಾನಕ್ಕೆ ಜಯ

ಪುಣೆ (ಪಿಟಿಐ): ರಾಜಸ್ಥಾನ ವಾರಿಯರ್ಸ್ ತಂಡವು ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ಮೊದಲ ಜಯ ಸಂಪಾದಿಸಿತು.

ಮಂಗಳವಾರ ಇಲ್ಲಿ ನಡೆದ ಹಣಾಹಣಿಯಲ್ಲಿ 66–31ರಿಂದ ಚೆನ್ನೈ ಕ್ವಿಕ್ ಗನ್ಸ್ ತಂಡವನ್ನು ಸೋಲಿಸಿತು. ಮತ್ತೊಂದು ಪಂದ್ಯದಲ್ಲಿ ಮುಂಬೈ ಖಿಲಾಡೀಸ್ 79–31ರಿಂದ ಒಡಿಶಾ ಜಗರ್‌ನಾಟ್ಸ್ ಎದುರು ಗೆದ್ದಿತು.

ರ‍್ಯಾಕೆಟ್ಲನ್: ಭಾರತ ತಂಡಕ್ಕೆ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ರ‍್ಯಾಕೆಟ್ಲನ್ ತಂಡವು ಆಸ್ಟ್ರಿಯಾದ ಗ್ರಾಜ್‌ನಲ್ಲಿ ನಡೆದ ನೇಷನ್ಸ್ ಕಪ್ ರ‍್ಯಾಕೆಟ್ಲನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ.

ಫೈನಲ್‌ನಲ್ಲಿ ಭಾರತ 137–101ರಿಂದ ಬ್ರಿಟನ್ ತಂಡಕ್ಕೆ ಸೋಲುಣಿಸಿತು. ಈ ಕ್ರೀಡೆಯಲ್ಲಿ ರ‍್ಯಾಕೆಟ್‌ನಿಂದ ಆಡಲಾಗುವ ನಾಲ್ಕು ಆಟಗಳಲ್ಲಿ (ಟೇಬಲ್ ಟೆನಿಸ್, ಬ್ಯಾಡ್ಮಿಂಟನ್, ಟೆನಿಸ್ ಮತ್ತು ಸ್ಕ್ವಾಷ್) ಸ್ಪರ್ಧಿಸಬೇಕಾಗುತ್ತದೆ. ನೌಕಾಸೇನೆಯ ಅಶುತೋಷ್ ಪೆಡ್ನೆಕರ್ ಭಾರತ ತಂಡದ ನಾಯಕರಾಗಿದ್ದು, ಪ್ರಶಸ್ತಿ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು.

ಬೆಲ್‌ಗ್ರೇಡ್‌ನಲ್ಲಿ ಸೆ.10ರಿಂದ 18ರವರೆಗೆ ಟೂರ್ನಿ

ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ಗೆ ಅರ್ಜುನ್

• ವಿನಾಯಕ ಭಟ್

ದಾವಣಗೆರೆ: ಭಾರತೀಯ ಸೇನೆಯ ಯೋಧ, ಬಾಗಲಕೋಟೆ ಜಿಲ್ಲೆಯ ಬೇವಿನಮಟ್ಟಿಯ ಅರ್ಜುನ್ ಹಲಕುರ್ಕಿ ಅವರು ಬೆಲ್‌ಗ್ರೇಡ್‌ನಲ್ಲಿ ಸೆ.10ರಿಂದ 18ರವರೆಗೆ ನಡೆಯಲಿರುವ ಸೀನಿಯರ್ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನ ಗ್ರಿಕೊ ರೋಮನ್ ಸ್ಟೈಲ್‌ನ 55 ಕೆ.ಜಿ. ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ಗೆ ಭಾರತದ ಕುಸ್ತಿಪಟುಗಳ ಆಯ್ಕೆಗೆ ಹರಿಯಾಣದ ಸೋನಿಪಥ್‌ನಲ್ಲಿ ಮಂಗಳವಾರ ಟ್ರಯಲ್ಸ್ ನಡೆಯಿತು. ಅರ್ಜುನ್ ಅವರು ಆಡಿದ ಮೂರು ಪಂದ್ಯಗಳಲ್ಲೂ ಎದುರಾಳಿಗಳನ್ನು ಮಣಿಸುವ ಮೂಲಕ ರಾಷ್ಟ್ರೀಯ ತಂಡದಲ್ಲಿ ಇದೇ ಮೊದಲ ಬಾರಿಗೆ ಸ್ಥಾನ ಪಡೆದುಕೊಂಡರು.

ಮೊದಲ ಪಂದ್ಯದಲ್ಲಿ ಅವರು 8–0 ರಲ್ಲಿ ಹರಿಯಾಣದ ಶ್ರವಣ್ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ 6–4 ರಲ್ಲಿ ರೈಲ್ವೆಯ ರೋಹಿತ್ ವಿರುದ್ಧ ಗೆದ್ದರೆ, ಫೈನಲ್‌ನಲ್ಲಿ 8–0 ರಲ್ಲಿ ಉತ್ತರ ಪ್ರದೇಶದ ಅನೂಪ್ ಅವರನ್ನು ಮಣಿಸಿದರು.

ಕಳೆದ ಜುಲೈನಲ್ಲಿ ಉತ್ತರ ಆಫ್ರಿಕಾದ ಟ್ಯುನಿಷಿಯಾದಲ್ಲಿ ನಡೆದಿದ್ದ ಸೀನಿಯರ್ ವಿಶ್ವ ರ‍್ಯಾಂಕಿಂಗ್ ಸರಣಿಯ ಕುಸ್ತಿಯಲ್ಲಿ ಅರ್ಜುನ್ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. ಮಂಗೋಲಿಯಾದಲ್ಲಿ ಏಪ್ರಿಲ್‌ನಲ್ಲಿ ನಡೆದ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಜಯಿಸಿದ್ದರು.

ಭೋಪಾಲ್‌ನ 3ಇಎಂಇ ಸೆಂಟರ್‌ನಲ್ಲಿ ಹವಾಲ್ದಾರ್ ಆಗಿರುವ ಅರ್ಜುನ್, ಪುಣೆಯ ಸೇನಾ ಕ್ಯಾಂಪ್‌ನಲ್ಲಿ ಅಭ್ಯಾಸ ಮಾಡುತ್ತಿದ್ದರು. ಅರ್ಜುನ್ ಹಲವು ವರ್ಷ ದಾವಣಗೆರೆಯ ಕ್ರೀಡಾ ವಸತಿನಿಲಯದಲ್ಲಿ ಆರ್. ಶಿವಾನಂದ ಅವರಿಂದ ತರಬೇತಿ ಪಡೆದುಕೊಂಡಿದ್ದರು. ರಜಾ ಅವಧಿಯಲ್ಲಿ ಇಲ್ಲಿಗೆ ಬಂದು ಅಭ್ಯಾಸ ನಡೆಸುತ್ತಿದ್ದರು.



ಅರ್ಜುನ್ ಹಲಕುರ್ಕಿ